ಗ್ರಾಮ ಸಂಸ್ಕೃತಿ ಮಾಲೆ - ೨

# ಗ್ರಾಮೀಣ ಬೊಂಬೆಗಳು



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಗ್ರಾಮೀಣ ಬೇಟೆಗಳು

ಸಂಪಾದಕರು
ಡಾ. ದೇವೇಂದ್ರಕುಮಾರ ಹಕಾರಿ
ಡಾ. ಕೆ.ಆರ್. ಸಂಧ್ಯಾರೆಡ್ಡಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - ೫೬೦ ೦೧೮

Grameena Betegalu - Edited by Dr. Devendra kumara Hakari and Dr.K.R. Sandhya Reddy. Published by Administrative Officer, Kannada Pustaka Pradhikara (Kannada Book Authority), Pampa Mahakavi Road, Chamarajapet, Bangalore - 560 018.

Pages : XVI + 158

ಮೊದಲ ಆವೃತ್ತಿ : 2000 ನೇ ಇಸವಿ

ISBN 81-7713-042-0

© ಆಯಾ ಲೇಖಕರದ್ದು

ಮುಖಪುಟ : ಕೆ.ಕೆ. ಮಕಾಳಿ

ಬೆಲೆ : ರೂ. **45/-**

ಮುದ್ರಣ :
ಇಳಾ ಮುದ್ರಣ
ನಂ. 36, 40 ಅಡಿ ರಸ್ತೆ, ರಾಘವ ನಗರ
ನ್ಯೂ ಟಿಂಬರ್ ಯಾರ್ಡ್ ಲೇಔಟ್
ಬೆಂಗಳೂರು - 560 026.
✆ : 6615746

## ಸಂಪಾದಕ ಸಮಿತಿ

| | |
|---|---|
| ಡಾ. ಎಚ್. ಜೆ. ಲಕ್ಕಪ್ಪಗೌಡ | *ಅಧ್ಯಕ್ಷರು* |
| ಡಾ. ಕೆ. ಆರ್. ಸಂಧ್ಯಾರೆಡ್ಡಿ | *ಸಂಪಾದಕರು* |
| ಡಾ. ದೇವೇಂದ್ರಕುಮಾರ ಹಕಾರಿ | *ಸಂಪಾದಕರು* |
| ಶ್ರೀ ಎ. ಎನ್. ಮಲ್ಲಿಕಾರ್ಜುನಸ್ವಾಮಿ | *ಸಂಚಾಲಕರು* |

# ಮುನ್ನುಡಿ

ಭಾರತ ದೇಶ ಬಹು ಅರ್ಥಗಳಲ್ಲಿ ಗ್ರಾಮೀಣ ಭಾರತ ಎಂಬ ಹೆಸರಿಗೆ ಅನ್ವರ್ಥವಾಗಿದೆ. ಭಾರತದ ಪ್ರಗತಿ ಮತ್ತು ಅಭಿವೃದ್ಧಿಗಳು ಮುಖ್ಯವಾಗಿ ಇಲ್ಲಿಯ ಹಳ್ಳಿಗಳ ಪ್ರಗತಿ ಮತ್ತು ಅಭಿವೃದ್ಧಿಯನ್ನೇ ಅವಲಂಬಿಸಿವೆ. ಶೇಕಡ ೭೦ಕ್ಕಿಂತ ಹೆಚ್ಚು ಜನ ಗ್ರಾಮಾಂತರ ಪ್ರದೇಶಗಳಲ್ಲಿ ಜೀವಿಸುತ್ತಿದ್ದಾರೆ. ಶೇಕಡ ೫೦ಕ್ಕಿಂತ ಹೆಚ್ಚು ಅನಕ್ಷರಸ್ಥರು ತುಂಬಿರುವ ಈ ನಾಡಿನ ಗ್ರಾಮ ಜೀವನದಲ್ಲಿ ಪರಂಪರಾಗತವಾದ ಮೌಢ್ಯ, ಅಂಧ ಸಂಪ್ರದಾಯ, ಅಜ್ಞಾನ ಮತ್ತು ಅವೈಚಾರಿಕತೆಗಳು ಮನೆಮಾಡಿಕೊಂಡಿವೆ. ಈ ಗ್ರಾಮಗಳ ಬೇಸಾಯ ಪದ್ಧತಿ, ಜೀವನ ಕ್ರಮ, ಆಲೋಚನೆಯ ರೀತಿ ಎಲ್ಲವೂ ಪ್ರಾಚೀನ ನಂಬಿಕೆ ಮತ್ತು ಪದ್ಧತಿಗಳ ಶಿಥಿಲ ಸರಪಣಿಯನ್ನೇ ಆಧಾರವಾಗಿ ಹಿಡಿದುಕೊಂಡಿವೆ. ಆದರೆ ಆದಿಮ ಕಾಲದ ಗ್ರಾಮೀಣ ಜೀವನ ಪರಿಸ್ಥಿತಿಯನ್ನು ಇತಿಹಾಸದ ದಾರಿಯಲ್ಲಿ ಹಿನ್ನಡೆದು ಅವಲೋಕಿಸಿದಾಗ ಈ ಜೀವನ ಸಂಪೂರ್ಣವಾಗಿ ಸ್ವತಂತ್ರವೂ, ಸ್ವಾವಲಂಬನಶೀಲವೂ, ನಿಸರ್ಗಾಧಾರಿತವೂ, ಆಗಿತ್ತೆಂಬುದು ಮನವರಿಕೆಯಾಗುತ್ತದೆ.

ಈ ಹಿನ್ನೆಲೆಯಲ್ಲಿ ಬಹು ಮಟ್ಟಿಗೆ ಸ್ವತಂತ್ರ ಘಟಕಗಳೇ ಆಗಿದ್ದ ಗ್ರಾಮಗಳು ತಮಗೆ ಅಗತ್ಯವಾದ ಆಹಾರ ಬೆಳೆಯಲು ಭೂಮಿಯನ್ನು ನೀರು ದೊರೆಯುವ ನೆಲೆಯನ್ನು, ಸಹಜವಾಗಿ ವಾಸಿಸಲು ಅನುಕೂಲಕರವಾದ ಪರಿಸರವನ್ನು ಹುಡುಕಿಕೊಂಡು ಅಲೆದಾಡುತ್ತ ಕೊನೆಗೊಮ್ಮೆ ಸ್ಥಾಯಿಯಾಗಿ ನೆಲೆ ನಿಂತವು. ಅಲ್ಲಿಯ ಭೂಮಿ, ನೀರು, ಗಾಳಿಗಳಿಗೆ ಅನುಸಾರವಾಗಿ ಆಹಾರವನ್ನು ಬೆಳೆಯುತ್ತಾ, ತಮಗೆ ವಾಸಿಸಲು ಅಗತ್ಯವಾದ ವಸತಿಗಳನ್ನು ನಿರ್ಮಿಸಿಕೊಳ್ಳುತ್ತಾ ತಮ್ಮ ದೈನಂದಿನ ಆಗು-ಹೋಗುಗಳಿಗೆ ಅನಿವಾರ್ಯವಾದ ಕೌಟುಂಬಿಕ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತಾ, ತಮಗೆ ಆಧಾರವಾದ ನಿಸರ್ಗವನ್ನು ಅದರ ಬಹುಮುಖತೆಗಳಲ್ಲಿ ಆರಾಧಿಸುತ್ತಾ ಒಂದು ವಿಶಿಷ್ಟವಾದ ಜೀವನ ಪದ್ಧತಿಯನ್ನು ರೂಢಿಸಿಕೊಂಡವು. ಹೀಗಾಗಿ ತಮ್ಮ ದೈನಂದಿನ ಬದುಕನ್ನು ರೂಪಿಸುವ ನಿಸರ್ಗ ಶಕ್ತಿಗಳನ್ನು ದೈವಗಳೆಂದು ಆರಾಧಿಸುತ್ತಾ ಪ್ರತೀಕಗಳನ್ನು ಕಲ್ಪಿಸಿಕೊಂಡರು. ಅವುಗಳನ್ನು ಪೂಜಿಸುವ ವಿಧಿ-ವಿಧಾನಗಳನ್ನು ಅನುಭವದ ಆಧಾರದ ಮೇಲೆ ಸೃಷ್ಟಿಸಿಕೊಂಡರು. ಕೃಷಿಗೆ ಮತ್ತು ಆಹಾರಕ್ಕೆ ಅಗತ್ಯವಾದ ಸಾಧನಗಳನ್ನು ಹಂತ-ಹಂತವಾಗಿ ನಿರ್ಮಿಸಿಕೊಂಡರು. ಮುಖ್ಯವಾಗಿ ಮಾಂಸವೇ ಆಹಾರದ ಪ್ರಮುಖ ಭಾಗವಾಗಿದ್ದ ಕಾಲದಲ್ಲಿ ಪ್ರಾಣಿಗಳ ಬೇಟೆಗೆ ಅಗತ್ಯವಾದ

ಉಪಕರಣಗಳನ್ನು ಪ್ರಾಯೋಗಿಕ ಆಧಾರದಲ್ಲಿ ರೂಢಿಸಿಕೊಂಡರು. ಒಂದೆಡೆ ನೆಲೆಸಿದ ಹೆಣ್ಣು-ಗಂಡುಗಳ ಕಾರಣದಿಂದ ಅಂತಃಕಲಹ ಆರಂಭವಾಗದಂತೆ ತಮ್ಮ ತಮ್ಮಲ್ಲೇ ಕೆಲವು ಒಡಂಬಡಿಕೆಗಳನ್ನು ಮಾಡಿಕೊಂಡರು. ಮಳೆ, ಗಾಳಿ, ಬಿಸಿಲು ಮುಂತಾದ ಪ್ರಕೃತಿ ವಿಕೋಪಗಳಿಂದ ರಕ್ಷಿಸಿಕೊಳ್ಳಲು ವಾತಾವರಣಕ್ಕನುಗುಣವಾದ ವಸತಿಗಳ ನಿರ್ಮಾಣ ಆರಂಭವಾಗಿ ಕಾಲಕ್ರಮೇಣ ಅವುಗಳಲ್ಲಿ ಸೌಂದರ್ಯ ದೃಷ್ಟಿಯೂ ನೆಲೆಗೊಂಡಿತು. ಸಮಾನ ವೃತ್ತಿ, ಸಮಾನ ಮನಸ್ಸು, ಸಮಾನ ಅಭಿರುಚಿಗಳಿಂದ ಕೂಡಿದ ಜನ ಪ್ರತ್ಯೇಕ ಪ್ರತ್ಯೇಕ ಗುಂಪುಗಳಾದರು. ಆ ಗುಂಪುಗಳಿಗೆ ಸಮಾನವಾದ ನಂಬಿಕೆಗಳೂ, ಆಚರಣೆಗಳೂ ಚಾಲ್ತಿಗೆ ಬಂದವು. ಹೀಗೆಯೇ ಜೀವನದ ಸಂಕಷ್ಟಗಳನ್ನು ಮರೆಯಲು ಮನಸ್ಸಿಗೆ ಮತ್ತು ಅನುಭವಕ್ಕೆ ಸಹಜವಾದ ಹಾಡು, ಕಥೆ, ಚಿತ್ರ, ಅಲಂಕಾರ ಮುಂತಾದವು ರೂಪುಗೊಂಡವು. ಹೀಗೆ ಜಾತ್ರೆಗಳು, ಸಂತೆಗಳು, ಹಬ್ಬ ಹರಿದಿನಗಳು, ಸಾಮಾಜಿಕ ಚಿಂತನೆ ಮತ್ತು ಕ್ರಿಯೆಗಳ ಫಲವಾಗಿ ಮೂಡಿ ಬಂದವು. ಮಣ್ಣು, ನೀರು, ಆಕಾಶಗಳನ್ನು ಆಧರಿಸಿದ ನಂಬಿಕೆಗಳು ಸುದೀರ್ಘ ಜೀವನದ ಫಲವಾಗಿ ರೂಢಮೂಲವಾದವು. ಮೊದ-ಮೊದಲು ಕೇವಲ ಹೊಟ್ಟೆಯ ಬವಣೆಯನ್ನು ನೀಗಲು ಆರಂಭವಾದ ಈ ಪ್ರಯತ್ನ ಮತ್ತು ಪ್ರಯೋಗಗಳು ಬರಬರುತ್ತಾ ಸುಖ ಜೀವನದ ಮತ್ತು ಸಂತೋಷದ ಹಾದಿಯನ್ನು ಸ್ವಾಭಾವಿಕವಾಗಿಯೇ ನಿರ್ಮಿಸತೊಡಗಿದವು. ಅದಿಮ ತಲೆಮಾರಿನ ಈ ಜೀವನ ಪದ್ಧತಿಯ ಬಹುಮುಖ್ಯ ಲಕ್ಷಣಗಳನ್ನೆಲ್ಲ ಅನಂತರದ ತಲೆಮಾರುಗಳು ಅನುಸರಿಸುತ್ತಾ ಮತ್ತು ಅಭಿವೃದ್ಧಿ ಪಡಿಸುತ್ತಾ ಬಂದವು. ವಾಸ್ತವ ಪ್ರಜ್ಞೆಯ ಜೊತೆಗೆ ಸೌಂದರ್ಯ ಪ್ರಜ್ಞೆಗಳು ಬೆಳೆದುಕೊಂಡು ಬಗೆಬಗೆಯ ಕಲೆಗಳ ಆವಿಷ್ಕಾರವೂ ಆಯಿತು. ಹೀಗಾಗಿ ಜೀವನದಿಂದ ಹುಟ್ಟಿದ ಮತ್ತು ಜೀವನಕ್ಕೆ ಪೋಷಕವಾದ ಈ ಎಲ್ಲಾ ಪದ್ಧತಿಗಳು ದೀರ್ಘ ಕಾಲದ ಆಚರಣೆಯ ಫಲವಾಗಿ ಸಂಸ್ಕೃತಿ ಎನಿಸಿಕೊಂಡವು. ಈ ಎಲ್ಲಾ ಸಂಸ್ಕೃತಿಯ ಮೂಲ ಪ್ರಜ್ಞೆ, ಮೂಲ ಸಾಮಗ್ರಿ ಮತ್ತು ಮೂಲ ಚಿಂತನೆ ಆ ಪರಿಸರದಿಂದ ಜನ್ಯವಾದವುಗಳಾಗಿದ್ದು ದೇಶೀಯ ಸಂಸ್ಕೃತಿ ಎನಿಸಿಕೊಂಡವು. ಈ ಬಹುಮುಖಿ ಸಂಸ್ಕೃತಿಗಳು ಕೆಲವೊಮ್ಮೆ ಪ್ರತ್ಯೇಕವಾಗಿ ಮತ್ತೆ ಕೆಲವೊಮ್ಮೆ ಸಂಯುಕ್ತವಾಗಿ ಅಖಂಡವಾಗಿ ಅನುಷ್ಠಾನದಲ್ಲಿ ಕಾಣಿಸಿಕೊಂಡವು. ಆದ್ದರಿಂದ ಈ ಸಂಸ್ಕೃತಿಗಳ ವ್ಯಾಪ್ತಿಗೆ ಅನುಸಾರವಾಗಿ ವ್ಯಾಪಕ ಸಂಸ್ಕೃತಿ ಮತ್ತು ಅವ್ಯಾಪಕ ಸಂಸ್ಕೃತಿಗಳು ಎಂಬ ಚೌಕಟ್ಟಿನಲ್ಲಿ ಬೆಳೆಯ ತೊಡಗಿದವು. ಈ ಎಲ್ಲಾ ಸಂಸ್ಕೃತಿಗಳ ಮುಖ್ಯ ಉದ್ದೇಶ ಜೀವನ ಸಂತೃಪ್ತಿ, ಜೀವನದ ಸಮೃದ್ಧಿ ಮತ್ತು ಜೀವನ ಶಾಂತಿಗಳೇ ಆಗಿದ್ದವು.

ಆದರೆ ಆರ್ಯರ ಆಗಮನವಾದ ನಂತರ ಈ ಮೂಲ ಸಂಸ್ಕೃತಿಗಳ ಮೇಲೆ ಆರ್ಯ ಸಂಸ್ಕೃತಿಯ ಆಕ್ರಮಣ ಮತ್ತು ಸಂಕ್ರಮಣಗಳಾದವು. ಈ ದೇಶಕ್ಕೆ ತಂಡೋಪ-ತಂಡವಾಗಿ ಬಂದ ಇತರ ಸಂಸ್ಕೃತಿಗಳ ಪ್ರಭಾವವೂ ಈ ಗ್ರಾಮೀಣ ಸಂಸ್ಕೃತಿಯ ಮೇಲೆ ದಟ್ಟವಾಗಿ ಆಗತೊಡಗಿತು. ಅಕ್ಷರ ಶಿಕ್ಷಣ, ನಾಗರಿಕತೆ ಮತ್ತು ವಿಜ್ಞಾನದ ಪ್ರಗತಿ ಈ ಮೂಲ

ಜನಾಂಗಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಹಲವು ಪಲ್ಲಟಗಳನ್ನು ಮತ್ತು ಪರಿವರ್ತನೆಗಳನ್ನು ತಂದವು. ಈ ಕಾರಣದಿಂದಾಗಿ ಗ್ರಾಮೀಣವಾದ ಮೂಲ ಸಂಸ್ಕೃತಿ ಎಲ್ಲಾ ಅಜ್ಞಾನ ಜನ್ಯವಾದುದು ಮತ್ತು ಪ್ರಗತಿ ವಿರೋಧಿಯಾದುದು ಎಂಬ ಭಾವನೆ ಬಲಿಯಿತು, ಅವುಗಳನ್ನು ಬಿಟ್ಟುಕೊಡುವುದೇ, ದಾಟುವುದೇ ನಿಜವಾದ ನಾಗರಿಕತೆ ಎಂಬ ಭ್ರಮೆ ಆವರಿಸಿತು. ಈ ಸ್ಥಿತಿಯಲ್ಲಿ ಗ್ರಾಮುಗಳಲ್ಲಿ ಜನ್ಮ ತಳೆದು ಗ್ರಾಮ ಜೀವನಕ್ಕೆ ಸಂತೋಷ, ಸಮಾಧಾನಗಳನ್ನು ಸ್ವತಂತ್ರಶೀಲತೆ ಮತ್ತು ಸ್ವಾಭಿಮಾನವನ್ನು ತುಂಬುತ್ತಿದ್ದ ಸಂಸ್ಕೃತಿಗಳು ಮರೆಯಾಗಿ ತಮ್ಮ ಜೀವನದ ಎಲ್ಲಾ ಅಗತ್ಯಗಳಿಗೂ ಪಟ್ಟಣದ ಕಡೆ ನೋಡುವ, ತಮ್ಮ ಬೇರುಗಳನ್ನು ಕತ್ತರಿಸಿಕೊಳ್ಳುವ ಪರಾವಲಂಬನಾ ಪ್ರವೃತ್ತಿ ದಟ್ಟವಾಗಿ ಬೆಳೆಯುತ್ತಾ, ನಮ್ಮತನವನ್ನೇ ತಿಂದುಹಾಕುತ್ತಿದೆ. ಮಹಾತ್ಮ ಗಾಂಧೀಜಿಯವರು ಗ್ರಾಮೀಣ ಬದುಕಿನಲ್ಲಿ ಹಿಂದೆ ಶಕ್ತಿಶಾಲಿಯ್ಲಾಗಿದ್ದ ಈ ಸ್ವಾವಲಂಬನಾಶೀಲ ಬದುಕನ್ನು ಪುನರ್ ಸ್ಥಾಪಿಸುವುದು ಮತ್ತು ಈ ಪ್ರಾಚೀನ ಗ್ರಾಮ ಸಂಸ್ಕೃತಿಯನ್ನು ಪರಿಷ್ಕರಿಸಿ ಕಾಲಕ್ಕೆ ತಕ್ಕಂತೆ ಬಳಸಿಕೊಳ್ಳುವುದು ನಮ್ಮ ಆಧುನಿಕವಾದ ಬಹುಪಾಲು ಸಮಸ್ಯೆಗಳಿಗೆ ಮದ್ದು ಎಂದು ಪ್ರತಿಪಾದಿಸಿದರು. ಯಂತ್ರ ಮೂಲವಾದ ಬದುಕು ಮನುಷ್ಯನ ಅಂತಃಸತ್ವವನ್ನು ತಿಂದುಹಾಕುತ್ತಿರುವ ಮತ್ತು ಅಗಾಧ ಪ್ರಮಾಣದಲ್ಲಿ ಜನಸಂಖ್ಯೆ ಬೆಳೆಯುತ್ತಿರುವ ಈ ಸಂದರ್ಭದಲ್ಲಿ ನಶಿಸಿ ಹೋಗುತ್ತಿರುವ ಗ್ರಾಮಸಂಸ್ಕೃತಿಗಳ ಕಡೆಗೆ ಮತ್ತು ಅವುಗಳ ಅಂತರಾಳದ ಅವಿನಾಶೀ ಮೌಲ್ಯದ ಕಡೆಗೆ ಯುವ ಪೀಳಿಗೆಯ ಮನಸ್ಸನ್ನು, ಶ್ರದ್ಧೆಯನ್ನು ತಿರುಗಿಸುವುದು ಇಂದಿನ ಅವಶ್ಯಕತೆಗಳಲ್ಲಿ ಒಂದಾಗಿದೆ.

ಈ ದೃಷ್ಟಿಯಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಶೀಘ್ರಗತಿಯಲ್ಲಿ ಕ್ಷೀಣಿಸುತ್ತಿರುವ ಗ್ರಾಮೀಣ ಸಂಸ್ಕೃತಿಯ ವಿವಿಧ ಮಗ್ಗುಲುಗಳನ್ನು ಕ್ಷೇತ್ರಾಧಾರಿತವಾದ ಅಧ್ಯಯನ ಮತ್ತು ಸಂಶೋಧನೆಗಳ ಮೂಲಕ ಮತ್ತೊಮ್ಮೆ ಯುವ ಜನಾಂಗದ ಮುಂದಿಡಲು 'ಗ್ರಾಮ ಸಂಸ್ಕೃತಿಮಾಲೆ'ಯನ್ನು ಆರಂಭಿಸಿದೆ. ಈ ಮಾಲೆಯಲ್ಲಿ ಪ್ರಕಟವಾಗುವ ಪುಸ್ತಕಗಳು ನಾಗರಿಕತೆಯ ಆಕ್ಟೋಪಸ್‌ನ ಹಿಡಿತದಲ್ಲಿ ಜೀವನಶಾಂತಿಯನ್ನು ಕಳೆದುಕೊಳ್ಳುತ್ತಿರುವ ನಾಗರಿಕರಿಗೆ, ತಮ್ಮ ಇತಿಹಾಸವನ್ನು ಮರೆತು ಮರಳಿನ ಮೇಲೆ ಮನೆ ಕಟ್ಟಲು ಹವಣಿಸುತ್ತಿರುವ ಯುವ ಜನಾಂಗಕ್ಕೆ ದೇಸೀಯವಾದ ಹೊಸ ತಿಳುವಳಿಕೆಗಳ ವಿಶಿಷ್ಟ ಲೋಕವನ್ನು ಪರಿಚಯಿಸಿಕೊಡಬಲ್ಲವು ಎಂಬ ನಂಬಿಕೆ ನಮಗಿದೆ.

ಈ ಗ್ರಾಮ ಸಂಸ್ಕೃತಿಯಲ್ಲಿ ಪರಂಪರಾಗತವಾಗಿ ಬಂದ ಬೇಟೆ ಸಂಪ್ರದಾಯ ಒಂದು ಮುಖ್ಯ ಅಂಗ. ಆದಿಮಾನವ ತನ್ನ ಹಸಿವಿಗೆ ಅಗತ್ಯವಾದ ಆಹಾರ ಪದಾರ್ಥಗಳನ್ನು ತಾನೇ ಉತ್ಪಾದನೆ ಮಾಡಿಕೊಳ್ಳುವ ಅರಿವನ್ನು ಪಡೆಯುವ ಮುಂಚೆ, ನಿಸರ್ಗದಲ್ಲಿ ಸಹಜವಾಗಿ ಸಿಕ್ಕುವ ವಸ್ತುಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದ. ಸಸ್ಯಾಹಾರವಂತೂ ಸಹಜವಾಗಿಯೇ ಅವನ ಪರಿಸರದಲ್ಲಿ ಅವನಿಗೆ ದೊರಕುತ್ತಿತ್ತು ಮತ್ತು ಅದನ್ನು ಪಡೆಯಲು ಅತ್ಯಂತ ಕಡಿಮೆ ಶ್ರಮ,

ಕೌಶಲ ಮತ್ತು ವೇಳೆ ಆತನಿಗೆ ಸಾಕಾಗುತ್ತಿತ್ತು. ಆದರೆ ಎಂದೋ ಒಂದು ಸಂದರ್ಭದಲ್ಲಿ ಪ್ರಾಣಿಗಳ, ಪಕ್ಷಿಗಳ ಮಾಂಸದ ರುಚಿ ನೋಡಿದ ಈ ನಮ್ಮ ಪೂರ್ವಿಕ ಅವುಗಳ ಸವಿಯನ್ನು ಮತ್ತೆಮತ್ತೆ ಅನುಭವಿಸುವುದಕ್ಕಾಗಿ ಪ್ರಾಣಿಗಳನ್ನೂ ಮತ್ತು ಪಕ್ಷಿಗಳನ್ನೂ ಮತ್ತಿತರ ಮಾಂಸಭರಿತ ಜೀವಿಗಳನ್ನು ಕೊಂದು ಅವುಗಳ ಮಾಂಸವನ್ನು ಮೊದಮೊದಲು ಹಸಿಯಾಗಿ ಉಪಯೋಗಿಸುತ್ತಾ, ಅನಂತರ ಸುಟ್ಟು, ಬೇಯಿಸಿ ತಿನ್ನುವುದನ್ನು ಅಭ್ಯಾಸ ಮಾಡಿಕೊಂಡ. ಬರುಬರುತ್ತಾ ಈ ಮಾಂಸಾಹಾರವೇ ಅಧಿಕ ಪ್ರಮಾಣದಲ್ಲಿ ಹೆಚ್ಚುತ್ತಾ ಬಂದಾಗ ಈ ಪ್ರಾಣಿಗಳನ್ನು ಮತ್ತು ಇತರ ಜೀವಿಗಳನ್ನು ಕೊಲ್ಲಲು ಅವಶ್ಯಕವಾದ ಉಪಕರಣಗಳನ್ನು ಮತ್ತು ವಿವಿಧ ವಿಧಾನಗಳನ್ನು ಪ್ರಯತ್ನ ಮತ್ತು ಪ್ರಯೋಗಗಳ ಫಲವಾಗಿ ಕಂಡುಕೊಂಡ. ಈ ಬೇಟೆಯ ಸಂಪ್ರದಾಯ ಮತ್ತು ಕ್ರಮಗಳು ತಲೆಮಾರಿನಿಂದ ತಲೆಮಾರಿಗೆ ಪ್ರಸರಣವಾಗುತ್ತಾ ಬಂದಂತೆ ಅಭ್ಯಾಸ ಮಾತ್ರವಾಗಿದ್ದ ಪ್ರವೃತ್ತಿ, ವೃತ್ತಿಯಾಗಿ ಮತ್ತು ಸಂಸ್ಕೃತಿಯಾಗಿ ವಿಕಾಸವಾಗುತ್ತಾ ಬಂತು. ಮನುಷ್ಯನ ಬುದ್ಧಿಶಕ್ತಿ ಮತ್ತು ಅನುಭವಗಳು ಹೆಚ್ಚಿದಂತೆಲ್ಲಾ ಬೇಟೆಯ ಹೊಸ-ಹೊಸ ಕ್ರಮಗಳ ಆವಿಷ್ಕಾರವಾಗತೊಡಗಿತು. ಬೇಟೆಯ ಪ್ರವೃತ್ತಿ ವೃತ್ತಿಯಾಗಿ ಬೆಳೆಯುತ್ತಾ, ವ್ಯಕ್ತಿಗತವಾದುದು ಸಮೂಹಗತವಾದ ಸಂಸ್ಕೃತಿಯಾಗಿ ಮಾರ್ಪಟ್ಟಿತು. ಪ್ರದೇಶದಿಂದ ಪ್ರದೇಶಕ್ಕೆ ಈ ವೃತ್ತಿ ಮತ್ತು ಪ್ರವೃತ್ತಿಗಳ ಮಾರ್ಗಗಳು ಮತ್ತು ವಿಧಾನಗಳು ಅಲ್ಪಸ್ವಲ್ಪ ವ್ಯತ್ಯಾಸವನ್ನು ಹೊಂದಿದ್ದರೂ, ಸ್ಥೂಲವಾಗಿ ಅವು ಒಂದನ್ನೊಂದು ಹೋಲುತ್ತವೆ. ಕರ್ನಾಟಕದ ಬೇರೆ-ಬೇರೆ ಪ್ರದೇಶಗಳಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಈ ಬೇಟೆಯ ವಿಧಾನಗಳ ಅಧ್ಯಯನ ಮತ್ತು ಚಿಂತನೆ ನಮ್ಮ ನಾಗರಿಕತೆಯ ವಿಕಾಸದ ವಿಭಿನ್ನ ಹಂತವಾಗಿಯೂ ಕಾಣಿಸಿಕೊಳ್ಳುತ್ತಾ ಬಂದಿದೆ.

ಇಂತಹ ಬೇಟೆಯ ಸಂಪ್ರದಾಯವನ್ನು ಕುರಿತ 'ಗ್ರಾಮೀಣ ಬೇಟೆಗಳು' ಎಂಬ ಈ ಕೃತಿ ತುಂಬಾ ಕುತೂಹಲಕರವಾಗಿಯೂ, ಮತ್ತು ಚಿಂತನಶೀಲವಾಗಿಯೂ ಇದೆ. ಮುಖ್ಯವಾಗಿ ಕ್ಷೇತ್ರ ಕಾರ್ಯವನ್ನು ಆಧರಿಸಿದ ಮತ್ತು ಸೂಕ್ಷ್ಮವಾದ ಅವಲೋಕನ ಮತ್ತು ಚಿಂತನೆಗಳಿಂದ ರೂಪುಗೊಂಡ ಇಲ್ಲಿಯ ಲೇಖನಗಳು ಭರದಿಂದ ಮರೆಯಾಗುತ್ತಿರುವ ನಮ್ಮ ಗ್ರಾಮೀಣ ಸಂಸ್ಕೃತಿಯ ಒಂದು ರೋಚಕ ಅಧ್ಯಾಯವನ್ನು ನಮ್ಮ ಮುಂದೆ ತೆರೆದಿಡುತ್ತವೆ. ಪ್ರಾಣಿ ಬೇಟೆ, ಹಕ್ಕಿ ಬೇಟೆ, ಜೇನು ಬೇಟೆ, ಮೀನು ಬೇಟೆ - ಮುಂತಾದ ಬೇಟೆಯ ಬಗೆಗಳನ್ನು ಈ ಲೇಖನಗಳ ಕರ್ತೃಗಳು ತುಂಬಾ ಪರಿಶ್ರಮಪೂರ್ವಕವಾಗಿ ಇಲ್ಲಿ ನಿರೂಪಿಸಿದ್ದಾರೆ. ಬಯಲು ಸೀಮೆ, ಮಲೆನಾಡು, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಹೀಗೆ ಕರ್ನಾಟಕದ ವಿವಿಧ ಪರಿಸರಗಳಲ್ಲಿ ಪ್ರಚಲಿತವಾಗಿದ್ದ ಮತ್ತು ಇರುವ ಬೇಟೆಯ ಸಂಪ್ರದಾಯಗಳನ್ನು ಕುರಿತು ಅತ್ಯಂತ ಕುತೂಹಲಕರವೂ, ಉಪಯುಕ್ತವೂ ಆದ ಮಾಹಿತಿ ಈ ಬರಹಗಳಲ್ಲಿ ಓದುಗರಿಗೆ ದೊರೆಯುತ್ತವೆ. ಈ ಮೂಲಕ ನಮ್ಮ ಗ್ರಾಮೀಣ ಸಂಸ್ಕೃತಿಯ ಒಂದು ಮುಖ್ಯ ಮುಖವನ್ನು

ಪರಿಚಯಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಈ ಬೇಟೆಯ ಬಗ್ಗೆ ಹೆಚ್ಚು ವಿವರಗಳು ನಮಗೆ ದೊರೆಯದಿರುವ ಸಂದರ್ಭದಲ್ಲಿ ತುಂಬಾ ಆಸಕ್ತಿ ಮತ್ತು ಗಂಭೀರ ಪ್ರಯತ್ನಗಳಿಂದ ಮಾಹಿತಿಯನ್ನು ಕಲೆಹಾಕಿ ಆಕರ್ಷಕವಾಗಿ ನಿರೂಪಿಸಿರುವ ಇಲ್ಲಿನ ಎಲ್ಲಾ ಲೇಖಕರಿಗೆ ಪ್ರಾಧಿಕಾರದ ಕೃತಜ್ಞತೆಗಳು ಸಲ್ಲುತ್ತವೆ. ಗ್ರಾಮೀಣ ಸಂಸ್ಕೃತಿ ಮಾಲೆಯಲ್ಲಿ ಈ ಗ್ರಾಮೀಣ ಬೇಟೆಯನ್ನು ಕುರಿತ ಈ ಅಪರೂಪದ ಪುಸ್ತಕವನ್ನು ತುಂಬಾ ಆಸ್ಥೆಯಿಂದ ಸಂಪಾದಿಸಿ ಕೊಟ್ಟಿರುವ ನಮ್ಮ ಪ್ರಸಿದ್ಧ ಜಾನಪದ ತಜ್ಞರಾದ ಡಾ. ದೇವೇಂದ್ರಕುಮಾರ ಹಕಾರಿ ಮತ್ತು ಡಾ. ಸಂಧ್ಯಾರೆಡ್ಡಿ ಅವರಿಗೆ, ಈ ಪುಸ್ತಕವನ್ನು ಪ್ರಕಟಿಸಲು ಸಹಮತಿಸಿದ ಪ್ರಾಧಿಕಾರದ ಸದಸ್ಯರಿಗೆ ಹಾಗೂ ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಇಳಾ ಪ್ರಿಂಟರ್ಸ್‌ನ ಮಾಲೀಕರು ಹಾಗೂ ಸಿಬ್ಬಂದಿ ವರ್ಗಕ್ಕೆ ಪ್ರಾಧಿಕಾರದ ಪರವಾಗಿ ಕೃತಜ್ಞತೆಯ ನಮನಗಳು.

ಕನ್ನಡ ಓದುಗ ಬಳಗ ಈ ವಿಶಿಷ್ಟ ಮಾಲೆಯ ಕೃತಿಗಳನ್ನು ಪ್ರೀತಿ ಮತ್ತು ಆಸಕ್ತಿಗಳಿಂದ ಸ್ವೀಕರಿಸುತ್ತದೆಂದು ನಾನು ನಂಬಿದ್ದೇನೆ.

ದಿನಾಂಕ : 5-10-2000 | **ಡಾ. ಎಚ್. ಜೆ. ಲಕ್ಕಪ್ಪಗೌಡ**

ಸ್ಥಳ : ಬೆಂಗಳೂರು | ಅಧ್ಯಕ್ಷರು

# ಸಂಪಾದಕರ ಮಾತು

ಗ್ರಾಮೀಣ ಬೇಟೆಗಳಿಗೆ ಸಂಬಂಧಿಸಿದಂತೆ ಸಂಗ್ರಹ ಕಾರ್ಯವಾಗಲೀ ಅಧ್ಯಯನಗಳಾಗಲೀ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಬೇಟೆ ಎಂದರೆ ದಟ್ಟವಾದ ಕಾಡು ಪ್ರದೇಶವಿರುವ ಮಲೆನಾಡಿನಂತಹ ಪ್ರದೇಶಗಳಿಗೆ ಮಾತ್ರ ಸೀಮಿತ; ಹುಲಿ, ಸಿಂಹ, ಆನೆಗಳಂತಹ ದೊಡ್ಡ ಬೇಟೆಗಳು ಮಾತ್ರ ಬೇಟೆ ಎನಿಸಿಕೊಳ್ಳುತ್ತವೆ ಎಂಬುದು ಸಾಮಾನ್ಯವಾಗಿ ಇರುವಂಥ ಭಾವನೆ. ಆದರೆ ಆಹಾರಕ್ಕಾಗಿ, ಬೆಳೆ ಮತ್ತು ಆತ್ಮರಕ್ಷಣೆಗಾಗಿ, ವೈದ್ಯಕೀಯ ಉದ್ದೇಶಕ್ಕಾಗಿ ಬೇಟೆಯಾಡಲೇಬೇಕಾಧ ಅಗತ್ಯ ಎಲ್ಲ ಪ್ರದೇಶಗಳಲ್ಲೂ ಸ್ವಲ್ಪಮಟ್ಟಿಗಾದರೂ ಇರುತ್ತದೆ.

ಬೇಟೆ ಜೀವನದ ಸಮೃದ್ಧ ಚಿತ್ರ ಸಿಗುವುದು ಬುಡಕಟ್ಟು ಜನರಲ್ಲಿ. ಅರಣ್ಯ ನಾಶದಿಂದಾಗಿ ಬುಡಕಟ್ಟುಗಳಲ್ಲೂ ಬೇಟೆಯ ಅವಲಂಬನೆ ಕಡಿಮೆಯಾಗುತ್ತಿದ್ದರೂ ಅವರ ಸಾಹಿತ್ಯದಲ್ಲಿ ಬೇಟೆಯ ದಟ್ಟ ಉಲ್ಲೇಖ ಸಿಗುತ್ತದೆ. ಮಲೆಯ ಮಾದೇಶ್ವರ ಕಾವ್ಯದ ಸಂಕಮ್ಮನ ಸಾಲಿನಲ್ಲಿ ಬರುವ ಜೇನು ಬೇಟೆಯ ಚಿತ್ರವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಗ್ರಾಮೀಣ ಜನರಲ್ಲಿ ಈಗ ಮಸುಕುಮಸುಕಾಗಿ ಅಸ್ತಿತ್ವದಲ್ಲಿರುವ ಬೇಟೆಯ ಪರಿಕರಗಳು ಹಾಗೂ ಪರಿಭಾಷೆಯನ್ನು ಮತ್ತು ವಿವಿಧ ಆಚಾರ ವಿಚಾರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಬುಡಕಟ್ಟುಗಳ ಅಭ್ಯಾಸ ಅಗತ್ಯವಿದೆ. ಮಾನವನ ಸಾಂಸ್ಕೃತಿಕ ಇತಿಹಾಸದ ಅನೇಕ ಸುಳುಹುಗಳನ್ನು ಬೇಟೆ ಜಾನಪದ ಒಳಗೊಂಡಿದೆ.

ಬೇಟೆ ದೊಡ್ಡದೇ ಇರಲಿ, ಚಿಕ್ಕದೇ ಇರಲಿ ಪ್ರತಿಯೊಂದು ಬೇಟೆಗೂ ಅದರದೇ ಆದ ವಿಧಾನಗಳಿವೆ, ಉದ್ದೇಶಗಳಿವೆ. ಆದ್ದರಿಂದ ಇಲ್ಲಿ ಯಾವುದನ್ನೂ ಕಡೆಗಣಿಸುವಂತಿಲ್ಲ. ಅಳಿಲು ಉಡ ಮುಂತಾದ ಪ್ರಾಣಿಗಳ ಬೇಟೆ ಸಾಹಸಮಯವಲ್ಲದಿದ್ದರೂ ಚಾಕಚಕ್ಯತೆಯಿಂದ ಕೂಡಿರುತ್ತದೆ, ರೋಚಕವಾಗಿರುತ್ತದೆ. ಬ್ರಾಯ್ಲರ್ ಕೋಳಿಗಳ ಕಾಲ ಆರಂಭವಾಗುವುದಕ್ಕೆ ಮುಂಚೆ ಸಾಕಿದ ಕೋಳಿಗಳನ್ನು ಹಿಡಿಯುವುದೂ ಕೂಡ ಪ್ರಯಾಸದಾಯಕ ಕೆಲಸವೇ ಆಗಿರುತ್ತಿತ್ತು. ಕೋಳಿಗಳ ಜಾಡು, ಸ್ವಭಾವ ತಿಳಿಯದಿದ್ದವರಿಗೆ ಮನೆಯ ಅಂಗಳದಲ್ಲಿಯೂ ಕೋಳಿ ಹಿಡಿಯುವುದು ಕಷ್ಟವಾಗುತ್ತಿತ್ತು.

ಬೇಟೆಗಳ ಅಧ್ಯಯನ ಬೇಟೆಯ ವಿಧಾನಗಳನ್ನು ತಿಳಿಸುವುದರ ಜೊತೆಗೆ ಆಯಾ ಪ್ರಾಣಿಗಳ

ಸ್ವಭಾವ, ಚಲನವಲನ, ಆಹಾರ ಪದ್ಧತಿಗಳು, ವಾಸ ಸ್ಥಳಗಳು ಮುಂತಾದ ಅಂಶಗಳ ಬಗೆಗೆ ಬೆಳಕು ಚೆಲ್ಲುವ ಮೂಲಕ ಪ್ರಾಣಿಶಾಸ್ತ್ರೀಯ ಅಧ್ಯಯನಕ್ಕೆ ಮಹತ್ವದ ಮಾಹಿತಿ ಒದಗಿಸಬಲ್ಲದು. ಎಲ್ಲಿಯೂ ದೊರೆಯದಂತಹ ವಿವರಗಳು ಈ ಅನುಭವ ಜನ್ಯ ಜಾನಪದದಲ್ಲಿ ದೊರಕುತ್ತವೆ.

ಗ್ರಾಮೀಣ ಜನರು ಬೇಟೆಯಲ್ಲಿ ಅಳವಡಿಸಿಕೊಂಡಿರುವ ಕ್ರಮಗಳು ಅವರ ಪರಿಸರ ಕಾಳಜಿ ಹಾಗೂ ಪ್ರತಿಯೊಂದು ಜೀವಿಗೆ ಬದುಕುವ ಹಕ್ಕಿದೆ ಎಂಬ ಬಗ್ಗೆ ಅವರಿಗಿರುವ ಗೌರವದ ದ್ಯೋತಕವಾಗಿವೆ. ಪರಿಸರ ಕಾಳಜಿಯ ಬಗ್ಗೆ ನಾವು ಬಹಳ ಮಾತಾಡುತ್ತಿರುವ ಈ ದಿನಗಳಲ್ಲಿ ಜನಪದರು ಪ್ರಾಣಿಗಳನ್ನು ಕೊಲ್ಲಲು, ಹಿಡಿಯಲು ಬಳಸುವ ಜೈವಿಕ ವಿಧಾನಗಳನ್ನು ಅಧ್ಯಯನಿಸಿ ಅಳವಡಿಸಿಕೊಳ್ಳುವ ಅಗತ್ಯವಿದೆ.

ವಾಸ್ತವವಾಗಿ ಕರ್ನಾಟಕದ ಎಲ್ಲ ಪ್ರದೇಶಗಳ ಎಲ್ಲ ರೀತಿಯ ಬೇಟೆಗಳ ಮಾಹಿತಿಯನ್ನು ಸಂಗ್ರಹಿಸುವುದು ಪ್ರಸ್ತುತ ಸಂಕಲನದ ಗುರಿಯಾಗಿತ್ತು. ಆದರೆ ನಾನಾ ಕಾರಣಗಳಿಂದ ಅದು ಸಾಧ್ಯವಾಗಿಲ್ಲ. ಆದರೂ ಈಗ ದೊರೆತಿರುವ ಲೇಖನಗಳು ಬೇಟೆಯ ಬಗ್ಗೆ ಒಂದು ಸ್ಪಷ್ಟ ಪರಿಕಲ್ಪನೆ ಮೂಡಿಸಲು ಶಕ್ತವಾಗಿವೆ. ಮುಂದಿನ ಸಂಗ್ರಹಗಳಿಗೆ ದಾರಿ ಸೂಚಕವಾಗಿವೆ. ಮಲೆನಾಡಿನ ಬೇಟೆಗಳ ಬಗ್ಗೆ ಮಾತ್ರ ಹೆಚ್ಚು ಕೇಳಿರುವ ಮತ್ತು ಬರಹಗಳನ್ನು ಓದಿರುವ ನಮಗೆ ಬಯಲು ಸೀಮೆಯಲ್ಲಿಯೂ ಎಂತಹ ವೈವಿಧ್ಯಮಯ ಸಾಮಗ್ರಿ ದೊರೆಯುತ್ತದೆ ಎಂಬುದು ಇಲ್ಲಿನ ಲೇಖನಗಳಿಂದ ತಿಳಿಯುತ್ತದೆ. ಇಲ್ಲಿರುವ ಕೊರತೆಗಳನ್ನು ನೀಗಿಕೊಂಡು ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಉತ್ತಮ ಸಂಗ್ರಹಗಳು ಮುಂದೆ ಪ್ರಕಟವಾಗಲಿ, ಅದಕ್ಕೆ ಈ ಸಂಕಲನ ಪ್ರೇರಕವಾಗಲಿ ಎಂದು ಹಾರೈಸುತ್ತೇವೆ. ಸಾಕಷ್ಟು ಶ್ರಮವಹಿಸಿ ವಿವಿಧ ಬೇಟೆಗಳ ಪರಿಚಯ ಮಾಡಿಸಿರುವ ಈ ಸಂಕಲನದ ಎಲ್ಲ ಲೇಖಕರಿಗೂ ನಮ್ಮ ಕೃತಜ್ಞತೆಗಳು. ಈ ಸಂಕಲನದ ಸಂಪಾದಕತ್ವದ ಹೊಣೆ ಒಪ್ಪಿಸಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಚ್. ಜೆ. ಲಕ್ಕಪ್ಪಗೌಡ ಅವರಿಗೆ ಹಾಗೂ ಸಹಕಾರ ನೀಡಿದ ಅವರ ಸಿಬ್ಬಂದಿವರ್ಗಕ್ಕೆ ನಮ್ಮ ನಮನಗಳು.

ದಿನಾಂಕ : ೩೦-೧೦-೨೦೦೦

ಡಾ. ಕೆ. ಆರ್. ಸಂಧ್ಯಾರೆಡ್ಡಿ
ಡಾ. ದೇವೇಂದ್ರ ಕುಮಾರ ಹಕಾರಿ

# ಪರಿವಿಡಿ


| | | |
|---|---|---|
| | ಮುನ್ನುಡಿ | V |
| | ಸಂಪಾದಕರ ಮಾತು | X |
| 1. | ಬಯಲು ಸೀಮೆಯಲ್ಲಿ ಪ್ರಾಣಿ ಬೇಟೆ | |
| | *- ಎಂ.ಎಸ್. ಪ್ರಕಾಶ್* | ೧ |
| 2. | ಮಲೆನಾಡಿನಲ್ಲಿ ಪ್ರಾಣಿ ಬೇಟೆ | |
| | *- ಯು.ಎಸ್. ರಾಮಣ್ಣ* | ೨೦ |
| 3. | ಕೊಡಗಿನಲ್ಲಿ ಪ್ರಾಣಿ ಬೇಟೆ | |
| | *- ಐನಂಡ ಎಂ.ಧನು* | ೩೯ |
| 4. | ದಕ್ಷಿಣ ಕನ್ನಡದಲ್ಲಿ ಪ್ರಾಣಿ ಬೇಟೆ | |
| | *- ನರೇಂದ್ರ ರೈ ದೇರ್ಲ* | ೫೩ |
| 5. | ಬಯಲು ಸೀಮೆಯಲ್ಲಿ ಹಕ್ಕಿ ಬೇಟೆ | |
| | *- ಎಂ.ಎಸ್. ಪ್ರಕಾಶ್* | ೭೪ |
| 6. | ಕೊಡಗಿನಲ್ಲಿ ಹಕ್ಕಿ ಬೇಟೆ | |
| | *- ಐನಂಡ ಎಂ. ಧನು* | ೯೯ |
| 7. | ಉತ್ತರ ಕನ್ನಡ ಜೇನು ಬೇಟೆ | |
| | *- ಪಿ.ಬಿ. ನಾಯಕ್* | ೧೧೪ |
| 8. | ಕೊಡಗಿನಲ್ಲಿ ಜೇನು ಬೇಟೆ | |
| | *- ಕೆ.ಎಸ್. ಶೋಭ* | ೧೩೭ |
| 9. | ಬಯಲುಸೀಮೆಯಲ್ಲಿ ಮೀನು ಬೇಟೆ | |
| | *- ಎಂ.ಎಸ್. ಪ್ರಕಾಶ್* | ೧೪೩ |

# ಗ್ರಾಮೀಣ ಬೇಟೆಗಳು

# ಬಯಲು ಸೀಮೆಯಲ್ಲಿ ಪ್ರಾಣಿ ಬೇಟೆ

◆ *ಎಂ. ಎಸ್. ಪ್ರಕಾಶ್*

ಪ್ರಾಚೀನ ಕಾಲದಿಂದಲೂ ಮಾನವ ಆಹಾರಕ್ಕಾಗಿ ಬೇಟೆಯಾಡುವುದನ್ನು ಪ್ರಾರಂಭಿಸಿ, ನಂತರ ಆತ್ಮರಕ್ಷಣೆ, ಮೋಜು, ಸಂಪ್ರದಾಯ, ಜೂಜು ಇತ್ಯಾದಿಗಳ ನೆಪದಲ್ಲಿ ಬೇಟೆಯಾಡುತ್ತಾ ಬಂದಿದ್ದಾನೆ. ವೇದ ಪುರಾಣಗಳಲ್ಲಿಯೂ ಬೇಟೆಯ ಉಲ್ಲೇಖವಿದೆ. ಶಿಲ್ಪಗಳೂ ಸಹ ಬೇಟೆಯ ಕಲೆಯನ್ನು ಅಥವಾ ಅಂದಿನ ದಿನಗಳಲ್ಲಿ ಬೇಟೆಗೀಡಾಗುತ್ತಿದ್ದ ಪ್ರಾಣಿಗಳು, ಬಳಸುತ್ತಿದ್ದ ಆಯುಧಗಳನ್ನು ಕೆತ್ತನೆಯ ಮೂಲಕ ಜೀವಂತವಾಗಿರಿಸಿವೆ.

ಕಾಲ ಕ್ರಮೇಣ ಬೇಟೆಯ ವಿಧಾನವು ಬದಲಾಗುತ್ತಾ ಸಾಗಿರುವುದನ್ನು ಕಾಣಬಹುದು. ಪ್ರಾಚೀನ ಕಾಲದಲ್ಲಿ ಕಲ್ಲು, ದೊಣ್ಣೆಗಳೇ ಆಯುಧಗಳಾಗಿದ್ದವು. ನಂತರ ಬರ್ಜಿ, ಈಟಿ, ಕುಡಗೋಲು, ಬಾಡಗೊಡಲಿ ಹೀಗೆ ಬದಲಾಗುತ್ತ ಸಾಗಿದ ಆಯುಧಗಳು ಕೋವಿ, ಮದ್ದು, ಸಿಡಿ, ಕತ್ತರಿ, ಗಾಳ, ಮಚ್ಚು ಮತ್ತು ಬರಿಸುವ ಸೊಪ್ಪು, ಕ್ಯಾಟರಿ ಬಿಲ್ಲು ಮುಂತಾದ ಆಯುಧಗಳು ಬಳಕೆಗೆ ಬಂದವು.

ಬಯಲು ಸೀಮೆಯಲ್ಲಿ ಬೇಟೆ ವಿರಳ. ಇಂದಿಗೂ ಅಲ್ಪಸ್ವಲ್ಪ ಉಳಿದಿರುವ ಬೇಟೆಯ ವಿಧಾನಗಳ ಜೊತೆಗೆ ಹಿಂದಿನ ನೆನಪುಗಳನ್ನು ತಮ್ಮ ಮುಂದಿಡುತ್ತಿದ್ದೇನೆ.

ಬೇಟೆ ಎಂದರೇನು? ಪ್ರಾಣಿಗಳ ಚಲನವಲನ, ಆಹಾರ ಕ್ರಮ, ವಾಸಿಸುವ ಜಾಗಗಳಾದ ಗವಿ, ಪೊಟರೆ, ಪೊದೆ, ಬಿಲ ಮುಂತಾದವುಗಳನ್ನು ಕಂಡುಕೊಂಡು, ಅವುಗಳ ದೌರ್ಬಲ್ಯವನ್ನು ಬಳಸಿಕೊಂಡು, ಸುಲಭವಾಗಿ ತಮ್ಮ ತಂತ್ರಕ್ಕೆ ಅಥವಾ ವಿಧಾನಕ್ಕೆ ಸಿಲುಕಿಕೊಳ್ಳುವಂತೆ ಅಥವಾ ಈಡಾಗುವಂತೆ ಮಾಡುವ ಕಲೆಯೇ 'ಬೇಟೆ'. ಬೇಟೆ ನಿಜವಾಗಿಯೂ ಒಂದು ಕಲೆ. ಬೇಟೆಗಾರನ ಕೈಚಳಕಕ್ಕೆ ಪ್ರಾಣಿಗಳು ಬಲಿಯಾಗುವಂತೆ ಸಾಮಾನ್ಯರಿಗೆ ಬಲಿಯಾಗಲಾರವು.

ಮೊಲ, ಕಾಡುಕೋಳಿ, ಉಡ, ಕರಡಿ, ಅಳಿಲು, ಹಂದಿ, ಕಾಡುಹಂದಿ, ಆನೆ ಮುಂತಾದವು ಬೇಟೆಗೆ ಬಲಿಯಾಗುವ ಪ್ರಾಣಿಗಳು.

ಬೇಟೆಗೆ ಪ್ರಮುಖವಾಗಿ ನಾಲ್ಕು ಕಾರಣಗಳು. (೧) ಆಹಾರ, (೨) ರಕ್ಷಣೆ, (೩) ಸಂಪ್ರದಾಯ, (೪) ಮನರಂಜನೆ. ಆಹಾರಕ್ಕಾಗಿ ಮೊಲ, ಜಿಂಕೆ, ಕಡವೆ, ಉಡ, ಹಂದಿ, ಕಾಡು ಹಂದಿ ಮುಂತಾದವುಗಳನ್ನು ಬೇಟೆಯಾಡಲಾಗುತ್ತದೆ. ರಕ್ಷಣೆಯಲ್ಲಿ - ಜೀವರಕ್ಷಣೆ ಹಾಗೂ ಬೆಳೆ ರಕ್ಷಣೆ ಮುಖ್ಯವಾದವು. ಜೀವರಕ್ಷಣೆಯಲ್ಲಿ ತನ್ನ ಹಾಗೂ ತಾನು ಸಾಕಿದ ಸಾಕು ಪ್ರಾಣಿಗಳ ರಕ್ಷಣೆ. ರಕ್ಷಣೆಗಾಗಿ ಬೇಟೆಯಾಡುವ ಪ್ರಾಣಿಗಳೆಂದರೆ, ಆನೆ, ಹುಲಿ, ಸಿಂಹ, ಕರಡಿ ಮುಂತಾದವು.

ಮನರಂಜನೆಗಾಗಿ ಆನೆ, ಹುಲಿ, ಕರಡಿ, ಸಿಂಹ, ಕೋತಿ ಮುಂತಾದವುಗಳನ್ನು ಹಿಡಿದರೆ, ಸಂಪ್ರದಾಯಕ್ಕಾಗಿ ಒಂಟೆ ತಪ್ಪದೇ ಬಲಿಯಾಗುತ್ತದೆ. ಹಾಗೆಯೇ ಸುಲಭವಾಗಿ ಸಿಗುವ ಮೊಲ, ಕಾಡುಕೋಳಿ, ಜಿಂಕೆ, ಕಡವೆ, ಕಾಡು ಬೆಕ್ಕು ಮುಂತಾದವು ಬೇಟೆಯಾಡುವ ಪ್ರಾಣಿಗಳು. ಅಂತೆಯೇ, ಹರಕೆಯ ಸಲುವಾಗಿ ಕುರಿ, ಕೋಳಿ, ಮೇಕೆ, ಕೋಣ ಮುಂತಾದ ಸಾಕು ಪ್ರಾಣಿಗಳನ್ನು ಬಲಿಕೊಡಲಾಗುತ್ತದೆ. ಇತ್ತೀಚೆಗೆ ಕೋಣ ಬಲಿ ಕೊಡುವುದನ್ನು ಕಾನೂನುಬಾಹಿರವೆಂದು ಸಂಪೂರ್ಣವಾಗಿ ನಿಲ್ಲಿಸಿದರೂ, ಇಂದಿಗೂ ಅಲ್ಲಿ ಇಲ್ಲಿ ಉಳಿದುಕೊಂಡು ಬಂದಿದೆ. ಇಲ್ಲವೇ ವಿಧಾನ ಬದಲಾಗಿದೆ. ಸಂಪ್ರದಾಯ ಉಳಿದೇ ಇದೆ. ಉದಾಹರಣೆಗೆ, ಬಲಿಗಾಗಿ ಸಾಕಿದ ಕೋಣವನ್ನು ಬಲಿ ಕೊಡದೆ, ಸಿರಿಂಜ್ ಮೂಲಕ ಸ್ವಲ್ಪ ರಕ್ತವನ್ನು ಬಲಿ ಕೋಣದಿಂದ ತೆಗೆದು ದೇವರಿಗೆ, ಮಾರಿಯಮ್ಮನಿಗೆ ಸಮರ್ಪಿಸುವ ನವೀನ ಬಲಿ ವಿಧಾನ ಆಚರಣೆಗೆ ಬಂದಿದೆ. ಆದರೆ ಸಂಪ್ರದಾಯಕ್ಕಾಗಿ ಒಂಟೆ ನೇರವಾಗಿ ಇಂದಿಗೂ ಬಲಿಯಾಗುತ್ತಿದೆ ಅಥವಾ ಬೇಟೆಗೆ ಈಡಾಗುತ್ತಿದೆ. ಮುಸ್ಲಿಮ್ ಬಾಂಧವರು ಒಂಟೆಯ ಮಾಂಸವನ್ನು ತಿಂದೇ ಹಬ್ಬ ಆಚರಿಸುವ ಸಂಪ್ರದಾಯವಿದೆ.

ಬೆಂಗಳೂರು ಜಿಲ್ಲೆ ಮಾಗಡಿ ರಸ್ತೆಯಲ್ಲಿ ಸಿಗುವ ವರ್ದಾವನಹಳ್ಳಿ ಕವಲು ದಾರಿಯಲ್ಲಿ ಮುಂದೆ ಸಾಗಿದರೆ ಸಿಗುವ ವಡ್ಡರಹಳ್ಳಿಯಲ್ಲಿ ನಡೆಯುವ ಬೇಟೆಯು ಇಂದಿಗೂ ಸಂಪ್ರದಾಯ ಬದ್ಧವಾಗಿ ನಡೆಯುವ ಬೇಟೆಗೆ ಸಾಕ್ಷಿಯಾಗಿದೆ. ಸಂಕ್ರಾಂತಿಯ ಹಬ್ಬದ ಸಮಯದಲ್ಲಿ ವಡ್ಡರಹಳ್ಳಿಯ ಸುತ್ತಮುತ್ತಲಿರುವ ಹಳ್ಳಿಗಳಾದ ಕಿತ್ತನಹಳ್ಳಿ, ಮೋಟಗಾನಹಳ್ಳಿ, ವಡ್ಡರಹಳ್ಳಿ ಮುಂತಾದ ಹಳ್ಳಿಯ ಜನರು "ಬೇಟೆ ರಂಗಸ್ವಾಮಿ" ಜಾತ್ರೆಗೆ ಸೇರುತ್ತಾರೆ. ಊರಿಂದ ಹೊರಗಿರುವ ಬೇಟೆ ರಂಗಸ್ವಾಮಿ ಜಾಗದಲ್ಲಿ ಸೇರಿದ ಈ ಜನ, ಜಾತ್ರೆಯ ಸಮಯದಲ್ಲಿ ಬೇಟೆ ರಂಗಸ್ವಾಮಿಗೆ ಪ್ರಾಣಿಗಳನ್ನು ಬೇಟೆಯಾಡಿ ಎಡೆಯಿಡುವ ಸಂಪ್ರದಾಯವಿದೆ. ಅದರಂತೆ, ಪ್ರತಿಹಳ್ಳಿಯ ಕೆಲವು ಜನರು ಬೇಟೆಗೆ ಸಿದ್ಧತೆ ಮಾಡಿಕೊಂಡೆ ಬರುತ್ತಾರೆ. ಉಳಿದವರು ಜಾತ್ರೆಯ ಉಳಿದ ಸಂಭ್ರಮ ಆಚರಣೆಯಲ್ಲಿ ಉಳಿಯುತ್ತಾರೆ. ವಡ್ಡರಹಳ್ಳಿಯ ಸುತ್ತಮುತ್ತಲಿನಲ್ಲಿರುವ ಮೊಲ, ನೀರಹಕ್ಕಿ, ಕಾಡುಕೋಳಿ, ಕಾಡು ಬೆಕ್ಕು ಮುಂತಾದವುಗಳನ್ನು ಬೇಟೆಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ದೊಣ್ಣೆ, ಕೋಲು, ಕೋವಿ, ಬಲೆ, ಮಚ್ಚು, ಕುಡಗೋಲುಗಳನ್ನು ಹಿಡಿದು, ಬೇಟೆ ರಂಗಸ್ವಾಮಿಗೆ ಪೂಜೆ ಸಲ್ಲಿಸಿ, ಜಯಕಾರ ಹಾಕುತ್ತಾ ಬೇಟೆಗೆ ಬೇಗ ಪ್ರಾಣಿಗಳು ಸಿಗಲೆಂದು ಪ್ರಾರ್ಥಿಸಿ, ಮಂಗಳಾರತಿ ತೆಗೆದುಕೊಂಡು ಬೇಟೆಗೆ ಹೊರಡುತ್ತಾರೆ. (ಈ ಮೊದಲು ಬಹಳಷ್ಟು ಪ್ರಾಣಿಗಳು ಲಭ್ಯವಿದ್ದುದರಿಂದ ಹಾಗೂ ಬೇಟೆ ಕಾನೂನು ಬಾಹಿರವಲ್ಲದರಿಂದ ದಂಡಿಯಾಗಿ ಬೇಟೆಯಾಡುತ್ತಿದ್ದರು. ಆದರೆ ಬೇಟೆ ಕಾನೂನು ಬಾಹಿರವಾದ್ದರಿಂದ ಸಂಪ್ರದಾಯಕ್ಕಾಗಿ ಒಂದೆರಡು ಮೊಲಗಳನ್ನು, ನೀರ

ಹಕ್ಕಿಗಳನ್ನು ಬೇಟೆಯಾಡಿ ಬೇಟೆರಂಗಸ್ವಾಮಿಗೆ ಎಡೆಯಿಟ್ಟು ಸಂಪ್ರದಾಯ ಮುಗಿಸುವ ಆಚರಣೆ ಇಂದಿನದಾಗಿದೆ). ಗುಡ್ಡ, ಮೇಡುಗಳಲ್ಲಿ ಅಡಗಿರುವ ಪ್ರಾಣಿಗಳನ್ನು ಗುರುತಿಸಿ, ಕೋವಿಯಿಂದಲೂ, ದೊಣ್ಣೆಗಳಿಂದಲೂ ಮೊಲವನ್ನು ಕಾಡುಕೋಳಿಯನ್ನು ಹೊಡೆದು 'ಜಯಕಾರ ಹಾಕುತ್ತಾ, ದೇವಸ್ಥಾನಕ್ಕೆ ಹಿಂತಿರುಗಿ, ಬೇಟೆಯಾಡಿದ ಪ್ರಾಣಿಗಳ ಮಾಂಸದಡಿಗೆ ಮಾಡಿ ದೇವರಿಗೆ ಅರ್ಪಿಸಿ, ತಾವೂ ತಿಂದು ಸಂತೋಷದಿಂದ ಊರಿಗೆ ಮರಳುತ್ತಾರೆ.

ಬಯಲು ಸೀಮೆಯ ಎಲ್ಲ ಹಳ್ಳಿ, ಊರುಗಳಲ್ಲಿ ಶೇ. ೯೯ರಷ್ಟು ಊರ ಹಬ್ಬದ ದಿನದಂದು ಗ್ರಾಮದೇವತೆಗೆ ಕುರಿ, ಕೋಳಿ, ಮೇಕೆಗಳನ್ನು ಬಲಿಕೊಡುವ ಸಂಪ್ರದಾಯವಿದೆ. ಇದನ್ನು ತಡೆಯುವ ಕಾನೂನು ಇನ್ನೂ ಜಾರಿಗೆ ಬಂದಿಲ್ಲ. ಊರ ಜನರನ್ನು ರಕ್ಷಿಸುವ ಸಲುವಾಗಿ ಗ್ರಾಮದೇವತೆಯ ಪೂಜೆ ಸಾಮಾನ್ಯವಾಗಿ ವರ್ಷಕ್ಕೊಮ್ಮೆ ನಡೆಯುತ್ತದೆ. ಕೆಲವು ಗ್ರಾಮಗಳಲ್ಲಿ ಮಾತ್ರ ಎರಡು ವರ್ಷಗಳಿಗೊಮ್ಮೆ ಆಚರಿಸುತ್ತಾರೆ. ಮಾಗಡಿ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮದವರು ಸಾಮಾನ್ಯವಾಗಿ ಮಾಗಡಿ ರಂಗನಾಥ ಸ್ವಾಮಿ ಜಾತ್ರೆ ಮುಗಿದ ನಂತರ ಗ್ರಾಮದೇವತೆ ಆಚರಿಸುತ್ತಾರೆ. ಮಾಗಡಿ ತಾಲ್ಲೂಕು ಕುದೂರು ಹೋಬಳಿಯ ಸುತ್ತಮುತ್ತಲಿನ ಗ್ರಾಮದವರು ಸುಗ್ಗನಹಳ್ಳಿ ಜಾತ್ರೆ ಮುಗಿದ ನಂತರ ಗ್ರಾಮದೇವತೆಯನ್ನು ಆಚರಿಸುತ್ತಾರೆ. ಹೀಗೆ ಅವರಿಗನುಕೂಲವೆನಿಸುವ ಸಮಯದಲ್ಲಿ ಏಪ್ರಿಲ್, ಮೇ ತಿಂಗಳಲ್ಲಿ ಗ್ರಾಮದೇವತೆ ಹಬ್ಬ ಆಚರಿಸುವುದು ಹೆಚ್ಚು. ಸಂಪ್ರದಾಯ ಬದ್ಧವಾಗಿಯೇ ಸಾಕು ಪ್ರಾಣಿಗಳನ್ನು ಬಲಿ ಕೊಡುವ ಸಂಪ್ರದಾಯ ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಊರ ಜನರ ನಂಬಿಕೆಯೂ ಆಗಿದೆ.

ಬೇಟೆಗೆ ಮುನ್ನ ಗಮನಿಸಬೇಕಾದ ಅಂಶಗಳೆಂದರೆ, ಯಾವ ಪ್ರಾಣಿಗಳು ಯಾವ ವೇಳೆಯಲ್ಲಿ ಚಟುವಟಿಕೆಯಿಂದ ಇರುತ್ತವೆ. ಯಾವ ಋತುಮಾನದಲ್ಲಿ ದಷ್ಟ ಪುಷ್ಟವಾಗಿರುತ್ತವೆ. ಯಾವ ಸಮಯದಲ್ಲಿ ಗವಿ, ಗೂಡು, ಪೊಟರೆ, ಪೊದೆಗಳಿಂದ ಹೊರಬರುತ್ತವೆ. ಋತುಮಾನ ಗಳಿಗನುಗುಣವಾಗಿ ಲಭ್ಯವಾಗುವ ಆಹಾರ, ಹಣ್ಣು, ಹಂಪಲು, ಯಾವ ಪ್ರಾಣಿಗಳಿಗೆ ಎಂತಹ ಆಹಾರ ಇಷ್ಟ ಎಂಬುದನ್ನು ಬೇಟೆಗಾರ ಕಂಡುಕೊಳ್ಳಬೇಕು.

ಮೊಲಗಳಿಗೆ ಪ್ರಿಯವಾದ ಆಹಾರ ಗರಿಕೆ ಹುಲ್ಲು, ಅದು ಬೆಳದಿಂಗಳ ಬೆಳಕಿನಲ್ಲಿ ಹೆಚ್ಚು ನಿರ್ಭಯವಾಗಿ ಓಡಾಡುತ್ತದೆ. ನಿರ್ಭಯವೇ ಇದರ ದೌರ್ಬಲ್ಯ. ಬೇಟೆಗಾರನಿಗೆ ವರದಾನ. ಮೊಲ ಆಹಾರಕ್ಕಾಗಿ ಎಲ್ಲ ವೇಳೆಯಲ್ಲೂ ಓಡಾಡಿದರೂ ಬೆಳದಿಂಗಳಲ್ಲಿ ಸಂಜೆಯಿಂದ ಮಧ್ಯರಾತ್ರಿಯವರೆಗೆ ಹೆಚ್ಚು ಓಡಾಡುತ್ತದೆ. ಹೊಲ ಗುಡ್ಡ ಬೆಟ್ಟ ಪೊದರುಗಳಲ್ಲಿ ಹೆಚ್ಚು ಇರುತ್ತದೆ.

ಹಾಗೆಯೇ ಕರಡಿಗೆ ಪ್ರಿಯವಾದುದು ಹಲಸು, ಕಬ್ಬು, ಜೇನು, ಗೆದ್ದಲು ಗುಗ್ಗೆ, ಗೆಡ್ಡೆ ಗೆಣಸು ಮುಂತಾದವು. ಹಲಸು ಸಾಮಾನ್ಯವಾಗಿ ಫೆಬ್ರವರಿಯಲ್ಲಿ ಪ್ರಾರಂಭವಾಗಿ ಆಷಾಡ ಮಾಸಕ್ಕೆ ಮುಕ್ತಾಯವಾಗುತ್ತದೆ. ಏಪ್ರಿಲ್, ಮೇ ತಿಂಗಳಲ್ಲಿ ಹೆಚ್ಚು. ಕಬ್ಬು ಜನವರಿ-ಫೆಬ್ರವರಿಯಲ್ಲಿ ಹೆಚ್ಚು ರಸಭರಿತವಾಗಿದ್ದರೂ ಕರಡಿ ಕಬ್ಬಿನ ಗದ್ದೆಗಳಿಗೆ ನುಗ್ಗುವುದು ಸೆಪ್ಟೆಂಬರ್-ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಹೆಚ್ಚು. ಚೈತ್ರದಲ್ಲಿ ಜೇನು ಹೆಚ್ಚಾದರೂ ಸಕಲ ಕಾಲದಲ್ಲೂ ಲಭ್ಯ.

ಆದರೆ, ಕರಡಿ ಹಲಸಿನ ಹಣ್ಣಿನ ಸಮಯದಲ್ಲಿ ಜೇನನ್ನು ಕೀಳಲು ಇಷ್ಟಪಡುತ್ತದೆ, ಬರುತ್ತದೆ. ಗೆಡ್ಡೆ ಗೆಣಸುಗಳನ್ನು ಸಾಮಾನ್ಯ ಆಹಾರವಾಗಿ ತಿನ್ನುತ್ತದೆ. ಹುತ್ತದ ಆಳದಲ್ಲಿ ಗೆದ್ದಲು ಹುಳು, ಕಟ್ಟಿರು ಗುಗ್ಗೆ ಕರಡಿಗೆ ಬಹಳ ಇಷ್ಟ. ಬರಿ ವಾಸನೆಯಿಂದಲೇ ಗುಗ್ಗೆ ಇರುವಿಕೆಯನ್ನು ಕರಡಿ ಗುರುತಿಸುತ್ತದೆ, ಹುತ್ತ ಬಹುಗಟ್ಟಿಯಾಗಿರುವುದರಿಂದ, ಅದನ್ನು ಬಗೆಯಲು ಬಹಳ ಸಮಯ ಬೇಕಾಗುತ್ತದೆ.

ಕರಡಿಯು ಹಲಸಿಗೆ ಎಷ್ಟರ ಮಟ್ಟಿಗೆ ಶರಣಾಗಿದೆ ಎಂದರೆ, ಹಲಸಿನ ರುಚಿಗೆ ಮಾರುಹೋದ ಕರಡಿ, ಪ್ರತಿ ಋತುಮಾನದಲ್ಲಿ ನಿರ್ದಿಷ್ಟ ಮರಗಳಿಗೆ ತಪ್ಪದೇ ಬರುತ್ತದೆ. ಸಾಮಾನ್ಯವಾಗಿ ರಾತ್ರಿ ೮-೧೦ ಗಂಟೆಗೆ ಬಂದು ಹಣ್ಣಾದ ಹಲಸಿನ ಹಣ್ಣನ್ನು ಕಿತ್ತು ಜೇನು ಸೇರಿಸಿ ತಿನ್ನುತ್ತದೆ.

ಮಾಗಡಿಯ ಸಮೀಪದಲ್ಲಿರುವ ಚಿಲೂರಗಿಡದಲ್ಲಿ ಕರಡಿ ಹೆಚ್ಚು. ಚಿಲೂರ ಗಿಡದ (ಬೆಟ್ಟ) ಸುತ್ತಮುತ್ತಲಿನ ಊಜಗಲ್ಲು ಮಾಯನಾಯಕನ ಹಳ್ಳಿ, ಕಲ್ಯಾ, ತಿಪ್ಪಸಂದ್ರ, ಸೋಲೂರು ಕಡೆಗಳಲ್ಲಿ ಇದರ ಓಡಾಟ ಜಾಸ್ತಿ. ಇವು ತಮ್ಮ ತಾಣದಿಂದ ಹೊರಟು ಬೆಳಗಾಗುವುದರೊಳಗೆ ತಮ್ಮ ತಾಣವನ್ನು ಸೇರುವಷ್ಟು ದೂರವನ್ನು ಮಾತ್ರ ತಮ್ಮ ಸರಹದ್ದಾಗಿ ಗುರುತಿಸಿಕೊಳ್ಳುತ್ತವೆ. ಆದರೂ ಕೆಲವೊಮ್ಮೆ ಮೇಲೆ ಹೇಳಿದಂತೆ ಗುಗ್ಗೆಯನ್ನು ತಿನ್ನಲು ಹುತ್ತವನ್ನು ಬಗೆಯುತ್ತಾ ತನ್ನ ತಾಣಕ್ಕೆ ಹಿಂದಿರುಗುವ ಸಮಯವನ್ನು ಮರೆಯುತ್ತದೆ. ಹೀಗಾಗುವುದು ಸಾಮಾನ್ಯವಾಗಿ ಕರಡಿ ಒಂಟಿಯಾಗಿ ಬಂದಾಗ ಮಾತ್ರ. ಇವುಗಳಿಂದಾಗುವ ಅಪಾಯಕ್ಕೆ ಹೆದರಿ ಊರ ಜನರು, ಓಡಿಸುವ ಇಲ್ಲವೆ ಹೊಡೆದು ಹಾಕುವ ನಿರ್ಣಯ ಕೈಗೊಳ್ಳುತ್ತಾರೆ.

ಕರಡಿಯು ಕಬ್ಬು, ಕಡಲೆ ಗಿಡ ಮುಂತಾದುವನ್ನು ಹಾಳುಗೆಡುವುದೆಂದು ಬೇಟೆಯಾಡಿದರೆ, ಕರಡಿ ಗೊರವರೆಂದು ಹೆಸರಾಗಿರುವ ಗೊರವರು ತಮ್ಮ ವೃತ್ತಿಗಾಗಿ ಕರಡಿಗಳನ್ನು ಹಿಡಿಯುತ್ತಾರೆ. ಮನರಂಜನೆಗಾಗಿ ಪಳಗಿಸುತ್ತಾರೆ.

ಡಿಸೆಂಬರ್ ಜನವರಿಯಲ್ಲಿ ಪ್ರಾಣಿ ಪಕ್ಷಿಗಳು ದಷ್ಟಪುಷ್ಟವಾಗಿ ಬೆಳೆದಿದ್ದರೂ, ಬೇಟೆ ಕಡಿಮೆ. ಏಕೆಂದರೆ, ಆ ಸಮಯ ಒಕ್ಕಲು ಸಮಯ. "ಹರಿಸಿನದ ಕೂಳಿಗೆ ಹೋಗಿ ವರುಷದ ಕೂಳು ಕಳೆದುಕೊಂಡರಂತೆ" ಎಂಬ ಗಾದೆಯಂತೆ, ಬೇಟೆಯ ನೆಪದಲ್ಲಿ, ಕೈಗೆ ಬಂದ ಬೆಳೆಯನ್ನು ಒಟ್ಟುಗೂಡಿಸುವುದನ್ನು ಬಿಟ್ಟು ಬೇಟೆಗೆ ಹೋಗುವುದು ಕಡಿಮೆ. ಆದರೂ ಸಂಪ್ರದಾಯಕ್ಕಾಗಿ, ಒಂದೆರಡು ದಿನ ಸಂಕ್ರಾಂತಿಯ ಸಮಯದಲ್ಲಿ ಬೇಟೆಯಾಡಲಾಗುತ್ತದೆ.

**ಮೊಲದ ಬೇಟೆ :** ಮೊಲದ ಬೇಟೆ ಎಂದೊಡನೆ ನೆನಪಿಗೆ ಬರುವುದು ಚಳ್ಳಕೆರೆ ತಾಲ್ಲೋಕಿನ ನನ್ನೀವಾಳ ಗ್ರಾಮದಲ್ಲಿ ಇಂದಿಗೂ ಸಂಪ್ರದಾಯಬದ್ಧವಾಗಿ ನಡೆದುಕೊಂಡು ಬಂದಿರುವ ಮೊಲದ ಬೇಟೆ. ನನ್ನಿವಾಳ ಗ್ರಾಮದಲ್ಲಿ ನಡೆವ ಗಾದ್ರಿ ಪಾಲಕ ಉತ್ಸವದ ಮಾರನೆಯ ದಿನ, ಮ್ಯಾಸಮಂಡಲಿಯ ಯುವಕರು ಬೇಟೆಗೆ ಹೊರಡುತ್ತಾರೆ. ಬೇಟೆಗೆ ಹೊರಡುವಾಗ ತಮಟೆ ಬಡಿದುಕೊಂಡು, ಬಂಡೆಯ ಬಳಿ ಮನುಮಲೋಮ ಕುಲದವರು ಹೊಂಬಾಳೆ ಎಲೆ, ಅಡಿಕೆ,

ಹಿಡಿದು ಇವರಿಗಾಗಿ ಕಾದು ಕುಳಿತಿರುತ್ತಾರೆ. ಬೇಟೆಯಾಡಲು ಹೊರಟ ಈ ಯುವಕರಿಗೆ ವೀಳ್ಯ ನೀಡಿ ಬೇಟೆಗೆ ಬೀಳ್ಕೊಡುತ್ತಾರೆ. ವೀಳ್ಯ ಪಡೆದ ಯುವಕರು ದೇವರಿಗೆ ಕೈ ಮುಗಿದು, ನನ್ನಿವಾಳದ ಹತ್ತಿರವಿರುವ ಸೋಮಲಬಂಡೆ ಕಾಡಿಗೆ ಹೋಗಿ ಒಂದೆರಡು ಮೊಲಗಳನ್ನು ಬೇಟೆಯಾಡ್ತಿ ಹಿಂತಿರುಗುತ್ತಾರೆ. ಇವರಿಗಾಗಿ ಗಾದ್ರಿಪಾಲಕನ ವೇಷ ಹಾಕಿದ ದೊರುಮಲ ಗಾಜಲು ವಂಶದವರೊಡನೆ ಬಂಡೆಯ ಮೇಲೆ ಕುಳಿತಿರುತ್ತಾರೆ. ಬೇಟೆಯವರನ್ನು ಬರಮಾಡಿಕೊಂಡು ಊರಿಗೆ ಹಿಂತಿರುಗುತ್ತಾರೆ. ಬೇಟೆಯಾಡಿ ಬಂದವರಿಗೆ ಹೆಂಗಳೆಯರು ಆರತಿ ಎತ್ತಿ ಸ್ವಾಗತಿಸುತ್ತಾರೆ. ಬೇಟೆಯ ಒಂದು ಭಾಗವನ್ನು ಹೊರಗೆ ಕೊಡುವುದು ಸಂಪ್ರದಾಯ. ಉಳಿದುದನ್ನು ಯುವಕರು ಹಂಚಿಕೊಳ್ಳುತ್ತಾರೆ.

ಈ ನನ್ನಿವಾಳದ ಸಂಪ್ರದಾಯಬದ್ಧ ಮೊಲದ ಬೇಟೆಗೂ, ಮಾಗಡಿ ತಾಲ್ಲೂಕಿನ ಕೆಲವೆಡೆ ನಡೆಯುವ ಮೊಲದ ಬೇಟೆಗೂ ಸ್ವಾಮ್ಯವಿದೆ. ಆದರೆ, ಮಾಗಡಿ ತಾಲ್ಲೂಕಿನ ವಡ್ಡರಹಳ್ಳಿಯಲ್ಲಿ ಸಂಪ್ರದಾಯಬದ್ಧವಾದರೆ, ಚಿಲೂರ ಗಿಡದ ಸುತ್ತಮುತ್ತ ಅದರ ರೀತಿಯೇ ಬೇರೆ. ಸುಗ್ಗಿಯ ಕಾಲದಲ್ಲಿ, ಅಂದರೆ ದವಸ ಧಾನ್ಯಗಳ ಒಕ್ಕಲು ಮುಗಿದ ನಂತರ; ಬಿಡುವಿನ ವೇಳೆಯಲ್ಲಿ ಮೊಲದ ಬೇಟೆಗೆ ಹೊರಡುತ್ತಾರೆ. ಬ್ಯಾಟರಿ, ದೊಣ್ಣೆ, ಕೋಲು, ಕೋವಿ ಹಿಡಿದು ಹೊರಟ ಯುವಕರು ಬೆಳದಿಂಗಳ ರಾತ್ರಿಗಳಲ್ಲಿ ಬೇಟೆಯಾಡುತ್ತಾರೆ. ಬೇಟೆಗೆ ಬಲಿಯಾದ ಮೊಲಗಳನ್ನು ತಮ್ಮ ಕೋಲಿನ ತುದಿಗೆ ಸಿಕ್ಕಿಸಿಕೊಂಡು ಕೇಕೆ ಹಾಕುತ್ತಾ ಊರ ಪ್ರವೇಶಿಸುತ್ತಾರೆ. ಹೀಗೆ ಕೋಲು ತುದಿಗೆ ಸಿಕ್ಕಿಸಿ ತರುವ ಮೊಲದ ಬೇಟೆಯನ್ನೆ "ಕೋಲು ಬೇಟೆಯೆಂದೆ ಕರೆಯುತ್ತಾರೆ. ಅಂತೆಯೇ ಸಂಪ್ರದಾಯಬದ್ಧವಾಗಿ ಬೇಟೆರಂಗನ ಎಡೆಗಾಗಿ ತರುವ ಬೇಟೆಯ ಮೊಲಗಳನ್ನು ಸಹ ಕೋಲ ತುದಿಗೆ ಸಿಕ್ಕಿಸಿ, ಕೇಕೆ ಹಾಕುತ್ತಾ ದೇವಸ್ಥಾನಕ್ಕೆ ಬರುತ್ತಾರೆ. ಇಲ್ಲಿಯೂ ಸಹ ಅವರು ಇದನ್ನು ಕೋಲು ಬೇಟೆಯೆಂದೆ ಕರೆಯುತ್ತಾರೆ.

**ಬಲೆ ವಿಧಾನ :** ಕಾಡಿನ ಅಂಚಿನಲ್ಲಿ, ಗುಡ್ಡ, ಗಿಡ, ಪೊದರು, ಮೆಳೆ ಪೊಟರೆಗಳಲ್ಲಿ ಹೆಚ್ಚು ವಾಸಿಸುವ ಮೊಲ ಆಹಾರಕ್ಕಾಗಿ ಹೊರ ಬರುವ ಹಾದಿ ಮತ್ತು ಓಡಾಡುವ ಜಾಗದಲ್ಲಿ, ಬಲೆಯ ಎರಡೂ ತುದಿಗಳಿಗೆ ಕೋಲನ್ನು ಸಿಕ್ಕಿಸಿ ಮಧ್ಯೆ ಅಲ್ಲಲ್ಲಿ ಒಂದೊಂದು ಕೋಲುಗಳನ್ನೆ ಇಟ್ಟಿರುತ್ತಾರೆ. ಬಲೆಯು ಸುಮಾರು ೧೫-೨೦ ಅಡಿಗಳಷ್ಟು ಉದ್ದವಿದ್ದು ೨½-೩ ಅಡಿಗಳಷ್ಟು ಅಗಲವಿರುತ್ತದೆ. ಬಲೆಯನ್ನು ಕೋಲಿನ ಆಧಾರದಲ್ಲಿ ಸ್ವಲ್ಪ ತಗುಲಿದರೂ ಸಾಕು, ಕೆಳಕ್ಕೆ ಬೀಳುವಂತೆ ನಿಲ್ಲಿಸಲಾಗಿರುತ್ತದೆ. ಬಲೆಯ ಅಕ್ಕಪಕ್ಕದಲ್ಲಿ ಗಿಡಗೆಂಡೆಗಳನ್ನು ಹಾಕಿ ಅದು ಓಡಿ ಹೋಗದಂತೆ ಮಾಡಲಾಗಿರುತ್ತದೆ. ಮೊಲವಿರುವ ಜಾಗವನ್ನು ನಾಯಿ ಗುರುತಿಸುತ್ತದೆ, ಇಲ್ಲವೇ ಮೊಲ ಓಡಾಡಿರುವ ಜಾಗದಲ್ಲಿ ಅದರ ಕುರುಹುಗಳು, ಹಿಕ್ಕೆ ಮೊಲದ ಇರುವನ್ನೆ ಖಚಿತಪಡಿಸುತ್ತದೆ. ಮೊಲವು ಎಂದಿನಂತೆ ತನ್ನ ಆಹಾರ ಹುಡುಕಾಟ, ಓಡಾಟಕ್ಕೆ ಬಂದುದನ್ನು ಕಂಡುಕೊಂಡ ಬೇಟೆಗಾರ ಹಿಂತಿರುಗಲು ಸಾಧ್ಯವಾಗದಂತೆ ಅಡ್ಡಗಟ್ಟುತ್ತಾನೆ. ಮೊಲವು ಬೆದರಿ ಓಡಿ ಹೋಗಲು ಮುಂದಾಗುತ್ತದೆ. ಅಡ್ಡವಿರುವ ಬಲೆಗೆ ತಾಗಿದೊಡನೆ ಮೊಲ ನುಗ್ಗಿದ ರಭಸಕ್ಕೆ ಬಲೆಯು ಸುತ್ತಿಕೊಂಡು ಉಂಡೆಯಾಗುತ್ತದೆ. ಕೆಲವೊಮ್ಮೆ ನಾಯಿ ಮೊಲವಿರುವ ಜಾಗವನ್ನು ಗುರುತಿಸಿದಾಗ

ಆಯಕಟ್ಟಿನಲ್ಲಿ ಬಲೆಯನ್ನು ಒಡ್ಡಿ, ಕೇಕೆ ಹಾಕಿ ಅಥವಾ ತಮಟೆ ಬಡಿದು ಶಬ್ದ ಮಾಡುತ್ತಾರೆ. ನಾಯಿ ಬೊಗಳುತ್ತಾ ಮೊಲದ ಮೇಲೆ ಎರಗಲು ಮುಂದಾಗುತ್ತದೆ. ಹೆದರಿದ ಮೊಲವು ತಾನಿರುವ ಜಾಗ ಸುರಕ್ಷಿತವಲ್ಲವೆಂದು, ತಪ್ಪಿಸಿಕೊಂಡು ಓಡಿ ಹೋಗಲು ಮುಂದಾಗುತ್ತದೆ. ಆದರೆ ಅಡ್ಡಲಾಗಿ ಹಾಕಲಾಗಿರುವ ಬಲೆಯೊಳಗೆ ಸಿಕ್ಕಿಕೊಳ್ಳುತ್ತದೆ. ಬಲೆಯ ಕಾವಲಿಗೆ ಇರುವವನು ತಡಮಾಡದೆ ಮೊಲವನ್ನು ಜೀವಂತವಾಗಿ ಹಿಡಿಯಲು ಪ್ರಯತ್ನಿಸುತ್ತಾನೆ. ಮೊಲವು ಬಲೆಯಲ್ಲಿ ಪೂರ್ಣವಾಗಿ ಸುತ್ತಿಕೊಂಡು ಬಂದಿಯಾಗಿದ್ದರೆ ಮಾತ್ರ ಜೀವಂತವಾಗಿ ಹಿಡಿಯಲು ಸಾಧ್ಯ, ಇಲ್ಲವಾದರೆ ತಪ್ಪಿಸಿಕೊಂಡು ಓಡಿ ಹೋಗುತ್ತದೆ. ಸಂದರ್ಭಕ್ಕನುಗುಣವಾಗಿ ಕಾವಲಿದ್ದವನು ಹಿಡಿಯುವ ಅಥವಾ ದೊಣ್ಣೆಯಿಂದ ಹೊಡೆದು ಹಿಡಿಯುವ ನಿರ್ಣಯ ಕೈಗೊಳ್ಳುತ್ತಾನೆ. ನಾಯಿ ಸಹ ಮೊಲ ತಪ್ಪಿಸಿಕೊಳ್ಳಲು ಸಾಧ್ಯವಾಗದಂತೆ ಎಚ್ಚರ ವಹಿಸುತ್ತದೆ. ಹೀಗೆ ಬಲೆಯ ವಿಧಾನದಲ್ಲಿ ಮೊಲವನ್ನು ಹಿಡಿಯಲಾಗುತ್ತದೆ.

**ಬ್ಯಾಟ್ರಿ ವಿಧಾನ :**

ಬೆಳದಿಂಗಳಲ್ಲಿ ಮೊಲಗಳು ಹೆಚ್ಚು ಓಡಾಡುತ್ತವೆ. ಬೆಳದಿಂಗಳ ಬೆಳಕಿನಲ್ಲಿ ಮೊಲದ ಇರುವನ್ನು ಕಂಡುಕೊಳ್ಳಲು ಸುಲಭವಾದ್ದರಿಂದ, ಬೆಳದಿಂಗಳ ಸಮಯವನ್ನು ಬೇಟೆಗಾರ ಸೂಕ್ತವಾದುದೆಂದು ಮನಗಂಡಿರಬಹುದು. ಬೇಟೆಗಾರ ಹಗಲಿನಲ್ಲಿ ಓಡಾಡಿ ಮೊಲಗಳ ಜಾಡು, ಓಡಾಡುವ ಜಾಗಗಳನ್ನು ಗುರುತಿಸಿಕೊಂಡಿರುತ್ತಾನೆ. ಬೆಳದಿಂಗಳಲ್ಲಿ ಆ ಜಾಗಗಳಲ್ಲಿ ಮೊಲ ಬರುವಿಕೆಗಾಗಿ ಕಾಯುತ್ತಾ ಕುಳಿತುಕೊಳ್ಳುತ್ತಾನೆ. ತಲೆಗೆ ಬ್ಯಾಟ್ರಿಯನ್ನು ಕಟ್ಟಿಕೊಂಡು ಕೋವಿ ಹಿಡಿದು ಕಾಯುತ್ತಿರುತ್ತಾನೆ. ಕೋವಿ ಇಲ್ಲದಿದ್ದರೆ ಮತ್ತೊಬ್ಬ ಕೈಯಲ್ಲಿ ದೊಣ್ಣೆ ಹಿಡಿದು ಕಾಯುತ್ತಿರುತ್ತಾನೆ. ಕೋವಿ ಇದ್ದರೆ ಒಬ್ಬನೇ ಬೇಟೆಯಾಡ ಬಹುದು. ಇಲ್ಲದಿದ್ದಲ್ಲಿ ಇಬ್ಬರು ಅಥವಾ ಮೂವರು ಇರಲೇಬೇಕು. ಮೊಲವು ತನ್ನ ಗಮ್ಯ ಸ್ಥಾನದಿಂದ ಹೊರಬಂದು ಓಡಾಡುತ್ತಿರುವುದನ್ನು ಗಮನಿಸಿದ ಬೇಟೆಗಾರ ತಡಮಾಡದೆ ಬ್ಯಾಟರಿಯನ್ನು ಹಾಕುತ್ತಾನೆ. ಬೆಳದಿಂಗಳ ಬೆಳಕಲ್ಲಿ ನಿರ್ಭಯವಾಗಿ ಆಹಾರ ಹುಡುಕುತ್ತಿದ್ದ ಮೊಲವು ತನ್ನ ಮೇಲೆ ಬಿದ್ದ ಪ್ರಖರ ಬೆಳಕಿನಿಂದ, ಕಣ್ಣು ಮಂಜಾಗುತ್ತದೆ. ದಿಕ್ಕು ಕಾಣದ ಮೊಲ ಸ್ವಲ್ಪ ಹೊತ್ತು ಹಾಗೆಯೇ ಕುಳಿತು ಬಿಡುತ್ತದೆ. ಈ ಸಮಯವನ್ನು ವ್ಯರ್ಥಮಾಡದೆ ಬೇಟೆಗಾರ ಕೋವಿಯನ್ನು ಹಾರಿಸುತ್ತಾನೆ ಅಥವಾ ಸಹ ಬೇಟೆಗಾರ ದೊಣ್ಣೆಯಿಂದ ಹೊಡೆದುರುಳಿಸುತ್ತಾನೆ. ಕೋವಿ ಹಿಡಿದು ಒಬ್ಬನೆ ಹೊರಟ ಬೇಟೆಗಾರ ತನ್ನ ರಕ್ಷಣೆಗಾಗಿ ನಾಯಿಯನ್ನು ಕರೆದುಕೊಂಡು ಹೋಗುತ್ತಾನೆ. ಆದರೆ, ಹಗಲಿನಲ್ಲಿ ಬೇಟೆಯಾಡುವಾಗ ನಾಯಿ ಬೇಟೆಗೆ ಸಹಕರಿಸುವಂತೆ ಇಲ್ಲಿ ಯಾವ ವಿಧವಾದ ಸಹಾಯವನ್ನು ತಾನಾಗಿಯೇ ಮಾಡದೆ, ತನ್ನ ಒಡೆಯನ ಅಣತಿಯಂತೆ ಮಾತ್ರ ನಡೆದುಕೊಳ್ಳುತ್ತದೆ. ಏಕೆಂದರೆ, ನಾಯಿ ಏನಾದರು ಬೊಗಳಿದರೆ ಬೇಟೆ ನಿರರ್ಥಕ ವಾಗುತ್ತದೆ. ಮೊಲದ ಮಾಂಸ ಬಹು ರುಚಿಕರವಾದ, ಪುಷ್ಟಿದಾಯಕ ಮಾಂಸ. ಅಲ್ಲದೆ, ಬೇಟೆಯ ಸಮಯದಲ್ಲಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುವುದನ್ನು ಬಿಟ್ಟು ಯಾವುದೇ ರೀತಿಯ ಅಪಾಯ ಬೇಟೆಗಾರನಿಗೆ ಇರುವುದಿಲ್ಲ. ಆದ್ದರಿಂದ ಮೊಲದ ಬೇಟೆ ಸಾಮಾನ್ಯವಾಗಿ ನಡೆಯುತ್ತಲೇ ಇರುತ್ತದೆ.

**ಕರಡಿ ಬೇಟೆ** : ಕರಡಿ ಬೇಟೆ ಬಹಳ ಕಷ್ಟ. ಚತುರತೆಯುಳ್ಳ ಕರಡಿ ಬೇಟೆಗಾರನನ್ನು ವಂಚಿಸಿ ಕ್ಷಣ ಮಾತ್ರದಲ್ಲಿ ಮಾಯವಾಗುತ್ತದೆ. ಹೆಣ್ಣು ಕರಡಿ ಅದರಲ್ಲೂ ಮರಿಯುಳ್ಳ ಹೆಣ್ಣು ಕರಡಿ ಬಹಳ ಅಪಾಯಕಾರಿ. ತನ್ನ ಮರಿಗಳ ರಕ್ಷಣೆಗೆ ಹೆಣ್ಣು ಕರಡಿಗೆ ಎಂತಹ ಸಮಯದಲ್ಲೂ ಹೋರಾಡುವ ಛಾತಿ ತಿಳಿದಿದೆ.

ಕರಡಿಯನ್ನು ಪ್ರಮುಖವಾಗಿ ಎರಡು ಕಾರಣಗಳಿಗೆ ಬೇಟೆಯಾಡಲಾಗುತ್ತದೆ. ಬೆಳೆ ರಕ್ಷಣೆ, ಜೊತೆಗೆ ಆತ್ಮರಕ್ಷಣೆ. ಎರಡನೆಯದಾಗಿ ಮನರಂಜನೆ.

ಕಬ್ಬು, ಕಡಲೆಕಾಯಿ, ಹಲಸು, ಗೆಣಸು ಮುಂತಾದವುಗಳನ್ನು ತಿನ್ನುವುದಕ್ಕಿಂತ ಹೆಚ್ಚು ಹಾಳುಗೆಡುವುತ್ತದೆ. ಕಬ್ಬನ್ನು ಬುಡದಲ್ಲಿ ಮಾತ್ರ ರಸಹೀರಿ ಉಳಿದ ಭಾಗವನ್ನು ಹಾಗೆಯೇ ಬಿಟ್ಟುಬಿಡುತ್ತದೆ. ಕಬ್ಬಿನ ಬುಡ ಸಿಹಿಯಾಗಿದ್ದು, ಮೇಲ್ಭಾಗ ಅಷ್ಟು ಸಿಹಿಯಾಗಿಲ್ಲದ್ದಕ್ಕೆ ಅದು ಹೀಗೆ ಮಾಡಬಹುದು. ಕಬ್ಬಿನ ಸಾಲುಗಳನ್ನು ಬುಡದಲ್ಲಿ ಜಗಿದು ಇಡೀ ಸಾಲುಗಳನ್ನೇ ಹಾಳುಗೆಡುವುತ್ತದೆ. ಅಂತೆಯೇ ಕಡಲೆ ಗಿಡಗಳನ್ನು ಸಹ ಕಿತ್ತು ಕಿತ್ತು ಕೆಲವನ್ನು ಮಾತ್ರ ತಿಂದು ಉಳಿದವನ್ನು ಹಾಳುಮಾಡುತ್ತದೆ. ಕೆಲವೊಮ್ಮೆ ಕಡಲೆ ಗಿಡ ಇನ್ನೂ ಬಲಿತಿಲ್ಲವಾದ್ದರಿಂದ ಕಾಯಿ ಸಿಗುವುದಿಲ್ಲ, ಅದು ಗಿಡವನ್ನು ಕಿತ್ತು ಹುಡುಕುವುದು ಬಿಡುವುದಿಲ್ಲ. ಹಿಂಡು ಹಿಂಡಾಗಿ ಬಂದಾಗಲಂತು ಕೆಲವೇ ನಿಮಿಷಗಳಲ್ಲಿ ಇಡೀ ಹೊಲದಲ್ಲಿನ ಗಿಡಗಳನ್ನು ಹಾಳು ಮಾಡುತ್ತದೆ. ಆದ್ದರಿಂದ ಬೆಳೆ ರಕ್ಷಣೆಗಾಗಿ ಓಡಿಸುವುದು ಇಲ್ಲವೆ ಬೇಟೆಯಾಡುವುದು ಅನಿವಾರ್ಯ.

ಬೇಟೆಗಾರ ಈ ನೆಲೆಯಲ್ಲೆ ತಂತ್ರ ರೂಪಿಸುತ್ತಾನೆ. ಹಳ್ಳ, ದಿಣ್ಣೆ, ಕೊರಕಲು, ಕಿರುದಾರಿ ಮುಂತಾದ ಇಕ್ಕಟ್ಟಾದ ಜಾಗಗಳನ್ನು ಗುರುತಿಸಿಕೊಂಡು ಬೇಟೆಗೆ ಸಿದ್ಧತೆ ಮಾಡಿಕೊಳ್ಳುತ್ತಾನೆ. ಅವು ಗಿಡ, ಬೆಟ್ಟಗಳಿಂದ ಬರುವ ಜಾಡು ಹಾಗೂ ಹಿಂತಿರುಗುವಾಗ ಕಾಲು ದಾರಿಗಳಲ್ಲಿ ಹೋಗುವ ಕಡೆಗಳಲ್ಲಿ ಇರುವ ಇಕ್ಕಟ್ಟಾದ ಜಾಗವನ್ನು ಗುರುತಿಸಿಕೊಳ್ಳುತ್ತಾನೆ. ಮುಖ್ಯವಾಗಿ ಕರಡಿಗಳು ಎಷ್ಟಿವೆ ಎಂಬುದು ಬಹುಮುಖ್ಯ. ಹಿಂಡು ಹಿಂಡಾಗಿ ಬಂದಾಗ ಬೇಟೆಯಾಡುವುದು ಸೂಕ್ತವಲ್ಲ, ಅವುಗಳನ್ನು ಓಡಿಸಲು ಮಾತ್ರ ಪ್ರಯತ್ನಿಸಬಹುದು. ಒಂದೆರಡು ಕರಡಿಗಳಿದ್ದಾಗ ಬೇಟೆ ಸುಲಭ. ಬೇಟೆಗಾರನಾದರೆ ಅದನ್ನು ಬೇಟೆಯಾಡಲೆಂದೇ ಕೋವಿ, ದೊಣ್ಣೆ, ಪಂಜು ಮುಂತಾದವನ್ನು ಸಿದ್ಧಪಡಿಸಿಕೊಂಡು ಕಾಯುತ್ತಿರುತ್ತಾನೆ. ಬೆಳೆ ರಕ್ಷಣೆಗೆ ಓಡಿಸುವ ಅಥವಾ ಅನಿವಾರ್ಯ ವಾದಾಗ ಅಥವಾ ಜೀವರಕ್ಷಣೆಯ ಸಮಯದಲ್ಲಿ ಹೊಡೆದುರುಳಿಸುತ್ತಾನೆ.

ಹೊಲ, ತೋಟ, ಗದ್ದೆಗಳಿಗೆ ಬರುವ ಕರಡಿಗಳನ್ನು ಅಡ್ಡಗಟ್ಟಿ, ಕಲ್ಲು, ಕವಣೆಗಳಿಂದ ಹೊಡೆದು, ಪಂಜು ಹಚ್ಚಿ ಬೆದರಿಸಿ ಓಡಿಸಲು ಪ್ರಯತ್ನಿಸುತ್ತಾನೆ. ಕೆಲವೊಮ್ಮೆ ಹೋದ ಕರಡಿಗಳು ಮರಳಿ ಬರುತ್ತವೆ. ಬಯಲು ಸೀಮೆಯಲ್ಲಿ ಇವುಗಳ ಚಟುವಟಿಕೆ ಸಂಜೆ ೭-೮ ಗಂಟೆಯಿಂದ ಬೆಳಗಿನ ಜಾವದವರೆಗೆ ಮಾತ್ರ. ಇವು ತಮ್ಮ ತಾಣದಿಂದ ಸೂರ್ಯಾಸ್ತದ ನಂತರ ಹೊರಟು, ಹೊಲ, ತೋಟ, ಗದ್ದೆಗಳಿಗೆ ಬರುವ ಹೊತ್ತಿಗೆ ೮-೯ ಗಂಟೆ ಯಾಗಿರುತ್ತದೆ. ಬಹು ವಿರಳವಾಗಿ ಆವೇಳೆಯಲ್ಲೂ ಬರುವುದುಂಟು.

ಹೀಗೆ ಕಬ್ಬಿನ ಗದ್ದೆ, ತೋಟಗಳಿಗೆ ಬಂದ ಕರಡಿಗಳನ್ನು ಹಿಡಿಯಲು ಅಥವಾ ಓಡಿಸಲು ತಮ್ಮದೇ ಆದ ತಂತ್ರಗಾರಿಕೆಯನ್ನು ರೂಪಿಸುತ್ತಾರೆ. ಅವು ಬರದಂತೆ ತಡೆಯಲು ಮೇಲೆ ಹೇಳಿದಂತೆ ಬರುವ ಹಾದಿಯಲ್ಲಿ ಕಲ್ಲು, ಕವಣೆಗಳಿಂದ ಹೊಡೆದು ಓಡಿಸುವುದು. ಅವು ಏಮಾರಿಸಿ ತೋಟಕ್ಕೆ ನುಗ್ಗಿದಾಗ ನುಗ್ಗಿದ ಜಾಗದಿಂದಲೇ ಹೊರ ಹೋಗುವುದು ಸಾಮಾನ್ಯ. ಆದ್ದರಿಂದ ಆ ಜಾಗದಲ್ಲಿ ಸದ್ದಾಗದಂತೆ ಉರುಳು, ಕುಣಿಗೆ ಹಗ್ಗವನ್ನು ಹಾಕಿ, ಪಂಜನ್ನು ಹಚ್ಚದೆ ಕೈಲಿಡಿದು, ದೊಣ್ಣೆ ಬರ್ಜಿಗಳನ್ನು ಸಿದ್ಧಪಡಿಸಿಕೊಂಡು, ಅವು ಹೊರ ಬರುವ ದಾರಿಯಲ್ಲಿ ತಮ್ಮ ಮೇಲೆ ಎರಗಲಾಗದಂತೆ ಸುರಕ್ಷತೆ ಮಾಡಿಕೊಂಡು, ಕೆಲವರನ್ನ ಡಬ್ಬ ಅಥವಾ ತಮಟೆಯಿಂದಲೂ ಜೋರಾಗಿ ಶಬ್ದ ಮಾಡಿ ಕೂಗಲು ಹೇಳುತ್ತಾರೆ. ಅವು ಒಳಬಂದ ಹಾಗೂ ಉರುಳು ಹಾಕಿದ ವಿರುದ್ಧ ದಿಕ್ಕಿನಿಂದ ಗದ್ದಲ ಮಾಡಿದಾಗ, ಧಿಡೀರನೆ ಆದ ಬದಲಾವಣೆಗೆ, ಶಬ್ದಕ್ಕೆ ಬೆದರಿ, ಗಾಬರಿಗೊಂಡು ಓಡುತ್ತವೆ. ಕತ್ತಲೆಯಲ್ಲಿ, ಉರುಳು, ಕುಣಿಕೆ ಕಾಣದೆ ತುಳಿಯುತ್ತವೆ. ಹೊಂಚು ಹಾಕಿ ಕುಳಿತವ ಹಗ್ಗವನ್ನು ಎಳೆಯುತ್ತಾನೆ. ಕುಣಿಗೆ ಕಾಲಿಗೆ ಬೀಳುತ್ತದೆ. ಶಕ್ತಿಶಾಲಿಯಾದ ಕರಡಿ ಹಗ್ಗವನ್ನು ತುಂಡರಿಸಬಹುದು ಅಥವಾ ಕಚ್ಚಿ ತುಂಡರಿಸಬಹುದು. ಆದರೆ, ಅದಕ್ಕೆ ಅವಕಾಶ ಕೊಡದಂತೆ, ಪಂಜು ಹಿಡಿದಿದ್ದವನು ಕೂಡಲೆ ಪಂಜು ಹಚ್ಚುತ್ತಾನೆ. ಕರಡಿ ಯಾವುದಕ್ಕೆ ಹೆದರದಿದ್ದರೂ, ಪಂಜಿಗೆ ಹೆದರುತ್ತದೆ. ಆ ಸಮಯವನ್ನು ವ್ಯರ್ಥಮಾಡದೆ, ಉರುಳು ಬಿದ್ದೊಡನೆ ಪಂಜು ಹಚ್ಚಿ ದೊಣ್ಣೆಯಿಂದ ಬಡಿದು ಆಟವಾಡಿಸಿ ಮತ್ತೊಮ್ಮೆ ಈ ಕಡೆ ಬರದಂತೆ ಗಂಟೆಗಟ್ಟಲೆ ಪಂಜಿನ ಭಯದಲ್ಲಿರಿಸಿ ಬಿಟ್ಟು ಬಿಡುತ್ತಾರೆ. ಪಂಜು ದಟ್ಟವಾಗಿ ಉರಿಯುತ್ತಿರಬೇಕು, ಇಲ್ಲವಾದಲ್ಲಿ ರಭಸವಾಗಿ ಊದಿ ಪಂಜನ್ನು ಆರಿಸಿ ಕರಡಿ ಮೇಲೆರಗುತ್ತದೆ, ಅದರ ಹೊಡೆತ ಅಥವಾ ಕಡಿತಾ ಪ್ರಾಣಾಂತಿಕವಾದುದು. ಕರಡಿಯನ್ನು ಬಿಡುವಾಗ ಎಚ್ಚರದಿಂದಿರಬೇಕು. ಹೋಗಲೆಂದು ಬಿಟ್ಟು ಹಿಂತಿರುಗಿದರೆ, ಹಿಂಸೆ ಅನುಭವಿಸಿದ ಕರಡಿ ರೋಷದಿಂದ ಮೇಲೆರಗಿ ಕ್ಷಣಾರ್ಧದಲ್ಲಿ ಬಲಿ ತೆಗೆದುಕೊಂಡು ಬಿಡುತ್ತದೆ.

ತಮ್ಮ ಎಣಿಕೆಯಂತೆ, ಉರುಳಿಗೆ ಬಿದ್ದು ಶರಣಾಗದೆ ಪ್ರತಿಭಟಿಸಿ ಮೇಲರಗಿದರೆ, ಈಟಿ, ಭರ್ಜಿ, ಪಂಜು, ದೊಣ್ಣೆಗಳಿಂದ ಆತ್ಮರಕ್ಷಣೆಗಾಗಿ ಹೋರಾಡುವುದುಂಟು. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ. ಇಂತಹ ಸಂದರ್ಭದಲ್ಲಿ ಹಿಂದೆ ಮುಂದೆ ನೋಡದೆ ಕರಡಿಯನ್ನು ಈಟಿ ಭರ್ಜಿಗಳಿಂದ ತಿವಿದು ಸಾಯಿಸಲು ಹಿಂಜರಿಯುವುದಿಲ್ಲ. ಕರಡಿ ಹೆದರಿ ಓಡಿ ಹೋಗಬೇಕು, ಇಲ್ಲವೆ ಈಟಿ ಭರ್ಜಿಗಳಿಗೆ ಬಲಿಯಾಗಬೇಕು. ಕೋವಿ ಇದ್ದರೆ ಈ ಕೆಲಸ ಸುಲಭ. ಕೋವಿ ಹಾರಿಸಿದರೆ, ಕೋವಿ ಶಬ್ದಕ್ಕೆ ಓಡುತ್ತದೆ. ಇಲ್ಲದಿದ್ದಲ್ಲಿ ಗುಂಡಿಗೆ ಬಲಿಯಾಗುತ್ತದೆ.

ಹೊಲಗಳಲ್ಲಿ ಈ ವಿಧಾನ ಬಳಕೆಗೆ ಬರುವುದಿಲ್ಲ. ಏಕೆಂದರೆ ಸಮತಟ್ಟಾದ ಪ್ರದೇಶದಲ್ಲಿ/ ಹೊಲಗಳಲ್ಲಿ ಕರಡಿಯನ್ನು ಹೆದರಿಸುವುದು ಕಷ್ಟ. ಆದ್ದರಿಂದ ಮೊದಲೇ ಪಂಜುಹಚ್ಚಿ ಶಬ್ದ ಮಾಡುತ್ತಿರುತ್ತಾರೆ. ಆಟಂ ಬಾಂಬ್‌ಗಳನ್ನು (ಪಟಾಕಿ) ಯಾವಾಗಲಾದರೊಮ್ಮೆ ಹೊಡೆಯುತ್ತಾರೆ. ಆ ಶಬ್ದಕ್ಕೆ ಅದು ಹೆದರುತ್ತದೆ. ಕೆಲವು ಬಾರಿ ಸಿಡಿಗಳನ್ನು ಒಡ್ಡುವುದೂ ಉಂಟು. ಸಿಡಿಯ ಮೇಲೆ ಕಾಲಿರಿಸಿದಾಗ, ಕಾಲು ಸಿಡಿಗೆ ಸಿಕ್ಕಿಹಾಕಿಕೊಳ್ಳುತ್ತದೆ, ಇಲ್ಲವೇ ಕಾಲು ಕಿತ್ತು ಬರುತ್ತದೆ.

ಗಂಡು ಕರಡಿ ಒಂಟಿಯಾಗಿ ಸಿಕ್ಕಿದ ಹೆಂಗಸರನ್ನ ತನ್ನ ಗುಹೆಗೆ ಎತ್ತಿಕೊಂಡು ಹೋಗುತ್ತದೆ, ಹಣ್ಣು ಹಂಪಲುಗಳನ್ನು ತಂದುಕೊಟ್ಟು ನೋಡಿಕೊಳ್ಳುತ್ತದೆ, ತಪ್ಪಿಸಿಕೊಂಡು ಹೋಗದಂತೆ ಗವಿಯ ಬಾಗಿಲಿಗೆ ದಪ್ಪವಾದ ಕಲ್ಲನ್ನು ಅಡ್ಡವಿಟ್ಟು ಹೊರಗೆ ಹೋಗುತ್ತದೆ, ಇಲ್ಲವೇ ಮತ್ತೊಂದು ಕರಡಿಯನ್ನು ಕಾವಲಿಗೆ ಇರಿಸುತ್ತದೆ, ಹೀಗೆ ಬಂಧನದಲ್ಲಿರಿಸಿಕೊಂಡ ಹೆಂಗಸನ್ನು ಯಾವುದೇ ತೊಂದರೆ ಕೊಡದೆ ಕಾಪಾಡುತ್ತದೆ ಎಂಬ ನಂಬಿಕೆಯುಂಟು.

ಅಲ್ಲದೆ, ಕರಡಿಯನ್ನು ಹಿಡಿದಾಗ, ಹೊಡೆದು ಬಡಿದು ಮಾಡಿದಾಗ ಅಸಹಾಯಕ ಪರಿಸ್ಥಿತಿಗೆ ಈಡಾದ ಹೆಣ್ಣು ಕರಡಿಯು, ತಾನು ತಾಯಿ ಕರಡಿಯೆಂದು, ಮರಿಗೆ ಹಾಲುಣಿಸಬೇಕೆಂದು ಸಂಜ್ಞೆ ಮಾಡಿ, ಹಾಲು ಕರೆದು ತೋರಿಸುವಷ್ಟು ಮತಿಯುಳ್ಳದ್ದೆಂದು ಇಂದಿಗೂ ಜನರು ನಂಬುತ್ತಾರೆ.

ಕರಡಿ ಗೊರವರು ಮಾತ್ರ ಕರಡಿಯನ್ನು ಪಳಗಿಸಿ ಮನರಂಜನೆಗಾಗಿ ಆಡಿಸಲು ಬೇಟೆಯಾಡುತ್ತಾರೆ. ಇವರು ಮರದ ಮೇಲೆ ಕುಳಿತು ಕರಡಿಯು ಓಡಾಡುವ (ನಿತ್ಯ) ಜಾಗ, ಗುಹೆ, ಗವಿ, ಮುಂತಾದವುಗಳನ್ನು ಗುರುತಿಸಿಕೊಂಡು, ಅವು ಎಷ್ಟು ಹೊತ್ತಿಗೆ ಹೊರಗೆ ಹೋಗುತ್ತವೆ, ಎಷ್ಟು ಹೊತ್ತಿಗೆ ಮರಳುತ್ತವೆ, ಒಂಟಿಯಾಗಿರುವುದು ಯಾವಾಗ ಎಂಬುದನ್ನು ಕಂಡುಕೊಂಡು ನಂತರವೇ ಬೇಟೆಗೆ, ತಮ್ಮ ತಂತ್ರಗಾರಿಕೆಯನ್ನು ರೂಪಿಸುತ್ತಾರೆ. ಇವರು ಸಾಮಾನ್ಯವಾಗಿ ಮರಿಗಳನ್ನು ಹಿಡಿಯುವುದೇ ಹೆಚ್ಚು. ಏಕೆಂದರೆ, ಮರಿಯಿಂದ ಪಳಗಿಸುವುದು ಸುಲಭ, ಹೆಚ್ಚು ದಿನ ತಮ್ಮ ಮನರಂಜನೆಗೆ ಬರುತ್ತದೆ ಹಾಗೂ ಹಿಡಿಯಲು ಹೆಚ್ಚು ಪ್ರತಿಭಟನೆ ಇರುವುದಿಲ್ಲವೆಂದು.

ಕರಡಿಗಳು ದೂರ ಹೋಗುವಾಗ ಮರಿಗಳನ್ನು ಜೊತೆಯಲ್ಲಿ ಕರೆದೊಯ್ಯುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಬಹು ಸುಲಭವಾಗಿ ಮರಿಗಳನ್ನು ಹಿಡಿಯುತ್ತಾರೆ. ಕರಡಿಯು ಗಿಡ ಗಂಟೆಗಳ ಮಧ್ಯೆ, ಕಿರು ದಾರಿಯಲ್ಲಿ ಹೋಗುವಾಗ ಕುಣಿಕೆ ಹಾಕಿ ಹಿಡಿಯುತ್ತಾರೆ. ಕುಣಿಕೆಗೆ ಬಿದ್ದೊಡನೆ ಪಂಜು ಹಚ್ಚುತ್ತಾರೆ. ಇವರು ಒಂದು ವಿಶೇಷವಾದ ದೊಣ್ಣೆಯನ್ನು ಬಳಸುತ್ತಾರೆ. ಇದು ಸಾಮಾನ್ಯವಾದ ಒಂದು ಕೋಲಿನಂತಿದ್ದು ಎರಡು ಬದಿಗೂ ಅಣಸು ಹಾಕಿರುತ್ತಾರೆ. ಅಣಸಿನ ತುದಿಗೆ ಒಂದು ಕಬ್ಬಿಣದ ಬಳೆಯನ್ನು ಹಾಕಿರುತ್ತಾರೆ. ಎಂತಹ ಎಳೆದಾಟ ಅಥವಾ ಜಗ್ಗುವಿಕೆಗೂ ಈ ಬಳೆ ಕೋಲಿನ ತುದಿಯಿಂದ ಬೇರ್ಪಡುವುದಿಲ್ಲ. ಆ ದೊಣ್ಣೆಯ ಸಹಾಯದಿಂದ (ದೊಣ್ಣೆ ಸಾಮಾನ್ಯವಾಗಿ ೩-೪ ಅಡಿ ಉದ್ದವಿರುತ್ತದೆ). ಅದು ತನ್ನ ಮೇಲೆರಗದಂತೆ ತಿರುಗಿಸುತ್ತಾ, ತಮ್ಮ ರಕ್ಷಣೆ ಮಾಡಿಕೊಳ್ಳುವುದರ ಜೊತೆಗೆ, ಅಸಹಾಯಕತೆಯಿಂದ ತಮ್ಮ ಮಾತನ್ನು ಕೇಳುವಂತೆ ಅಥವಾ ಸುಮ್ಮನಾಗುವಂತೆ ಮಾಡುತ್ತಾರೆ. ಈ ಕಲೆ ಗೊರವರಿಗೆ ಬಿಟ್ಟರೆ ಇತರರಿಗೆ ಸಾಧ್ಯವಾಗದು. ಹೀಗೆ ಹಿಡಿದ ಕರಡಿಗಳನ್ನು ಪಳಗಿಸಿ ಮನರಂಜನೆಗೆ ಅಣಿಗೊಳಿಸುತ್ತಾರೆ. ಹಾಗೆಯೇ ಮತ್ತೊಂದು ವಿಧಾನವೆಂದರೆ, ಮತ್ತು ಬರಿಸುವ ಸೊಪ್ಪು, ಕಾಡು ಮೆಣಸಿನ ಬಳ್ಳಿ ರಸ ಅಥವಾ ಬೀಗದ ಮರದ ಎಲೆ ರಸವನ್ನು ಗೆಡ್ಡೆ, ಗೆಣಸು, ಹಲಸಿನ ತೊಳೆಯ ಮೇಲೆ ಹಾಕಿ ಗುಹೆಯ ಬಾಗಿಲಲ್ಲಿ ಇಡುತ್ತಾರೆ. ಹಲಸಿನ ವಾಸನೆಗೆ ಬಹುಬೇಗ ಆಕರ್ಷಿತವಾಗುವ ಮರಿಗಳು ಮತ್ತು ಬರಿಸುವ ರಸದ ವಾಸನೆಯ ಗೋಜಿಗೆ ಹೋಗದೆ, ಅದನ್ನು ತಿಂದು ತೂಗಾಡುತ್ತಾ ಕುಸಿಯುತ್ತವೆ. ತಾಯಿ ಕರಡಿಯಾಗಲೀ,

ದೊಡ್ಡ ಕರಡಿಗಳಾವುವು ಇಲ್ಲವೆಂದು ಖಾತ್ರಿಯಾದ ಮೇಲೆಯೇ ಈ ಪ್ರಯೋಗ ಮಾಡುತ್ತಾರೆ. ಹೀಗೆ ಸುಲಭವಾಗಿ ಸಿಕ್ಕ ಮರಿಗಳನ್ನು ಪಳಗಿಸುವುದು ಬಹು ಸುಲಭ. ಇವುಗಳಿಗೆ ಮೂಗು ಚುಚ್ಚಿ ಒಂದು ಕಬ್ಬಿಣದ ಬಳೆ ಹಾಕಿ ದೊಣ್ಣೆಯ ತುದಿಯಲ್ಲಿನ ಬಳೆಗೆ ಕೊಂಡಿ ಹಾಕುತ್ತಾರೆ. ಇವರು ಹೋಗುವಾಗ ದೊಣ್ಣೆ ಹಿಡಿದಿದ್ದು, ಕರಡಿಯು ಯಾವಾಗಲೂ ಒಂದು ಅಂತರದಲ್ಲಿರುವಂತೆ ಎಚ್ಚರವಹಿಸುತ್ತಾರೆ. ಅಲ್ಲದೆ ರಾತ್ರಿ ಹೊತ್ತಿನಲ್ಲಿ ತಪ್ಪಿಸಿಕೊಂಡು ಹೋಗದಂತೆ ಕಟ್ಟಿ ಹಾಕಲು ಅನುಕೂಲವಾಗುತ್ತದೆ. ಹೀಗೆ ಹಿಡಿದು ಪಳಗಿಸಿದ ಕರಡಿಗಳನ್ನು ಜನ ಸಮೂಹದೆದುರು ಆಟವಾಡಿಸಿ ಹಣ ಸಂಪಾದಿಸುತ್ತಾರೆ. ಅರ್ಥಾತ್ ವೃತ್ತಿಯಾಗಿಸಿ ಕೊಳ್ಳುತ್ತಾರೆ. ಅಲ್ಲದೆ ಕರಡಿ ಉಗುರನ್ನು, ತಾಯತ, ಯಂತ್ರಗಳಲ್ಲಿ ಬಳಸುತ್ತಾರೆ. ಗರಡಿ ಹುಡುಗರು ಹುಲಿ ಉಗುರು ಕಟ್ಟಿಕೊಳ್ಳುವಂತೆ ಕರಡಿಯ ಉಗುರುಗಳನ್ನು ಕಟ್ಟಿಕೊಳ್ಳುತ್ತಾರೆ. ಕರಡಿಯ ಕೂದಲನ್ನು ತಾಯತದಲ್ಲಿ ಹಾಕಿ ಕಟ್ಟಿಕೊಂಡರೆ ಧೈರ್ಯ ಬರುತ್ತದೆ ಎಂಬ ನಂಬಿಕೆ. ಇದಕ್ಕಾಗಿಯೂ ಕರಡಿ ಬೇಟೆ ಸಾಗುತ್ತಿದೆ. ಕರಡಿ ಬೇಟೆಯು ಕಾನೂನುಬಾಹಿರ ವಾಗಿದ್ದರೂ, ಪರಿಸರವಾದಿಗಳ ಪ್ರಯತ್ನ ಸಾಗಿದ್ದರೂ, ಕರಡಿ ಆಟ ನಡೆಯುತ್ತಿರು ವಂತೆಯೇ, ತಾಯತಕ್ಕೆ ಕೂದಲು ಹಾಗೂ ಉಗುರು ಮಾತ್ರ ಮಾರಾಟವಾಗುತ್ತಿದೆ.

**ಆನೆ ಬೇಟೆ** : ಮೂರು ಕಾರಣಗಳಿಗೆ ಆನೆಯನ್ನು ಬೇಟೆಯಾಡಲಾಗುತ್ತದೆ. (೧) ಬೆಳೆ ರಕ್ಷಣೆ, (೨) ಮನರಂಜನೆ, (೩) ದಂತ ಮಾರಾಟ. ಬಯಲು ಸೀಮೆಯಲ್ಲಿ ಆನೆ ಬೇಟೆ ವಿರಳವಾದರೂ - ಬೆಳೆ ರಕ್ಷಣೆಗಾಗಿ ಹೋರಾಟ ನಡೆದೇ ಇದೆ. ಬಂಡಿಪುರ, ಕನಕಪುರ, ಆನೇಕಲ್ಲು ಮುಂತಾದ ಕಡೆ ಆನೆಗಳ ಹಾವಳಿ ಹೆಚ್ಚಾಗಿದ್ದು, ಅದು ಇತ್ತೀಚೆಗೂ ಕನಕಪುರ ಆನೆಕಲ್ಲುಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆ ಹಾನಿಗೊಳಗಾದ ಸಾಕ್ಷಿ ಇದೆ. ಆನೆಗಳನ್ನು ಖೆಡ್ಡಾ ಅಥವಾ ಕೋವಿಯಿಂದ ಬೇಟೆಯಾಡುವುದೇ ಹೆಚ್ಚು. ಆನೆಗಳ ಬೇಟೆ ಕಾನೂನು ಬಾಹಿರವಾದರೂ ದಂತಕ್ಕಾಗಿ ಬೇಟೆಗೆ ಬಲಿಯಾಗುತ್ತಲೇ ಇವೆ. ಆನೆಗಳು ಬೇಟೆಗೆ ಅದರಲ್ಲೂ ಕೋವಿ/ಗುಂಡಿಗೆ ಬಹು ಸುಲಭವಾಗಿ ತುತ್ತಾಗುತ್ತವೆ.

**ಉಡದ ಬೇಟೆ** : ಉಡ ಅಪರೂಪದ ಪ್ರಾಣಿ. ಇದು ಸಾವನದುರ್ಗ, ಚಿಲೂರು ಗಿಡ, ದೇವರಾಯನದುರ್ಗ, ನಂದಿಬೆಟ್ಟ, ಆನೆಕಲ್ಲು ಮುಂತಾದ ಕಡೆ ಇದೆಯಾದರೂ ಬೇಟೆಗೆ ಸಿಗುವುದು ಬಹಳ ವಿರಳ. ಬಯಲುಗಳಲ್ಲಿ ವರ್ಷಗಳಿಗೊ, ಎರಡು ವರ್ಷಗಳಿಗೊ ಒಮ್ಮೆ ಕಾಣಿಸಿಕೊಳ್ಳುವುದುಂಟು. ಅಂದರೆ, ಬಯಲಿನಲ್ಲಿ ಅಷ್ಟು ವಿರಳವಾಗಿವೆ. ಇದು ಗಟ್ಟಿ ಚರ್ಮದ, ಅತಿ ಹಿಡಿತ ಉಳ್ಳ ಪಂಜವಿರುವಂತಹದು. "ಪಟ್ಟು ಎಂದರೆ ಉಡದ ಪಟ್ಟು" ಎಂಬ ಗಾದೆಯಂತೆ, ಉಡದ ಹಿಡಿದ ಜಾಸ್ತಿ. ಇದರ ಹಿಡಿತ ಎಷ್ಟು ಗಟ್ಟಿ ಎಂಬುದಕ್ಕೆ ಉದಾಹರಣೆ ಕೊಡಬಯಸುತ್ತೇನೆ. ಸಾವನದುರ್ಗದ ಮೇಲೇರಲು ಸೈನಿಕರು ಉಡಗಳನ್ನು ಬಳಸುತ್ತಿದ್ದಠಂತೆ. ಉಡದ ನಡುವಿಗೆ ಹಗ್ಗ ಕಟ್ಟಿ, ಬೆಟ್ಟದ ಮೇಲೆ ಬಿಟ್ಟು, ಮತ್ತೊಂದು ತುದಿಯನ್ನು ಸೈನಿಕರು ಹಿಡಿದು ಗುಪ್ತಾಂಗಕ್ಕೆ ಕಡ್ಡಿಯಿಂದ ಚುಚ್ಚಿದರೆ, ಸೈನಿಕರನ್ನು ಎಳೆದುಕೊಂಡು ಮೇಲುರುತ್ತಿತ್ತಂತೆ. ಮಾಗಡಿಯ ಕೆಂಪೇಗೌಡರು

ತಮ್ಮ ಸೈನಿಕರನ್ನು ಸಾವನದುರ್ಗದ ಕೋಟೆ ಮೇಲೇರಿಸಲು ಉಡಗಳನ್ನು ಬಳಸುತ್ತಿದ್ದರು ಎಂಬ ಮಾತು ಆ ಪ್ರದೇಶದ ಜನರ ಮಾತಿನಲ್ಲಿ ಪ್ರಚಲಿತದಲ್ಲಿದೆ.

ಅಂದ ಹಾಗೆ ಉಡ ತನ್ನ ಹಿಡಿತಕ್ಕೆ ಮಾತ್ರವೇ ಗಟ್ಟಿಯಾದುದಲ್ಲ ಇದರ ಮಾಂಸವೂ ಅಷ್ಟೇ ಉತ್ಕೃಷ್ಟ. ಅಷ್ಟೇ ಶಕ್ತಿಶಾಲಿ. ಉಡ ತಿನ್ನುವ ಮೊದಲು ಕೈಗೆ ದಾರವನ್ನು ಕಟ್ಟಿಕೊಂಡು, ಉಡವನ್ನು ತಿಂದ ಒಂದು ದಿನದ ನಂತರ, ಕೈಗೆ ಕಟ್ಟಿದ ದಾರವನ್ನು ಪರೀಕ್ಷಿಸಿಕೊಳ್ಳುತ್ತಾರೆ. ಏಕೆಂದರೆ ದಿನ ಬೆಳಗಾಗುವುದರೊಳಗೆ ದಪ್ಪ (ದಷ್ಟ ಪುಷ್ಟ)ನಾಗುತ್ತಾರೆಂಬ ನಂಬಿಕೆ ಇದೆ. ಇದರ ಮಾಂಸವನ್ನು ತುಪ್ಪದಿಂದಲೇ ತಯಾರಿಸಿ ತಿನ್ನುವುದು ವಾಡಿಕೆ. ಏಕೆಂದರೆ ಶಕ್ತಿಶಾಲಿಯಾದ ಮಾಂಸಕ್ಕೆ ತಕ್ಕುದಾದುದು ಎಂದರೆ ತುಪ್ಪ ಮಾತ್ರ. ಶಕ್ತಿ ಮತ್ತು ಪುಷ್ಟಿಯಲ್ಲಿ ಇದಕ್ಕೆ ಸರಿಸಮನಾದ ಮಾಂಸ ಇನ್ನೊಂದಿಲ್ಲ ಎಂಬುದು ಜನರ ನಂಬಿಕೆ.

ಇಷ್ಟೆಲ್ಲಾ ಇದ್ದಮೇಲೆ ಇದನ್ನು ಬೇಟೆಯಾಡದಿದ್ದರೆ ಹೇಗೆ! ಬಯಲು ಸೀಮೆಯ ಪ್ರದೇಶದಲ್ಲಿ ಸಣ್ಣ ಪುಟ್ಟ ಕಾಡು ಗುಡ್ಡಗಳನ್ನು ಬಿಟ್ಟರೆ ಬಯಲಿನಲ್ಲಿ ಸಿಕ್ಕುವುದೇ ಕಷ್ಟ. ಒಂದು ವೇಳೆ ಕಂಡುಬಂದರೆ, ಯಾವುದೇ ಪೂರ್ವಭಾವಿ ಸಿದ್ಧತೆಗಳಿಲ್ಲದೆ, ಕೈಗೆ ಸಿಕ್ಕ ದೊಣ್ಣೆ, ಕುಡಗೋಲು, ಮಚ್ಚು ಹಿಡಿದು ಹಿಂಬಾಲಿಸುತ್ತಾರೆ. ಇವುಗಳ ಹಿಂದೆ ಓಡುವುದು ಕಷ್ಟ. ಇವು ಓಡುವಾಗ ಇದರ ಕಾಲಿಗೆ ಸಿಕ್ಕ ಸಣ್ಣ ಪುಟ್ಟ ಕಲ್ಲುಗಳು ರಭಸವಾಗಿ, ಹಿಂದಕ್ಕೆ ಚಿಮ್ಮುವುದರಿಂದ, ಕಲ್ಲುಗಳು ಗುಂಡಿನಂತೆ ಪುಟಿದು ಹಿಂದೆ ಓಡುವವರಿಗೆ ಪೆಟ್ಟು ಬೀಳುತ್ತದೆ. ಕಲ್ಲಿನ ಚೂರು, ಧೂಳು ಕಣ್ಣಿಗೆ ಬಿದ್ದು, ನಾವು ಸರಿಪಡಿಸಿಕೊಳ್ಳುವ ಹೊತ್ತಿಗೆ ಮಾಯವಾಗಿಬಿಡುತ್ತವೆ. ಆದ್ದರಿಂದ ಸಾಕು ನಾಯಿಗಳನ್ನು ಛೂ ಬಿಟ್ಟು, ಅಕ್ಕ ಪಕ್ಕದಲ್ಲಿ ಬೆನ್ನಟ್ಟುತ್ತಾರೆ. ಹೀಗೆ ಓಡಿದ ಉಡ ಗುಡ್ಡಗಳ ಕಡೆ ಓಡಿದರೆ ಹಿಡಿಯುವುದು ಕಷ್ಟ. ಅವು ತಮ್ಮ ಓಡಾಟದ, ಆಹಾರ ಹುಡುಕುವ ಜಾಗಗಳಲ್ಲಿ ತಾತ್ಕಾಲಿಕ ನೆಲೆಗಳನ್ನು ಗುರುತಿಸಿಕೊಂಡಿರುತ್ತವೆ. ಬಹು ಜೋರಾಗಿ ಓಡುವ ಉಡವನ್ನು ಬೆನ್ನಟ್ಟಿದ ನಾಯಿ ಉಡದ ತಾತ್ಕಾಲಿಕ ನೆಲೆಯನ್ನು, ಅಡಗು ತಾಣವನ್ನು ಕಂಡು ಹಿಡಿಯುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಉಡ ಸಾಮಾನ್ಯವಾಗಿ ಕಲ್ಲಿನ ಇರುಕಿನಲ್ಲಿ ಹೆಚ್ಚು ವಾಸಿಸುತ್ತದೆ. ಕಲ್ಲಿನ ಹೂವುಗಳ ಬಣ್ಣ ಉಡದ ಬಣ್ಣ ಒಂದೇ ಆಗಿರುವುದರಿಂದ ಸರಿಯಾಗಿ ಗಮನವಿಟ್ಟು ನೋಡಿದ ಹೊರತು ಇದರ ಇರವು ಕಾಣಿಸುವುದಿಲ್ಲ. ತಾನು ವಾಸಿಸುವ ಸುತ್ತಮುತ್ತ ಇಂತಹ ಜಾಗಗಳನ್ನು ಅದು ಗುರುತಿಸಿಕೊಂಡಿರುತ್ತದೆ. ಅದು ಓಡಿ ಇಂತಹ ಜಾಗಗಳನ್ನೆ ರಕ್ಷಣೆಗಾಗಿ ಕಂಡುಕೊಳ್ಳುವುದು. ಆಗ ನಾಯಿ ಉಡದ ಜಾಗ/ಇರುವಿಕೆಯನ್ನು ಗುರುತಿಸಬಹುದೆ ಹೊರತು ಮತ್ತೇನು ಮಾಡಲಾಗದು. ಆನಂತರ ಉಡ ಹಿಡಿಯುವವನ ಜಾಣ್ಮೆ ಓರೆಗೆ ಹಚ್ಚಲ್ಪಡುತ್ತದೆ. ಈ ಕಲ್ಲಿನ ಇರುಕಿನಿಂದ ಹೊರ ಹಾಕಲು ಈಟಿ, ಬರ್ಜಿಗಳನ್ನು ಬಳಸುತ್ತಾರೆ. ಅವು ನಿಷ್ಪ್ರಯೋಜನವಾದರೆ, ಹೊಗೆ ಹಚ್ಚುತ್ತಾರೆ. ಉಸಿರು ಕಟ್ಟಿದ ಉಡ ಕಲ್ಲಿರಿಕಿನಿಂದ ಹೊರಬರುತ್ತದೆ. ಇಂತಹ ಸಮಯವನ್ನು ಕಾಯುತ್ತಿದ್ದವರು ಹೊರಬರುವ ಜಾಗದಲ್ಲಿ ಕುಡುಗೋಲು, ಇಲ್ಲವೆ ಮಚ್ಚಿನಿಂದ ಅಥವಾ ದೊಣ್ಣೆಯಿಂದ ಹೊಡೆದು ಉರುಳಿಸುತ್ತಾರೆ. ಕೆಲವೊಮ್ಮೆ ಕಲ್ಲಿನ ಇರುಕಿನಲ್ಲಿ

ಕೈಗೆ ಸಿಕ್ಕುವಂತಿದ್ದರೂ, ಹೊರಗೆಳೆಯಲು ಸಾಧ್ಯವಾಗುವುದಿಲ್ಲ. ಆಗ ಇವರೂ ಸಹ ಗುದದ್ವಾರಕ್ಕೆ ಕಡ್ಡಿಯಿಂದಲೂ, ಕೋಲಿನಿಂದಲೂ ಚುಚ್ಚಿ ಅದರ ಹಿಡಿತವನ್ನು ಸಡಿಲಗೊಳಿಸುತ್ತಾರೆ. ಸಣ್ಣ ಪುಟ್ಟ ಏಟಿಗೆ ಅದು ಜಗ್ಗುವುದಿಲ್ಲ, ಒರಟು ಚರ್ಮದ ಉಡಕ್ಕೆ ದೊಡ್ಡ ಹೊಡೆತದಿಂದ ಮಾತ್ರ ಮಣಿಸಲು ಸಾಧ್ಯ. ಅಲ್ಪ ಸ್ವಲ್ಪ ಹೊಡೆದು ಹಿಡಿದರೆ, ಅದರ ಒದರಾಟಕ್ಕೆ ಅದರ ಕೈ ಕಾಲುಗಳ ಉಗುರುಗಳು ನಮ್ಮ ಕೈ ಕಾಲುಗಳಿಗೆ ತಗುಲಿ ಸೀಳಿ ಹೋಗುವ ಸಂಭವ ಹೆಚ್ಚು. ಆದ್ದರಿಂದ ಅದು ಸಂಪೂರ್ಣವಾಗಿ ನಿಸ್ತೇಜವಾಗಿದೆ ಎಂದು ಖಾತರಿ ಪಡಿಸಿಕೊಂಡೆ ಹಿಡಿಯುತ್ತಾರೆ. ಇಲ್ಲವೆ ಹಗ್ಗದ ಕುಣಿಕೆ ಮಾಡಿ ಅದರ ಕುತ್ತಿಗೆಗೆ ಹಾಕಿ ಹಿಡಿಯುತ್ತಾರೆ.

ಉಡ ನಿರುಪದ್ರವಿ, ಆದರೆ ಇದರ ಮಾಂಸ ಉತ್ಕೃಷ್ಟ. ಇದಕ್ಕಾಗಿಯೇ ಬೇಟೆಗೆ ಈಡಾಗುತ್ತದೆ. ಅಲ್ಲದೆ ಇದರ ಚರ್ಮಕ್ಕೂ ಬೇಡಿಕೆ ಇದೆ. ಸಿಗುವುದು ದುರ್ಲಭ.

**ಅಳಿಲು ಬೇಟೆ** : ಹಕ್ಕಿಪಿಕ್ಕರು, ಅಲೆಮಾರಿಗಳು, ಬೋವಿಗಳು ಮುಂತಾದ ಜನಾಂಗದವರು ಅಳಿಲನ್ನು ಬೇಟೆಯಾಡುತ್ತಾರೆ - ಹಿಡಿಯುತ್ತಾರೆ. ಬಹು ಸುಲಭವಾಗಿ ಹೆಚ್ಚು ಶ್ರಮವಿಲ್ಲದೆ ಬೇಟೆಗೆ ಈಡಾಗುವ ಪ್ರಾಣಿ ಇದೆಂದು ಹೇಳಬಹುದು, ಪ್ರತಿರೋಧವಿಲ್ಲ, ಪ್ರತಿಭಟನೆಯಿಲ್ಲ. ತಪ್ಪಿಸಿಕೊಳ್ಳಲು ಓಡುವುದು ಬಿಟ್ಟರೆ ಬೇರೆ ಯಾವುದೇ ಉಪಾಯ ತಿಳಿಯದ ಪ್ರಾಣಿ. ಮರದ ಪೊಟರೆಗಳಲ್ಲಿ ಇದರ ವಾಸ. ಹಣ್ಣು, ಹಂಪಲು, ಕಾಯಿ, ಕಾಳು ಇದರ ಆಹಾರ.

ಅಳಿಲು ಬೇಟೆ ಬಹು ಸುಲಭ. ಪೊಟರೆಯಲ್ಲಿರುವ ಅಳಿಲನ್ನು ನೇರವಾಗಿ ಪೊಟರೆಯೊಳಗೆ ಕೈ ಹಾಕಿಯೇ ಹಿಡಿಯುತ್ತಾರೆ. ಸ್ವಲ್ಪ ಚೂಪಾಗಿರುವ ಉಗುರುಗಳು ತಾಗಿದರೆ ಗೀಚು ಗಾಯವಾಗಬಹುದಷ್ಟೆ. ಆದ್ದರಿಂದಲೇ ಪೊಟರೆಯೊಳಗೆ ಕೈ ಹಾಕಿ ಹಿಡಿಯುವುದು. ಮತ್ತೊಂದು ವಿಧಾನವೆಂದರೆ, ಬಲೆ ವಿಧಾನ. ಸುಮಾರು ೧೫-೨೦ ಅಡಿ ಉದ್ದವಿರುವ ಬಲೆಯನ್ನು ಅಳಿಲು ಇರುವ ಮರದ ಬುಡದಲ್ಲಿ ಕೋಲುಗಳ ಸಹಾಯದಿಂದ ನಿಲ್ಲಿಸುತ್ತಾರೆ. ಬಲೆಯನ್ನು ಬುಡಕ್ಕೆ ಅರ್ಧ ಚಂದ್ರಾಕಾರದಲ್ಲಿ ಸ್ವಲ್ಪ ತಗುಲಿದರೂ ಸಾಕು ಬೀಳುವಂತೆ ಒಡ್ಡಿರುತ್ತಾರೆ. ಸಣ್ಣ ಮರವಾದರೆ ಒಬ್ಬರು, ದೊಡ್ಡ ಮರವಾದರೆ ಇಬ್ಬರು ಮರವೇರಿ, ಮರದ ತುದಿಯಿಂದ, ಬುಡದ ಕಡೆಗೆ ಕಡ್ಡಿಯಿಂದ ಬಡಿಯುತ್ತಾ ಬರುತ್ತಾರೆ. ಬೆದರಿದ ಅಳಿಲು ಬೇರೆ ದಾರಿ ಕಾಣದೆ ಕೆಳಗಿಳಿಯುತ್ತದೆ. ಇಳಿದು ಓಡಲು ಮುಂದಾಗಲು ಕೆಳಗಿಳಿಯುವ ಅಳಿಲು ಬುಡದಲ್ಲಿರುವ ಬಲೆಗೆ ಬೀಳುತ್ತದೆ. ಬುಡದಲ್ಲಿ ಕಾದು ಕುಳಿತಿರುವ ಸಹ ಬೇಟೆಗಾರ ಇದನ್ನು ಹಿಡಿದು ಬುಟ್ಟಿಯೊಳಗೆ ಹಾಕಿಕೊಳ್ಳುತ್ತಾನೆ. ಇಲ್ಲಿ ಎಚ್ಚರವಹಿಸಬೇಕಾದ ಅಂಶವೆಂದರೆ, ಮರದ ರೆಂಬೆಗಳು ಒಂದು ಮರದಿಂದ ಮತ್ತೊಂದು ಮರಕ್ಕೆ ಅಂಟಿಕೊಂಡಂತೆ ಇರಬಾರದು. ಏಕೆಂದರೆ ಅಳಿಲು ಪಕ್ಕದ ಮರಕ್ಕೆ ಹೋದರೆ ಶ್ರಮ ವ್ಯರ್ಥವಾಗುತ್ತದೆ. ರುಚಿಕರವಾದ ಮಾಂಸಕ್ಕಾಗಿಯೇ ಅಳಿಲನ್ನು ಬೇಟೆಯಾಡಲಾಗುತ್ತದೆ. ಸಂಜೆಯ ಹೊತ್ತಿನಲ್ಲಿ ಇದು ಬಹಳ ಸುಲಭವಾಗಿ ಸಿಗುತ್ತವೆ. ಸಂಜೆಯ ಹೊತ್ತಿಗೆ ತನ್ನ ಆಹಾರ ದಾಹವನ್ನು ತೀರಿಸಿಕೊಂಡು ಅಳಿಲು ಮರಳಿ ಪೊಟರೆಯನ್ನು ಸಂಜೆ ಸೇರುತ್ತದೆ. ಆಗ ಬೇಟೆಗಾರ ಸುಲಭವಾಗಿ ಪೊಟರೆಗೆ ಕೈ ಹಾಕಿ, ಇಲ್ಲವೆ ಬಲೆ ವಿಧಾನದಲ್ಲಿ ಹಿಡಿಯುತ್ತಾನೆ.

**ಕಾಡು ಹಂದಿ** : ಇದು ಬಹು ವೇಗವಾಗಿ ಓಡಾಡುವ ಪ್ರಾಣಿ. ಆತುರ ಜಾಸ್ತಿ, ಅಪಾಯದ ವಾಸನೆ ಬಡಿದ ಕೂಡಲೆ ಹಿಂದು ಮುಂದು ನೋಡದೆ ಎತ್ತ ಕಡೆಗೆಂದರೆ ಅತ್ತ ಕಡೆಗೆ ಅಥವಾ ಅಪಾಯ ಎದುರಾದ ವಿರುದ್ಧ ದಿಕ್ಕಿಗೆ ಓಡುತ್ತದೆ. ಕೆಲವೊಮ್ಮೆ ಬೇಟೆಗಾರನ ಮೇಲೆರಗುವುದೂ ಉಂಟು. ಇಂತಹ ಇದರ ಆತುರದ ದೌರ್ಬಲ್ಯವನ್ನು ಅರಿತುಕೊಂಡೆ ಬೇಟೆಗಾರ ತನ್ನ ತಂತ್ರ ರೂಪಿಸುತ್ತಾನೆ. ಕಾಡುಹಂದಿಯ ಬೇಟೆ ಒಬ್ಬಿಬ್ಬರಿಂದ ನಡೆಯುವಂತಹದಲ್ಲ, ಕೋವಿಯಿದ್ದರೆ ಹೊಡೆದುರುಳಿಸಲು ಒಬ್ಬಿಬ್ಬರು ಸಾಕು, ಆದರೆ, ಎಲ್ಲರೂ ಕೋವಿ ಹೊಂದಿರುವುದಿಲ್ಲ, ಆದ್ದರಿಂದ ಬಹು ರಭಸವಾಗಿ ಓಡಾಡುವ ಈ ಪ್ರಾಣಿ ಪ್ರಾಣಾಂತಿಕವಾಗಿ ಮೇಲೆರಗುತ್ತದೆ. ಆದ್ದರಿಂದ ತಂತ್ರ ಯಾವಾಗಲು ರಕ್ಷಣಾತ್ಮಕವಾಗಿರಬೇಕು. ಕಾಡುಹಂದಿಯನ್ನು ಬೇಟೆಯಾಡುವುದರಲ್ಲಿ ಸೋಲಿಗರು ಗಟ್ಟಿಗರು. ಇವರು ಗುಂಪಾಗಿ ಬೇಟೆಗೆ ಹೊರಡುತ್ತಾರೆ. ಬರ್ಜಿ, ಕುಡಗೋಲು, ದೊಣ್ಣೆ, ಬಂಡುಗೊಡಲಿ ಮುಂತಾದವು ಇವರ ಆಯುಧಗಳು. ಕಾಡು ಹಂದಿ ಇರುವ ಜಾಗವನ್ನು ಕಂಡುಕೊಂಡು ಸುತ್ತಲೂ ಜನರನ್ನು ನಿಲ್ಲಿಸಿ, ಬೇಟೆಯಾಡಲು ಸೂಕ್ತವಾದ ಆಯಕಟ್ಟಿನ ಜಾಗಕ್ಕೆ ಹೋಗಲು ಮಾತ್ರ ದಾರಿ ಬಿಟ್ಟು, ಗದ್ದಲ ಮಾಡುತ್ತಾರೆ. ಬೆದರಿದ ಕಾಡುಹಂದಿಯು ಅಪಾಯ ಎದುರಾಗದ ಕಡೆ ಅಂದರೆ ಗದ್ದಲವಿಲ್ಲದ ಕಡೆ ಓಡುತ್ತದೆ. ಕೊರಕಲೂ, ಕಡಿದಾದ ಜಾಗವೂ ಎದುರಾಗುತ್ತದೆ ಎಂಬ ಅರಿವಿಲ್ಲದೆ ಓಡಿದ ಕಾಡುಹಂದಿ ನಿಲ್ಲುತ್ತದೆ. ಸುತ್ತುವರಿದು ನಿಂತ ಗುಂಪು ತಪ್ಪಿಸಿಕೊಳ್ಳಲು ಬಿಡದೆ, ಬೇರೆಡೆಗೆ ಓಡಲು ಬಿಡದೆ ಈಟಿ, ಬರ್ಜಿಗಳಿಂದ ಇರಿದೂ ಅಥವಾ ಗುರಿಯಿಟ್ಟು ಎಸೆದೂ ಕೆಳಗುರುಳಿಸುತ್ತಾರೆ.

ಕಾಡು ಹಂದಿಯನ್ನು ಕೊಲ್ಲಲು ಮತ್ತೊಂದು ವಿಧಾನವೆಂದರೆ, ಮದ್ದು ಹಾಕುವುದು. ಕಾಡುಹಂದಿಗೆ ಪ್ರಿಯವಾದ ಕಾಡುಕುರಿಯ ಕರುಳು ಇಲ್ಲವೆ ಇತರ ಪ್ರಾಣಿಗಳ ಕರುಳನ್ನು ತಂದು ಅದಕ್ಕೆ ಮದ್ದು ಸೇರಿಸಿ, ಅದು ಓಡಾಡುವ ಜಾಗದಲ್ಲಿ ಇಡುತ್ತಾರೆ. ವಾಸನೆ ಹಿಡಿದು ಬಂದ ಕಾಡುಹಂದಿ ಮದ್ದಿರುವ ಕರುಳನ್ನು ಗಬಗಬನೆ ತಿನ್ನುತ್ತದೆ. ಮದ್ದು ಸಿಡಿದು ಸಾಯುತ್ತದೆ. ಕಾಡುಹಂದಿಯನ್ನು ಮದ್ದಿನಿಂದ ಅಥವಾ ಕೋವಿಯಿಂದ ಸುಲಭವಾಗಿ ಬೇಟೆಯಾಡಬಹುದು.

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಬಳಿಯಿರುವ ಕಳ್ಳಬೆಟ್ಟ ಹಾಗೂ ಮುರ್‌ಕಾಲ್‌ಕಾಡು (ಮೂರುಕಾಲ್ ಕಾಡು) ಹಾಗೂ ಸುತ್ತಮುತ್ತಲಿರುವ ಕಾಡುಗಳಲ್ಲಿ ಕಾಡುಹಂದಿಯ ಬೇಟೆ ವೈಶಿಷ್ಟ್ಯವೇ ಬೇರೆ. ಬಯಲು ಸೀಮೆಯ ಇತರ ಭಾಗದಲ್ಲಿ ಇರುವ ಕಾಡುಹಂದಿ ಬೇಟೆಗೂ ಇಲ್ಲಿಯ ಬೇಟೆಗೂ ತುಂಬಾ ವ್ಯತ್ಯಾಸವಿದೆ. ಇಲ್ಲಿ ನಾಯಕ ಜನಾಂಗದವರು ಬೇಟೆಯಾಡುವುದು ಹೆಚ್ಚು. ವರ್ಷದಲ್ಲಿ ಎರಡು ಮೂರು ಬಾರಿ ಬೇಟೆಗೆ ಹೋಗುವುದುಂಟು. ಆದರೆ ಮುಂಗಾರು ಮಳೆ ಬಿದ್ದು ಬಿತ್ತನೆಯಾದಾಗ, ಈ ಪೈರನ್ನು ತಿನ್ನಲು ಬರುವ ಕಾಡು ಹಂದಿ ಬೇಟೆಗೆ ಪ್ರೇರಣೆ ನೀಡುತ್ತದೆ. ಕಾಡಿನ ಅಂಚಿನಲ್ಲಿರುವ ಬೆಳೆಗಳಿಗೆ ಇವುಗಳ ಹಾವಳಿ ಜಾಸ್ತಿ.

ಕಾಡುಹಂದಿ ಬೇಟೆಯನ್ನು ನಾಯಕ ಜನಾಂಗದವರು ಸಂಪ್ರದಾಯಬದ್ಧವಾಗಿ ನಡೆಸುವುದು ಕಂಡು ಬರುತ್ತದೆ. ಬೇಟೆಗೆ ಹೊರಡುವ ಮುನ್ನ, ಪ್ರತಿಯೊಂದು ಗ್ಯಾಟೆಯ (ಪಂಗಡ) ಮುಖಂಡರು

ಕುಳಿತು, ಮಾತುಕತೆ ನಡೆಸಿ, ಬೇಟೆಯ ದಿನವನ್ನು ನಿರ್ಧರಿಸುತ್ತಾರೆ. ತಮ್ಮ ತಮ್ಮ ಗ್ರಾಬೆಯ ಜನರಿಗೆ ಬೇಟೆಯ ದಿನವನ್ನು ತಿಳಿಸುತ್ತಾರೆ, ಅಂದು ನಿರ್ದಿಷ್ಟ ಸಮಯಕ್ಕೆ ಮನೆಗೊಬ್ಬರಂತೆ ಈ ಮೊದಲೇ ತಿಳಿಸಲಾದ ಸ್ಥಳಕ್ಕೆ ಬಂದು ಸೇರಬೇಕು. ಯುಕ್ತ ಕಾರಣವಿಲ್ಲದೆ ತಪ್ಪಿಸಿಕೊಂಡರೆ ದಂಡ ತೆರಬೇಕಾಗುತ್ತದೆ. ದಂಡರೂಪವಾಗಿ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಬೇಕಾಗುತ್ತದೆ.

ಬೇಟೆಗೆ ಹೊರಡುವ ಮುನ್ನ ಪಟ್ಟಲದಮ್ಮ, ಗೌಡಗೆರಮ್ಮನಿಗೆ ಪೂಜೆ ಸಲ್ಲಿಸಿ ಹೊರಡುವುದು ವಾಡಿಕೆ. ಈ ದೇವರ ಹೆಸರಿನಲ್ಲಿ ಒಂದು ಕೋಡುಗಲ್ಲನಿಟ್ಟು, ಅರಿಶಿನ, ಕುಂಕುಮ, ಹೂವುಗಳಿಂದ ಪೂಜಿಸಿ, ಹೂವು ಕೇಳಿ, (ದೇವರ ತಲೆಯ ಮೇಲಿಂದ ಹೂವು ಬೀಳುವುದು) ಹೂ ಕೊಟ್ಟ ನಂತರ, ಯಾವ ಅಪಾಯವೂ ಇಲ್ಲದಂತೆ, ಸುಲಭವಾಗಿ ಬೇಟೆ ಸಿಗುವಂತೆ ದೇವರನ್ನು ಪ್ರಾರ್ಥಿಸಿ, ಜಯಕಾರ ಹಾಕಿ ಬೇಟೆಗೆ ಹೊರಡುತ್ತಾರೆ. ಇವರೊಂದಿಗೆ ಗ್ರಾಬೆಯ ಮುಖಂಡರೂ ಹೋಗುವುದುಂಟು. ಇಲ್ಲವೇ ತಂಡದ ನಾಯಕನೊಬ್ಬನನ್ನು ಆರಿಸಿ, ಅವನ ನೇತೃತ್ವದಲ್ಲಿ ಬೇಟೆಗೆ ಹೋಗಲು ಹರಿಸಿ, ಕಳುಹಿಸಿಕೊಡುತ್ತಾರೆ. ಈಟಿ, ಬರ್ಜಿ, ದೊಣ್ಣೆ ಕೊಡಲಿ, ಬಂಡಗೊಡಲಿ ಮುಂತಾದ ಆಯುಧಗಳನ್ನಿಡಿದು, ಒಕ್ಕೊರಲಿನಿಂದ ಬೇಟೆಯಾಡಿಯೇ ತೀರುತ್ತೇವೆಂದು (ಆ ಅರ್ಥದಲ್ಲಿ) ಎದೆಯುಬ್ಬಿಸಿ ಕೂಗಿ, ಜಯಕಾರ ಹಾಕಿ ಕಳ್ಳಬೆಟ್ಟ, ಮುರುಕಾಲ್ ಕಾಡಿಗೆ ಹೋಗುತ್ತಾರೆ.

ಕಾಡು ಹಂದಿಯನ್ನು ಎದುರಿಸುವುದು ಸುಲಭದ ಮಾತಲ್ಲ. ಇದರ ಎದುರು ಹೋಗುವುದು/ ಹೋರಾಡುವುದು ಪ್ರಾಣಕ್ಕೆ ಕುತ್ತು ತಂದುಕೊಂಡಂತೆ. ಆದ್ದರಿಂದ, ಇವುಗಳು ಓಡಾಡುವ ಜಾಗ, ಪೈರಿಗೆ ಬರುವ ದಾರಿಗಳನ್ನು ಗುರುತಿಸಿಕೊಂಡು, ಸುರಕ್ಷಿತ ಸ್ಥಳದಲ್ಲಿ ನಿಂತು ಅಥವಾ ಮರವೇರಿ ಕುಳಿತು ಬೇಟೆಯಾಡಲು ಆಯಕಟ್ಟು ರೂಪಿಸುತ್ತಾರೆ. ಸುಲಭವಾಗಿ ಎನ್ನುವುದಕ್ಕಿಂತ ಸುರಕ್ಷಿತವಾಗಿ ಬೇಟೆಯಾಡಲು ಇವರು ಬಳಸುವ ಮಾರ್ಗವೆಂದರೆ, ಮರದ ಮೇಲಿಂದ ಕಾಡುಹಂದಿಗೆ ಗುರಿಯಿಟ್ಟು ಬರ್ಜಿ, ಈಟಿಗಳನ್ನು ಎಸೆಯುತ್ತಾರೆ. ಬರ್ಜಿ, ಈಟಿಗಳನ್ನು ಎಸೆಯುವುದರಲ್ಲಿ, ಅಂದರೆ ಗುರಿಯಿಟ್ಟು ನೇರವಾಗಿ ಹಂದಿಗೆ ನಾಟುವಂತೆ ಹೊಡೆಯುವುದರಲ್ಲಿ ಇವರು ಚಾಣಾಕ್ಷರು. ರಭಸವಾಗಿ ನಾಟಿದ ಬರ್ಜಿ, ಹಂದಿಯ ದೇಹದೊಳಗೆ ಸುಮಾರು ಒಂದೂವರೆ ಎರಡು ಅಡಿಗೂ ಮೇಲ್ಪಟ್ಟು ಒಳಗಿಳಿಯುತ್ತದೆ. ಬರ್ಜಿ ನಾಟಿದ ತಕ್ಷಣ ಕಾಡೇ ಕಿತ್ತು ಬರುವಂತೆ ಕೂಗುತ್ತದೆ. ಈ ಗದ್ದಲಕ್ಕೆ/ಕೂಗಿಗೆ ಅಕ್ಕಪಕ್ಕದಲ್ಲಿನ, ಸ್ವಲ್ಪ ದೂರದಲ್ಲಿರುವ ಪ್ರಾಣಿಗಳು ಸುರಕ್ಷಿತ ಸ್ಥಳಕ್ಕೆ ದೌಡಾಯಿಸುತ್ತವೆ. ಅಂತೆಯೇ ಏಟು ಬಿದ್ದ ಕಾಡುಹಂದಿ ಕೂಗುತ್ತ ಓಡುತ್ತದೆ. ಆದರೆ, ರಕ್ತಸ್ರಾವವಾಗಿ, ಉರುಳುತ್ತದೆ. ಈ ಮೊದಲೇ ಅಪಾಯವಿಲ್ಲವೆಂದರಿತ ಇತರರು ತಮ್ಮ ಪ್ರಹಾರದ ಕಾಣಿಕೆಯನ್ನು (ಇವರು ಹಿಡಿದ ಆಯುಧಗಳಿಂದ) ನೀಡುತ್ತಾರೆ. ಅಲ್ಲಿಗೆ ಕಾಡುಹಂದಿಯ ಕಥೆ ಮುಗಿದಂತೆ. ಕಾಡುಹಂದಿಯು (ದಷ್ಟಪುಷ್ಟವಾಗಿ ಬೆಳೆದ) ಸುಮಾರು ೧೫೦-೨೦೦ ಕೆ.ಜಿ.ಗಳಷ್ಟು ತೂಕವಿರುತ್ತದೆ. ಇಲ್ಲಿ ಬೇಟೆಗಾರ ಎಚ್ಚರವಹಿಸಬೇಕಾದ ಅಂಶವೆಂದರೆ, ಕಾಡು ಹಂದಿಯನ್ನು ಸರಿಯಾಗಿ ಗುರಿಯಿಟ್ಟು ಹೊಡೆಯದಿದ್ದಲ್ಲಿ, ಅಲ್ಪ ಸ್ವಲ್ಪ ತರಚು ಗಾಯವಾದಲ್ಲಿ, ಅಬ್ಬರಿಸುತ್ತಾ, ಕೂಗುತ್ತಾ ಓಡುವ ಕಾಡುಹಂದಿ, ಬೇಟೆಗೆ ಮತ್ತೆಂದು ಸಿಗದಂತೆ ಮಾಡಿಬಿಡುತ್ತದೆ. ಅಪಾಯ

ಎದುರಾಗುವುದನ್ನು ಅರಿತ ಎಲ್ಲ ಪ್ರಾಣಿಗಳೂ ಓಡಿ ಬೇಟೆಯೇ ಇಲ್ಲದೆ ಬರಬೇಕಾದ ಪರಿಸ್ಥಿತಿ ಒದಗಿಬರಬಹುದು.

ಬೇಟೆಯಾಡಿದ ಕಾಡುಹಂದಿಯನ್ನು ಅಲ್ಲಿಯೇ ಅರ್ದಂಬರ್ದ ಸುಡುತ್ತಾರೆ. ಎರಡು ಬೊಂಬುಗಳಿಗೆ ಅಡ್ಡಲಾಗಿ ಗಳಗಳನ್ನು ಅಥವಾ ಗಿಡದ ರೆಂಬೆಗಳನ್ನು ಹಾಕಿ ಕಟ್ಟಿ, ಅದರ ಮೇಲೆ ಸೊಪ್ಪು ಹೊಚ್ಚಿ (ಹರಡಿ) ಅದರ ಮೇಲೆ ಸುಟ್ಟ ಕಾಡು ಹಂದಿಯನ್ನು ಇಡುತ್ತಾರೆ. ನಾಲ್ಕು ಕಾಲು ಚಾಚಿರುತ್ತದೆ, ತಲೆ ಎತ್ತಿರುವಂತೆ ಕೂಡಿಸುತ್ತಾರೆ. ಅದಕ್ಕೆ ಕುಂಕುಮ ಹಚ್ಚಿ, ಹೂವುಗಳಿಂದ ಅಲಂಕರಿಸಿ (ಅಲ್ಲೆ ಸಿಕ್ಕ ಕೆಲವು ಹೂವು ಮಾತ್ರ) ಜಯಕಾರ, ಕೇಕೆ ಹಾಕುತ್ತಾ, ಕೋಡುಗಲ್ಲು ದೇವರ ಬಳಿಗೆ ಬರುತ್ತಾರೆ. ಅರ್ಥಾತ್ ಪಟ್ಟಲದಮ್ಮ, ಗೌಡಗೆರಮ್ಮನ ಗುಡಿಗೆ ಬರುತ್ತಾರೆ. ಬರುವಾಗ ರಾಜಮಾರ್ಗದಲ್ಲಿ ಬರುವುದನ್ನು ಬಿಟ್ಟು, ಕಾಲುದಾರಿ - ಕಳ್ಳ ದಾರಿಯಲ್ಲಿ ಬರುತ್ತಾರೆ. ದೇವರಿಗೆ ಎಡೆಯಿಟ್ಟು ನಂತರ, ಹಂದಿಯನ್ನು ಪಾಲು ಹಾಕುತ್ತಾರೆ. ಬರ್ಜಿಯಿಂದ ಹೊಡೆದವನಿಗೆ ಒಂದು ಪಾಲು ಜಾಸ್ತಿ ಕೊಟ್ಟು ಉಳಿದವರು ಸಮಪಾಲು ಹಂಚಿಕೊಳ್ಳುತ್ತಾರೆ. ಅಂದು ಎಲ್ಲರ ಮನೆಯಲ್ಲೂ ಕಾಡುಹಂದಿಯ ಮಾಂಸದೂಟ. ಬೇಟೆ ಸಿಕ್ಕರೆ ದೇವರು ನಮಗೆ ಒಲಿದಿದ್ದಾನೆಂದು ಸಂತೋಷಪಡುತ್ತಾರೆ. ಬೇಟೆ ಸಿಗದಿದ್ದಲ್ಲಿ, ಪಟ್ಟಲದಮ್ಮ-ಗೌಡಗೆರಮ್ಮ ಮುನಿದಿದ್ದಾಳೆಂದು ಭಾವಿಸುತ್ತಾರೆ.

**ಊರ ಹಂದಿ** : "ಕೋಟಿ ಕೊಟ್ಟಾದರೂ ಗೂಟಿ ತಿನ್ನಬೇಕು" ಎಂಬ ಗಾದೆಯಂತೆ ಹಂದಿಯನ್ನು ತಿನ್ನುವ ವಾಡಿಕೆಯಿದೆ. ಅತಿ ಹೆಚ್ಚು ಕೊಬ್ಬಿನ ಅಂಶವಿರುವ ಹಂದಿಯನ್ನು ಆಷಾಡ ಮಾಸದಲ್ಲಿ ತಪ್ಪದೆ ತಿನ್ನುತ್ತಾರೆ. ಆಷಾಡ ಮಾಸದಲ್ಲಿ ಮನುಷ್ಯನಿಗೆ ಕೊಬ್ಬಿನ ಅಂಶದ ಅವಶ್ಯಕತೆ ಇದೆ. ಜನರಲ್ಲಿರುವ ನಂಬಿಕೆಯಂತೆ ಕಣಜದ ಧಾನ್ಯ, ಮೆದೆಯ ಹುಲ್ಲು ಖರ್ಚಾಗುವುದು ಈ ಮಾಸದಲ್ಲಿಯೇ. ಗಾಳಿಯ ಒತ್ತಡ ಅಷ್ಟು ಜಾಸ್ತಿಯಿರುತ್ತದೆ. ಆದ್ದರಿಂದ ಆಷಾಡಮಾಸ ಹಂದಿ ಮಾಂಸ ಭಕ್ಷ್ಯಕ್ಕೆ ಪ್ರಶಸ್ತ ಕಾಲ. ನಗರ ಪ್ರದೇಶಗಳಲ್ಲಿ ಸರ್ವ ಋತುಗಳಲ್ಲಿಯೂ ತಿನ್ನುತ್ತಾರೆ. ಇತ್ತೀಚೆಗೆ ಹಳ್ಳಿ ಪ್ರದೇಶಗಳಲ್ಲಿಯೂ ಸಾಮಾನ್ಯ ವಾಗುತ್ತಿದೆ.

ಹಂದಿ ಸಾಕು ಪ್ರಾಣಿಯಾದರೂ ಕೊಲ್ಲಲು ಬಹಳ ಕಷ್ಟ ಪಡಬೇಕು. ಇವುಗಳು ಯಾವಾಗಲೂ ಮುಕ್ತವಾಗಿಯೇ ಓಡಾಡಿಕೊಂಡಿದ್ದು, ಗೂಡಿನಲ್ಲಿದ್ದಾಗ್ಯೂ ಮುಕ್ತವಾಗಿರುತ್ತವೆ. ದನ, ಮೇಕೆಗಳಂತೆ ಯಾವುದೇ ಹಗ್ಗ, ಮೂಗುದಾರಗಳಿಂದ ಕಟ್ಟಲ್ಪಟ್ಟಿರುವುದಿಲ್ಲ. ಆದ ಕಾರಣ ಅವುಗಳನ್ನು ಹಿಡಿಯಲು ಹೋದಾಗ ದೈನಂದಿನ ಕ್ರಮ ಬದಲಾಗುವುದರಿಂದ, ಪ್ರತಿಭಟಿಸುತ್ತವೆ, ಹಂದಿಯನ್ನು ಹಿಡಿಯುವ ಮೊದಲು ಒಂಟಿಯಾಗಿ ಒಂದು ಕೊಟ್ಟಿಗೆಯಲ್ಲೊ, ರೂಮಿನಲ್ಲೊ ಕೂಡಿಹಾಕುತ್ತಾರೆ. ಐದಾರು ಜನ ದೊಣ್ಣೆ, ದಡಿ, ಹಗ್ಗ, ಗಳಗಳನ್ನು ಹಿಡಿದು ಒಳ ಸೇರುತ್ತಾರೆ. ಮೂಲೆಗೆ ಸಿಕ್ಕಿಸಿಕೊಂಡು ಮೂಗಿನ ಮೇಲೆ ಹೊಡೆದು ಅಥವಾ ದೊಣ್ಣೆ, ಕೋಲುಗಳಿಂದ ಅದುಮಿ ಹಿಡಿದುಕೊಂಡು ಕಾಲುಗಳನ್ನು ಕಟ್ಟುತ್ತಾರೆ. ಕಾಲಿನ ಮಧ್ಯೆ ಗಳವನ್ನು ಸೇರಿಸಿ ಊರ ಹೊರಗೆ ಹೋಗಿ, ಸಾಮಾನ್ಯವಾಗಿ ಬಂಡೆಯ ಮೇಲೆ ಕತ್ತರಿಸಿ ಭಾಗ ಹಾಕುತ್ತಾರೆ. ಹಿಡಿಯುವಾಗ ಸ್ವಲ್ಪ ಎಚ್ಚರ ತಪ್ಪಿದರೂ ಕಚ್ಚುತ್ತದೆ.

ಕಚ್ಚಿದರೆ ಮಾಂಸ ಕಿತ್ತುಬರುವಂತೆ ಕಚ್ಚುತ್ತದೆ. ಉದ್ದಮೂತಿಯ ಇದು ಬಹು ಸುಲಭವಾಗಿ, ತನ್ನ ಬಾಯಿಗೆ ಸಿಕ್ಕ ಕೈ ಕಾಲುಗಳನ್ನು ಲಬಗುತ್ತದೆ. ಆದ್ದರಿಂದ ಅದರ ಬಾಯಿಗೆ ಸಿಕ್ಕದಂತೆ ಅದು ಮೇಲೆರಗಲು ಬಂದಾಗ ದೊಣ್ಣೆಯಿಂದ ಹೊಡೆದೋ ಅಥವಾ ನೂಕಿಯೋ ತಪ್ಪಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅದು ಬಹು ಜೋರಾಗಿ ಕೂಗುವುದರಿಂದ ಅಳ್ಳೆದೆಯವರು ಹಿಡಿಯುವ ಸಾಹಸಕ್ಕೆ ಹೋಗುವುದಿಲ್ಲ. ಮೂತಿಗೆ ಬಲವಾದ ಪೆಟ್ಟು ಬಿದ್ದರೆ, ಅದು ತಡೆದುಕೊಳ್ಳಲಾರದು. ಮೈಮೇಲೆ ಪೆಟ್ಟು ಬಿದ್ದರೆ ತಡೆದುಕೊಳ್ಳುತ್ತದೆ, ಹಾಗೆಯೇ ಕೆರಳಿ ಕಚ್ಚಲು ಮುಂದಾಗುತ್ತದೆ, ಆದ್ದರಿಂದ, ಸುಲಭವಾಗಿ ಹಿಡಿಯಲು ಸಾಧ್ಯವಾಗದಾಗ, ತಮ್ಮ ತಂತ್ರಕ್ಕೆ ಅದು ಮಣಿಯದಿದ್ದಾಗ, ಮೂತಿಗೆ ಬಲವಾಗಿ ದಡಿಯಿಂದ/ದೊಣ್ಣೆಯಿಂದ ಹೊಡೆಯುತ್ತಾರೆ, ಆಗ ಅದು ಸ್ವಲ್ಪ ಸಮಯ ವಿಚಲಿತವಾಗುತ್ತದೆ. ಆ ಸಮಯವನ್ನು ವ್ಯರ್ಥ ಮಾಡದೆ ಗಳಗಳಿಂದ ಅದುಮಿಡಿದು ಕಾಲುಗಳನ್ನು ಕಟ್ಟಿ, ತಮ್ಮ ವಧಾಸ್ಥಾನಕ್ಕೆ ಕೊಂಡೊಯ್ಯುತ್ತಾರೆ.

**ಕೋತಿ ಬೇಟೆ** : ಬೆಳೆಯ ರಕ್ಷಣೆ ಹಾಗೂ ಮನರಂಜನೆಗಾಗಿ ಕೋತಿಗಳನ್ನು ಬೇಟೆಯಾಡಲಾಗುತ್ತದೆ. ದೈವಿಕ ಅಂಶವುಳ್ಳ ಕೋತಿಗಳನ್ನು ಹಿಡಿಯಲು ಹಿಂಜರಿದವರು, ಕೋತಿ ಹಿಡಿಯುವ ತಂಡದವರಿಂದ, ಅರಣ್ಯ ಇಲಾಖೆಯವರಿಂದ ಹಿಡಿಸುತ್ತಾರೆ. ಕೋತಿಯು ಕಡಲೆ, ಸೌತೆ, ಬಟಾಣಿ, ಹುರುಳಿ, ಕೊತ್ತಂಬರಿ, ಹೀಗೆ ಯಾವುದೇ ಬೆಳೆಯಿರಲಿ, ತರಕಾರಿಯಿರಲಿ ಹಾಳುಗೆಡುವುತ್ತದೆ. ಬಾಳೆ ತೋಟಕ್ಕೆ ಬಿದ್ದರಂತೂ ಕ್ಷಣಾರ್ಧದಲ್ಲಿ ಹಾಳುಗೆಡವಿ ಮಾಯವಾಗುತ್ತವೆ. ಬೆಂಡೆಗಿಡವನ್ನು ಬಿಟ್ಟರೆ ಮತ್ತೆಲ್ಲಾ ತರಕಾರಿಯನ್ನು ಹಾಳು ಗೆಡವುತ್ತದೆ. ಕಡಲೆ ಗಿಡವನ್ನಂತು ಕೆಲವೇ ನಿಮಿಷಗಳಲ್ಲಿ ಕಿತ್ತು ಬಿಸಾಕುತ್ತದೆ. ಹೀಗಿದ್ದ ಮೇಲೆ ಇವುಗಳನ್ನು ಹಿಡಿಯದೇ ಬೇರೆ ದಾರಿಯೇ ಇಲ್ಲ.

ಚೂಪು ಉಗುರು, ಗಟ್ಟಿಯಾದ ಹಲ್ಲುಗಳುಳ್ಳ ಕೋತಿಯನ್ನು ಹಿಡಿಯುವುದು ಬಹಳ ಕಷ್ಟ. ಬಹು ವೇಗವಾಗಿ ಓಡಬಲ್ಲದು, ಮರವೇರಿ ತಪ್ಪಿಸಿಕೊಳ್ಳಬಹುದು. ಚಂಚಲ ಸ್ವಭಾವದ ಇದು ತಾನು ತಿನ್ನುವುದಕ್ಕಿಂತ ಹೆಚ್ಚು ಹಾಳುಗೆಡುವುದೇ ಜಾಸ್ತಿ. ಇನ್ನು ಹಣ್ಣು, ಹಂಪಲು ಸಿಕ್ಕಿದರಂತೂ ದೇವರೇ ಗತಿ.

ಕೋತಿಯನ್ನು ಹಿಡಿಯುವುದು ಸುಲಭವಲ್ಲ. ಅಪಾಯ ಎದುರಾದಾಗ ಸಂಘಟಿತವಾಗಿ ಹೋರಾಡುವ ಸ್ವಭಾವ ಕೋತಿಯದು. ತಂಡದ ನಾಯಕನ (ಗಡವ) ಮಾರ್ಗದರ್ಶನದಂತೆ ಅವು ಸ್ಥಳಗಳನ್ನು ಬದಲಾಯಿಸುತ್ತವೆ. ಹೋರಾಟಕ್ಕೆ ಮುಂದಾಗುತ್ತವೆ. ಒಂದೇ ಕಡೆ ನಿಲ್ಲುವುದಿಲ್ಲ, ತಮ್ಮ ಸರಹದ್ದನ್ನು ಗುರುತಿಸಿಕೊಂಡು ಪ್ರತಿದಿನ ತಮ್ಮ ವಾಸಸ್ಥಾನವನ್ನು ಬದಲಿಸುತ್ತಿರುತ್ತವೆ. ಆದರೆ ತಾವು ನಿರ್ಧರಿಸಿಕೊಂಡಿರುವ ಸರಹದ್ದನ್ನು ಮೀರಿ ಹೋಗುವುದಿಲ್ಲ. ಅಂತೆಯೇ ಬೇರೆಯ ತಂಡಕ್ಕೆ ಪ್ರವೇಶವನ್ನೂ ನಿರಾಕರಿಸುತ್ತವೆ. ಅತಿಕ್ರಮಿಸಿ ಬಂದಾಗ ಹೋರಾಡಿ ಓಡಿಸುತ್ತವೆ. ಇವುಗಳನ್ನು ಬೋನು ಒಡ್ಡಿ ಹಿಡಿಯಲಾಗುತ್ತದೆ. ಸುಮಾರು ೪ ಅಡಿ ಎತ್ತರ, ೫ ಅಡಿ ಉದ್ದಗಲವಿರುವ ಬೋನುಗಳನ್ನು ಒಡ್ಡಿ, ಅದರೊಳಗೆ ತಿಂಡಿ, ಹಣ್ಣು, ಕಾಯಿ ಪಲ್ಲೆಗಳನ್ನು

ಇಡುತ್ತಾರೆ. ಅವು ಒಂದೆರಡು ಬಾರಿ ಬಂದು ಹೋಗುವವರೆಗೆ ಸುಮ್ಮನಿದ್ದು, ನಂತರ ಎರಡು ಮೂರು ಕೋತಿಗಳು, ಒಟ್ಟಿಗೆ ಪ್ರವೇಶಿಸಿದಾಗ ಬೋನಿನ ಬಾಗಿಲನ್ನು ಮುಚ್ಚುತ್ತಾರೆ. ಬೋನಿನ ಬಾಗಿಲನ್ನು ದೂರದಿಂದಲೇ ಮುಚ್ಚಲು, ಅದಕ್ಕೆ ಒಂದು ದಾರ ಕಟ್ಟಿ, ಕಾದು ಕುಳಿತಿರುತ್ತಾರೆ. ಕೋತಿ ಬೋನನ್ನು ಹೊಕ್ಕಾಗ, ದಾರದ ಹಿಡಿತವನ್ನು ಸಡಿಲಿಸಿ ಬೋನಿನಲ್ಲಿ ಸಿಕ್ಕಿ ಬೀಳುವಂತೆ ಮಾಡಿ ಹಿಡಿಯುತ್ತಾರೆ. ಇದು ಒಂದು ವಿಧಾನ.

ಮತ್ತೊಂದು ವಿಧಾನವೆಂದರೆ, ಅವು ಸಾಮಾನ್ಯವಾಗಿ ರಾತ್ರಿ ಕಳೆಯಲು ದೊಡ್ಡ ಮರಗಳನ್ನು ಆರಿಸಿಕೊಳ್ಳುತ್ತವೆ. ಅಂತಹ ಮರಗಳ ಕೊಂಬೆಯು ಮತ್ತೊಂದು ಮರದ ಕೊಂಬೆಗೆ ತಾಗದಂತೆ, ಹತ್ತಿರವಾಗಿರುವ ರೆಂಬೆ, ಕೊಂಬೆಗಳನ್ನು ಕತ್ತರಿಸಿ ಹಾಕುತ್ತಾರೆ. ರಾತ್ರಿ ಕಳೆಯಲು ಕೋತಿಯ ಹಿಂಡು ಆ ಮರವನ್ನು ಆಶ್ರಯಿಸಿದಾಗ, ಬೆಳಿಗ್ಗೆಯ ಆ ಮರದ ಬುಡದಲ್ಲಿ ಕಾವಲು ಕುಳಿತುಕೊಳ್ಳುತ್ತಾರೆ. ಅವು ಇಡೀ ದಿನ ಇಳಿದು ಹೋಗಲು ಸಾಧ್ಯವಾಗದಂತೆ ತಡೆಯುತ್ತಾರೆ. ನೀರು ಆಹಾರವಿಲ್ಲದೆ ಬಳಲಿದ ಕೋತಿಗಳು ಬಿಟ್ಟರೆ ಸಾಕೆಂದು ಕಾದು ರಕ್ಷಣೆ ಸಡಿಲಾದಾಗ ಓಡಿ ಹೋಗುತ್ತವೆ. ಒಂದಷ್ಟು ದಿನ ಇತ್ತ ಬರುವುದಿಲ್ಲ. ಆದರೆ ಮತ್ತೆ ಬರುತ್ತವೆ. ತಾತ್ಕಾಲಿಕವಾಗಿ ದೂರ ಓಡಿಸಲು ಈ ಉಪಾಯವನ್ನು ಬಳಸುತ್ತಾರೆ. ಹಾಗೆಯೇ ಹೀಗೆ ಬಳಲಿದ ಕೋತಿಗಳನ್ನು ಆ ಮರದ ಬುಡದಲ್ಲಿ ಬೋನುಗಳನ್ನಿಟ್ಟು ಹಿಡಿದು ಅರಣ್ಯಗಳಲ್ಲಿ ಬಿಟ್ಟು ಬರುತ್ತಾರೆ.

ಸೋಲಿಗರು ಕೋತಿ ಜಾತಿಯ ಮುಸುಕೋತಿಯೆಂಬ ಪ್ರಾಣಿಯನ್ನು ತಿನ್ನುತ್ತಾರೆ. ಇದನ್ನು ಹಿಡಿಯಲು ಮೇಲೆ ತಿಳಿಸಿದಂತೆ ಮನೆ ಕೋತಿಯಿರುವ ಮರದ ಪಕ್ಕದಲ್ಲಿರುವ ಮರಗಳಿಗೆ ಹಾರದಂತೆ ಕೊಂಬೆ, ರೆಂಬೆಗಳನ್ನು ಕತ್ತರಿಸಿ ಹಾಕುತ್ತಾರೆ. ಅದು ಮರವಿಳಿದೇ ಹೋಗಬೇಕು. ಆಗ ಮರದ ಬುಡದಲ್ಲಿ ಬಲೆ ಬೀಸಿ, ಬಲೆಯ ಕಾವಲಿಗೆ ಸಹ ಬೇಟೆಗಾರನನ್ನು ಕೂಡಿಸಿ, ಮರವೇರಿ ಕಡ್ಡಿಗಳಿಂದ ರೆಂಬೆ ಹಿಡಿದು ಹೆದರಿಸುತ್ತಾರೆ. ಅದು ಇಳಿದು ಓಡಿ ಹೋಗಲು ಪ್ರಯತ್ನಿಸಿ ಬಲೆಗೆ ಬೀಳುತ್ತದೆ. ಬೇಟೆಗಾರನ ತುತ್ತಾಗುತ್ತದೆ.

ಮನರಂಜನೆಗಾಗಿ ಸಹ ಕೋತಿಯನ್ನು ಬೇಟೆಯಾಡಲಾಗುತ್ತದೆ. ಕೋತಿ ಆಡಿಸುವವರು, ಕೋತಿಗಳನ್ನು ಹಿಡಿದು ಪಳಗಿಸುತ್ತಾರೆ. ಕೋತಿ ಲಾಗ ಹಾಕುವಂತೆ, ತಂತಿಯ ಮೇಲೆ ನಡೆಯುವಂತೆ, ಸೈಕಲ್ಲು ತುಳಿಯುವಂತೆ ಮುಂತಾದ ವಿದ್ಯೆಗಳನ್ನು ಸರ್ಕಸ್ಸಿನವರು ಕಲಿಸುತ್ತಾರೆ. ಕೋತಿ ಆಡಿಸುವವರು ತಮ್ಮ ವೃತ್ತಿಗಾಗಿಯೇ ಇವುಗಳನ್ನು ಹಿಡಿದು ತಾವು ಕಲಿಸಿದ ಆಟಗಳನ್ನು ಜನರ ಮುಂದೆ ಪ್ರದರ್ಶಿಸಿ ಹಣ ಸಂಪಾದಿಸುತ್ತಾರೆ.

**ನರಿ ಬೇಟೆ** : ನರಿಯನ್ನು ಮುಖ್ಯವಾಗಿ ಮಾಂಸಕ್ಕಾಗಿ ಬೇಟೆಯಾಡುತ್ತಾರೆ. ನರಿ, ಗುಳ್ಳೆ ನರಿ ಎಂದು ಎರಡು ಜಾತಿಗಳಿವೆ. ನರಿ ಗಾತ್ರದಲ್ಲಿ ದೊಡ್ಡದಿರುತ್ತದೆ. ತೋಳದಷ್ಟೆ ದಷ್ಟಪುಷ್ಟವಾಗಿರುತ್ತದೆ. ಗುಳ್ಳೆ ನರಿ ಗಾತ್ರದಲ್ಲಿ ಸ್ವಲ್ಪ ಚಿಕ್ಕದು. ನರಿಗಿಂತ ಚುರುಕುತನ ಜಾಸ್ತಿ. ಬಾಲ ಕುಚ್ಚಿನಂತಿರುತ್ತದೆ. ಇವುಗಳು ತೆವರು, ಗೋಮಾಳ, ಗುಡ್ಡ, ಬೆಟ್ಟಗಳಲ್ಲಿ ವಾಸಿಸುತ್ತವೆ. ಇವು

ಹೊಂಚು ಹಾಕಿ ಬೇಟೆಯಾಡುವ ಸ್ವಭಾವದವು. ಬೇಸಿಗೆಯಲ್ಲಿ ಕುರಿಯ ಹಿಂಡನ್ನು ಹಿಂಬಾಲಿಸಿ ಒಂಟಿಯಾಗಿರುವಾಗ ಅಥವಾ ಮೇಯುವಾಗ ಮೈಮರೆತು ಒಂಟಿಯಾಗಿರುವ ಕುರಿಯನ್ನು ಹಿಡಿಯುತ್ತದೆ. ಗಿಡ ಗೆಂಟೆಗಳ ಮರೆಯಲ್ಲಿ ಕುಳಿತಿದ್ದು, ಅದರ ಪಕ್ಕದಲ್ಲಿ ಬಂದ ಕುರಿಗಳನ್ನು ಹಿಡಿಯುತ್ತದೆ. ಇದು ಕುರಿಯ ಗೋಮಾಳೆಗೆ (ಕತ್ತಿಗೆ) ಬಾಯಿ ಹಾಕಿ ಹಿಡಿದು ಕುರಿ ಒದರಾಡಿ ತಣ್ಣಗಾಗುವವರೆಗೆ ತನ್ನ ಹಿಡಿತವನ್ನು ಸಡಿಲಿಸುವುದಿಲ್ಲ. ಇದರ ಈ ಚಲನವಲನ ಅರಿತ ಬೇಟೆಗಾರ, ಇದರ ಬೇಟೆಗೆ ತಂತ್ರ ರೂಪಿಸುತ್ತಾನೆ. ಹಾಗೆಯೇ ಸಂಜೆಯ ಹೊತ್ತಿನಲ್ಲಿ ಊಳಿಡುತ್ತದೆ. ಈ ಸಮಯದಲ್ಲಿ ಅವು ಒಟ್ಟಾಗಿ ಓಡಾಡುತ್ತಿರುತ್ತವೆ. ಇಲ್ಲವೆ ಒಟ್ಟಿಗೆ ಸೇರುತ್ತವೆ. ಇಂತಹ ಸಮಯ ಬೇಟೆಯಾಡಲು ಸೂಕ್ತವಾದುದು.

ಇಂತಹ ಸಮಯದಲ್ಲಿ ಬೇಟೆಗಾರ ನರಿಗಳಿರುವ ಸ್ಥಳವನ್ನು ಗುರುತಿಸಿಕೊಂಡು, ಅಡ್ಡಲಾಗಿ ಅಥವಾ ಆಯಕಟ್ಟಿನ ಸ್ಥಳದಲ್ಲಿ ಬಲೆ ಬೀಸುತ್ತಾನೆ. ಬೇಟೆ ನಾಯಿಗಳನ್ನು ಸುತ್ತುವರಿಯುವಂತೆ ಚೂ ಬಿಟ್ಟು ಅತ್ತ ಕಡೆ ಓಡುವುದನ್ನು ತಡೆಯುತ್ತಾನೆ. ಅದು ಬಲೆಯ ಕಡೆಯಲ್ಲದೆ ಬೇರೆ ಕಡೆ ಓಡಲಾಗದಂತೆ ಸುತ್ತುವರಿಯುತ್ತಾರೆ. ಕತ್ತಲೆಯಲ್ಲಿ ಓಡಿದ ನರಿಗಳು ಬಲೆಯಲ್ಲಿ ತಡೆಹಿಡಿಯಲ್ಪಡುತ್ತವೆ. ಈ ಸಮಯವನ್ನು ವ್ಯರ್ಥಮಾಡಿಕೊಳ್ಳದೆ, ದೊಣ್ಣೆ, ದಡಿ ಅಥವಾ ಕೊಡಲಿಯಿಂದಲೂ ಹೊಡೆದು ಉರುಳಿಸುತ್ತಾರೆ. ನರಿ ಬೇಟೆಗಾರನಿಗೆ ಶರಣಾಗುತ್ತದೆ.

ಮೇಲೆ ಹೇಳಲಾದ ಪ್ರಾಣಿಗಳಲ್ಲದೆ ಸಾರಂಗ, ಜಿಂಕೆ, ಕಡವೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುತ್ತಾರೆ. ಈ ಪ್ರಾಣಿಗಳ ಮಾಂಸ ಬಹು ರುಚಿಕರವಾಗಿದ್ದು, ಸುಲಭವಾಗಿ ಬೇಟೆಗೆ ಸಿಲುಕುವ ಪ್ರಾಣಿಗಳಾಗಿವೆ. ಇವುಗಳನ್ನು ಎರಡು ರೀತಿಯಲ್ಲಿ ಬೇಟೆಯಾಡಲಾಗುತ್ತದೆ. ಒಂದು ಮದ್ದನ್ನಿಡುವುದು, ಮತ್ತೊಂದು ಖೆಡ್ಡಾದಂತಿರುವ ವಿಧಾನ. ಸಾರಂಗ, ಜಿಂಕೆ, ಕಡವೆ, ಕಾಡು ಹಂದಿ ಮುಂತಾದ ಪ್ರಾಣಿಗಳು ಓಡಾಡುವ ಜಾಗದಲ್ಲಿ ಮದ್ದನ್ನಿಡುತ್ತಾರೆ. ಗುಂಪಾಗಿ ಬರುವ ಈ ಪ್ರಾಣಿಗಳು ಮದ್ದನ್ನು ತುಳಿದಾಗ, ಅದು ಸಿಡಿದು ಒಂದೆರಡು ಪ್ರಾಣಿಗಳನ್ನು ಆಹುತಿ ತೆಗೆದುಕೊಳ್ಳುತ್ತದೆ.

ಹಾಗೆಯೇ ಇವು ಓಡಾಡುವ ದಾರಿಯನ್ನು ಗುರುತಿಸಿಕೊಂಡು, ಆರರಿಂದ ೮ ಅಡಿಗಳಷ್ಟು ಆಳದ ಗುಂಡಿಗಳನ್ನು ತೋಡಿ, ಮೂರು-ನಾಲ್ಕು ದಸಿಗಳನ್ನು ನೆಡುತ್ತಾರೆ. (ದಸಿಗಳೆಂದರೆ ಬಿದುರಿನ ಅಥವಾ ಇತರ ಮರದ ಕಡ್ಡಿಗಳು. ದಸಿಗಳು ಹರಿತ, ಚೂಪಾಗಿದ್ದು, ದೃಢವಾಗಿರುತ್ತವೆ). ಸಣ್ಣ ಕಡ್ಡಿ ಸೊಪ್ಪುಗಳಿಂದ ಮುಚ್ಚಿ (ಚಪ್ಪರದಂತೆ) ಮಣ್ಣನ್ನು ಅದರ ಮೇಲೆ ಎರಚಿರುತ್ತಾರೆ. ಹೀಗೆ ಖೆಡ್ಡದಂತೆ ಮಾಡಿದ ಗುಂಡಿಯ ಅರಿವಿಲ್ಲದ ಪ್ರಾಣಿಗಳು, ಎಂದಿನಂತೆ ಆಹಾರ ಅರಸಿ ಬಂದ ಪ್ರಾಣಿಗಳು ಅದರೊಳಕ್ಕೆ ಬೀಳುತ್ತವೆ. ದಸಿ ಎಟ್ಟಿಕೊಂಡು ಸಾಯುತ್ತವೆ. ಇಲ್ಲವೇ ಒದರಾಡುತ್ತಾ ಗುಂಡಿಯಿಂದ ಹೊರಗೆ ಹೋಗಲು ಸಾಧ್ಯವಾಗದೆ ಒದ್ದಾಡುತ್ತಿರುತ್ತವೆ. ಬೇಟೆಗಾರನ ತುತ್ತಾಗುತ್ತವೆ.

ಸುಮಧುರವಾದ ನಾದ ಹೊಮ್ಮಿಸಿ ತಲೆದೂಗುವಂತೆ ಮಾಡುವ ಸಂಗೀತ ಸಾಧನಗಳ ಹಿಂದೆ ಅಡಗಿರುವ ಬೇಟೆಯ ಕಟುವಾಸನೆಯನ್ನು ಬಹಳಷ್ಟು ಜನರು ಊಹಿಸಲಾರರು. ತಮಟೆ, ಡೋಲು,

ಮದ್ದಳೆ, ದುಡಿ, ಡಮರು, ಮೃದಂಗ ತಬಲಗಳ ಹಿಂದೆ ಬೇಟೆಯ ವಾಸನೆ ಇದೆ. ವಾ ಉಸ್ತಾದ್ ಎಂದು ಹೇಳುವ ಜಾಕೀರ್ ಹುಸೇನ್‌ರವರ ಕೈಬೆರಳುಗಳ ಚಳಕಕ್ಕೆ ಜನರನ್ನು ಮಂತ್ರಮುಗ್ಧರನ್ನಾಗಿಸುವ ತಬಲ, ಬೇಟೆಯ ಕತೆ ಹೇಳುತ್ತದೆ. ಅಷ್ಟೇ ಏಕೆ, ದೇವಸ್ಥಾನದ ನಗಾರಿ ಸಹ ಬೇಟೆಯ ಕತೆ ಹೇಳುತ್ತದೆ. ಅಲ್ಲವೇ? ಅಹುದು ಇವುಗಳೆಲ್ಲಾ ಬೇಟೆಯಾಡಿದ ಪ್ರಾಣಿಗಳ ಚರ್ಮದಿಂದ ತಯಾರಾದ ಚರ್ಮ ವಾದ್ಯಗಳು!!

●

# ಮಲೆನಾಡಿನಲ್ಲಿ ಪ್ರಾಣಿ ಬೇಟೆ

◆ *ಯು. ಎಸ್. ರಾಮಣ್ಣ*

**ಹಿನ್ನೆಲೆ :**

ಬೇಟೆ ಅಥವಾ ಶಿಕಾರಿ ಎಂಬ ಶಬ್ದಗಳು ಪ್ರಾಣಿಗಳನ್ನು ವಿವಿಧ ತಂತ್ರದ ಮೂಲಕ ಸೆರೆಹಿಡಿಯುವುದನ್ನು ಧ್ವನಿಸುತ್ತವೆ. ಇವೆರಡೂ ಸಮಾನಾರ್ಥಕ ಶಬ್ದಗಳು; ರೂಢಿಯಲ್ಲಿರುವ ಶಬ್ದಗಳು. ಆದರೂ ಬೇಟೆ ಎಂಬುದೇ ಹೆಚ್ಚು ಪ್ರಾಚೀನ ಹಾಗೂ ಸಾಹಿತ್ಯಿಕ ದಾಖಲೆಯನ್ನು ಹೊಂದಿದೆ. 'ಬೇಟೆ ಎಂಬುದು ಒಬ್ಬರೇ ಭಾಗವಹಿಸು ವಂಥದ್ದು', ಶಿಕಾರಿ ಎಂದರೆ ಅನೇಕ ಮಂದಿ ಪಾಲ್ಗೊಳ್ಳುವುದನ್ನು ಸೂಚಿಸುತ್ತದೆ' ಎಂದು ಶಿಕಾರಿದಾರರೊಬ್ಬರು ಅಭಿಪ್ರಾಯಪಡುತ್ತಾರೆ.*

ಆದಿಮಾನವ ತನ್ನ ಹೋರಾಟಮಯ ಬದುಕಿನಲ್ಲಿ ಭೂಮಿಯ ಮೇಲೆ ಜನ್ಮವೆತ್ತಿದ ಬಳಿಕ ಕಲಿತ ಪ್ರಥಮ ಪಾಠ, ಮಾಡಿದ ಮೊದಲ ಕಾರ್ಯ ಬೇಟೆ. ಏಕೆಂದರೆ ಬದುಕುಳಿಯಲು ಬೇಕಾದ ಆಹಾರ ಸಂಗ್ರಹಣೆಯನ್ನು ಬೇಟೆಯ ಮೂಲದಿಂದಲೇ ಪಡೆಯಬೇಕಾದ ಅನಿವಾರ್ಯತೆ ಇತ್ತು. ಜೊತೆಗೆ ನಿಸರ್ಗದ ಮಡಿಲಲ್ಲಿಯೇ ವಾಸಿಸುತ್ತಿದ್ದುದರಿಂದ ದುಷ್ಟಪ್ರಾಣಿಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಕೂಡ ಬೇಟೆಯ ಅವಶ್ಯಕತೆಯಿತ್ತೆಂಬುದನ್ನು ಮರೆಯುವಂತಿಲ್ಲ. ಮಾನವನ ಸಾಂಸ್ಕೃತಿಕ ಇತಿಹಾಸದ ಮೊದಲ ಹೆಜ್ಜೆ ಬೇಟೆಯೇ ಆಗಿತ್ತು ಎಂಬುದು ವಿದಿತ. ಒಂದು ಕೋಟಿಗೂ ಅಧಿಕ ವರ್ಷಗಳನ್ನು ಮಾನವ ಬೇಟೆಯಾಡುತ್ತಲೇ ಕಳೆದನೆಂದು ತಿಳಿದುಬರುತ್ತದೆ. ಈ ಮೂಲಕ ಆತ ಓಡುವುದನ್ನು, ಗುರಿ ಇಡುವುದನ್ನು, ಹಾರುವುದನ್ನು, ಎಸೆಯುವುದನ್ನು, ಸುತ್ತುವುದನ್ನು, ಕೊಲ್ಲುವುದನ್ನು ಕಲಿತ. ಹೀಗೆ ಮೊದಮೊದಲು ಬದುಕಿಗೆ ಅನಿವಾರ್ಯವಾಗಿದ್ದ ಬೇಟೆ ಕ್ರಮೇಣ ಒಂದು ಖಯಾಲಿಯಾಗಿ, ಕ್ರೀಡೆಯಾಗಿ, ಯುದ್ಧಕಲೆಯಾಗಿ, ಮನೋರಂಜನೆಯಾಗಿ, ಜೀವನಾಧಾರವಾಗಿ, ಮೃಗಯಾವಿನೋದವಾಗಿ, ಪ್ರಾಚೀನ ಸಾಹಿತ್ಯದ ಅಷ್ಟಾದಶವರ್ಣನೆಗಳಲ್ಲಿ ಒಂದಾಗಿ ವಿವಿಧ ಆಯಾಮ ಪಡೆಯಿತು. ಪ್ರಾಗೈತಿಹಾಸಿಕ ಕಾಲದ ವರ್ಣಚಿತ್ರಗಳಲ್ಲಿ, ಸಿಂಧೂ ಸಂಸ್ಕೃತಿಯ ಮುದ್ರೆಗಳಲ್ಲಿ, ವೇದಗಳಲ್ಲಿ, ಶಿಷ್ಟಕಾವ್ಯಗಳಲ್ಲಿ ಬೇಟೆಯ ಉಲ್ಲೇಖಗಳು ಸಿಕ್ಕುತ್ತವೆ.

**ಬೇಟೆಯಾಡುವ ಸಮುದಾಯ :**

ಬೇಟೆಯೇ ಬದುಕಾಗಿದ್ದ ಜಾತಿಗಳೆಂದರೆ ಬೇಡರು ಮತ್ತು ಹಕ್ಕಿಪಿಕ್ಕಿಗಳು. ಇವರಿಗೆ ಇದು

ಕುಲವೃತ್ತಿ. ಈಗ ಬದಲಾದ ಸಾಮಾಜಿಕ ಪರಿಸ್ಥಿತಿಗನುಗುಣವಾಗಿ ಮೇಲೆ ಉಲ್ಲೇಖಿಸಿದ ಸಮುದಾಯಗಳಲ್ಲೂ ಸಾಮಾಜಿಕ ಪರಿವರ್ತನೆಯಾಗಿದ್ದು ಈ ವೃತ್ತಿಯೊಂದನ್ನೇ ನಂಬಿ ಕುಳಿತಿಲ್ಲ. ಉಳಿದಂತೆ ಬೇಟೆಯ ಖಯಾಲಿ ಇರುವ ಗ್ರಾಮೀಣ ಪ್ರದೇಶದ ಮಾಂಸಾಹಾರಿಗಳೆಲ್ಲ ಬೇಟೆಯಾಡುವರು. ಮಲೆನಾಡಿಗರಲ್ಲಿ ಇದರ ಗೀಳು ಹೆಚ್ಚು. ವಿಶೇಷವಾಗಿ ಈ ಪ್ರದೇಶದ ಒಕ್ಕಲಿಗ ಸಮುದಾಯದವರು ಒಂದು ಕಾಲದಲ್ಲಿ ಕೃಷಿ ಮತ್ತು ಕ್ಷಾತ್ರಗಳೆರಡರಲ್ಲೂ ಸಮರ್ಥರಾಗಿದ್ದುದರಿಂದ ತಲತಲಾಂತರದಿಂದ ಬಂದ ಬೇಟೆಯ ಸಾಧನಗಳನ್ನು ಹೊಂದಿದ್ದಾರೆ. ಹಾಗಾಗಿ ಇವರು ಬೇಟೆಗೆ ವಿಶಿಷ್ಟ ಸ್ಥಾನ ನೀಡಿದ್ದಾರೆ.

**ಬೇಟೆಯ ಬಗೆ :**

ಬೇಟೆಯಲ್ಲಿ ಹಲವು ಬಗೆ - ಪ್ರಾಣಿ ಬೇಟೆ, ಪಕ್ಷಿ ಬೇಟೆ, ಮೀನು ಬೇಟೆ, ಏಡಿ ಬೇಟೆ, ಜೇನು ಬೇಟೆ ಮುಂತಾದುವು. ಈ ಬೇಟೆಗಳೆಲ್ಲ ಮನುಷ್ಯನ ನಾಲಗೆಯ ಚಪಲವನ್ನು ಪೂರೈಸಲು ಹುಟ್ಟಿಕೊಂಡಂಥವು. ಕೆಲವೊಂದು ಪ್ರಾಣಿಗಳ ಚರ್ಮಕ್ಕಾಗಿಯೂ ಬೇಟೆಯಾಡುವುದುಂಟು. ಹಾಗೆಯೇ ದುಷ್ಟ ಮೃಗಗಳ ಉಪಟಳವನ್ನು ಹತ್ತಿಕ್ಕಲೂ ಇದಕ್ಕೆ ಬೆಂಬಲಿಸುವುದಿದೆ.

ಪ್ರಾಣಿ ಬೇಟೆಗೆ ಬಲಿಯಾಗುವ ಪ್ರಾಣಿಗಳೆಂದರೆ ಕಾಡುಕುರಿ, ಜಿಂಕೆ, ಸಾರಗ, ಕಡವೆ, ಬರ್ಕ, ಮೊಲ, ಕಾಡುಹಂದಿ, ಮುಳ್ಳುಹಂದಿ, ಚಿಪ್ಪಿನ ಹಂದಿ, ಮುಸಿಯ, ಕಬ್ಬೆಕ್ಕು, ಪುಣಗಿನಬೆಕ್ಕು, ಹಾರ್‌ಬೆಕ್ಕು, ಮೊಲ, ಇಲಿ, ಹೆಗ್ಗಣ, ಉಡ ಇತ್ಯಾದಿ.

ಮಲೆನಾಡಿನಲ್ಲಿ ವೈವಿಧ್ಯಮಯವಾದ ಪ್ರಾಣಿಗಳಿರುತ್ತವೆ. ಇಲ್ಲಿಯ ಬೇಟೆಯೂ ವೈವಿಧ್ಯಮಯ. ಬೇಟೆಯಾಡುವವರಿಗೆ ಅಥವಾ ಬೇಟೆಯನ್ನೇ ಆಧರಿಸಿ ಜೀವನ ಸಾಗಿಸುವವರಿಗೆ ಇದಕ್ಕಾಗಿ ನಿರ್ದಿಷ್ಟ ಕಾಲವೇನೂ ಇರುವುದಿಲ್ಲ. ಹಗಲೆನ್ನದೆ ಇರುಳೆನ್ನದೆ ಬಿಸಿಲು - ಮಳೆಗಳನ್ನು ಲೆಕ್ಕಿಸದೆ ಆಯಾಯ ಕಾಲಮಾನದಲ್ಲಿ ಯಾವ ಪ್ರಾಣಿಯ ಬೇಟೆ ಸೂಕ್ತವೆಂಬುದನ್ನು ತಮ್ಮ ದೀರ್ಘ ಅನುಭವದ ಮೂಲಕ ಕಂಡುಕೊಂಡು ವಿವಿಧ ಬೇಟೆಗಳಲ್ಲಿ ತೊಡಗುವುದು ಸಾಮಾನ್ಯ. ಸೆಪ್ಟೆಂಬರ್ ತಿಂಗಳಿನಿಂದ ಜನವರಿ ತಿಂಗಳವರೆಗೆ ಪ್ರಾಣಿ ಬೇಟೆಯ ಚಟುವಟಿಕೆಗಳು ತೀವ್ರವಾಗಿರುತ್ತವೆ.

ಬೇಟೆಯಲ್ಲಿ ಪಾಲ್ಗೊಳ್ಳುವವರ ಸಂಖ್ಯೆ, ಕಾಲ ಮತ್ತು ಪ್ರಾಣಿಯ ಗಾತ್ರವನ್ನು ಮಾನದಂಡವಾಗಿಟ್ಟುಕೊಂಡು ಸ್ಥೂಲವಾಗಿ ಎರಡು ವಿಧಗಳನ್ನು ಗುರುತಿಸಲಾಗುವುದು. 1) ದೊಡ್ಡ ಬೇಟೆ, 2) ಸಣ್ಣ ಬೇಟೆ. ಇವುಗಳಲ್ಲಿ ದೊಡ್ಡ ಬೇಟೆಯನ್ನು 'ಆಲುಬೇಟೆ' ಎಂದು ಸಕಲೇಶಪುರ ಭಾಗದಲ್ಲಿ ಕರೆಯುತ್ತಾರೆ. ಪ್ರಾಚೀನ ಸಾಹಿತ್ಯದಲ್ಲಿ ಇದು ಪೆರ್ವೇಂಟೆ ಎಂದು ಉಕ್ತವಾಗಿದೆ. ಸಣ್ಣ ಬೇಟೆಗೆ ಪೊಣುಗುಬೇಟೆ ಎಂಬ ಹೆಸರೂ ರೂಢಿಯಲ್ಲಿದೆ. ಇದು ಕಾವ್ಯಗಳು ನಿರೂಪಿಸುವ ಕಿರುವೇಂಟೆ.

**ದೊಡ್ಡ ಬೇಟೆ** : ದೊಡ್ಡ ಬೇಟೆಗೆ ಪ್ರಾಣಿ ಬೇಟೆಗಳಲ್ಲಿಯೇ ವಿಶೇಷ ಮಹತ್ವವಿದೆ. ಇದು ಸಾಮೂಹಿಕ ಬೇಟೆ. ಈ ಬೇಟೆಯ ಸಿದ್ಧತೆಗಳೂ ಅಪೂರ್ವವಾಗಿರುತ್ತವೆ. ಇದರಲ್ಲಿ ಹಲವಾರು

ಮಂದಿ ಪಾಲ್ಗೊಳ್ಳುವುದರಿಂದ ಬೇಸಿಗೆಯ ಬೆಳುದಿಂಗಳನ್ನೇ ಆಯ್ಕೆ ಮಾಡಿಕೊಳ್ಳಲಾಗುವುದು. ಸಕಲೇಶಪುರ ಭಾಗದಲ್ಲಿ ಒಂದು ವಾರದವರೆಗೆ ದೊಡ್ಡ ಬೇಟೆ ಕೈಗೊಳ್ಳುತ್ತಾರೆ. ಚಿಕ್ಕಬೇಟೆಗೆ ಕಾಲನಿರ್ದಿಷ್ಟವಿಲ್ಲ. ಹವ್ಯಾಸಿಗಳು ಮನ ಬಂದಾಗ ಹೋಗಿ ಬರಬಹುದು. ಇದು ಒಬ್ಬರು ಅಥವಾ ಇಬ್ಬರು ಸೇರಿ ಹೋಗುವ ಬೇಟೆಯಾಗಿದ್ದು ಕರಿದಿಂಗಳಲ್ಲಿ ನಡೆಯುತ್ತದೆ. ಮಲೆನಾಡಿನಲ್ಲಿ ದೀಪಾವಳಿ ಯುಗಾದಿ ಮೊದಲಾದ ಪ್ರಮುಖ ಹಬ್ಬಗಳಲ್ಲಿ ಐದಾರು ಜನರು ಗುಂಪಾಗಿ ಹಗಲು ಹೊತ್ತಿನಲ್ಲಿ 'ಹೊಡ ಬೇಟೆ'ಯಾಡುತ್ತಾರೆ. ಬೇಸಿಗೆ ಮತ್ತು ಚಳಿಗಾಲ ಬೇಟೆಯಾಡಲು ಸೂಕ್ತ ಕಾಲವಾದರೂ ಇದೂ ಕೂಡ ಕರಿದಿಂಗಳಲ್ಲಿಯೇ ನಡೆಯುವುದೆಂಬುದನ್ನು ಗಮನಿಸಬೇಕು. ಬೇಡರು ಯುಗಾದಿ ಹಬ್ಬದ ಮರುದಿನ ಮತ್ತು ಜಾತ್ರೆಯಲ್ಲಿ ಅಡವಿಗೆ ಹೋಗಿ ಹಂದಿಬೇಟೆ ಯಾಡಲೇಬೇಕೆಂಬ ನಿಯಮವಿದೆ. ಆದುದರಿಂದ ಸಾಂಕೇತಿಕವಾಗಿಯಾದರೂ ಅಂದು ಬೇಟೆಯಾಡಿ ಹಂದಿ ಸಿಕ್ಕದಿದ್ದಲ್ಲಿ ಒಂದು ಚಿಕ್ಕಪ್ರಾಣಿಯನ್ನಾದರೂ ಹೊಡೆದು ತರುತ್ತಾರೆ. ಬೇಟೆಗೆ ಹೋಗುವಾಗ ಉರಿಮೆ, ತಮಟೆ ಬಾರಿಸಿಕೊಂಡು ಹೋಗುತ್ತಾರೆ. ಹೀಗೆ ಹೋಗುವವರಿಗೆ ವೀಳ್ಯ ಕೊಟ್ಟು ಕಳಿಸುವುದು, ಹಿಂದುರುಗಿದ ಬಳಿಕ ಆರತಿ ಎತ್ತುವುದು ಬೇಡರಲ್ಲಿ ಸಂಪ್ರದಾಯವಾಗಿದೆ.

''ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್'' ಎಂಬಂತೆ ಬೇಟೆಗಾರರು ಯಾವ ವಿಶ್ವವಿದ್ಯಾನಿಲಯವನ್ನು ಹತ್ತದೇ ಪ್ರಾಣಿಶಾಸ್ತ್ರಜ್ಞರಾಗಿರುತ್ತಾರೆ. ಯಾವ ಪ್ರಾಣಿ ಯಾವಾಗ ಚಟುವಟಿಕೆಯಿಂದಿರುತ್ತದೆ, ಯಾವಾಗ ಹೊರಗೆ ಬರುತ್ತದೆ, ಯಾವ ಆಹಾರ ಪ್ರಿಯವಾದುದು, ಯಾವಾಗ ಪುಷ್ಟಿಯಾಗಿ ಬೆಳೆದಿರುತ್ತದೆ ಇತ್ಯಾದಿ ಅಂಶಗಳನ್ನು ಬಲ್ಲವರಾಗಿರುತ್ತಾರೆ. ಆದುದರಿಂದ ಬೇಟೆಯ ತಂತ್ರವನ್ನು ಆಯಾ ಪ್ರಾಣಿಯ ಸ್ವಭಾವಕ್ಕನುಗುಣವಾಗಿ ರೂಪಿಸಿಕೊಂಡಿರುತ್ತಾರೆ. ಉದಾಹರಣೆಗೆ ಮಲೆನಾಡಿನ ಕಬ್ಬೆಕ್ಕು ಮತ್ತು ಹಾರ್‌ಬೆಕ್ಕುಗಳು ರಾತ್ರಿ ಎಂಟರಿಂದ ಹನ್ನೆರಡು ಗಂಟೆಯವರೆಗೆ ಮರ ಹತ್ತಲು ಬರುತ್ತವೆಂಬುದನ್ನು ಅರಿತವರಾಗಿರುವುದರಿಂದ ಇವುಗಳ ಬೇಟೆಗೆ ಆ ಹೊತ್ತನ್ನೇ ಆಯ್ಕೆಮಾಡಿಕೊಳ್ಳುತ್ತಾರೆ. ಹುಲಿಗೆ ಕಿವಿ, ಕಣ್ಣು ಸೂಕ್ಷ್ಮ, ಹಂದಿಗೆ ಮೂಗು ಸೂಕ್ಷ್ಮ, ಕಾಡಿನಲ್ಲಿ ಹಣ್ಣುಗಳು ಉದುರಿದ್ದರೆ ಅದನ್ನು ತಿನ್ನಲು ಜಿಂಕೆಗಳು ಬರುತ್ತವೆ, ಕಾಡುಹಂದಿ ಕಬ್ಬಿನ ಗದ್ದೆಗೆ ಬರುತ್ತದೆ. ಕಾಡುಕುರಿಗಳು ಚೂರಿಕಾಯಿ, ಕಣಗಲು ಹಣ್ಣು, ಚುಂಗೋಳಿ ಹಣ್ಣು, ಅಮಟೆಹಣ್ಣು ತಿನ್ನಲು ಬರುತ್ತವೆ, ಹಾರ್‌ಬೆಕ್ಕು ಭತ್ತ ತಿನ್ನಲು ಬರುತ್ತದೆ, ಉಡ ಸಿಕ್ಕಿದಾಗ ಅದರ ಕಾಲು ಕೈ ಕತ್ತರಿಸಿ ತರಬೇಕು. ಚಿಪ್ಪಿನ ಹಂದಿ ಹೊಡೆದಾಗ ಅದು ಮುದುರಿಕೊಳ್ಳುವುದು, ಅದರಿಂದ ಅದನ್ನು ತೆಗೆದುಕೊಂಡು ಬರುವಾಗ ಹೊಡೆಯುತ್ತಲೇ ಬರಬೇಕು, ಮಳೆಗಾಲವು ಮೀನು ಶಿಕಾರಿಗೆ ಪ್ರಶಸ್ತವಾದುದು ಇತ್ಯಾದಿ ಇತ್ಯಾದಿ ಹತ್ತಾರು ಸಂಗತಿಗಳ ಜ್ಞಾನ ಬೇಟೆಗಾರರಿಗಿರುತ್ತದೆ. ಆದುದರಿಂದ ಆಯಾ ಪ್ರಾಣಿಯನ್ನನುಸರಿಸಿ ಬೇಟೆಯಾಡುವ ಕಾಲದಲ್ಲಿಯೂ ವ್ಯತ್ಯಾಸವಾಗುತ್ತದೆ.

**ಬೇಟೆಯ ಸಿದ್ಧತೆ :**

ಬೇಟೆಯನ್ನೇ ಬದುಕಾಗಿಸಿಕೊಂಡವರಲ್ಲಿ ಬೇಟೆಯ ಸಿದ್ಧತೆ ಪ್ರತ್ಯೇಕವಾಗಿ ಕಂಡುಬರುವುದಿಲ್ಲ. ಹಕ್ಕಿಪಿಕ್ಕಿಗಳು ಬಿಲ್ಲುಬಾಣವನ್ನು, ಬೇಡರು ಗುರಾಣಿ, ಈಟಿ ಮೊದಲಾದುವನ್ನು ತೆಗೆದುಕೊಂಡು

ಹೊರಡುವುದು ಒಂದು ಕಾಲದಲ್ಲಿ ನಿತ್ಯದ ವೃತ್ತಿಯಾಗಿತ್ತು. ಹಾಗಾಗಿ ಬೇಟೆಯ ಸಿದ್ಧತೆ, ಸಂಭ್ರಮಗಳು ನೈಜವಾಗಿ ಉಳಿದಿರುವುದು ಮಲೆನಾಡಿನ ದೊಡ್ಡಬೇಟೆ ಅಥವಾ ಆಲುಬೇಟೆಯಲ್ಲಿ. ರೈತಾಪಿ ಜನರಿಗೆ ಬೇಸಿಗೆ ಕಾಲದಲ್ಲಿ ಕೃಷಿಕಾರ್ಯಕ್ಕೆ ಸ್ವಲ್ಪ ಮಟ್ಟಿನ ಬಿಡುವು ದೊರೆಯುವುದರಿಂದ ಆ ಸಮಯವನ್ನು ಆಮೋದ ಪ್ರಮೋದಗಳಲ್ಲಿ ಕಳೆಯಲು ಇಚ್ಛಿಸುತ್ತಾರೆ. ಶಿಕಾರಿ ಖಯಾಲಿ ಇರುವವರೆಲ್ಲ ದೊಡ್ಡ ಬೇಟೆ ಹೋಗಲು ಯೋಚಿಸುತ್ತಾರೆ. ಕೆಲವೊಮ್ಮೆ ಹಬ್ಬವಾದ ಬಳಿಕವೂ ಹೀಗೆ ಬೇಟೆ ಹೋಗುವುದುಂಟು. ಮೊದಲು ಯಾರಾದರೊಬ್ಬರು ಮುಂದಾಳತ್ವ ವಹಿಸಿಕೊಂಡು ಆಸಕ್ತರನ್ನೆಲ್ಲ ಒಂದೆಡೆ ಸಭೆ ಸೇರಿಸಿ ಬೇಟೆಯ ದಿನ ಮತ್ತು ಹೋಗುವ ಸ್ಥಳದ ಬಗ್ಗೆ ಚರ್ಚಿಸುವರು. ಅನಂತರ ಜೋಯಿಸರಿಂದ ಶುಭದಿನವನ್ನು ಕೇಳಿ ಹೊರಡುವ ಸಮಯವನ್ನು ನಿಗದಿಗೊಳಿಸುವರು. ದೊಡ್ಡ ಬೇಟೆಗೆ ೨೫-೧೫೦ ಜನರು ಸೇರುತ್ತಾರೆ. ಬೇಟೆಯ ಅವಧಿ ಒಂದು ವಾರದವರೆಗಿರುತ್ತದೆ. ಚಿಕ್ಕ ಬೇಟೆಗಳಾದರೆ ಒಂದು ದಿನದ ಮಟ್ಟಿಗೆ ನಡೆಯುವುದರಿಂದ ರೊಟ್ಟಿ ಅಥವಾ ಮೊಸರನ್ನವನ್ನು ಬುತ್ತಿ ಕಟ್ಟಿಕೊಂಡು ಹೋಗುತ್ತಾರೆ. ಆದರೆ ದೊಡ್ಡ ಬೇಟೆ ಸುದೀರ್ಘವೂ, ಸುದೂರವೂ ಆಗಿರುವುದರಿಂದ ಆಹಾರದ ಕಡೆಗೂ ಗಮನವೀಯಬೇಕಾಗುತ್ತದೆ. ಹಾಗಾಗಿ ಇಲ್ಲಿ ಸಿದ್ಧ ಅಡುಗೆಯನ್ನು ಕೊಂಡೊಯ್ಯದೆ ತಂತಮ್ಮ ಮನೆಗಳಿಂದ ಅಕ್ಕಿ, ಉಪ್ಪು, ಕಾರದಪುಡಿ, ಅರಿಶಿನ ಮೊದಲಾದ ಸಾಮಗ್ರಿಗಳನ್ನೂ ಅಡುಗೆಗೆ ಬೇಕಾದ ಪಾತ್ರೆಗಳನ್ನು ಕೊಂಡೊಯ್ಯುವರು. ಕಾಡಿನಲ್ಲಿ ಗಂಜಿಯೂಟವೆ ಇವರ ಆಹಾರ. ಸಣ್ಣ ಪುಟ್ಟ ಪ್ರಾಣಿಗಳನ್ನು ಬೇಟೆಯಾಡಿದರೆ ಅದನ್ನು ಬೇಯಿಸಿ ಉಪ್ಪುಕಾರ ಹಾಕಿ ಹುರಿತುಂಡು (Fry) ಮಾಡಿಕೊಂಡು ಊಟ ಮಾಡುವರು.

ದೊಡ್ಡ ಬೇಟೆಯಲ್ಲಿ ನಿರತರಾದವರೆಲ್ಲ ಒಳ್ಳೆಯ ಈಡುಗಾರರಾಗಿರುತ್ತಾರೆಂದು ಭಾವಿಸುವಂತಿಲ್ಲ. ಶಿಕಾರಿಯ ಮೋಹ, ಕಾಡುಮಾಂಸದ ರುಚಿಯ ಆಕರ್ಷಣೆಯಿಂದಾಗಿ ಬೇಟೆಗಾರರಿಗೆ ಸಹಾಯಕರಾಗಿಯೂ ಕೆಲವರು ತಂಡದೊಡನೆ ತೆರಳುವರು. ಬೇಟೆಯ ಸಂದರ್ಭದಲ್ಲಿ ಇವರು ಅಡುಗೆ ಮಾಡುವುದು, ನೀರು ತರುವುದು, ಹಸಿಗೆ ಮಾಡುವುದು ಮೊದಲಾದ ಕಾರ್ಯವನ್ನು ನಿರ್ವಹಿಸುತ್ತಾರೆ.

**ಬೇಟೆಯ ಸಾಧನ :**

ದೊಡ್ಡ ಬೇಟೆ ಏರ್ಪಾಟಾದ ಕೂಡಲೇ ಶಿಕಾರಿಗೆ ಬೇಕಾದ ಸಾಧನಗಳೆಲ್ಲ ಹೊರಬರುತ್ತವೆ. ಹಕ್ಕಿಪಿಕ್ಕಿಗಳು ನಿತ್ಯದಲ್ಲಿ ಬಿಲ್ಲುಬಾಣ ಹೆಚ್ಚಾಗಿ ಬಳಸಿದರೆ ಬೇಡರು ಭರ್ಜಿ, ಕತ್ತಿ, ಕೊಡಲಿ, ಗಂಡುಗೊಡಲಿ, ಚಿಪ್ಪುಗೊಡಲಿ, ಕುಡುಗೋಲು, ಈಟಿ, ಕೋವಿ, ಮುಚ್ಚುಗಳನ್ನು ಉಪಯೋಗಿಸುವರು. ಮಲೆನಾಡಿನಲ್ಲಿ ಕೇಪಿನ ಕೋವಿ, ತೋಟಕೋವಿ, ಕತ್ತಿ, ಕುಡುಗೋಲು ದಂಡ, ಕಲ್ಲು, ಹಾರೆ, ಭರ್ಜಿ, ಕೊಡಲಿ, ಖಡ್ಗ, ಕಠಾರಿ ಈ ಆಯುಧಗಳನ್ನು ದೊಡ್ಡಬೇಟೆಗೆ ತೆಗೆದುಕೊಂಡು ಹೋಗುವರು. ಬಹಳ ಹಿಂದೆ ಬತ್ತಿಕೋವಿ ಬಳಸುತ್ತಿದ್ದರಂತೆ. ಇದಕ್ಕೆ ಇಬ್ಬರ ಸಹಾಯ ಬೇಕಾಗುತ್ತದೆ. ಒಮ್ಮೆ ಬೇಟೆಯ ದಿನ ನಿಗದಿಯಾಯಿತೆಂದರೆ ಕೋವಿಗಳನ್ನು ಹೊರತೆಗೆದು ಗಂಧದ ಪ್ರಧೂಮನೋಪಚಾರ ನೀಡುವರು. ಕೇಪಿನ ಕೋವಿಗೆ ಚರೆ, ಮಸಿ, ಕೇಪು, ನಾರು

ಇವುಗಳನ್ನು ತುಂಬಿಕೊಳ್ಳುವರು. ಕತ್ತಿ, ಕುಡುಗೋಲು, ದೊಣ್ಣೆ, ಟಾರ್ಚು ಇವೇ ಮೊದಲಾದುವನ್ನು ಜೋಡಿಸಿಕೊಳ್ಳುವರು. ಬಹಳ ಹಿಂದೆ ದೊಡ್ಡಬೇಟೆಯಲ್ಲಿ ಬಿಲ್ಲು ಬಾಣ ತೆಗೆದುಕೊಂಡು ಹೋಗುತ್ತಿದ್ದರಂತೆ.

**ಬೇಟೆಯ ಉಡುಗೆ :**

ಬೇಟೆಗೆ ತೆರಳುವಾಗ ಕಪ್ಪು ಬಣ್ಣದ ಅಂಗಿ ಮತ್ತು ಈಗಿನ ಕಾಲಕ್ಕೆ ಹೊಂದುವ ಕಪ್ಪು ಬಣ್ಣದ ಪ್ಯಾಂಟು ಅಥವಾ ಚಡ್ಡಿ ತೊಟ್ಟುಕೊಳ್ಳುವರು. ಕೆಲವರು ಕಪ್ಪು ಉಡುಪಿನ ಬದಲು ಕಾಕಿ ಬಟ್ಟೆ ಧರಿಸಿ ಕೈಯಲ್ಲಿ ಬಂದೂಕು, ಬಗಲಲ್ಲಿ ಚೀಲ, ಸೊಂಟಕ್ಕೆ ಕತ್ತಿ ಸಿಕ್ಕಿಸಿಕೊಳ್ಳುವರು. ಸಹಾಯಕ್ಕೆ ಹೋದವರು ಹೆಗಲ ಮೇಲೆ ಕಂಬಳಿ ಹಾಕಿಕೊಂಡಿರುತ್ತಾರೆ. ಹಿಂದೆಲ್ಲ ಮೋಟು ಪಂಚೆ, ಅಂಗಿ ತೊಟ್ಟು, ಕಂಬಳಿಯನ್ನು ತಲೆಯಿಂದ ಇಳಿ ಬಿಡುತ್ತಿದ್ದರೆಂದು ತಿಳಿದುಬರುತ್ತದೆ.

ಬೇಟೆಗೆ ಗೊತ್ತಾದ ತಾಣ ಸಮೀಪದಲ್ಲಿದ್ದರೆ ಕಾಲ್ನಡಿಗೆಯಲ್ಲಿಯೇ ತೆರಳುತ್ತಾರೆ. ಈಚೆಗೆ ಕಾಡುಗಳು ಬೋಳಾಗುತ್ತಿರುವುದರಿಂದ ಜೀಪಿನಲ್ಲಿ ದೂರದ ಅರಣ್ಯಗಳಿಗೆ ಹೋಗುತ್ತಾರೆ. ಊರಾಚೆಯಿರುವ ಶಾಲಾಕಟ್ಟಡದಲ್ಲೋ, ಮನೆಗಳಲ್ಲಿಯೋ ಆಶ್ರಯ ಪಡೆದುಕೊಂಡು ಬೇಟೆಯಾಡಿ ಬರುವುದೂ ಉಂಟು.

**ಬೇಟೆ ದೇವರು :**

ಜನಪದರು ಯಾವುದೇ ಕೆಲಸವನ್ನು ಆರಂಭಿಸುವ ಮೊದಲು ದೇವರಿಗೆ ಪ್ರಾರ್ಥಿಸಿಕೊಳ್ಳದೆ ಇರುವುದಿಲ್ಲ. ಸಕಲೇಶಪುರ ಭಾಗದಲ್ಲಿ ಅರಣ್ಯ ಪ್ರವೇಶಿಸುವ ಮೊದಲು ಪಂಜರವಳ್ಳಿ ದೈವಗಳನ್ನು ಸ್ಮರಿಸಿಕೊಂಡು ಬೇಟೆಗೆ ಕೊಂಡೊಯ್ಯಲಿರುವ ಸಾಧನಗಳನ್ನೆಲ್ಲ ಒಂದೆಡೆ ಇಟ್ಟು ಪೂಜಿಸಿ 'ಒಳ್ಳೆಯ ಬೇಟೆ ಸಿಕ್ಕಲಿ' ಎಂದು ಪ್ರಾರ್ಥಿಸಿಕೊಳ್ಳುವರು. ಯಾವುದೇ ಅಡ್ಡಿ ಆತಂಕಗಳು ಒದಗದಿರಲೆಂದು ಮಂತ್ರವಾದಿಗಳಿಂದ "ತಡೆ ಒಡೆಸುವರು". ಅನಂತರ ಕಾಡಿನ ದೇವತೆಯಾದ ಕಾಡ್ಲ ಒಡೆಯ ಮತ್ತು ಚೌಡಿಯನ್ನು ಹಣ್ಣು ಕಾಯಿ ಇಟ್ಟು ಪೂಜಿಸುವರು. ವರ್ಷಕ್ಕೊಮ್ಮೆ 'ಬೇಟೆ ಮಂಜ' ಎಂಬ ಬೇಟೆ ದೇವತೆಯನ್ನು ಪ್ರಾರ್ಥಿಸಿಕೊಳ್ಳುವರು.

ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ, ಚಿಕ್ಕಮಗಳೂರು ಭಾಗದಲ್ಲಿ ಬೇಟೆ ದೇವರಾದ "ಬೇಟೆ ರಂಗ"ನನ್ನು ಪೂಜಿಸುವರು. ಕಾಡಿಗೆ ಹೋಗುವ ಮೊದಲು ಅರಣ್ಯ ದ್ವಾರದಲ್ಲಿ ಕಲ್ಲಿನಿಂದ ನಿರ್ಮಿಸಿದ ಹಂದಿಯಾಕಾರದ ಬೇಟೆರಂಗನ ಮೂರ್ತಿಗಳನ್ನು ಸ್ಥಾಪಿಸಿ ಪೂಜೆ ಸಲ್ಲಿಸುವರು. ಆ ಸಮಯದಲ್ಲಿ "ನಿನ್ನ ಹಾಗೆ ನಿನ್ನ ಮಕ್ಕಳು, ಮೊಮ್ಮಕ್ಕಳು ನಮಗೆ ಸಿಕ್ಕುತ್ತಿರಲಿ" ಎಂದು ಬೇಡಿಕೊಳ್ಳುವರು. ಬೇಟೆಯ ಸಮಯದಲ್ಲಿ ಹಂದಿಯೇ ಸಿಕ್ಕಿದಲ್ಲಿ, ಅದರ ತಲೆಯನ್ನು ಕತ್ತರಿಸಿ, ಬೇಟೆರಂಗನ ಮುಂದಿಟ್ಟು, ಅದರ ಮುಸುಡಿಗೆ ಹತ್ತಿಯ ಬತ್ತಿ ಇಟ್ಟು ಹಂದಿಯ ಕೊಬ್ಬಿನಿಂದಲೇ ದೀಪ ಹಚ್ಚುವ ಸಂಪ್ರದಾಯವಿದೆ. ಹೀಗೆಯೇ ಬೇಟೆ ಸಿಕ್ಕುತ್ತಿದ್ದರೆ ಪೂಜೆ ಮಾಡುವುದಾಗಿ, ಮತ್ತೊಮ್ಮೆ ಹಿಂದಿನ ರೀತಿಯಲ್ಲಿ ಹೇಳಿ ಧೂಪ ಹಾಕುತ್ತಾರೆ. ಕೊಡಗಿನ ಕಡೆ ಬೇಟೆಗೆ ಮುನ್ನ

ಮಣ್ಣಿನಿಂದ ಮಾಡಿದ ಹುಲಿ, ನಾಯಿ, ಕುದುರೆಗಳನ್ನು ಪೂಜೆಗೈಯುವರು. ಈ ಮೂರ್ತಿಗಳನ್ನೇ ಅವರು ಅಯ್ಯಪ್ಪ ದೇವರೆಂದು ಕರೆಯುತ್ತಾರೆ.[೨]

**ಬೇಟೆಯ ನಂಬಿಕೆ ಮತ್ತು ಸಂಪ್ರದಾಯಗಳು :**

ಬೇಟೆ ದೇವರುಗಳಿಗೆ ಹೊತ್ತುಕೊಳ್ಳುವ ಹರಕೆಯೂ ವಿಶಿಷ್ಟವಾಗಿರುತ್ತದೆ. ಹಂದಿ, ಸಾರಗದಂಥ ದೊಡ್ಡ ಪ್ರಾಣಿಗಳು ಸಿಕ್ಕಿದರೆ "ಈರಿಕೋಲು" ಸಲ್ಲಿಸುವುದಾಗಿ ಹೇಳಿಕೊಳ್ಳುವರು. ಕೆಲವರು 'ಹಿಡಿಖಂಡ' ನೀಡುವೆವು ಎಂದು ಪ್ರಾರ್ಥಿಸುವುದೂ ಉಂಟು.

ಶಿಕಾರಿ ಹೊರಟ ಸಮಯದಲ್ಲಿ ದಾರಿ ಶಕುನ ನೋಡುತ್ತಾರೆ. ಶುಭ ಶಕುನಗಳಾದರೆ ಒಳ್ಳೆಯ ಬೇಟೆ ಸಿಕ್ಕುತ್ತದೆ ಎಂದು ಭಾವಿಸಿ ಸಂತಸಪಡುತ್ತಾರೆ. ಸೌದೆ ಹೊರೆ ಎದುರಾದರೆ ಬೇರೆ ಸಂದರ್ಭಗಳಲ್ಲಿ ಅಪಶಕುನ. ಆದರೆ ಬೇಟೆಯಲ್ಲಿ ಇದು ಶುಭಶಕುನ. ಯಾವುದಾದರೂ ದೊಡ್ಡ ಪ್ರಾಣಿಯೇ ಸಿಕ್ಕುವುದೆಂದು ಲೆಕ್ಕಹಾಕುತ್ತಾರೆ. ಬೇಟೆಗೆ ಸಂಬಂಧಿಸಿದ ಹಾಗೆ ಅನೇಕ ನಂಬಿಕೆಗಳು ವಿಧಿನಿಷೇಧಗಳು ಮನೆಮಾಡಿವೆ. ಬೇಟೆಗೆ ಹೊರಡುವ ಹಿಂದಿನ ರಾತ್ರಿ ಸ್ವಪ್ನದಲ್ಲಿ ಅಳಿದ ಹಿರಿಯರು ಕಾಣಿಸಿಕೊಂಡರೆ, ಹಾಗೆಯೇ ಹುಣಿಸೆಹಣ್ಣು ಅಥವಾ ಹೊಗೆಸೊಪ್ಪು ಕನಸಿನಲ್ಲಿ ಕಂಡರೆ ಬೇಟೆ ಚೆನ್ನಾಗಿ ಆಗುವುದೆಂದು ನಂಬುತ್ತಾರೆ. ಇದೇ ರೀತಿ ಹೊರಡುವ ಸಮಯದಲ್ಲಿ ಒಂಟಿ ಸೀನು ಸೀನಬಾರದು, ಮೈಮುರಿಯಬಾರದು, ಕೋವಿ ಕೆಳಗೆ ಮಾಡಿ ನಡೆಯಬಾರದು ಎಂಬ ನಿಷೇಧಗಳಿವೆ. ಶಿಕಾರಿ ಹೊರಟವರ ಪೈಕಿ ಯಾರಿಗಾದರೂ ಆಕಸ್ಮಿಕವಾಗಿ ಸೂತಕ ಸಂಭವಿಸಿದರೆ ಅಂಥವರು ತಮ್ಮ ಪಯಣವನ್ನು ನಿಷೇಧಿಸಬೇಕೆಂಬ ನಿಯಮವಿದೆ. ಹಾಗೆಯೇ ಬಿಳಿಯ ಬಟ್ಟೆ ಧರಿಸಿ ಬೇಟೆಗೆ ಹೋಗಬಾರದೆಂಬ ನಂಬಿಕೆಯಿದೆ. ಶಿಕಾರಿ ಬಲ್ಲವರಿಗೆ ಇದರಲ್ಲಿ ಸತ್ಯವಿದೆಯೆಂದು ಅನ್ನಿಸದಿರದು. ಗಂಡ ಬೇಟೆಗೆ ಹೋದಾಗ ಮನೆಯಲ್ಲಿದ್ದ ಹೆಂಡತಿ ತಲೆಗೆ ಎಣ್ಣೆ ಹಾಕಬಾರದು, ಆತನ ಕುಟುಂಬದವರು ಮಾಂಸದ ಅಡುಗೆ ಸೇವಿಸಬಾರದೆಂಬ ನಂಬಿಕೆಗಳಿವೆ. ಇಂಥ ನಂಬಿಕೆಗಳಿಗೆ ವೈಜ್ಞಾನಿಕ ಆಧಾರಗಳಿಲ್ಲ. ಇವು ಪುರುಷ ಪ್ರಾಧಾನ್ಯತೆಯನ್ನು ಸೂಚಿಸುತ್ತವೆ. ತೀರ್ಥಹಳ್ಳಿ ಭಾಗದಲ್ಲಿ ಬೇಟೆಗೆ ಹೋಗುವಾಗ ಉಪ್ಪು, ಸುಣ್ಣ ತೆಗೆದುಕೊಂಡು ಹೋಗಬೇಕು, ಕೋವಿಯನ್ನು ಹೆಬ್ಬಾಗಿಲು ದಾಟುವವರೆಗೆ ಹೆಗಲಿಗೇರಿಸಬಾರದು ಮೊದಲಾದ ನಂಬಿಕೆಗಳಿವೆ. ಈ ರೀತಿ ದೊಡ್ಡ ಬೇಟೆಗೆ ವ್ಯಾಪಕವಾದ ಸಿದ್ಧತೆ ಮಾಡಿಕೊಂಡು, ಸಾಧನಗಳನ್ನು ತೆಗೆದುಕೊಂಡು, ಶಿಕಾರಿ ನಾಯಿಗಳನ್ನು ಜೊತೆಯಲ್ಲಿಟ್ಟುಕೊಂಡು ಬೇಟೆಗೆ ನಾಂದಿ ಹಾಡುವರು.

**ಬೇಟೆಯಾಡುವ ಕ್ರಮ :**

ಬೇಟೆಯ ತಂಡದ ಮುಖಂಡ ಯಾರು ಯಾರು ಎಲ್ಲಿ ನಿಲ್ಲಬೇಕು, ಏನು ಮಾಡಬೇಕು ಎಂಬುದನ್ನು ಸೂಚಿಸುತ್ತಾನೆ. ಕೋವಿ ಉಳ್ಳವರು ನುರಿತ ಗುರಿಕಾರರೂ ಆಗಿರುತ್ತಾರೆ. ಇವರನ್ನು ತೀರ್ಥಹಳ್ಳಿ ಭಾಗದಲ್ಲಿ 'ಬಿಲ್ಲಿನವರು' ಎಂದು ಕರೆಯುತ್ತಾರೆ. ಇವರು ನಿಲ್ಲಬೇಕಾದ ಸ್ಥಳವನ್ನು ಮುಖಂಡನೇ ಹೇಳುತ್ತಾನೆ. ಉಳಿದವರು ಪ್ರಾಣಿಗಳು ತಮ್ಮ ನೆಲೆಯಿಂದ ಹೊರಗೆ ಬರುವಂತೆ ಮಾಡುವರು. ಇವರನ್ನು ಶಿವಮೊಗ್ಗ ಭಾಗದಲ್ಲಿ 'ಹಳುವಿನವರು' ಎಂದು ಕರೆದರೆ ಚಿಕ್ಕಮಗಳೂರು

ಭಾಗದಲ್ಲಿ ಓದರಿಕೆಯವರು' ಎಂದು ಕರೆಯುತ್ತಾರೆ. ಇವರ ಕರ್ತವ್ಯಗಳನ್ನು ಸಹ ಮುಖಂಡನೇ ವಿವರಿಸುವನು;

ಸಕಲರೂ ಸಜ್ಜಾದ ಬಳಿಕ ಬೇಟೆ ನಾಯಿಗಳು ಕಾಡಿನಲ್ಲಿ ಸುತ್ತಾಡಿ ಪ್ರಾಣಿಗಳಿರುವ ಸುಳಿವನ್ನು ಕಂಡುಕೊಂಡು ಬೊಗುಳ ತೊಡಗುತ್ತವೆ. ಆಗ ಪ್ರಾಣಿಗಳು ಭೀತಿಗೊಂಡು ಹೊರಗೆ ಬರುತ್ತವೆ. ಶಿಕಾರಿದಾರರೆಲ್ಲ ಮೈಯೆಲ್ಲ ಕಣ್ಣಾಗಿ, ಕಿವಿಯಾಗಿ ಬೇಟೆಗೆ ಗ್ರಾಸವಾಗಬಹುದಾದ ಪ್ರಾಣಿಯನ್ನು ನಿರೀಕ್ಷಿಸುತ್ತಾರೆ. ಕೋವಿಯವರು ಗುರಿ ಇಟ್ಟುಕೊಂಡು ನಿಲ್ಲುತ್ತಾರೆ. ಓದರಿಕೆಯವರು ಹೋ ಹೋ ಎಂದು ಕೂಗುತ್ತ ನಾಯಿಗಳ ನೆರವಿನಿಂದ ಪ್ರಾಣಿಗಳನ್ನು ತರುಬುತ್ತ ಬೆನ್ನಟ್ಟುತ್ತ ಅವು ಕೋವಿ ಹಿಡಿದವರ ದಿಕ್ಕಿನತ್ತ ಓಡುವಂತೆ ಮಾಡುತ್ತಾರೆ. ಕಾಡೆಲ್ಲ ತಲ್ಲಣಗೊಳ್ಳುತ್ತದೆ, ಶಬ್ದಮಯವಾಗುತ್ತದೆ. ಆಲು ಎಂದರೆ ಕಿರುಚು ಎಂಬ ಅರ್ಥವಿದೆ, ಈ ಅರ್ಥದಲ್ಲಿ ದೊಡ್ಡ ಬೇಟೆಗೆ ಅಲುಬೇಟೆ ಎಂಬ ಪರ್ಯಾಯ ನಾಮವಿರುವುದು ಅನ್ವರ್ಥವಾಗಿದೆ. ಭಯಗ್ರಸ್ತ ಪ್ರಾಣಿಗಳು ಆ ಕಾಡು ಬಿಟ್ಟು ಬೇರೆಡೆಗೆ ಹೋಗಬೇಕೆಂದು ಓಡಲು ತೊಡಗಿದಾಗ ಆಯಕಟ್ಟಿನ ಜಾಗಗಳಲ್ಲಿ ಸಜ್ಜಾಗಿದ್ದ ಬಂದೂಕು ಧಾರಿಗಳು ಅವುಗಳ ಮೇಲೆ ಗುಂಡು ಹಾರಿಸುವರು.

ಬೇಟೆಗೆ ತುತ್ತಾದ ಪ್ರಾಣಿ ಗುಂಡಿನೇಟು ತಗುಲಿ ಕೆಳಗುರುಳಿದ ಕೂಡಲೆ ನೆಲ್ಲಿಸೊಪ್ಪು, ಈಚಲು ಕಡ್ಡಿ ತೆಗೆದುಕೊಂಡು ಅದಕ್ಕೆ ನೀವಳಿಸಿ ಹಾಕುವರು. ಮತ್ತೊಬ್ಬ ನೀವಳಿಸುವವನ ಬೆನ್ನಿಗೆ ಗುದ್ದುವನು. ಇದಕ್ಕೆ 'ಬೇಟೆಕಳೆ' ತೆಗೆಯುವುದು ಎಂದು ಕರೆಯುತ್ತಾರೆ. ಸತ್ತ ಪ್ರಾಣಿಯನ್ನು ಬಲಮಗ್ಗಲು ಮಾಡಿ ಮಲಗಿಸುವರು, ಹೀಗೆ ಮಾಡಿದರೆ ಅದು ಸ್ವರ್ಗ ಸೇರುವುದೆಂಬ ಪ್ರತೀತಿ ಇದೆ.

**ಹಸಿಗೆ ಮತ್ತು ಎಡೆ ಇಡುವುದು :**

ಶಿಕಾರಿಯಲ್ಲಿ ದೊಡ್ಡ ಪ್ರಾಣಿ ಸಿಕ್ಕಿದಾಗ ತಂಡದಲ್ಲಿ ಉಕ್ಕುವ ಸಂತಸ ಅವರ್ಣನೀಯ. ಆಗ ಸಂಭ್ರಮದಿಂದ ಹಸಿಗೆ ಮಾಡುತ್ತಾರೆ. ಕೆಲವರು ಹಸಿಗೆಗೆಂದು ಬಾಳೆ ಎಲೆ ಕತ್ತರಿಸಿಕೊಂಡು ಬಂದು ಹಾಸುವರು. ಹೀಗೆ ಹಾಸುವುದಕ್ಕೆ 'ಹಂಪು ಹಾಸುವುದು' ಎನ್ನುತ್ತಾರೆ. ಹಂಪು ಹಾಸಿದವನೇ ಕಡೆಯಲ್ಲಿ ಹಂಪು ಕೊಟ್ಟಬೇಕೆಂಬುದು ನಿಯಮ. ಇನ್ನು ಕೆಲವರು ಮಾಂಸ ಚೊಕ್ಕಟಗೊಳಿಸಲು ನೀರು ತರುವರು. ಮತ್ತೆ ಕೆಲವರು ಬೆಂಕಿ ಹಾಕುವ ಕೆಲಸದಲ್ಲಿ ತೊಡಗುವರು. ಪ್ರಾಣಿಯನ್ನು ಸುಟ್ಟು, ತೊಳೆದು, ಚರ್ಮ ತೆಗೆದ ಬಳಿಕ ಕತ್ತರಿಸುತ್ತಾರೆ. ಹೀಗೆ ಹಸಿಗೆ ಮಾಡಿದ ಮೇಲೆ ಸತ್ತ ಪ್ರಾಣಿಯ ಈಲಿಯನ್ನು ಕೋಲಿಗೆ ಸಿಕ್ಕಿಸಿ, ಬೆಂಕಿಗೆ ಹಿಡಿದು ಸುಟ್ಟು 'ಈರಿ ಕೋಲು' ಸಿದ್ಧಪಡಿಸಿ, ಕಾಡ್ನ ಒಡೆಯನನ್ನು ಪೂಜಿಸಿ, ಹರಕೆ ತೀರಿಸುವ ಸಂಪ್ರದಾಯ ಸಕಲೇಶಪುರ ಭಾಗದಲ್ಲಿದೆ. ತೀರ್ಥಹಳ್ಳಿ ಸುತ್ತಲಿನಲ್ಲಿ ಹಸಿಗೆಯಾದ ಮೇಲೆ ಸ್ವಲ್ಪ ಭಾಗ ಮಾಂಸವನ್ನು ತೆಗೆದುಕೊಂಡು ಉಪ್ಪುಕಾರ ಹಾಕಿ ಬೇಯಿಸಿ ಹರಿತುಂಡು ಮಾಡಿ ಉಳಿದ ಮಾಂಸವನ್ನು ಒಂದು ಬುಟ್ಟಿಗೆ ತುಂಬಿಸಿ ಬೇಟೆರಂಗನ ಪೂಜೆಗೆ ಅಣಿಗೊಳಿಸುವರು. ಚಿಕ್ಕಮಗಳೂರು ಭಾಗದಲ್ಲಿ ಕೆಲವು ಕಡೆ ಬೇಟೆರಂಗನಿಗೆ

ಕಾಡ್ಲ ಒಡೆಯನಂತೆ ನಿರ್ದಿಷ್ಟ ಆಕಾರವಿಲ್ಲ. ಆದುದರಿಂದ ಫಲಬಿಡುವ ವೃಕ್ಷದ ಕೆಳಗೆ ಒಂದು ಕಲ್ಲು ಇಟ್ಟು ಬೇಟೆರಂಗನ ಹೆಸರು ಹೇಳಿ ಆವಾಹನೆ ಮಾಡುವರು. ಆದಿಮಾನವ ತನ್ನ ನಾಗರಿಕತೆಯ ಆರಂಭದಲ್ಲಿ ಸೃಷ್ಟಿಸಿಕೊಂಡ ದೇವತೆಯ ಪಳೆಯುಳಿಕೆ ಇದಾಗಿರಬಹುದು. ಅನಂತರ ಐದು ಜಾತಿಯ ಎಲೆ ತಂದು ಅದರ ಮೇಲೆ ಹಸಿಮಾಂಸದ ತುಂಡುಗಳನ್ನು ಇಡುವ ಮೂಲಕ ಎಡೆ ಇಡುವ ಸಂಪ್ರದಾಯವಿದೆ. ಕೆಲವು ಊರುಗಳಲ್ಲಿ ಒಂಬತ್ತು ಎಡೆ ಇಡುವ ಪದ್ಧತಿ ಇದೆ. ಒಂದು ಪಕ್ಕಕ್ಕೆ ಬುಟ್ಟಿಯಲ್ಲಿ ತುಂಬಿಸಿದ ಮಾಂಸ ಮತ್ತು ಈಡು ಹೊಡೆದ ಕೋವಿಯನ್ನೂ ಇಟ್ಟು ಗುಂಡು ಹಾರಿಸಿದಾತನಿಂದ ಧೂಪ ಹಾಕಿಸುವರು. ಹೀಗೆಯೇ ಒಳ್ಳೆಯ ಬೇಟೆ ಸಿಕ್ಕಲಿ ಎಂದು ಇತರರೂ ಪ್ರಾರ್ಥಿಸಿಕೊಳ್ಳುವರು. ಕಡೆಯಲ್ಲಿ ಪೂಜೆಯನ್ನು ಉದ್ಯಾಪನೆಗೊಳಿಸುವಂತೆ ಹುಸಿಗುಂಡು ಹಾರಿಸಿ ಬೇಟೆರಂಗನ ಪೂಜೆಯನ್ನು ಮುಕ್ತಾಯಗೊಳಿಸುವರು.

**ಪಾಲು ಹಾಕುವುದು :**

ಗ್ರಾಮೀಣ ಬದುಕು ವ್ಯಷ್ಟಿಮೂಲದ್ದಲ್ಲ, ಅದು ಸಮಷ್ಟಿಯ ಸಾರವೆಂಬುದು ಅಲ್ಲಿನ ಸಂಸ್ಕೃತಿಯಲ್ಲಿ ಅಡಿಗಡಿಗೆ ವ್ಯಕ್ತವಾಗುತ್ತದೆ. ಇದಕ್ಕೆ ಬೇಟೆಯ ಸಂದರ್ಭವೂ ಹೊರತಲ್ಲ. ಇಲ್ಲಿ ದೊರೆತ ಮಾಂಸವನ್ನು ಪಾಲು ಮಾಡುವ ರೀತಿ ಕೂಡ ವಿಶಿಷ್ಟ. ನಾಯಿಪಾಲು, ಪಟೇಲರ ಪಾಲು, ಗೌಡಿಕೆ ಪಾಲು, ಕೋವಿ ಪಾಲು ಎಂದು ತೆಗೆಯುತ್ತಾರೆ. ಬೇಟೆಯಲ್ಲಿ ಪಾಲ್ಗೊಂಡ ಸಮಸ್ತರಿಗೂ ನಿರ್ಜೀವ ವಸ್ತುಗಳಿಗೂ ಪಾಲು ಮಾಡುವುದರ ಜೊತೆಗೆ ಆಡಳಿತಶಾಹಿಯ ಪ್ರತೀಕದಂತಿದ್ದ ಊರಪಟೇಲ ಊರಗೌಡನಿಗೂ ಪಾಲು ಕೊಡುವುದನ್ನು ಗಮನಿಸಬೇಕು. ಅಂತೆಯೇ ಗ್ರಾಮದೇವತೆಗೆ 'ಶಿಕಾರಿ ಎಡೆ' ಎಂದು ಮೀಸಲಿಡುವುದು ಸಕಲೇಶಪುರ ಭಾಗದಲ್ಲಿದೆ. ಇಲ್ಲಿ ಪಾಲು ಶಬ್ದಕ್ಕೆ ಸಂವಾದಿಯಾಗಿ ಎಡೆ ಎಂಬ ಶಬ್ದವೇ ಬಳಕೆಯಲ್ಲಿದೆ. ಈ ಸಂಬಂಧದ ಮತ್ತೊಂದು ಮುಖ್ಯ ಅಂಶವೆಂದರೆ ಶಿಕಾರಿಯಲ್ಲಿ ಭಾಗಿಯಾದವರ ಕೆಲಸ ಪ್ರಮಾಣದ ಮೇಲೆ ಪಾಲು ಹಂಚುವುದು. ಪ್ರಾಣಿ ಹೊಡೆದವನಿಗೆ ದೊಡ್ಡ ಪಾಲು ಲಭಿಸುತ್ತದೆ. ಆತನಿಗೆ ಎಲ್ಲರಂತೆ ಸಿಕ್ಕುವ ಪಾಲಿನ ಜೊತೆಗೆ ಸತ್ತ ಪ್ರಾಣಿಯ ತಲೆ ಮತ್ತು ತೊಡೆಯನ್ನು ಹೆಚ್ಚಾಗಿ ಕೊಡಬೇಕು. ಇದಕ್ಕೆ 'ಏಸಿನ ಪಾಲು' ಎಂದು ಚಿಕ್ಕಮಗಳೂರು ಭಾಗದಲ್ಲಿ ಹೇಳುತ್ತಾರೆ. ಕೆಲವು ಊರುಗಳಲ್ಲಿ ಬೇಟೆರಂಗನಿಗೆ ಎಡೆ ಮಾಡಿದ ಮಾಂಸವನ್ನು ಕೂಡ ಈಡುಗಾರನಿಗೇ ನೀಡುತ್ತಾರೆ. ಬೇಟೆಗೆ ತುತ್ತಾದ ಪ್ರಾಣಿ ಒಂದು ಗುಂಡಿಗೆ ಸಾಯದಿದ್ದಾಗ ಕೂಡಲೇ ಎರಡನೇ ಗುಂಡು ಬೇರೊಬ್ಬರು ಹಾರಿಸಿದಲ್ಲಿ ಆತನಿಗೆ 'ಮರಿ ಈಡು' ಎಂದು ಒಂದು ಚಿಕ್ಕ ಪಾಲು ಸಿಕ್ಕುತ್ತದೆ. ಪ್ರಾಣಿ ಇರುವ ಜಾಗ ತೋರಿಸಿದವನಿಗೆ, ಹಸಿಗೆಯಲ್ಲಿ ಭಾಗಿಯಾದವರಿಗೆ ಕೂಡ ಒಂದೊಂದು ಚಿಕ್ಕ ಪಾಲು ಅಧಿಕವಾಗಿ ದೊರೆಯುತ್ತದೆ.

ಬೇಟೆ ಮನೋರಂಜನಾತ್ಮಕವೂ ಆಗಿರುವುದರಿಂದ ದೊಡ್ಡ ಬೇಟೆಯಲ್ಲಿ ಮೊದಲ ದಿನವೇ ಹಂದಿ, ಸಾರಂಗ ದೊರೆತಲ್ಲಿ ಶಿಕಾರಿದಾರರ ಉತ್ಸಾಹ ಇಮ್ಮಡಿಸುತ್ತದೆ. ಆದುದರಿಂದ ಮತ್ತಷ್ಟು ಹುರುಪಿನಿಂದ ಶಿಕಾರಿಯನ್ನು ಮುಂದುವರೆಸುತ್ತಾರೆ. ಅಂದಂದಿನ ಬೇಟೆಯಲ್ಲಿ ದೊರೆತ ಪಾಲನ್ನು

ತಂತಮ್ಮ ಮನೆಗಳಿಗೆ ಕಳಿಸುತ್ತಾರೆ. ಸಕಲೇಶಪುರ ಭಾಗದಲ್ಲಿ ಮನೆಯವರು ಅಡುಗೆ ಮಾಡಿದ ಬಳಿಕ ಅಳಿದ ಹಿರಿಯರಿಗೆ ಎಡೆ ಮಾಡಿ ದೀಪ ಧೂಪಗಳನ್ನು ಅರ್ಪಿಸಿ ಅನಂತರ ಊಟ ಮಾಡುವ ಪದ್ಧತಿಯಿದೆ. ನಿರೀಕ್ಷೆಗೂ ಮೀರಿ ಮಾಂಸ ದೊರೆತಲ್ಲಿ ಬಂಧುಗಳ ಮನೆಗೂ ಕಳಿಸಿ ಊಟದ ಸಂತೋಷವನ್ನು ಹಂಚಿಕೊಳ್ಳುವರು. ಹೆಚ್ಚಾದ ಮಾಂಸವನ್ನು ಬಿಸಿಲಿನಲ್ಲಿ ಅಥವಾ ಅಡುಗೆ ಮನೆಯ ಒಲೆ ಮೇಲಿನ ಬೆಸಿಗೆಯ ಮೇಲೆ ಹರಡಿ ಒಣಗಿಸುವರು. ಹೀಗೆ ಒಂದುವಾರ ಕಾಲ ಒಣಗಿಸಿದಾಗ ಮಾಂಸ ಕಲ್ಲಿನಂತಾಗುತ್ತದೆ. ಇದನ್ನು ಮಡಕೆಯಲ್ಲಿಟ್ಟು ಬಾಯಿ ಕಟ್ಟುವರು. ಈ ರೀತಿ ಸಂರಕ್ಷಿಸಿದ ಮಾಂಸವು ಒಂದು ವರ್ಷದವರೆಗೆ ಕೆಡುವುದಿಲ್ಲ'. ಬಾಯಿ ರುಚಿ ಹತ್ತಿದಾಗ ಅಥವಾ ಬಂಧುಗಳು ಆಗಮಿಸಿದಾಗ ಮಡಕೆಯ ಮಾಂಸವನ್ನು ತೆಗೆದು ಮೊದಲು ಕೆಂಡದಲ್ಲಿ ಸುಟ್ಟು ಆನಂತರ ತೊಳೆದು ಸಾರು ಮಾಡುತ್ತಾರೆ. ಮಲೆನಾಡಿನಲ್ಲಿ ಮಳೆಗಾಲದ ದಿನಗಳಲ್ಲಿ ಇಂಥ ಸಾರುಗಳು ಸ್ವಾದಿಷ್ಟವಾಗಿರುತ್ತವೆ. ಮೀನು ಬೇಟೆಯಲ್ಲಿ ಕೂಡ ಕರಿಮೀನು ಸೀಗಡಿ ಮೀನುಗಳನ್ನು ಬಿಸಿಲಿನಲ್ಲಿ ಒಣಗಿಸಿ ಇಟ್ಟುಕೊಳ್ಳುವುದುಂಟು.

**ಕಿರುಬೇಟೆ ಅಥವಾ ಪುಣುಗುಬೇಟೆ** ಹೆಸರೇ ಸೂಚಿಸುವಂತೆ ಸೀಮಿತ ಅವಧಿಯಲ್ಲಿ ನಡೆಯುವ ಬೇಟೆ. ಇದು ಒಂದು ದಿನದಲ್ಲಿ ಮುಗಿಯುವಂಥದ್ದು. ಆದುದರಿಂದ ದೊಡ್ಡ ಬೇಟೆಯ ಆಚರಣೆಗಳು ಇಲ್ಲಿ ಕಂಡುಬರುವುದಿಲ್ಲ. ಜೋಯಿಸರಲ್ಲಿ ಮುಹೂರ್ತ ಕೇಳುವುದಿಲ್ಲ. ಹರಕೆ ಹೊತ್ತುಕೊಳ್ಳುವುದಿಲ್ಲ. ಹವ್ಯಾಸಿಗಳು ಮನ ಬಂದಾಗ ಪ್ರಾಣಿಗಳ ಸುಳಿವು ತಿಳಿದು ಬೇಟೆಯಲ್ಲಿ ನಿರತರಾಗುತ್ತಾರೆ. ಸಣ್ಣ ಬೇಟೆಯಲ್ಲಿ ಸೆರೆಯಾಗುವ ಪ್ರಾಣಿಗಳೆಂದರೆ ಬೆಳ್ಳಕ್ಕಿ, ಕಾಡುಕೋಳಿ, ಮುಸಿಯ, ಕಬ್ಬೆಕ್ಕು, ಚಿಪ್ಪಿಗನ ಬೆಕ್ಕು, ಉಂಡೆಕೋಳಿ; ಸುಟ್ಟ ಕೋಳಿ, ಚೋರಹಕ್ಕಿ, ಗಿಳಿ, ಪಾರಿವಾಳ, ಮೊಲ, ಕಾಡು ಅಳಿಲು ಇತ್ಯಾದಿ.

## ಬೇಟೆಯ ವಿಧಾನಗಳು

ಮಾನವ ಬೇಟೆಯಾಡುವುದನ್ನು ಪ್ರಾಣಿಗಳಿಂದ ಕಲಿತ ಹಾಗೆ ಬೇಟೆಯ ವಿಧಾನಗಳನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿಯೂ ಅವುಗಳನ್ನೇ ಅನುಕರಿಸಿದಂತೆ ತೋರುತ್ತದೆ. ಉದಾಹರಣೆಗೆ ಜೇಡದಿಂದ ಬಲೆ ಹಾಕುವುದನ್ನು, ಹಲ್ಲಿಯಿಂದ ಹೊಂಚು ಹಾಕುವುದನ್ನು, ಹುಲಿ ಚಿರತೆಗಳಿಂದ ಮೊರಸು ಬೇಟೆಯನ್ನು, ಗಿಡಗ ಮೀಂಚುಳ್ಳಿಗಳಿಂದ ಗಾಳ ಹಾಕುವುದನ್ನು ಕಲಿತನೆಂಬ ಅಭಿಪ್ರಾಯವಿದೆ. ಬೇಟೆಯಾಡುವಾಗ ಎಲ್ಲ ಪ್ರಾಣಿಗಳಿಗೂ ಏಕರೂಪದ ತಂತ್ರಗಾರಿಕೆ ಹೊಂದುವುದಿಲ್ಲ. ಒಂದೊಂದು ಪ್ರಾಣಿಯನ್ನು ಹಿಡಿಯುವ ರೀತಿಯೂ ಭಿನ್ನವಾಗಿರುತ್ತದೆ. ಆದುದರಿಂದ ಬೇಟೆಯಲ್ಲಿ ಅನೇಕ ವಿಧಾನಗಳಿವೆ - ಮೊರಸು ಬೇಟೆ, ಲೈಟು ಬೇಟೆ, ಇಳಸಲು ಬೇಟೆ, ಸಿಡಿಮದ್ದು ಬೇಟೆ, ಹೊಂಚುಬೇಟೆ, ಮೇಣಬೇಟೆ, ಉರುಳುಬೇಟೆ, ಹೊಡಬೇಟೆ, ನೆಲಬೇಟೆ, ಸಾರಿಕೆಬೇಟೆ; ಕರೆದು ಹೊಡೆಯುವ ಬೇಟೆ, ಬಲೆ ಹಾಕುವುದು, ಕೋವಿ ಕಟ್ಟುವುದು, ಕತ್ತರಿ ಒಡ್ಡುವುದು, ಬೋನು ಒಡ್ಡುವುದು, ಪೊಟರೆ ಒಡೆಯುವುದು, ಬೆಂಕಿ ಹಾಕುವುದು ಮೊದಲಾದ ವಿಧಾನಗಳು ಎಲ್ಲ ಕಡೆಯೂ ಸಾಮಾನ್ಯ.

**ಮೊರಸು ಬೇಟೆ :**

ಇದು ಬೇಸಿಗೆ ಮತ್ತು ಚಳಿಗಾಲದಲ್ಲಿ ನಡೆಯುವ ಬೇಟೆ. ಅದರಲ್ಲಿಯೂ ಕರಿದಿಂಗಳ ಕತ್ತಲ ರಾತ್ರಿಯೇ ಇದಕ್ಕೆ ಯೋಗ್ಯ. ಮರೆಯಲ್ಲಿ ಕುಳಿತು ಪ್ರಾಣಿಗಳಿಗೆ ಹೊಡೆಯು ವುದರಿಂದ ಮೊರಸು ಬೇಟೆ ಎಂಬ ಹೆಸರು ಬಂದಿದೆ. ಈ ವಿಧಾನ ಸಾಕಷ್ಟು ಪ್ರಾಚೀನವೂ ಹೌದು. ಶಿಕಾರಿಯ ಗೀಳು ಹತ್ತಿಸಿಕೊಂಡವರು ತಾವು ವಾಸಿಸುವ ಪರಿಸರದಲ್ಲಿ ಪ್ರಾಣಿಗಳ ಚಲನವಲನವನ್ನು ತುಂಬ ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಅವು ನೀರು ಕುಡಿಯಲೆಂದೋ, ಆಹಾರ ಹುಡುಕಲೆಂದೋ ಬಂದು, ಒಂದೆರಡು ದಿನ ನಿರ್ದಿಷ್ಟ ಸ್ಥಳದಲ್ಲಿ ಸುತ್ತಾಡಿದ ಬಳಿಕ ಅಲ್ಲಿ ಯಾವ ಅಪಾಯವೂ ಒದಗಲಾರದೆಂದು ಖಾತ್ರಿ ಮಾಡಿಕೊಳ್ಳುತ್ತವೆ. ಅಲ್ಲಿಗೆ ಮುಂದಿನ ದಿನವೂ ನಿರ್ಭಿಡೆಯಿಂದ ಬರುತ್ತವೆ. ಇವುಗಳ ಸ್ವಭಾವವನ್ನರಿತ ಬೇಟೆಗಾರ ಹಸಿರುಗಿಡಗಳ ನಡುವೆ ತಾನೂ ಹಸಿರು ಸೊಪ್ಪು ಹೊದ್ದು ಪ್ರಾಣಿಗಳ ನಿರೀಕ್ಷೆಯಲ್ಲಿ ಕುಳಿತುಕೊಳ್ಳುತ್ತಾನೆ. ಅದನ್ನು ಕಂಡೊಡನೆಯೇ ಗುಂಡು ಹಾರಿಸುತ್ತಾನೆ. ಕೋವಿಯಿಲ್ಲದವರು ದೊಣ್ಣೆಯಿಂದ ಇಲ್ಲವೇ ಕಲ್ಲಿನಿಂದ ಹೊಡೆಯುವರು. ಮೊರಸು ಬೇಟೆಯಲ್ಲಿ ಕುಶಲ ಬೇಟೆಗಾರನ ಕೋವಿಯ ಈಡಿಗೆ ಕೆಲವೊಮ್ಮೆ ಕಾಡುಕುರಿಗಳೂ ಬಲಿಯಾಗುವ ಸಂಭವವಿರುತ್ತದೆ. ತಾಳ್ಮೆಯಿಂದ ಕಾಯುತ್ತಿದ್ದರೆ ಏನಿಲ್ಲವೆಂದರೂ ಕಾಡುಕೋಳಿ, ಕಾಡುಬೆಕ್ಕಾದರೂ ದೊರೆಯುವುದರಲ್ಲಿ ಸಂಶಯವಿಲ್ಲವೆಂದು ಹೇಳುತ್ತಾರೆ. ಬೇಟೆ ಕ್ಷಣ ಮಾತ್ರದಲ್ಲಿ ನಡೆಯುವ ಕ್ರಿಯೆ. ಇದರಲ್ಲಿ ಏಕಾಂಗಿಯಾಗಿಯೂ ಬೇಟೆಯಾಡಬಹುದು ಅಥವಾ ಸಮಾನ ಅಭಿರುಚಿಯ ಒಂದಿಬ್ಬರು ಸೇರಿಯೂ ನಡೆಸಬಹುದು.

**ಲೈಟು ಬೇಟೆ :**

ಈ ವಿಧಾನ ಆಫ್ರಿಕಾದಲ್ಲಿ ಕೂಡ ಕಂಡುಬರುತ್ತದೆ. ಲೈಟು ಬೇಟೆಯನ್ನು ಕೆಲವು ಭಾಗದಲ್ಲಿ ಕರಿದಿಂಗಳ ಬೇಟೆ ಎಂದು ಕರೆಯುತ್ತಾರೆ. ಇಬ್ಬರು ಸಂಯುಕ್ತವಾಗಿ ಬೇಟೆಯಾಡುವುದಿದ್ದರೆ ಒಬ್ಬ ಪ್ರಾಣಿ ಬರುವ ಸಪ್ಪಳ ಕೇಳಿ ಟಾರ್ಚ್ ಬೆಳಕು ಬಿಡುತ್ತಾನೆ. ಆ ಬೆಳಕಿಗೆ ಗೊಂದಲಗೊಂಡ ಪ್ರಾಣಿಯು ಥಟ್ಟನೆ ನಿಂತುಬಿಡುತ್ತದೆ. ತತ್‌ಕ್ಷಣವೇ ಮತ್ತೊಬ್ಬ ಕೋವಿಯಿಂದ ಗುಂಡು ಹಾರಿಸುವನು. ಏಕಾಂಗಿಯಾಗಿ ಬೇಟೆಯಾಡುವುದಿದ್ದರೆ ಟಾರ್ಚ್‌ಲೈಟನ್ನು ತಲೆಗೆ ಕಟ್ಟಿಕೊಂಡು ಕೈಯಲ್ಲಿ ಕೋವಿ ಹಿಡಿದಿರುತ್ತಾರೆ. ಈ ಬೇಟೆಯಲ್ಲಿ ಮೊಲ, ಕಬ್ಬೆಕ್ಕು ಮೊದಲಾದ ಪುಟ್ಟ ಪ್ರಾಣಿಗಳು ಸಿಕ್ಕಿಕೊಳ್ಳುವುದು ಸಾಮಾನ್ಯ. ಆದರೆ ವಿರಳವಾಗಿ ಕಾಡು ಹಂದಿ, ಕಾಡು ಕುರಿಗಳೂ ಗುಂಡೇಟಿಗೆ ಬಲಿಯಾದ ಪ್ರಸಂಗಗಳಿವೆ.

**ಇಳಸಲು ಬೇಟೆ :**

ಇಡಿಚಲು ಅಥವಾ ಇಳಸಲು ಮರದ ಹಲಗೆಯನ್ನು ಈ ವಿಧಾನದಲ್ಲಿ ಬಳಸುವುದರಿಂದ ಅದೇ ಹೆಸರು ಬಂದಿದೆ. ಕಾಡು ಅಳಿಲು, ಕಾಡುಬೆಕ್ಕು, ಕಾಡುಕೋಳಿ ಗಳನ್ನು ಬೇಟೆಯಾಡುವಾಗ ಈ ತಂತ್ರ ಉತ್ತಮ ಪರಿಣಾಮ ಉಂಟುಮಾಡಬಲ್ಲದು. ಪ್ರಾಣಿಗಳ ಚಲನವಲನ ಗಮನಿಸುತ್ತಿದ್ದ ಬೇಟೆಗಾರ ಅವು ಓಡಾಡುವ ಸ್ಥಳದಲ್ಲಿ ಒಂದು ಗೂಟವನ್ನು ಹಗುರವಾಗಿ ನೆಟ್ಟು, ಸುಮಾರು

ಮೂರು ಅಡಿ ಅಗಲ, ಮೂರು ಅಡಿ ಉದ್ದದ ಇಳಸಲು ಮರದ ಹಲಗೆಯನ್ನು ಆ ಗೂಟದ ಮೇಲೆ ಇಳಿಜಾರಾಗಿ ನಿಲ್ಲಿಸುತ್ತಾನೆ. ಆ ಜಾಗಕ್ಕೆ ಪ್ರಾಣಿಯನ್ನು ಆಕರ್ಷಿಸಲು ಬತ್ತದ ಕಾಳು ಅಥವಾ ಬೇರಾವುದಾದರೂ ಕಾಳನ್ನು ಹಲಗೆಯ ಕೆಳಗೆ ಚೆಲ್ಲುತ್ತಾರೆ. ಇದನ್ನು ತಿನ್ನುವ ಆಸೆಯಿಂದ ಬಂದ ಅಳಿಲು, ಕೋಳಿ ಮೊದಲಾದವು ತಿನ್ನುವ ಭರದಲ್ಲಿ ಹಲಗೆಗೆ ಆಧಾರವಾಗಿದ್ದ ಗೂಟಕ್ಕೆ ಅರಿವಿಲ್ಲದಂತೆಯೇ ಸ್ಪರ್ಶಿಸಿಬಿಡುತ್ತವೆ. ತಕ್ಷಣವೇ ಹಲಗೆ ಪ್ರಾಣಿಯ ಮೇಲೆ ಬಿದ್ದು ಅದನ್ನು ಆಹುತಿ ತೆಗೆದುಕೊಳ್ಳುವುದು.

**ಸಿಡಿಮದ್ದು ಬೇಟೆ :**

ಕಾಡುಹಂದಿ, ಜಿಂಕೆ, ಸಾರಗ, ಕಡಗಳನ್ನು ಹಿಡಿಯಲು ಅನೇಕ ವಿಧಾನಗಳಿದ್ದು ಅವುಗಳಲ್ಲಿ 'ಸಿಡಿಮದ್ದು' ವಿಧಾನವೂ ಒಂದು. ಮೇಲೆ ಉಲ್ಲೇಖಿಸಿದ ಪ್ರಾಣಿಗಳು ಗುಂಪುಗುಂಪಾಗಿ ಓಡಾಡುತ್ತ, ಸ್ವೇಚ್ಛೆಯಿಂದ ಮೇಯುತ್ತ ಇರುವುದನ್ನು ನೋಡಿದ ಬೇಟೆಗಾರರು ಚೆಂಡಿನಾಕಾರದ ಪೊಟ್ಟಣಗಳನ್ನು ಮಾಡಿ ಅದರಲ್ಲಿ ಮದ್ದು ತುಂಬಿ ಅವು ಸುಳಿದಾಡುವಲ್ಲಿಗೆ ಅಲ್ಲಲ್ಲಿ ಇಡುತ್ತಾರೆ. ಯಥಾ ಪ್ರಕಾರ ಪ್ರಾಣಿಗಳ ಮನ ಸೆಳೆಯಲು ಸತ್ತ ಮೀನು, ಕಳಿತ ಹಲಸಿನ ಹಣ್ಣಿನ ತೊಳೆಗಳನ್ನು ಮದ್ದಿನ ಪೊಟ್ಟಣದ ಸಮೀಪದಲ್ಲಿ ಹಾಕಲಾಗುವುದು. ಆಹಾರದ ಆಸೆ ಹೊತ್ತು ಬಂದ ಪ್ರಾಣಿಗಳ ಕಾಲ್ತುಳಿತಕ್ಕೆ ಮದ್ದು ಸಿಡಿದು ಅವು ಹತವಾಗುತ್ತವೆ. ತೀವ್ರವಾಗಿ ಗಾಯಗೊಂಡು ಪ್ರಾಣ ಹೋಗದಿದ್ದಾಗ ಶಿಕಾರಿದಾರರು ಕೋವಿಯಿಂದ ಅಥವಾ ಬಡಿಗೆಯಿಂದ ಹೊಡೆಯುತ್ತಾರೆ.

**ಹೊಂಚು ಬೇಟೆ :**

ಹೊಂಚು ಹಾಕಿ ಹೊಡೆಯುವುದರಿಂದ ಹೊಂಚು ಬೇಟೆ ಎಂಬ ಹೆಸರು ಬಂದಿದೆ. ಈ ಬೇಟೆಗೆ ಕಾಲ ನಿರ್ದಿಷ್ಟವಿಲ್ಲ. ಹಗಲು ಅಥವಾ ರಾತ್ರಿಯಲ್ಲಿ ಅದು ಶಿಕಾರಿದಾರನ ಸಮಯವನ್ನು ಅವಲಂಬಿಸಿರುತ್ತದೆ. ತಾಂತ್ರಿಕತೆಯಲ್ಲಿ ಈ ಬೇಟೆ ಮೊರಸು ಬೇಟೆಯನ್ನು ಹೋಲುತ್ತದೆ. ಪ್ರಾಣಿಗಳು ಸಂಚರಿಸುವ ವೇಳೆ, ಅವು ನೆಲೆಸಿರುವ ಸ್ಥಳವನ್ನು ಅರಿತು ಬೇಟೆಗಾರ ಮರ ಹತ್ತಿ ಕುಳಿತುಕೊಳ್ಳುವನು. ಯಾವುದಾದರೂ ಪ್ರಾಣಿಯನ್ನು ಕಂಡಕೂಡಲೇ ಗುಂಡು ಹಾರಿಸುವನು. ಹಕ್ಕಿ ಬೇಟೆಗೆ ಇದು ಉತ್ತಮ ವಿಧಾನ. ಕೆಲವೊಮ್ಮೆ ಈ ವಿಧಾನದಿಂದ ಹಂದಿ, ಕುರಿಗಳನ್ನು ಹೊಡೆಯುವುದುಂಟು.

**ಉರುಳು ಬೇಟೆ :**

ಕಾಡುಹಂದಿ ಮತ್ತು ಕಾಡು ಕುರಿಗಳು ಚಲಿಸುವ ಜಾಗದಲ್ಲಿ ಈ ವಿಧಾನ ಹೆಚ್ಚು ಉಪಯುಕ್ತ. ಇವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದಾಟಾಡುವ ಜಾಗವನ್ನು ಶಿಕಾರಿದಾರರು ಊಹಿಸಿ, ಹಗ್ಗದಿಂದ ಉರುಳುಗಳನ್ನು ಮಾಡಿಕೊಂಡು ದಾಟುವ ಗಂಡಿಗಳಲ್ಲಿ ಮತ್ತು ಬೇಲಿಗಳಲ್ಲಿ ಅಲ್ಲಲ್ಲಿ ಉರುಳುಗಳನ್ನು ಕಟ್ಟುವರು. ಇದನ್ನರಿಯದೆ ಪ್ರಾಣಿಗಳು ದಾಟಲು ಬಂದು ಉರುಳಿಗೆ ಸಿಕ್ಕಿಕೊಳ್ಳುತ್ತವೆ. ಆಗ ಶಿಕಾರಿದಾರರು ಅವುಗಳನ್ನು ಕೋವಿ ಅಥವಾ ದೊಣ್ಣೆಯಿಂದ ಹೊಡೆದು ಪ್ರಾಣ ತೆಗೆಯುತ್ತಾರೆ.

**ಹೊಡಬೇಟೆ :**

ಹಬ್ಬ ಹರಿದಿನಗಳಲ್ಲಿ ಇಲ್ಲವೇ ವ್ಯವಸಾಯಕ್ಕೆ ಬಿಡುವಿನ ದಿನವಾದ ಸೋಮವಾರ ದಂದು ಈ ಬೇಟೆ ನಡೆಯುವುದು. ಇದು ದೊಡ್ಡ ಬೇಟೆಯ ಕಿರುರೂಪ. ಏಕೆಂದರೆ ಇದರಲ್ಲಿ ಎಂಟು ಹತ್ತು ಮಂದಿ ಭಾಗವಹಿಸುವರು. ಬೇಟೆಪ್ರಿಯರೆಲ್ಲ ಸೇರಿ ಹಗಲು ಹೊತ್ತಿನಲ್ಲಿ ಒಂದು ದಿನದ ಮಟ್ಟಿಗೆ ಹಮ್ಮಿಕೊಳ್ಳುವರು. ಕೋವಿ, ದೊಣ್ಣೆ, ಕತ್ತಿ, ನಾಯಿಗಳನ್ನು ಕರೆದೊಯ್ಯುವರು. ಹಂದಿ, ಜಿಂಕೆ, ಮುಳ್ಳುಹಂದಿ, ಕಾಡು ಅಳಿಲು ಮೊದಲಾದ ಪ್ರಾಣಿಗಳ ನೆಲೆಯನ್ನು ಕಂಡುಕೊಂಡು ಬೇಟೆಯ ಸಾಧನಗಳೊಂದಿಗೆ ಕಾದು ಕುಳಿತುಕೊಳ್ಳುವರು. ಅವು ನಾಯಿಯ ಬೊಗಳುವಿಕೆಗೆ ಹೆದರಿ ಹೊರಗೆ ಹೊರಟಕೂಡಲೇ ಹೊಡೆದು ಉರುಳಿಸುವರು. ಈ ಕಾರಣ ಹೊಡಬೇಟೆ ಎಂಬ ಹೆಸರು ಸಮಂಜಸವಾಗಿದೆ.

**ನೆಲಬೇಟೆ :**

ಕಣೆಹಂದಿ ಮತ್ತು ಚಿಪ್ಪುಹಂದಿಗಳನ್ನು ನೆಲಬೇಟೆಯ ಮೂಲಕ ಹಿಡಿಯುವ ಕ್ರಮವಿದೆ. ಹಂದಿಗಳು ಓಡಾಡುವ ಜಾಗವನ್ನು ಪತ್ತೆ ಹಚ್ಚಿಕೊಂಡು ಆ ಭಾಗದಲ್ಲಿ ನೆಲ ಅಗೆದು ಅಲ್ಲಲ್ಲಿ ಗುಂಡಿಗಳನ್ನು ತೋಡುವರು. ಇದಕ್ಕೆ ತೀರ್ಥಹಳ್ಳಿ ಭಾಗದಲ್ಲಿ "ಗುದ್ದು" ಎಂದು ಕರೆಯುತ್ತಾರೆ. ಕೆಲವರು ಇಂಥ ಗುಂಡಿಗಳ ತಳದಲ್ಲಿ ಚೂಪಾದ ಗೂಟಗಳನ್ನು ನೆಟ್ಟಿರುತ್ತಾರೆ. ಎಂದಿನಂತೆ ಬಂದ ಪ್ರಾಣಿಗಳು ಗುಂಡಿಗಳು ನಿರ್ಮಾಣ ವಾದುದನ್ನು ತಿಳಿಯದೆ ಮುನ್ನಡೆಯುತ್ತವೆ. ಅಷ್ಟರಲ್ಲಿ ಗುಂಡಿಯೊಳಗೆ ಬೀಳುತ್ತವೆ. ಗೂಟಗಳಿದ್ದರಂತು ಚುಚ್ಚಿ ಗಾಯವಾಗಿ ಮೇಲೇಳದಂತಾಗುತ್ತವೆ. ಈ ಬೇಟೆಗೆ 'ಕಂದಕ ಕಡಿಯುವುದು' ಎಂಬ ಪರ್ಯಾಯ ನಾಮವಿದೆ.

**ಸಾರಿಕೆ ಬೇಟೆ :**

ಈ ಬೇಟೆಯ ಹೆಸರು ಕೇಳಿದರೆ ಇದು ಹಕ್ಕಿಬೇಟೆಯ ವಿಧಾನವೆಂಬ ಭ್ರಮೆ ಹುಟ್ಟಿಸುತ್ತದೆ. ಆದರೆ ಇಲ್ಲಿಯ 'ಸಾರಿಕೆ' ಶಬ್ದವನ್ನು ಸಾರ್ಕೆ ಎಂದು ತೆಗೆದುಕೊಂಡರೆ ಉಚಿತ. ಅಂದರೆ ಸಮೀಪಿಸುವಿಕೆ. ಕೋವಿ ಹಿಡಿದು ಕಾಡಿನಲ್ಲಿ ಅಲೆಯುವ ಬೇಟೆಗಾರ 'ಕಂಡಲ್ಲಿ ಗುಂಡು' ಎನ್ನುವಂತೆ ಮುಖಾಮುಖಿಯಾದ ಯಾವ ಪ್ರಾಣಿಗಾದರೂ ಗುಂಡು ಹಾರಿಸುವನು. ಹಾಗಾಗಿ ಇದರಲ್ಲಿ ಪ್ರಾಣಿಯೇ ದೊರೆಯುತ್ತದೆ, ಪಕ್ಷಿಯೇ ದೊರೆಯುತ್ತದೆ ಎಂದು ಹೇಳುವಂತಿಲ್ಲ.

**ಕರೆದು ಹೊಡೆಯುವ ಬೇಟೆ :**

ಕೋವಿ ಅಥವಾ ಬಲೆಯ ನೆರವಿನಿಂದ ಕೋಳಿ, ಕಾಡು ಅಳಿಲು ಇಂಥ ಚಿಕ್ಕ ಪ್ರಾಣಿಗಳನ್ನು ಬೇಟೆಯಾಡುವಾಗ ಈ ವಿಧಾನ ಅನುಸರಿಸಲಾಗುವುದು. ಶಿಕಾರಿಗಾಗಿ ಕಾಡಿನಲ್ಲಿ ಅಲೆಯುವಾಗ ಕೋಳಿಯಂತೆ ಕೂಗಿ ಕಾಡುಕೋಳಿಯನ್ನು ಆಕರ್ಷಿಸುವರು. ಕಾಡು ಹೇಂಟೆಯನ್ನು ಹೊರಡಿಸಲು ಹುಂಜದ ರೀತಿ ಕೂಗುವರು. ಅಂತೆಯೇ ಹುಂಜವನ್ನು ಕರೆಯುವುದಕ್ಕೆ ಹೇಂಟೆಯಂತೆ ಶಬ್ದ ಮಾಡುವರು. ಅಳಿಲಿನಂತೆ ಕೂಗು ಹಾಕಿ ಅಳಿಲನ್ನು ಸೆಳೆಯುವರು. ಪ್ರಾಣಿಗಳು ಸಮೀಪಕ್ಕೆ ಬಂದಾಗ ಕೋವಿಯಿಂದ ಗುಂಡುಹಾರಿಸುವರು. ಬಲೆ ತೆಗೆದುಕೊಂಡು ಹೋಗಿದ್ದರೆ ಬಲೆ ಹಾಕಿ ಹಿಡಿಯುವರು.

**ಬಲೆ ಹಾಕುವುದು :**

ಬಿತ್ತ ಅಗೆ ಹಾಕಿದಾಗ ಅಗೇಡಿಯಲ್ಲಿ ಬಿತ್ತದ ಸಸಿಗಳನ್ನು ತಿನ್ನಲು ಮೊಲಗಳು ಬರುವುದುಂಟು. ಮುಂಗಾರು ಮಳೆ ಹೊಯ್ದು ಬಳಿಕ ಎಲ್ಲೆಲ್ಲಿಯೂ ಹಸಿರಾದ ಗರಿಕೆ ಹುಲ್ಲು ಚಿಗುರೊಡೆಯುತ್ತದೆ. ಇದನ್ನು ಮೇಯಲು ಮೊಲ, ಕುರಿ ಮೊದಲಾದುವು ಬರುತ್ತವೆ. ಆ ಸಮಯದಲ್ಲಿ ನೂಲಿನ ಬಲೆ ಅಥವಾ ತಂತಿಯ ಬಲೆ ಒಡ್ಡಿ ಮೊಲ, ಕುರಿ, ಹಂದಿ ಹಾಗೂ ಇತರ ಪಕ್ಷಿಗಳನ್ನು ಹಿಡಿಯುತ್ತಾರೆ. ಮೊಲದ ಬೇಟೆಗಂತು ಬಲೆ ಒಡ್ಡುವುದು ಬಹು ಜನಪ್ರಿಯ ವಿಧಾನ. ಇವುಗಳನ್ನು ಬೆಳದಿಂಗಳಲ್ಲಿ ಹಿಡಿಯುವುದು ರೂಢಿ. ಪ್ರಾಣಿಗಳ ಸಂಚಲನವನ್ನು ದೃಷ್ಟಿಯಿಟ್ಟು ವೀಕ್ಷಿಸುವ ಬೇಟೆಗಾರ ಆ ಸ್ಥಳದಲ್ಲಿ ಬಲೆ ಒಡ್ಡಿ ನಾಯಿಗಳನ್ನು ಛೂ ಬಿಡುತ್ತಾನೆ. ಇವು ಬೊಗಳತೊಡಗುತ್ತವೆ. ಪ್ರಾಣಿಗಳು ಗಾಬರಿಗೊಂಡು ಓಡುವಾಗ ಬಲೆಯೊಳಗೆ ಸಿಕ್ಕಿಬೀಳುತ್ತವೆ. ಆಗ ಶಿಕಾರಿದ್ಹಾರರು ದೊಣ್ಣೆಯಿಂದ ಹೊಡೆಯುತ್ತಾರೆ. ಉಡದ ಶಿಕಾರಿಯಲ್ಲಿಯೂ ಬಲೆ ಬಳಸುತ್ತಾರೆ.

**ಕೋವಿ ಕಟ್ಟುವುದು :**

'ಶಿಸ್ತು ಕಟ್ಟುವುದು' ಎಂಬ ಹೆಸರಿನಿಂದಲೂ ಇದನ್ನು ಕರೆಯುತ್ತಾರೆ. ಇದು ತುಂಬ ಅಪಾಯಕಾರಿಯಾದ ವಿಧಾನವಾಗಿರುವುದರಿಂದ ಜನಸಂಚಾರವಿಲ್ಲದ ಕಡೆ ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕಾಗುತ್ತದೆ. ಕಾಡು ಹಂದಿಗಳು ಬಂದಿರುವುದನ್ನು ತಿಳಿದು ಅವು ದಾಟಾಡುವ ಜಾಗದಲ್ಲಿ ಕೋವಿ ಕಟ್ಟಿ, ಮೇಲೆ ಹಸಿರು ಎಲೆಯನ್ನು ತೆಳುವಾಗಿ ಹೊದಿಸುವರು. ಇದಾವುದನ್ನು ತಿಳಿಯದ ಮುಗ್ಧ ಪ್ರಾಣಿಗಳು ದಾಟಲು ಹೋಗುತ್ತವೆ. ಕಾಲಿಟ್ಟ ಕೂಡಲೇ ಕೋವಿ ಸಿಡಿದು ಅವು ನೆಲಕ್ಕುರುಳುತ್ತವೆ.

**ಕತ್ತರಿ ಒಡ್ಡುವುದು :**

ಕಾಡು ಅಳಿಲು, ಇಲಿ, ಹೆಗ್ಗಣ ಮೊದಲಾದ ಪ್ರಾಣಿಗಳನ್ನು ಹಿಡಿಯಲು ಹರಿತವಾದ ಕತ್ತರಿವೊಡ್ಡಲಾಗುವುದು. ಇಲ್ಲಿಯೂ ಪ್ರಾಣಿಗಳ ಸಂಚಾರ ಗಮನಿಸಿ ಅವು ಓಡಾಡುವ ಗಂಡಿ (ಕಂಡಿ)ಗಳಲ್ಲಿ ಕತ್ತರಿ ಒಡ್ಡಿ ಹಸಿರೆಲೆಗಳಿಂದ ಮರೆ ಮಾಡುತ್ತಾರೆ. ಕತ್ತರಿಗೆ ಹಲಸಿನ ಹಣ್ಣು, ಮೀನಿನ ಚೂರು ಹೀಗೆ ಏನಾದರೂ ತಿನಿಸು ಕಟ್ಟಿ ಸುತ್ತಲೂ ಬಿತ್ತದ ಕಾಳು ಚೆಲ್ಲುವರು. ಇವುಗಳನ್ನು ಸೇವಿಸುವ ಇಚ್ಛೆಯಿಂದ ಬಂದ ಪ್ರಾಣಿಗಳು ಕತ್ತರಿಯಲ್ಲಿ ಕಾಲಿಡುತ್ತವೆ. ಕೂಡಲೇ ಅದು ಸಿಡಿದು ಕಾಲು ಸಿಕ್ಕಿಕೊಳ್ಳುತ್ತದೆ. ಇತ್ತ ಅದಕ್ಕಾಗಿ ಕಾದು ನಿಂತಿದ್ದವರು ದೊಣ್ಣೆಯಿಂದ ಹೊಡೆಯುತ್ತಾರೆ. ಮಣ್ಣು ಒಡ್ಡರು ಇಲಿ, ಹೆಗ್ಗಣಗಳನ್ನು ಹಿಡಿಯುವುದರಲ್ಲಿ ಬಹಳ ನಿಷ್ಣಾತರು. ಅವರು ಗದ್ದೆ ಬದುವಿನಲ್ಲಿರುವ ಇಲಿ ಬಿಲಗಳಿಗೆ ಕೈಹಾಕಿ ಬಹಳ ಚಾಕಚಕ್ಯತೆಯಿಂದ ಯಾವುದೇ ಸಾಧನವಿಲ್ಲದೆ ಹಿಡಿದು ಅಚ್ಚರಿ ಮೂಡಿಸುತ್ತಾರೆ.

**ಬೋನು ಒಡ್ಡುವುದು :**

ಹುಲಿ ಬೇಟೆ ಮತ್ತು ಇಲಿ ಬೇಟೆಯಲ್ಲಿ ಬೋನುಗಳನ್ನು ಬಳಸಲಾಗುವುದು. ಈ ಪ್ರಾಣಿಗಳ

ಗಾತ್ರಕ್ಕೆ ಅನುಗುಣವಾಗಿ ಬೋನಿನ ಗಾತ್ರದಲ್ಲಿಯೂ ವ್ಯತ್ಯಾಸವಿರುತ್ತದೆ. ಇಲಿಯ ಬೋನಿಗೆ ಯಾವುದಾದರೂ ತಿನಿಸು ಇಟ್ಟು, ಇಲಿಬಿಲಗಳಿರುವ ಕಡೆ ಒಡ್ಡಲಾಗವುದು. ಇಲಿಯು ತಿಂಡಿ ತಿನ್ನಲು ಬೋನಿಗೆ ನುಗ್ಗಿದ ಕೂಡಲೇ ಅದರ ಬಾಗಿಲು ಮುಚ್ಚುತ್ತದೆ. ಹುಲಿಯ ಬೋನು ಬಹಳ ದೊಡ್ಡದಾಗಿರುತ್ತದೆ. ಇದರಲ್ಲಿ ಗೂಡಿನಂತಿರುವ ಕಡೆ ದೀಪ ಹಚ್ಚಿಟ್ಟು, ಬೋನಿನ ದ್ವಾರಕ್ಕೆ ನಾಯಿ ಕಟ್ಟುತ್ತಾರೆ. ದೀಪ ಆರಿದ ಬಳಿಕ ಹುಲಿ ನಾಯಿಯನ್ನು ಬೇಟೆಯಾಡಬೇಕೆಂದು ಬಂದು ಬೋನಿನೊಳಕ್ಕೆ ಕಾಲಿಡುತ್ತದೆ. ಆಗ ಅದರ ಬಾಗಿಲು ಮುಚ್ಚಿಕೊಂಡು ಬೋನಿನೊಳಗೆ ಸಿಕ್ಕಿಬೀಳುತ್ತದೆ.

ರೈತನು ಬೆಳೆದ ಬೆಳೆಯನ್ನು ಇಲಿ ನಾಶಪಡಿಸುವುದರಿಂದ ಇನ್ನೂ ಕೆಲವು ತಂತ್ರಗಳನ್ನು ಬಳಸಿ ಇವುಗಳ ನಿಯಂತ್ರಣಕ್ಕೆ ತರಲು ಯತ್ನಿಸುತ್ತಾರೆ. ಬಿಲದ ಬಾಯಿಗೆ ಹೊಗೆ ಹಾಕುವುದು, ಬಿಲಕ್ಕೆ ನೀರು ಹುಯ್ಯುವುದು ಹಾಗೂ ಇಳಸಲು ಬೇಟೆಯ ವಿಧಾನವನ್ನನುಸರಿಸಿ ಮರದ ಹಲಗೆಯ ಬದಲು ಕಲ್ಲು ಚಪ್ಪಡಿ ಬಳಸುವರು. ಇದಕ್ಕೆ 'ಬಡಗು ಹೂಡುವುದು' ಎಂದು ಹೇಳುವುದುಂಟು.

**ಬೆಂಕಿ ಹಾಕುವುದು :**

ಬೆಂಕಿ ಹಾಕುವುದಕ್ಕೆ ಕೆಲವು ಭಾಗದಲ್ಲಿ 'ಹೊಗೆ ಹಾಕುವುದು' ಎಂದು ಹೇಳುತ್ತಾರೆ. ಮುಳ್ಳು ಹಂದಿ ಮತ್ತು ಚಿಪ್ಪು ಹಂದಿಯ ಬೇಟೆಯಲ್ಲಿ ಈ ವಿಧಾನವೇ ಸೂಕ್ತವೆಂಬುದು ಅನುಭವಿಗಳ ನುಡಿ. ಏಕೆಂದರೆ ಈ ಹಂದಿಗಳ ಮೈಮೇಲೆ ಮುಳ್ಳು ಅಥವಾ ಚಿಪ್ಪು ಇರುತ್ತವೆ. ಮೊದಲು ಶಿಕಾರಿದಾರರು ಹಂದಿಗಳು ವಾಸಿಸುವ 'ಗುದ್ದು' (ಗುಂಡಿ)ಗಳನ್ನು ಗಮನಿಸುತ್ತಾರೆ. ಒಳಗೆ ಹಂದಿಗಳು ಇರುವುದನ್ನು ಖಚಿತಪಡಿಸಿಕೊಂಡು ಗುದ್ದಿನ ಬಾಗಿಲಿಗೆ ಬೆಂಕಿ ಹಾಕುವರು. ಬೆಂಕಿಯ ಝಳ ಮತ್ತು ಹೊಗೆ ತಡೆಯಲಾರದೇ ಹಂದಿಗಳು ಉಸಿರುಕಟ್ಟಿ ಸತ್ತುಬಿಡುತ್ತವೆ. ಇವೆಲ್ಲವನ್ನೂ ಸಹಿಸಿಕೊಳ್ಳಲು ಶಕ್ತಿಯಿದ್ದ ಯಾವುದಾದರೂ ಹಂದಿ ಬದುಕುಳಿಯಲು ಹೊರಗೆ ಬರುತ್ತದೆ. ಆಗ ದೊಣ್ಣೆ ಅಥವಾ ಕೋವಿಯನ್ನು ಅದರ ಮೇಲೆ ಪ್ರಯೋಗಿಸಿ ಕೊಲ್ಲುವರು.

ಕಬ್ಬೆಕ್ಕು ಮತ್ತು ಹಾರುಬೆಕ್ಕುಗಳ ಶಿಕಾರಿ ಮಾಡುವಾಗಲೂ ಬೆಂಕಿ ಹಾಕುವ ತಂತ್ರವನ್ನು ಬಳಸುತ್ತಾರೆ. ಇವು ಕೆಲವೊಮ್ಮೆ ಪೊಟರೆಗಳಲ್ಲಿ ಸೇರಿಕೊಂಡಿರುತ್ತವೆ. ಆಗ ಕೋಲು ತೂರಿಸಿ ಅವುಗಳನ್ನು ಹೊರಡಿಸಲೆತ್ನಿಸುತ್ತಾರೆ. ಅವು ಮಣಿಯದಿದ್ದರೆ ಬಿಸಿನೀರು ಸುರಿಯುತ್ತಾರೆ. ಇದರಿಂದಲೂ ಕೆಲವು ಉಳಿದುಕೊಂಡಿದ್ದರೆ ಬೆಂಕಿ ಹಾಕುತ್ತಾರೆ.

ಹೀಗೆ ಮನುಷ್ಯ ಆಹಾರಕ್ಕಾಗಿ ಪ್ರಾಣಿಬೇಟೆಯಾಡುವಾಗ ಅನೇಕ ವಿಧಾನಗಳನ್ನು ಅನುಸರಿಸುತ್ತಾನೆ. ಮೇಲೆ ವಿವರಿಸಿದ ತಂತ್ರಗಳಲ್ಲದೆ ಇನ್ನೂ ಕೆಲವು ತಂತ್ರಗಳಿವೆ. ಜಿಂಕೆಗಳನ್ನು ಓಡಿಸಿಕೊಂಡು ಹೋಗಿ ಪ್ರಪಾತಕ್ಕೆ ಬೀಳಿಸುವುದು, ಮಂಗಗಳನ್ನು ಕವಣೆಕಲ್ಲಿನಿಂದ ಹೆದರಿಸುವುದು, ಚಾಟರಬಿಲ್ಲಿನಿಂದ ಹೊರಸಲು ಹಕ್ಕಿ ಮುಂತಾದ ಹಕ್ಕಿಗಳನ್ನು ಹೊಡೆಯುವುದು ಇತ್ಯಾದಿ. ಅದೇನೇ ಇರಲಿ ಆದಿಮ ಕಾಲದ ಬೇಟೆ ವಿಧಾನಗಳ ಪಳೆಯುಳಿಕೆಗಳನ್ನು ಇಂದಿನ ಬೇಟೆ ವಿಧಾನದಲ್ಲಿಯೂ ಕಾಣಬಹುದು.

## ಹುಲಿ ಬೇಟೆ

ಹುಲಿ ಬೇಟೆಗೆ ವಿಶಿಷ್ಟ ಸ್ಥಾನವಿದೆ. ಹುಲಿಯನ್ನು ಬಂದೂಕಿನಿಂದ ಹೊಡೆಯುವುದು ಬೋನು ಒಡ್ಡುವುದು, ಅಟ್ಟಣೆ ಮೇಲೆ ಕಾದು ಕುಳಿತು ಹೊಡೆಯುವುದು, ವಿಷ ಹಾಕುವುದು, ದೇಹ ಒಡ್ಡುವುದು, ಅಂದರೆ ಯಾವುದಾದರೊಂದು ಪ್ರಾಣಿಯನ್ನು ಹುಲಿ ಓಡಾಡುವ ಜಾಗದಲ್ಲಿ ಕಟ್ಟಿದ್ದು, ಹುಲಿ ಅದನ್ನು ತಿನ್ನಲು ಬಂದಾಗ ಅದರಲ್ಲಿಯೂ ಎಲುಬು ಕಡಿಯುವಾಗ ಕೋವಿಯಿಂದ ಹೊಡೆಯುವುದು. ಹೀಗೆ ಹಲವು ವಿಧಾನದಿಂದ ಹುಲಿಬೇಟೆಯಾಡುತ್ತಾರೆ. ಆದರೆ ಆಹಾರಕ್ಕಾಗಿ ಈ ಬೇಟೆ ನಡೆಯುವುದಿಲ್ಲ. ಮನುಷ್ಯ ಈ ವನ್ಯ ಮೃಗದಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ, ಪಶುಗಳನ್ನು ರಕ್ಷಿಸುವುದಕ್ಕೆ ಹುಲಿ ಬೇಟೆಯಾಡುತ್ತಿದ್ದ. ಹುಲಿ ಬೇಟೆಗೆ ಗುಂಪಾಗಿ ಹೋಗುವುದಕ್ಕಿಂತ ಏಕಾಂಗಿಯಾಗಿ ಎದುರಿಸುವುದೇ ಸೂಕ್ತವೆಂದು ಹೇಳುತ್ತಾರೆ. ಮಲೆನಾಡಿನಲ್ಲಿ ಹುಲಿಗಳು ದನ ಹಿಡಿಯಲು ಕಾಡಿನಿಂದ ಬರುವುದುಂಟು. ಮಂಗ, ನವಿಲು, ಕಾಡುಕುರಿಗಳು ಕೂಗಲು ತೊಡಗಿದವೆಂದರೆ ಅಲ್ಲಿ ಹುಲಿ ಇರುವುದು ಖಚಿತವೆಂದು ಮಲೆನಾಡಿಗರು ಕೋವಿ ಸಿದ್ಧಪಡಿಸಿಕೊಳ್ಳುತ್ತಾರೆ. ಹಂದಿ ಮತ್ತು ಹುಲಿಗೆ ದೀರ್ಘವಾದ ಕಾಳಗವಾಗುತ್ತಿದ್ದರೆ ಶಿಕಾರಿದಾರ ಹಂದಿಗೆ ಗುಂಡು ಹಾರಿಸಿದರೆ ಸಾಕು ಅದು ಹುಲಿಯನ್ನು ಕೊಲ್ಲುತ್ತದೆ ಎನ್ನುತ್ತಾರೆ ನುರಿತ ಶಿಕಾರಿದಾರರು. ಆದರೆ ಬೇರೆಲ್ಲ ಶಿಕಾರಿಗಿಂತ ಹುಲಿಶಿಕಾರಿಗೆ ಎಂಟೆದೆ ಬೇಕಾಗುತ್ತದೆ. ಇದು ಎಲ್ಲರಿಂದಲೂ ಸಾಧ್ಯವಾಗುವಂತದ್ದಲ್ಲ. ಒಂದು ಕಾಲದಲ್ಲಿ ಇದು ಶೌರ್ಯ ಸಾಹಸಗಳ ಪ್ರತೀಕವಾಗಿತ್ತು. ಹುಲಿ ಕೊಂದವನನ್ನು ಸತ್ತ ಹುಲಿಯ ಜೊತೆ ನಿಲ್ಲಿಸಿ ಹಾರ ಹಾಕಿ ಊರಿನ ಬೀದಿಗಳೆಲ್ಲ ಮೆರವಣಿಗೆ ಮಾಡುತ್ತಿದ್ದರು. ಸಕಲೇಶಪುರ ತಾಲ್ಲೂಕು ಬಸವನಹಳ್ಳಿಯ ದಿಡ್ಡೆಯ ನೆಲಿಂಗೇಗೌಡ ಎಂಬಾತ ಕ್ರಿ. ಶ. ೧೬೭೦ರಲ್ಲಿ ಮುಷ್ಟಿಯುದ್ಧದಿಂದ ಹುಲಿಯನ್ನು ಗೆದ್ದಾಗ ಬೇಲೂರ ವೆಂಕಟಾದ್ರಿನಾಯಕನು ಮೆಚ್ಚಿ ಆತನಿಗೆ ಛತ್ರಿ, ಚಾಮರ, ಕುದುರೆ, ಒಂಟೆ, ಕಹಳೆ ಮೊದಲಾದ ಬಿರುದಾವಳಿಗಳನ್ನು ಕೊಟ್ಟ ವಿಚಾರ ಸಕಲೇಶಪುರದ ೬೩ನೇ ಶಾಸನದಿಂದ ತಿಳಿದು ಬರುತ್ತದೆ. ಈಗ ಹುಲಿಬೇಟೆಯೂ ಸೇರಿದಂತೆ ಬೇಟೆಯ ಕಲ್ಪನೆ ಬದಲಾಗಿದೆ. ಹುಲಿಬೇಟೆಯಾಡುವವರೂ ಇಲ್ಲವಾಗಿದ್ದಾರೆ, ಆದರೆ ತಮ್ಮ ತಾರುಣ್ಯದಲ್ಲಿ ಹಲವಾರು ಹುಲಿಯನ್ನು ಕೊಂದ ಹಿರಿಯರು, ಆ ರೋಚಕ ಕಥಾನಕಗಳನ್ನು ಹಂಚಿಕೊಳ್ಳುವವರು ನಮ್ಮೊಡನಿದ್ದಾರೆ.

## ಬೇಟೆಯ ಪ್ರಸ್ತುತ ಸ್ಥಿತಿ :

ಪ್ರಾಣಿ ಬೇಟೆ ಇಂದು ವಿರಳವಾಗುತ್ತಿದೆ. ಮೀನು ಏಡಿಗಳಂಥ ಜಲಚರಗಳ ಬೇಟೆ, ಜೇನುಬೇಟೆ ಹಿಂದಿನ ರೀತಿಯಲ್ಲಿಯೇ ಉಳಿದುಕೊಂಡು ಬಂದಿದೆ ಎನ್ನಬಹುದು. ಪ್ರಾಣಿ ಬೇಟೆಯ ಇಂದಿನ ಸ್ಥಿತಿಗೆ ಹಲವಾರು ಕಾರಣಗಳಿವೆ - ಸಾಮಾಜಿಕ ಸ್ಥಿತ್ಯಂತರ, ಪರಿಸರ ಕಾಳಜಿ, ಸರ್ಕಾರದ ನಿರ್ಬಂಧ, ಆಧುನಿಕ ಪೀಳಿಗೆಯವರ ಭಿನ್ನ ಮನೋಧರ್ಮ, ಎಲ್ಲಕ್ಕಿಂತ ಮಿಗಿಲಾಗಿ ಇಂದು ಬೇಟೆ ತನ್ನ ಅಗತ್ಯತೆಯನ್ನು ಕಳೆದುಕೊಂಡಿರುವುದು. ಆದರೂ ಬೇಟೆಯನ್ನೇ ಬದುಕಿನ ವೃತ್ತಿಯಾಗಿಸಿಕೊಂಡವರು ತಮಗೆ ಬೇರೆ ಉದ್ಯೋಗವಿಲ್ಲದ ಕಾರಣ ಕದ್ದು ಮುಚ್ಚಿ ಬೇಟೆಯಾಡುತ್ತಾರೆ. ಮಲೆನಾಡಿನಲ್ಲಿಯೂ ಬೇಟೆ ತನ್ನ ಹಿಂದಿನ ಸಡಗರವನ್ನು ಬಿಟ್ಟುಕೊಟ್ಟಿದೆ.

ಇಲ್ಲಿನ ತೋಟಗಳಿಗೆ ನುಗ್ಗುವ ಹಂದಿಯನ್ನು ತಡೆಯಲು ವಿದ್ಯುಚ್ಛಕ್ತಿ ತಂತಿ ಹಾಯಿಸುವ ಪರಿಪಾಟವಿದೆ. ಆಗ ಎಷ್ಟೋ ವೇಳೆ ಕಾಡುಹಂದಿಗಳು ವಿದ್ಯುತ್ ಸ್ಪರ್ಶವಾಗಿ ಸಾಯುತ್ತವೆ. ಹೀಗೆ ಅನಾಯಾಸವಾಗಿ ದೊರೆಯುವ ಬೇಟೆಯನ್ನು ಮುದದಿಂದ ಸ್ವಾಗತಿಸಿದರೂ ಅದರಲ್ಲಿಯೇ ತಲ್ಲೀನರಾಗುವವರು ಕಡಿಮೆ. ಇಂದು ಬ್ರಾಯ್ಲರ್ ಕೋಳಿಗಳು, ಮಾಂಸದ ಅಂಗಡಿಗಳು ಹಳ್ಳಿಹಳ್ಳಿಗಳಲ್ಲೂ ತಲೆಯೆತ್ತಿರು ವುದರಿಂದ ಮಾಂಸಕ್ಕಾಗಿಯೇ ಬೇಟೆಯಾಡಬೇಕಾದ ಪ್ರಮೇಯವಿಲ್ಲ. ಬೇಟೆ ಎನ್ನುವುದು ಸಮಯ ತಾಳ್ಮೆಯನ್ನು ಬೇಡುವಂಥದ್ದು. ಈಗಿನ ವೇಗದ ಬದುಕಿನಲ್ಲಿ ಗ್ರಾಮೀಣ ಪರಿಸರದಲ್ಲಿ ವಾಸಿಸುವವರಿಗೆ ಕೂಡ ಬೇಟೆಯಾಡುವಷ್ಟು ವ್ಯವಧಾನ ಮತ್ತು ಸಮಯ ಇಲ್ಲವಾಗುತ್ತಿದೆ. ಬೇಟೆಯಾಡುವುದಾದರೂ ರಹಸ್ಯವಾಗಿ, ಸರ್ಕಾರದ ಕಣ್ಣುತಪ್ಪಿಸಿ ನಡೆಸಬೇಕಾಗುತ್ತದೆ. ಆಕಸ್ಮಿಕವಾಗಿ ಸಿಕ್ಕಿಬಿದ್ದರೆ ಸಮಸ್ಯೆಗಳನ್ನು ಆಹ್ವಾನಿಸಿದಂತೆ. ಆದುದರಿಂದ ಈಗ ಬೇಟೆಯಾಡುವವರ ಸಂಖ್ಯೆ ಅತ್ಯಲ್ಪ.

ಬೇಟೆಗೆ ಸಂಬಂಧಿಸಿದ ಆಚರಣೆ, ನಂಬಿಕೆ, ವಿಧಿವಿಧಾನ ಮುಂತಾಗಿ ಇಲ್ಲಿ ಪ್ರಸ್ತಾಪಿಸಿದ ಸಂಗತಿಗಳೆಲ್ಲ ಈಗ ಹೊರಳುದಾರಿಯಲ್ಲಿವೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಮುಂದಿನ ಶತಮಾನದಲ್ಲಿ ಈಗಿನ ಬೇಟೆಯ ಪರಿಕಲ್ಪನೆಗಳು ಅಳಿಸಿ ಹೋದರೆ ಅಚ್ಚರಿಪಡಬೇಕಾಗಿಲ್ಲ. ಬೇಟೆ ನಡೆದುಬಂದ ದಾರಿಯನ್ನು ನೋಡಿದಾಗ ಕಾಲದಿಂದ ಕಾಲಕ್ಕೆ ಬೇಟೆಯ ಸಾಧನಗಳಲ್ಲಿ ಆಧುನೀಕರಣವಾಗಿರುವುದನ್ನು ಗುರುತಿಸಬಹುದು. ಆದಿಮಾನವ ಬೇಟೆಯಾಡಲು ಕಲ್ಲಿನ ಆಯುಧಗಳನ್ನು ಬಳಸಿದರೆ ಇಪ್ಪತ್ತನೇ ಶತಮಾನದ ಮಾನವ ಬಂದೂಕುಗಳನ್ನು ಬಳಸಿ ಬೇಟೆಯಾಡಿದ. ಬಲೆಗಳಲ್ಲಿಯೂ ನೈಲಾನ್ ಬಲೆಯವರೆಗೆ ವ್ಯತ್ಯಾಸಗಳಾಗಿವೆ. ಜೇನುಬೇಟೆಯಲ್ಲಿ ಜೇನು ಅರಿಯನ್ನು ಯಂತ್ರಕ್ಕೆ ಹಾಕಿ ಜೇನುತುಪ್ಪ ತೆಗೆಯಲಾಗುವುದು. ಜೇನುನೊಣಗಳನ್ನು ಪೆಟ್ಟಿಗೆಯಲ್ಲಿಟ್ಟು ಸಾಕುವುದು ಸಕಲೇಶಪುರ, ಕೊಡಗು ಮುಂತಾದ ಮಲೆನಾಡು ಭಾಗದಲ್ಲಿ ಉದ್ಯಮವಾಗಿ ಬೆಳೆಯಲು ಒತ್ತಾಸೆಯಾಗಿದೆ. ಹೀಗೆ ಬೇಟೆಯಲ್ಲಿ ನಾನಾ ಬದಲಾವಣೆಗಳು ನಿಚ್ಚಳ ವಾಗಿವೆ.

ಬೇಟೆ ಎಂಬುದು ಹಿಂಸಾಪ್ರಧಾನವಾದುದು. ಯಾವುದೇ ಪ್ರಾಣಿಯ ಬದುಕುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಹಕ್ಕು ಮಾನವನಿಗಿಲ್ಲ. ಹಿಂದಿನವರು ಬೇಟೆಯಾಡಿದರೂ ಅದರಲ್ಲಿ ಬದ್ಧತೆ ಇತ್ತು. ಆದರೆ ಈಗ ಬೇಟೆ ಅರಣ್ಯಚೋರರ ಕೈಯಲ್ಲಿ ಸಿಕ್ಕಿ ವಿರೂಪವಾಗಿದೆ. ಇಂದು ಮಾರುಕಟ್ಟೆಯ ಬೇಡಿಕೆಯನ್ನು ಗಮನಿಸಿ ದಂತಕ್ಕಾಗಿ ಆನೆ ಬೇಟೆಯಾಡುತ್ತಾರೆ. ಚರ್ಮಕ್ಕಾಗಿ ಹುಲಿ, ಜಿಂಕೆ, ಉಡ, ಹಾವು ಮೊದಲಾದ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಇಂದು ಬೇಟೆ ಸಂಸ್ಕೃತಿಯಿಂದ ವಿಕೃತಿಯತ್ತ ಚಲಿಸುತ್ತಿದೆ. ಇಂಥ ಕವಲುದಾರಿಯಲ್ಲಿ ಪ್ರಾಣಿಬೇಟೆ ಕುರಿತ ಅಧ್ಯಯನವು ಮಾನವನ ಸಾಂಸ್ಕೃತಿಕ ಅಧ್ಯಯನಕ್ಕೆ ವಿಪುಲ ಮಾಹಿತಿ ನೀಡುವ ಮೂಲಕ ಪೂರಕವಾಗಿ ನಿಲ್ಲುತ್ತದೆ.

●

# ಕೊಡಗಿನಲ್ಲಿ ಪ್ರಾಣಿ ಬೇಟೆ

◆ *ಐನಂಡ ಎಂ. ಧನು*

ಕೊಡವರು, ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಇತರ ಎಲ್ಲಾ ಜನಾಂಗದವರಂತೆ ವೀರ ಯೋಧರ ಪರಂಪರೆಗೆ ಸೇರಿದವರು. ಹೋರಾಟ ಜೀವನ ಅವರಲ್ಲಿ ರಕ್ತಗತವಾಗಿ ಬಂದಿದೆ. ಪ್ರಾಣಿಗಳ ಬೇಟೆಯಲ್ಲಿ ಅವರ ಶೌರ್ಯ ಪ್ರತಾಪಗಳ ವರ್ಣನೆ ಜಾನಪದ ಗೀತೆಗಳಲ್ಲಿ ಬೇಕಾದಷ್ಟಿವೆ. ಪ್ರತೀ ಕೊಡವ ಕುಟುಂಬವೂ ತನ್ನ ಪೂರ್ವಜರನ್ನು ವೀರರನ್ನೂ ಇಂದಿಗೂ "ಕಾರಣ"ರೆಂಬ ಹೆಸರಿನಿಂದ (ಪಿತೃದೇವತೆ) ಪೂಜಿಸುತ್ತಿದ್ದಾರೆ.

**ಬೇಟೆ :**

ಕೊಡವರಲ್ಲಿ ಹಿಂದಿನಿಂದಲೂ ಆಟ-ಓಟ-ಬೇಟೆಗಳಿಗೆ ಪ್ರಧಾನ್ಯತೆ ಇದೆ. ಅವರಿಗೆ "ಬೇಟೆ" ಎಂದರೆ ಪಂಚಪ್ರಾಣ. ಪ್ರತಿಯೊಬ್ಬ ಕೊಡವರ ಮನೆಯಲ್ಲಿಯೂ ಕೋವಿ ಇದ್ದೇ ಇರುತ್ತದೆ. ಇನ್ನೂ ಕೆಲವರಲ್ಲಿ ಭರ್ಚಿ, ಖಡ್ಗ, ಕಠಾರಿಗಳೂ ಇರುತ್ತವೆ. "ಬೋಟೆಕಾರ ಅಯ್ಯಪ್ಪ" ಅಥವಾ "ಸಾರ್ಥಾವು" ಎನ್ನುವ ವನದೇವತೆಯೇ ಬೇಟೆಗಾರರಿಂದ ಪೂಜಿಸಲ್ಪಡುವ ದೇವರುಗಳು. ಕೆಲವು ಕಡೆಗಳಲ್ಲಿ "ಬೇಟೆ ಚಾವುಂಡಿ" ಎಂಬ ಸ್ತ್ರೀ ದೇವತೆಯನ್ನು ಆರಾಧಿಸುತ್ತಾರೆ. ಕಾಡಿನ ಕೆನ್ನಾಯಿಗಳು ಈ ದೇವತೆಗಳ ಬೇಟೆನಾಯಿಗಳೆಂದು ನಂಬಿಗೆ ಇದೆ. ಮಗು ಹುಟ್ಟಿದಾಗ ಬಂದೂಕದ ಶಬ್ದ, ನಾಮಕರಣದ ದಿನ ಕೈಗೆ ಬಿಲ್ಲುಬಾಣ ಹಿಡಿಸುವುದು-ಕೊಡವರ ಪದ್ಧತಿ.

**ಬಂದೂಕು :**

ಹಿಂದಿನ ಕಾಲದಲ್ಲಿ ಬಂದೂಕುಗಳನ್ನು ಯುದ್ಧಕ್ಕೂ, ಬೇಟೆಗೂ ಆತ್ಮರಕ್ಷಣೆಗೂ, ಮನೆ ಮಠಗಳನ್ನು ಕಾವಲು ಕಾಯುವುದಕ್ಕೂ ಬಳಸುತ್ತಿದ್ದರು. ಬಂದೂಕುಗಳಲ್ಲಿ "ತಿರಿತೋಕ್" (ಬತ್ತಿಕೋವಿ), ನೆರ್‌ಪತೋಕ್ (ಮದ್ದು ತುಂಬಿಸುವ ಕೋವಿ), ಒತ್ತೆಕೊಳ (ಒಂಟಿ ನಳಿಗೆ), ಜೋಡ್‌ಕೊಳ (ಜೋಡಿ ನಳಿಗೆ - Double Barrel), ಪಿಸ್ತೂಲು, ತೋಟಿತೋಕ್ (Breach loading Gun) ಹೀಗೆ ಅನೇಕ ವಿಧದ ಬಂದೂಕುಗಳನ್ನು ಬಳಸುತ್ತಿದ್ದರು. ಯಾರ ಮನೆಯಲ್ಲಾದರೂ ಸರಿ, ಕನಿಷ್ಟ ಪಕ್ಷ ಮೂರು ವಿಧದ ಬಂದೂಕುಗಳಿರುತ್ತಿದ್ದುದು ಸರ್ವೇ ಸಾಮಾನ್ಯವಾಗಿತ್ತು. ಹಾಗೆಯೇ ಪ್ರತಿಯೊಬ್ಬರೂ ನಾಲ್ಕಾರು ಬಲಿಷ್ಠ ಬೇಟೆನಾಯಿಗಳನ್ನೂ ಸಾಕಿರುತ್ತಿದ್ದರು.

**ಬೇಟೆಗಾರರು :**

ಅವರು ನಿಶ್ಚಿತ ದಿನಗಳಲ್ಲಿ ಗ್ರಾಮದೊಳಗೆ "ಊರ್ ಬೇಟೆ", ನಾಡು ಅಥವಾ ಹೋಬಳಿಯ ಕಾಡುಗಳಲ್ಲಿ "ನಾಡ್ ಬೋಟೆ" ಮಾಡುತ್ತಿದ್ದರು. ಬೇಟೆಗೆ ಹೋಗುವಾಗ ಕೊಡವರು, ತಮ್ಮ ಸ್ನೇಹಿತರಲ್ಲದೆ ಮನೆಯ ಜಮ್ಮದಾಳುಗಳಾದ ಕೆಂಬಟ್ಟಿಯವರು, ಎರವರು, ಕುರುಬರು, ಮಲೆಕುಡಿಯರು, ಕಾಪಾಳರು - ಹೀಗೆ ಅನೇಕ ಬುಡಕಟ್ಟು ಜನಾಂಗದವರನ್ನು ಜೊತೆಗೆ ಸೇರಿಸಿಕೊಳ್ಳುತ್ತಿದ್ದರು. ಇವರೆಲ್ಲರಿಗೂ ಬೇಟೆಯ ನೀತಿ-ನಿಯಮ, ಬಂದೂಕು ಕ್ರಮ, ಬೇಟೆಯನ್ನು ಅಟ್ಟಿಸಿಕೊಂಡು ಛೂ ಬಿಡುವ ಕ್ರಮ, ಬೇಟೆಯನ್ನು ಅಟ್ಟಿಸಿಕೊಂಡು ಹೋಗುವ ರೀತಿ, ಬೇಟೆಗೆ ಅಡಗಿ ಕೂರುವ ತಾಣದ ಏರ್ಪಾಡು, ಕೋವಿ ಮದ್ದು-ಚರೆಗಳನ್ನು ಜೋಪಾನವಾಗಿಡುವ ಹಾಗೂ ತುಂಬಿಸುವ ಕ್ರಮ-ಪ್ರತಿಯೊಂದೂ ತಿಳಿದಿರುತ್ತಿತ್ತು.

**ಬೇಟೆಯ ದೇವರು :**

ಬೇಟೆಗೆ ಅಧಿದೇವತೆ "ಅಯ್ಯಪ್ಪ ದೇವರು". ಪ್ರತೀ ಊರಿನಲ್ಲೂ ಅನೇಕ ದೇವರ ಕಾಡುಗಳಿರುತ್ತವೆ. ಅದರ ನಡುಮಧ್ಯದಲ್ಲಿ ಈ ದೇವರನ್ನು ಹಾಲು ಒಸರುವ ಒಂದು ಮರದ ಕೆಳಗೆ ಪ್ರತಿಷ್ಠಾಪಿಸಿರುತ್ತಾರೆ. ಈ ದೇವರ ಆಯುಧ-ಬಿಲ್ಲುಬಾಣ; ನಾಯಿ, ಕುದುರೆಗಳು ಮೆಚ್ಚಿನ ಪ್ರಾಣಿಗಳು. ಬುಧವಾರ ಮತ್ತು ಶನಿವಾರ ಈ ದೇವರ ಪವಿತ್ರ ದಿನಗಳು. ಅಂದು ಯಾರೂ ಬೇಟೆಗೆ ಹೊರಡುವುದಿಲ್ಲ. ಬೇರೆ ದಿನ, ಬೇಟೆಗೆ ಹೊರಡುವ ಮುನ್ನ ಬೇಟೆಗಾರರೆಲ್ಲಾ ಈ ದೇವರೆದುರು ನಿಂತು ಪ್ರಾರ್ಥಿಸಿ ಹರಕೆ ಹೊತ್ತು ಹೊರಡುತ್ತಾರೆ.

ಬೇಟೆಗೆ ಕೊಂಬು, ಕಹಳೆ, ವಾದ್ಯ, ಢೋಲುಗಳ ಸಹಿತ ಹೊರಡುತ್ತಾರೆ. ಇದಕ್ಕೆ "ಮೇದ" ಎಂಬ ಜನಾಂಗದವರನ್ನು ಕರೆದೊಯ್ಯುತ್ತಾರೆ. ಕೇವಲ ಕಾಡಿನೊಳಗಷ್ಟೇ ಅಲ್ಲ, ಬೆಟ್ಟಗುಡ್ಡಗಳನ್ನು ಸುತ್ತಾಡಿ, ಹೊಳೆ ನದಿಗಳ ದಡದುದ್ದಕ್ಕೂ ಸಂಚರಿಸಿ ಬೇಟೆಯಾಡ ಬೇಕಾಗುತ್ತೆ.

ನೂರು ವರ್ಷಗಳ ಹಿಂದೆ ಕೊಡಗು ದಟ್ಟವಾದ ಅರಣ್ಯಗಳಿಂದ, ೬೦ ರಿಂದ ೧೦೦ ಅಡಿ ಎತ್ತರವಿದ್ದ ಬಿದಿರು ಮೆಳೆಗಳಿಂದ ಕೂಡಿದ ಕಾನನವಾಗಿತ್ತು. ಹುಲಿ, ಆನೆ, ಸಿಂಹ, ಕರಡಿ, ಜಿಂಕೆ, ಮಿಗ, ಕಾಡುಕೋಣ, ಮೊಲ, ಚಿರತೆಗಳು, ಕಪಿ, ಕಾಡುಕುರಿಗಳು ಹೇರಳವಾಗಿದ್ದುವು. ಇವು ಜನರು ವಾಸಿಸುವ ಮನೆಯ ಹತ್ತಿರದಲ್ಲೇ ನಿರ್ಭಯವಾಗಿ ಸಂಚರಿಸುತ್ತಿದ್ದುವು. ತೋಳ, ಕೆನ್ನಾಯಿ, ಗುಳ್ಳೆನರಿಗಳಿಗಂತೂ ಲೆಕ್ಕವೇ ಇರಲಿಲ್ಲ. ಹಾವು, ಮುಂಗುಸಿಗಳೂ ಮನೆಯ ಹತ್ತಿರವೇ ಇರುತ್ತಿದ್ದುವು.

**ಕೊಡಗಿನ ಅರಸರು :**

ಕೊಡಗನ್ನಾಳಿದ ಲಿಂಗಾಯತ ಅರಸರೂ, ಬ್ರಿಟಿಷರೂ ಕೊಡಗಿನವರ ಜೊತೆ ತಾವೂ ಬೇಟೆಗೆ ಹೊರಡುವುದು ತೀರಾ ಸಾಮಾನ್ಯವಾಗಿತ್ತು. ಕ್ರಿ.ಶ. ೧೮೧೧ ರಿಂದ ೧೮೨೦ರವರೆಗೆ ಆಳಿದ ಲಿಂಗರಾಜೇಂದ್ರ ಒಡೆಯನು ಒಂದೇ ವರ್ಷದಲ್ಲಿ ೩೮೦ ಹುಲಿಗಳನ್ನು ಗುಂಡಿಕ್ಕಿ ಕೊಂದಿದ್ದನು. ಅನೇಕ ಹುಲಿಮರಿಗಳನ್ನು ಅರಮನೆಯಲ್ಲಿ ಸಾಕಿದ್ದನು. ಆತ ಕೊಂದಿದ್ದ ಆನೆಗಳಿಗೂ ಲೆಕ್ಕವಿಲ್ಲ.

**ಬೇಟೆಯ ದಿನ :**

ಸಾಮಾನ್ಯವಾಗಿ ಬೇಟೆಯಾಡಲು "ಕೈಲು ಮುಹೂರ್ತ" ಹಬ್ಬ ಕಳೆದು (ಸೆಪ್ಟೆಂಬರ್ ೩) ಹುತ್ರಿ ಹಬ್ಬದವರೆಗೂ (ವೃಶ್ಚಿಕ ಮಾಸದ ಹುಣ್ಣಿಮೆ) ಕಾಲಾವಕಾಶವಿರುತ್ತಿತ್ತು. ಈ ಅವಧಿಯಲ್ಲಿ ಬೇಟೆಗೆ ಬೇಟೆಗಾರರೆಲ್ಲಾ ಒಟ್ಟಾಗಿ ಹೋಗುತ್ತಿದ್ದರು. ಹುತ್ರಿ ಸಮಯದಲ್ಲಿ ಭತ್ತದ ಗದ್ದೆಗೆ ಆನೆ ಮೊಲ, ಕಾಡುಹಂದಿ, ಮುಳ್ಳುಹಂದಿಗಳು ಬೆಳೆ ತಿನ್ನಲು ಬರುವ ಕಾಲವಾಗಿದ್ದುದರಿಂದ ಗದ್ದೆ, ಬಯಲುಗಳಲ್ಲೇ ಇವುಗಳನ್ನು ಬೇಟೆಯಾಡಿ ನಿಯಂತ್ರಿಸುತ್ತಿದ್ದರು.

**ಬೇಟೆಯ ಮೃಗಗಳು :**

ಸಾಮಾನ್ಯವಾಗಿ ಹುಲಿ, ಚಿರತೆ, ಕಿರುಬ, ಕತ್ತೆಕಿರುಬ, ಕಾಡುಬೆಕ್ಕು, ಕತ್ರಿಬೆಕ್ಕು (ಕಸ್ತೂರಿಮೃಗ) ಪಾರ್‌ಬೆಕ್ಕು (ಹಾರುವ ಬೆಕ್ಕು) ಕಾಡು ಹಂದಿ, ಮುಳ್ಳುಹಂದಿ, ಎಪ್ಪಂದಿ ಅಥವಾ ಚೆಳ್ಳವ (ಚಿಪ್ಪುಹಂದಿ) ಕೇಮ (ಕಾಡುಕುರಿ), ಕಡ್‌ಮ (ಕಡವೆ)ಕೊಂಬ (ಸಾರಂಗ), ಮೊಲ, ಬಂಟಿಗ (ಸಲಗ)ಗಳನ್ನೇ ಬೇಟೆಯಾಡುತ್ತಾರೆ. ಸಿಂಹವನ್ನು ಬೇಟೆಯಾಡಿದ ಉದಾಹರಣೆ ಇಲ್ಲ. ಕರಡಿ ಬೇಟೆಯೂ ತುಂಬ ಕಮ್ಮಿ. ಕಾಡೆಮ್ಮೆ, ಕಾಡುಕೋಣಗಳನ್ನು ಗುಂಡಿಕ್ಕಿ ಕೊಂದಿದ್ದಾರೆ. ಚಿಕ್ಕವೀರರಾಜನು ತನ್ನ ಆಡಳಿತಾವಧಿಯಲ್ಲಿ ೫೦೦ಕ್ಕೂ ಹೆಚ್ಚು ಆನೆಗಳನ್ನೂ ಕೊಡಗಿನವರ ಜೊತೆ ಹಾಗೂ ಬ್ರಿಟಿಷರ ಜೊತೆಗೂಡಿ ಕೊಂದಿದ್ದಾನೆ; ಹಾಗೂ ಅನೇಕ ಆನೆಮರಿಗಳನ್ನು ಹಿಡಿಸಿ ತಂದು ಸಾಕಿದ್ದಾನೆ. ಎಷ್ಟೋ ಕಾಡಾನೆಗಳನ್ನು ಹಿಡಿಸಿ ತಂದು ಪಳಗಿಸಿದ್ದಾನೆ.

**ಬೇಟೆಯ ಸಾಧನ :**

ಕೊಡಗಿಗೆ ಬಂದೂಕು, ಮದ್ದು, ಗುಂಡುಗಳು ಮತ್ತು ಕುದುರೆಯ ಬಳಕೆ ಬ್ರಿಟಿಷರಿಂದ ಬಂದ ಕೊಡುಗೆ. ಆಗ ದೊಡ್ಡ ವೀರರಾಜನು ಕೊಡಗನ್ನು ಆಳುತ್ತಿದ್ದನು. ಇವನು ತಲಚೇರಿಯಿಂದ ಬ್ರಿಟಿಷರ ಮೂಲಕ ಕುದುರೆಗಳನ್ನೂ, ಬಂದೂಕು, ಫಿರಂಗಿಗಳನ್ನೂ ಮೊದಲ ಬಾರಿಗೆ ಕೊಡಗಿಗೆ ತರಿಸಿದ್ದನು. ಅದಕ್ಕೂ ಮೊದಲು ಬಿಲ್ಲುಬಾಣ, ಈಟಿ, ಕತ್ತಿ, ಖಡ್ಗಗಳನ್ನೇ ಯುದ್ಧಕ್ಕೂ ಬೇಟೆಗೂ ಬಳಸುತ್ತಿದ್ದರು.

**ಬೇಟೆಯ ವಿಧ :**

ಬೇಟೆಯಾಡುವುದರಲ್ಲಿ ೪ ವಿಧಗಳಿವೆ : ೧) ಒಳಿಬೋಟೆ (ಬೇಟೆಗೆ ಅಡಗಿ ಕೂತಿರುವುದು), ೨) ಕೂಡ್‌ಬೋಟೆ (ಗುಂಪು ಬೇಟೆ), ೩) ಕೆಣೆಬೋಟೆ (ತಂತ್ರದ ಬೇಟೆ), ೪)ಇರ್‌ಬೋಟೆ (ಕತ್ತಲಲ್ಲಿ ಬೇಟೆಯಾಡುವುದು)

**ಕೆಣೆ ಬೋಟೆ :**

ಬೇಟೆಗಾರರ ಸಣ್ಣಗುಂಪು (ಸುಮಾರು ೧೦-೧೨ ಮಂದಿ) ಆರೆಂಟು ನಾಯಿಗಳನ್ನು ಜೊತೆಗೂಡಿಸಿ ಒಂದೆಡೆ ಮೌನವಾಗಿ ಕೂರುತ್ತಾರೆ. ಬಂಡೆಗಲ್ಲು, ಮರ, ಪೊದೆಗಳಲ್ಲಿ ದೂರದೂರವಾಗಿ ಕುಳಿತಿರುತ್ತಾರೆ. ಪ್ರಾಣಿಗಳು ಸಂಚರಿಸುವ ಜಾಗಗಳನ್ನು ಮೊದಲೇ ಹೆಜ್ಜೆಯ ಜಾಡಿನ ಮೂಲಕ ಗುರುತಿಸಿರುತ್ತಾರೆ.

ಪ್ರಾಣಿಗಳು ಬರುವ ಹೋಗುವ ಜಾಗದಲ್ಲಿ ಸಣ್ಣ ಗುಂಡಿಗಳನ್ನು ತೋಡಿ ಅವುಗಳ ಮೇಲೆ ಕಡ್ಡಿ ಸೊಪ್ಪುಗಳನ್ನು ಹರಡಿ ಮುಚ್ಚಿರುತ್ತಾರೆ. ಪ್ರಾಣಿಗಳು ಈ ಗುಂಪಿಗೆ ತಿಳಿಯದೆ ಬಿದ್ದಾಗ ಬಲೆ ಬೀಸಿ ಹಿಡಿಯುತ್ತಾರೆ. ಕೆಲವು ಸಂದರ್ಭಗಳಲ್ಲಿ ಹಗ್ಗದ ಉರುಲು ಮಾಡಿ ಪೊದರು, ಬೇಲಿಗಳ ಎಡೆಯಲ್ಲಿ ಸಿಕ್ಕಿಸಿರುತ್ತಾರೆ. ತಿಳಿಯದೆ ಪ್ರಾಣಿಗಳು ತಲೆ ಇಟ್ಟು ನುಗ್ಗಿದಾಗ ಇಂಥಾ ಉರುಲಿಗೆ ಸಿಕ್ಕಿಹಾಕಿ ಸಾಯುತ್ತವೆ. ಇಲ್ಲವೇ ಅರೆಜೀವವಾಗಿರುತ್ತವೆ.

ಇನ್ನು ಕೆಲವರು ಕೋವಿಗೆ ಮದ್ದುಗುಂಡು ತುಂಬಿಸಿ ಅದರ ಚಾಪನ್ನು (ಬಿಲ್ಲು Lock) ಎಳೆದು ನಿಲ್ಲಿಸಿರುತ್ತಾರೆ. ಕೋವಿಯ ಬಾಯಿಯ ಎದುರಿಗೆ ಸತ್ತ ಪ್ರಾಣಿಗಳ ಮಾಂಸ ಇಟ್ಟಿರುತ್ತಾರೆ. ಮಾಂಸಕ್ಕೆ ಬಾಯಿ ಹಾಕಿದ ಪ್ರಾಣಿಯು ಮಾಂಸಕ್ಕೂ ಬಂದೂಕದ ಕುದುರೆಗೂ ಸಿಕ್ಕಿಸಿದ ಹಗ್ಗವನ್ನು ಜಗ್ಗಿದಾಗ ಗುಂಡು ಸಿಡಿಯುತ್ತದೆ. ಮಾಂಸ ತಿನ್ನಲು ಬಂದ ಪ್ರಾಣಿಯು ಸಾಯುತ್ತದೆ. ಅಡಗಿ ಕುಳಿತಿರುವವರು ಸತ್ತ ಮೃಗವನ್ನು ಹೊತ್ತೊಯ್ಯುತ್ತಾರೆ. ಮೊಲ, ಕಾಡುಹಂದಿ, ಮುಳ್ಳುಹಂದಿ, ಚಿಪ್ಪುಹಂದಿ, ಜಿಂಕೆ, ಕಾಡುಕುರಿಗಳನ್ನು ಸುಲಭವಾಗಿ ಕೊಲ್ಲುವ ವಿಧಾನದಲ್ಲಿ ಉರುಲು, ಬಲೆ, ಗೂಟಕ್ಕೆ ಕಟ್ಟಿದ ಬಿಲ್ಲಿನ ಮೂಲಕ ಈ ರೀತಿ ಬೇಟೆಯಾಡುತ್ತಾರೆ.

**ಕೂಡ್ ಬೋಟೆ :**

ಇದರಲ್ಲೂ ೧೦-೧೨ ಜನರ ಗುಂಪು, ಕತ್ತಿ ಕೋವಿ, ಬಿಲ್ಲು ಬಾಣಗಳನ್ನು ಹಿಡಿದು "ಬೋಟೆಕಾರ ಅಯ್ಯಪ್ಪದೇವರ"ನ್ನು ಸ್ಮರಿಸಿ ಬೇಟೆಗೆ ಹೊರಡುತ್ತಾರೆ. ಜೊತೆಗೆ ನಾಯಿಗಳೂ ಇರುತ್ತವೆ. ಮೇದರು ಡೋಲು, ತಮ್ಮಟೆ ಬಾರಿಸುತ್ತಾರೆ. ಕೆಂಬಟ್ಟಿಯವರು ಕೊಂಬು ಕಹಳೆ ಊದುತ್ತಾರೆ. ಕಾಡುಕುರುಬರು ಕಾಡು, ಮುಳ್ಳು, ಸವರಿ ದಾರಿ ಮಾಡಿಕೊಡುತ್ತಿರುತ್ತಾರೆ. ಇರುವೆ, ಹಾವು, ಸೊಳ್ಳೆ, ಚೇಳು ಕಚ್ಚದಂತೆ ಸೊಪ್ಪಿನ ಔಷಧಿ ಮಾಡಿಕೊಂಡಿರುತ್ತಾರೆ. ಎರವರು ಹರಿತವಾದ ಕತ್ತಿ ಚಾಕು, ಬಾಕು, ಹಗ್ಗ, ಚೀಲಗಳನ್ನು ಹೊತ್ತುಕೊಂಡಿರುತ್ತಾರೆ. ಈ ಬೇಟೆಗಾರರಲ್ಲಿ ಕೆಲವರು ಬೇಟೆಯ ತಂತ್ರಗಳನ್ನು ಕಲಿತಿರುವ ನಾಯಿಗಳನ್ನು ಹಿಡಿದುಕೊಂಡಿರುತ್ತಾರೆ. ಈ ನಾಯಿಗಳು ಏಟು ತಗಲಿ ಸತ್ತುಬಿದ್ದ ಮೃಗಗಳನ್ನು ಹುಡುಕಿ ತನ್ನ ಯಜಮಾನನನ್ನು ಅಲ್ಲಿಗೆ ಕರೆದೊಯ್ಯುತ್ತವೆ. ಗುಂಡೇಟು ಬೀಳುವತನಕ ಇವು ಬೊಗಳುವುದಿಲ್ಲ.

ಮರದ ಮೇಲೆ ಅಟ್ಟಣಿಗೆ ಕಟ್ಟಿ ಬೇಟೆಗೆ ಕೂರುವ ಕ್ರಮವಿದೆ. ಬೇಟೆಗಾರರು ಇಂತಿಂಥ ಕಡೆ ಕುಳಿತಿರಬೇಕು, ಇಂಥಾ ದಾರಿಗಾಗಿಯೇ ಹಾಯಬೇಕು ಇಂತಹ ಸಿಳ್ಳು ಹಾಕಿ ಪ್ರಾಣಿಗಳು ಇರುವ ಸೂಚನೆ, ಅಪಾಯದ ಸೂಚನೆ, ಓಡುವ ಸೂಚನೆ, ಬೇಟೆ ಸಿಕ್ಕಿದ ಸೂಚನೆ ತಿಳಿಸಬೇಕೆಂಬ ನಿಯಮವಿದೆ. ಕೆಲವರು ಪ್ರಾಣಿಗಳ ಧ್ವನಿಯನ್ನು ಅನುಕರಣೆ ಮಾಡಿ ಅವು ಇರುವ ನೆಲೆಯನ್ನು ಕಂಡುಕೊಳ್ಳುತ್ತಾರೆ. ಇಂಥಾ ನಿಯಮಕ್ಕೆ "ಮುಂಗುಡು" ಮತ್ತು "ಬೈಕಡು" ಎಂಬೆರಡು ಬೇಟೆಯಾಡುವ ಕ್ರಮ ಕೈಗೊಂಡಿರುತ್ತಾರೆ.

**ಇರ್‌ಬೇಟೆ :**

ಬೇಟೆಗಾರರು ರಾತ್ರಿ ಕಾಲದಲ್ಲಿ ಬೇಟೆಯಾಡುವ ಕ್ರಮವೇ ಕತ್ತಲ ಬೇಟೆ. ಹಣೆಗೆ ಹೆಡ್‌ಲೈಟ್

ಕಟ್ಟಿಕೊಂಡಿರುತ್ತಾರೆ. ಇಲ್ಲವೇ ಉದ್ದನೆಯ ಟಾರ್ಚ್ ಹಿಡಿದುಕೊಂಡಿರುತ್ತಾರೆ. ಪ್ರಾಣಿಗಳ ಇಲ್ಲವೇ ಪಕ್ಷಿಗಳನ್ನು ದೀಪದಲ್ಲಿ ಕಂಡುಹಿಡಿದು ಅವುಗಳ ಹೊಳೆಯುವ ಕಣ್ಣುಗಳಿಗೇ ಗುರಿ ಇಟ್ಟು ಗುಂಡು ಹೊಡೆದು ಬೀಳಿಸುತ್ತಾರೆ. ಬೆಳ್ದಿಂಗಳಿದ್ದಾಗ ಮೊಲ, ಕಡವೆ, ಹಂದಿಗಳನ್ನು ಹೊಡೆದುರುಳಿಸುತ್ತಾರೆ. ಕತ್ತಲಲ್ಲಿ ಇವು ಸಂಚರಿಸುವುದು ತೀರ ಕಡಿಮೆ. ನೀರು ಕುಡಿಯಲು ಬಂದಾಗ, ಗದ್ದೆಯ ಬೆಳೆಗಳನ್ನು ನಾಶಪಡಿಸುವಾಗ "ಇರ್‌ಬೇಟೆ"ಗೆ ಹೊರಡುತ್ತಾರೆ.

**ಮಾಂಸದ ಹಂಚುವಿಕೆ :**

ಬೇಟೆಯಾಡಿ ಯಾವುದೇ ಒಂದು ಮೃಗವನ್ನು ಹೊಡೆದು ಉರುಳಿಸಿದ ಮೇಲೆ ಬೇಟೆಗಾರರ ಪೈಕಿ ಯಾರಾದರೊಬ್ಬ ಅದನ್ನು ಮೊದಲು ಮುಟ್ಟಿನೋಡಿ ಅದು ಸತ್ತಿದೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಬಹುದು, ಸತ್ತಿಲ್ಲದೆ ಅರ್ಧಜೀವವಾಗಿದ್ದರೆ ಮತ್ತೊಂದು ಗುಂಡು ಹೊಡೆದು ಆತ ಸಾಯಿಸಬೇಕು. ಆತನಿಗೆ ಆ ಪ್ರಾಣಿಯ ಬೆನ್ನುಹುರಿಯ ಮಾಂಸ ಕೊಡಬೇಕು.

ಗುಂಡೇಟು ತಿಂದ ಪ್ರಾಣಿಯು ಎಲ್ಲೋ ಒಂದೆಡೆ ಓಡಿ ಹೋಗಿ ಬಿದ್ದು ಸತ್ತಿದ್ದರೆ ಅದನ್ನು ಹುಡುಕಲು ಗುಂಪಿನ ಬೇಟೆಗಾರರು ಹೋಗುತ್ತಾರೆ. ಸತ್ತ ಪ್ರಾಣಿಯನ್ನು ಮೊದಲು ಕಂಡುಹಿಡಿದವನಿಗೆ ಅದರ ಇಡೀ ಒಂದು ತೊಡೆಯ ಮಾಂಸವನ್ನು ಬಹುಮಾನವಾಗಿ ಕೊಡಬೇಕು. ಹಂದಿ, ಜಿಂಕೆ, ಕಡವೆ, ಕಾಡುಕೋಣ - ಇಂತಹ ಪ್ರಾಣಿಗಳನ್ನು ತಿನ್ನುತ್ತಾರೆ.

**ಬೇಟೆನಾಯಿಗಳ ಪಾತ್ರ :**

ಬೇಟೆಗೆ ಹೋಗುವಾಗ ನಾಯಿಗಳನ್ನು ಜೊತೆಗೆ ಕರೆದೊಯ್ಯುತ್ತಾರೆ. ಇವು ಗುಂಡು ಶಬ್ದ ಕೇಳಿದೊಡನೆ ಆರ್ಭಟಿಸುತ್ತಾ ಪ್ರಾಣಿಯೆಡೆಗೆ ಧಾವಿಸುತ್ತವೆ. ನಾಯಿಗಳೂ ಕೂಡ ಸತ್ತು ಬಿದ್ದಿರುವ ಬೇಟೆಯನ್ನು ತೋರಿಸಿಕೊಡುತ್ತವೆ. ಆದರೆ ಅವು ರಕ್ತವನ್ನು ಸಹ ನೆಕ್ಕುವುದಿಲ್ಲ. ಆದ್ದರಿಂದ ನಾಯಿಗೂ ಮಾಂಸದಲ್ಲಿ ಒಂದು ಪಾಲು ಕೊಡುತ್ತಾರೆ. ಬೇಟೆಯಲ್ಲಿ ೧೦ ನಾಯಿಗಳಿದ್ದರೆ ೧೦ ಕೆ.ಜಿ.ಯಷ್ಟು ಮಾಂಸ ಅವುಗಳ ಯಜಮಾನರಿಗೆ ದಕ್ಕುತ್ತದೆ. ಆತ ಅದನ್ನು ನಾಯಿಗಳಿಗೆ ತಿನ್ನಿಸುತ್ತಾರೆ.

**ತಪ್ಪದ ಗುರಿ :**

ಯಾರ ಬಂದೂಕದಿಂದ ಪ್ರಾಣಿಗೆ ಗುಂಡೇಟು ತಗಲಿತೋ ಆತನಿಗೆ ಅದರ ತಲೆಭಾಗ, ಒಂದು ತೊಡೆ ಹಾಗೂ ಒಟ್ಟು ಮಾಂಸದಲ್ಲಿ ಒಂದು ಪಾಲು ಹೆಚ್ಚಿಗೆ ಕೊಡುತ್ತಾರೆ. ಜೊತೆಗೆ ಆತ ಅದರ ಕೊಂಬನ್ನು ದೇವಸ್ಥಾನದಲ್ಲಿ ಪೂಜಿಸಿ ಮನೆಗೆ ಕೊಂಡೊಯ್ದು ಅಲಂಕಾರಕ್ಕಾಗಿ ಗೋಡೆಯಲ್ಲಿ ಮೊಳೆ ಹೊಡೆದು ಸಿಕ್ಕಿಸುತ್ತಾನೆ. ಪ್ರಾಣಿಗೆ ಗುಂಡು ಹೊಡೆದವನನ್ನು ಕೊಡವ ಭಾಷೆಯಲ್ಲಿ "ಬಟ್ಟ್‌ಕಾರ" (ಗುರಿಕಾರ) ಎನ್ನುತ್ತಾರೆ. ಬೇಟೆಕಾಲದಲ್ಲಿ ನಿಯಮಿತ ಸ್ಥಳದಲ್ಲಿ ನಿಂತಿರುವ ಯಾರಾದರೂ ಸರಿ ಗುಂಡು ಹೊಡೆಯಬಹುದು ಬಂದೂಕು ಸಿಡಿದ ಸದ್ದಿನಿಂದಲೇ ಮೃಗ ಬಿದ್ದಿತೇ, ತಪ್ಪಿತೇ-ಎಂದರಿಯಬಹುದು. ಹೊಡೆದ ಗುಂಡೇಟು ತಪ್ಪಿ, ಪ್ರಾಣಿಯು ಪರಾರಿಯಾಗಿಬಿಟ್ಟರೆ ಅಂತಹವನ ಎರಡೂ ಕಾಲುಗಳಿಗೆ ಮುಳ್ಳುಕೋಲಿನಿಂದ ಹೊಡೆಯುವ ಶಿಕ್ಷೆ ಇದೆ. "ಇಟ್ಟಗುರಿ ತಪ್ಪಲೇಬಾರದು!" ಒಂದೇ ಕಾಲಕ್ಕೆ ಇಬ್ಬರು ಒಂದೇ ಪ್ರಾಣಿಗೆ ಗುಂಡು ಹೊಡೆದುಬಿಟ್ಟಿದ್ದರೆ

ಅವರ ಪೈಕಿ ಯಾರಾದರೊಬ್ಬ ಓಡುತ್ತಾ ಹೋಗಿ ಸತ್ತು ಬಿದ್ದ ಆ ಪ್ರಾಣಿಯನ್ನು ಮುಟ್ಟಿದರೆ ಸಾಕು, ಆತನಿಗೆ ಮೊದಲ ಪ್ರಾಶಸ್ತ್ಯ ಕೊಡಲಾಗುತ್ತದೆ. ದೊಡ್ಡ ಪ್ರಾಣಿಗಳನ್ನು ಬೇಟೆಯಾಡಿದ್ದರೆ ಅವುಗಳ ಮಾಂಸವನ್ನು ಅಲ್ಲೇ ಚರ್ಮ ಸುಲಿದು ಮಾಂಸ ಸಿದ್ಧಗೊಳಿಸುತ್ತಾರೆ. ಮೊಲ, ಜಿಂಕೆ, ಕಾಡುಕುರಿ, ಕಪಿ-ಇಂತಹ ಪ್ರಾಣಿಗಳನ್ನು ಮನೆಗೆ ಹೊತ್ತು ತರುತ್ತಾರೆ.

**ಹುಲಿ ಮದುವೆ :**

ಹುಲಿಯನ್ನು ಕೊಂದವನಿಗೆ "ಹುಲಿ ಮದುವೆ" ಮಾಡಿಸುತ್ತಾರೆ. ಹುಲಿಯ ಚರ್ಮವನ್ನು ನಾಜೂಕಾಗಿ ಕತ್ತರಿಸಿ ತೆಗೆದು ಒಣಗಿಸಿ ಭತ್ತದ ಹೊಟ್ಟು, ಒಣಹುಲ್ಲು ತುಂಬಿಸಿ ಹುಲಿಯ ಮೊದಲ ಸ್ವರೂಪವಿದ್ದಂತೆಯೇ ಮಾಡಿ ಇಡುತ್ತಾರೆ. ಹುಲಿಯ ಮಾಂಸವನ್ನು ಯಾರೂ ತಿನ್ನುವುದಿಲ್ಲ. ಅವು ನಾಯಿಯ ಪಾಲಾಗುತ್ತವೆ. ಹುಲಿಯ ಚರ್ಬಿಯನ್ನು ಕಾಯಿಸಿ ತುಪ್ಪ ಮಾಡಿ ಇಟ್ಟುಕೊಳ್ಳುತ್ತಾರೆ. ಇದನ್ನು ಹಾಲು ಕುಡಿಯುವ ಹಸುಗೂಸಿನಿಂದ ಹಿಡಿದು ಐದು ವರ್ಷದ ಮಕ್ಕಳಿಗೂ ಜೇನಿನೊಡನೆ ಬೆರೆಸಿ ತಿನ್ನಿಸುತ್ತಾರೆ. ಇದರಿಂದ ಅಂಥಾ ಮಕ್ಕಳಿಗೆ ಧೈರ್ಯ, ಶೌರ್ಯ, ತೇಜಸ್ಸು ಇರುತ್ತದೆ - ಎಂಬ ನಂಬಿಕೆ ಇದೆ. ಹುಲಿಯ ಉಗುರನ್ನು ಕತ್ತರಿಸಿ ತೆಗೆದು ಬೆಳ್ಳಿ ಇಲ್ಲವೇ ಬಂಗಾರದ ತಾಯಿತಕ್ಕೆ ಸೇರಿಸಿ ಕೊರಳು ಇಲ್ಲವೇ ಸೊಂಟಕ್ಕೆ ಕಟ್ಟುತ್ತಾರೆ. ಇದರಿಂದ ಮಕ್ಕಳಿಗೆ ಬಾಲಗ್ರಹ, ಭೂತ ಪಿಶಾಚಿಗಳ ಬಾಧೆ ಇರುವುದಿಲ್ಲವೆಂಬ ನಂಬಿಕೆ ಇದೆ.

ಹುಲಿಯ ಪುನರ್ ಸ್ವರೂಪವನ್ನು ರಚಿಸಿದ ಮೇಲೆ ಹುಲಿ ಕೊಂದಾತನನ್ನು ಮದುವಣಿಗನಂತೆ ಅಲಂಕರಿಸುತ್ತಾರೆ. ಕೊಂಬು, ಕಹಳೆ, ಡೋಲು, ತಮಟೆ, ದುಡಿ ಸಹಿತ ಎಲ್ಲರೂ "ನಾಡುಮಂದ್"ಗೆ (ಹುತ್ರಿ ಕೋಲಾಟವಾಡುವ, ಬೇರೆ ಬೇರೆ ಊರ ಜನರು ಒಂದೇ ಕಡೆ ಸೇರುವ ಮೈದಾನ) ಹೋಗುತ್ತಾರೆ. ಬಿಳಿ ಕುಪ್ಪಸ, ಕೆಂಪು ರೇಷ್ಮೆ ಚೇಲೆ (ದಟ್ಟಿ), ಬಿಳಿರುಮಾಲು, ಸೊಂಟದ ಬಲಗಡೆ ಸಿಕ್ಕಿಸಿಕೊಳ್ಳುವ ಬೆಳ್ಳಿ-ಬಂಗಾರದ ಪೀಚೆಕತ್ತಿ, (ಕಠಾರಿ) ಸೊಂಟದ ಸುತ್ತಲೂ ರೇಷ್ಮೆದಾರ ಸುತ್ತಿ ಒಡ್ಯಾಣ ಸಿಕ್ಕಿಸಿ ಅದಕ್ಕೆ ಕಟ್ಟಿರುವ ಬೆಳ್ಳಿಯ "ಒಡಿಕತ್ತಿ" ಅಂದರೆ "ಕಡಿಗತ್ತಿ"ಯನ್ನು ಬೆನ್ನ ಕೆಳಗೆ ಸೊಂಟಕ್ಕೆ ಕಟ್ಟಿ ಕೈಯ್ಯಲ್ಲಿ "ಗೆಜ್ಜೆತಂಡ್" ಬದಲು ಬಂದೂಕು.......(ಬೆಳ್ಳಿಯ ಗೆಜ್ಜೆ ಕಟ್ಟಿದ ಕರಿಮರದ ಊರುಗೋಲು)....ಹಿಡಿದು ತನ್ನ ಸ್ವಂತ ಮನೆಯಿಂದ "ಗುರುಕಾರಣ"ರಿಗೆ (ಪಿತೃದೇವತೆ) ನಮಿಸಿ ಹಿರಿಯರ ಕಾಲ್ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದು ಹೊರಡುತ್ತಾನೆ.

ದಾರಿಯುದ್ದಕ್ಕೂ ವಾಲಗ ಮೊಳಗುತ್ತಿರುತ್ತದೆ. ಸುಮಂಗಲಿಯರು ಆರತಿ ತಟ್ಟೆ ಹಿಡಿದಿರುತ್ತಾರೆ. ನಾಲ್ವರು ದುಡಿ ಬಾರಿಸುತ್ತಾ ಹುಲಿ ಕೊಂದ ವೀರನನ್ನು ಹಾಡಿ ಹೊಗಳುವ ಲಾವಣಿಯನ್ನು ಹಾಡುತ್ತಾ ಸಾಗುತ್ತಾರೆ. ಪ್ರತಿಯೊಬ್ಬ ವಯಸ್ಕ ಗಂಡಸು ಕರಿಕುಪ್ಪಸ, ಕೆಂಪುದಟ್ಟಿ, ರೇಷ್ಮೆ ರುಮಾಲು ಧರಿಸಿದ್ದರೆ, ಮಹಿಳೆಯರು ಬಣ್ಣಬಣ್ಣದ ರೇಷ್ಮೆ ಸೀರೆ, ತುಂಬುತೋಳಿನ ಕುಪ್ಪಸ, ತಲೆಗೆ, ರೇಷ್ಮೆ ವಸ್ತ್ರ ಕಟ್ಟಿ ದಿಬ್ಬಣ ಹೊರಡುತ್ತಾರೆ. ಹುಲಿ ಕೊಂದವನ ಹೆಂಡತಿಯೂ ಜೊತೆಯಲ್ಲಿ ಸಾಲಂಕೃತಳಾಗಿ ಹೊರಟಿರುತ್ತಾಳೆ. ಆದರೆ 'ಮದುವೆ ಮಂಟಪ'ದಲ್ಲಿ ಆಕೆಯ ಬದಲು ಹುಲಿಯನ್ನು ನಿಲ್ಲಿಸಿರುತ್ತಾರೆ. ಎಲ್ಲರಂತೆ ಆಕೆಯೂ ಗಂಡನಿಗೆ ಅಕ್ಷತೆ ಹಾಕಿ ಚಿನ್ನದ ಉಂಗುರ, ಚಿನ್ನದ ನಾಣ್ಯ ಅಥವಾ ಬೇರೆ ಯಾವುದಾದರೂ ಅಮೂಲ್ಯ ಉಡುಗೊರೆ ನೀಡುತ್ತಾಳೆ. ತಾನೇ ಕೈಹಿಡಿದ ಹೆಂಡತಿ

ಯಾಗಿದ್ದರೂ ತನ್ನ ಗಂಡನಿಗೆ ಹುಲಿಯೊಂದಿಗೆ, ಹೆಮ್ಮೆಯಿಂದ ಬೀಗುತ್ತಾ ಹುಲಿಕೊಂದ ಗಂಡನ ಮಡದಿ ಎಂಬ ಬಿಂಕದಿಂದ ಬಳುಕುತ್ತಾ ಅವನಿಗೆ ಮದುವೆ ಮಾಡಿಸುತ್ತಾಳೆ. ಉಳಿದವರೂ ಅಕ್ಷತೆ ಹಾಕಿ ಉಡುಗೊರೆ ನೀಡುತ್ತಾರೆ. ಎಲ್ಲರಿಗೂ ಸೇಂದಿ, ಸಾರಾಯಿ ಕೊಟ್ಟು ಭರ್ಜರಿಯಾಗಿ ಮಾಂಸದೂಟ ಬಡಿಸಿ ತೃಪ್ತಿ ಪಡಿಸುತ್ತಾರೆ. ಹುಲಿ ಕೊಂದಾತ ಮುಖದ ದುಂಬ "ಗಲ್ಲಮೀಸೆ" ಅಂದಿನಿಂದ ಬಿಡಲಾರಂಭಿಸುತ್ತಾನೆ.

**ಬೇಟೆ ನಿಶ್ಚಯ :**

ಸಾಧಾರಣವಾಗಿ, ಒಂದೂರಿನಲ್ಲಿರುವ ಬೇಟೆಗಾರರು ಅಯ್ಯಪ್ಪ ದೇವರನ್ನು ಪೂಜಿಸುವುದರೊಂದಿಗೆ "ಬೋಟೆ ಚಾವುಂಡಿ" ಎಂಬ (ಬೇಟೆ ಚಾಮುಂಡಿ) ದೇವತೆಗೂ "ಕೋಲ" ಕಟ್ಟಿಸುತ್ತಾರೆ. ಇದರಿಂದ ಬೇಟೆಗಾರರನ್ನು ಈ ದೇವತೆ ಅಪಾಯದಿಂದ ರಕ್ಷಿಸುತ್ತಾಳೆ - ಎಂಬ ನಂಬಿಕೆ ಇದೆ. ಬೇಟೆಗೆ ಹೋದಾಗ ತಪ್ಪದೆ ಪ್ರಾಣಿಗಳು ಸಿಕ್ಕಿಯೇ ಸಿಕ್ಕುತ್ತವೆ - ಎಂಬ ಭರವಸೆಯೂ ಇರುತ್ತದೆ. ಕೋಲ ಕಟ್ಟುವಾತ ವರ್ಷದ ಯಾವ ದಿನಗಳಲ್ಲಿ, ಯಾವ ದಿಕ್ಕಿನಲ್ಲಿ ಯಾವ ರೀತಿ ಬೇಟೆಗೆ ಹೋಗಬೇಕೆಂದು ತನಗೆ ಮೈಮೇಲೆ ಆವೇಶ (ದೇವರು) ಬಂದಿರುವ ಸಮಯದಲ್ಲಿ ತಿಳಿಸುತ್ತಾನೆ. ಅವನ ಅಪ್ಪಣೆಯಂತೆ ಬೇಟೆಗಾರರು ನಡೆದುಕೊಳ್ಳುತ್ತಾರೆ.

ಬೇಟೆಗೆ ಹೊರಡುವಾಗ ಇಂತಿಂತವರು "ಮುಂಗಡು ಬಿಲ್‌ಕಾರ", ಇವರು "ಬೈರಡು ಬಿಲ್‌ಕಾರ", ಈ ಜನರು "ಕಡು" (ಸುಳಿವು) ಹುಡುಕುವವರು -ಎಂದೆಲ್ಲಾ ನಿಶ್ಚೈಸಿ ಕೊಳ್ಳುತ್ತಾರೆ. ನಿಯಮ ಮೀರಿದವರಿಗೆ ಬೈಗಳು, ಶಿಕ್ಷೆ ತಕ್ಷಣ ಕೊಟ್ಟುಬಿಡುತ್ತಾರೆ.

**ಬೇಟೆಯ ನಿರ್ಬಂಧ :**

ಬಿಲ್ಲು, ಬಾಣ, ಭರ್ಚಿ, ಬಂದೂಕಗಳನ್ನು ಹಿಡಿಯುವುದಕ್ಕೂ, ಉಪಯೋಗಿಸು ವುದಕ್ಕೂ ಕೆಲವೊಂದು ನಿಯಮ-ನಿರ್ಬಂಧಗಳಿವೆ :

೧) ಕಾಗೆಗೆ ಗುಂಡು ಹೊಡೆದ ಮೇಲೆ ಅದು ಸಾಯಲೇಬೇಕು. ತಪ್ಪಿಸಿಕೊಂಡು ಹಾರಿಹೋದರೆ ಬಂದೂಕದಲ್ಲಿ ಎಂದಿಗೂ ಗುರಿ ಸಿಗುವುದಿಲ್ಲ. ಇದಕ್ಕೆ "ಮುಟ್ಟಿ" (ತಡೆ ನೀಗಿಸುವಿಕೆ) ಮಾಡಬೇಕು. ಇದನ್ನು ಕೊನೆಗೆ ತಿಳಿಸುತ್ತೇನೆ. ಕಾಗೆಗೆ ಗುಂಡು ಹೊಡೆದು ಬೇಟೆಗೆ ಹೊರಡಬಾರದು.

೨) ಬಂದೂಕವನ್ನು ಎರಡೂ ಹೆಗಲ ಮೇಲೆ ಅಡ್ಡಲಾಗಿ ಹಿಡಿದುಕೊಂಡು ತಿರುಗಾಡ ಬಾರದು.

೩) ಬಂದೂಕದ ನಳಿಕೆಯನ್ನು ಬಲಭುಜದ ಮೇಲೆ ಇಟ್ಟು ಅದರ ಮರದ ಬಟ್ಟು ಬೆನ್ನ ಮುಂದಿರಬೇಕು (ಕೆನ್ನೆಯ ಹತ್ತಿರ).

೪) ಬಿಲ್ಲು, ಬಾಣ, ಭರ್ಚಿ, ಬಂದೂಕಗಳನ್ನು ನೆಲದ ಮೇಲೆ ಮಲಗಿಸಿಡಬಾರದು. ಯಾವುದಾದರೂ ಆಸರೆಗೆ ಒರಗಿಸಿಡಬೇಕು.

೫) ನೆಲದಲ್ಲಿಟ್ಟ ಬೇಟೆಯ ಹತ್ಯಾರುಗಳ ಮೇಲೆ ಹಾದುಹೋಗಬಾರದು. ಕೋವಿ ಯೊಳಗೆ

ಎಂದಿಗೂ ಮದ್ದುಗುಂಡು, ತೋಟ ತುಂಬಿಸಿ ಹಾಗೇ ಬಿಟ್ಟಿರಬಾರದು; ಹೊತ್ತು ತಿರುಗಲೂಬಾರದು.

೬) ಪೊರಕೆಯಿಂದ, ಕೊಳೆವಸ್ತ್ರದಿಂದ ಅವುಗಳನ್ನು ಒರೆಸಬಾರದು. ಚಪ್ಪಲಿಗಳ ಬದಿಯಲ್ಲೇ ಬೇಟೆಯ ಹತ್ಯಾರುಗಳನ್ನಿಡಬಾರದು. ನೀರು, ಕೆಸರು ತಗಲಬಾರದು.

೭) ಬೇಟೆಯ ಮಾಂಸವನ್ನು ಅಡಿಗೆ ಮಾಡಿದ ಮೇಲೆ ಭೋಜನಕ್ಕೆ ಕೂರುವ ಮೊದಲು "ಬೇಟೆ ಚಾಮುಂಡಿ"ಗೂ ಪಿತೃದೇವತೆಗಳಿಗೂ ಸಾರಾಯಿ ಸಹಿತ "ನೈವೇದ್ಯ" ಇಡಬೇಕು.

೮) ಬೇಟೆಗೆ ಹೊರಡುವ ಮುನ್ನ ಏನಾದರೂ ಹರಕೆ ಒಪ್ಪಿಸುವುದಾಗಿ ಪ್ರಾರ್ಥಿಸಿ ಕೊಂಡಿದ್ದರೆ ಒಂದು ವರ್ಷದೊಳಗೆ ಅದನ್ನು ದೇವತೆಗಳಿಗೆ ಸಲ್ಲಿಸಬೇಕು.

೯) ಗಂಡಸರೊಂದಿಗೆ ಹೆಂಗಸರು ಬೇಟೆಯಾಡುವಂತಿಲ್ಲ. ಹೊರ ಊರಿನಿಂದ ಅತಿಥಿಗಳು ಬಂದಿದ್ದರೆ ಅವರನ್ನು ಬೇಟೆಗೆ ಜತೆಯಲ್ಲಿ ಕರೆದೊಯ್ಯಬಹುದು. ಆಯುಧಪೂಜೆಗೆ (ಕೈಲ್‌ಮುಹೂರ್ತ) ಮುನ್ನ ಬೇಟೆಗೆ ಹೋಗಬಾರದು.

೧೦) ಬೇಟೆಗೆ ಹೊರಟವರಲ್ಲಿ ಮೇಲು ಕೀಳು, ಜಾತಿಮತ, ಭಿನ್ನ-ಭೇದ ಮಾಡಕೂಡದು. ಬೇಟೆಯಲ್ಲಿ ಎಲ್ಲರೂ ಎಲ್ಲಾ ವಿಷಯಗಳಲ್ಲೂ ಸಮಾನರೇ.

ಹೀಗೆ ಬೇಟೆಯಾಡುವುದರಲ್ಲಿ ಹಲವಾರು ನೀತಿ ನಿಯಮಗಳಿವೆ.

**ಊರುಬೇಟೆ :**

ಹುತ್ತರಿ ಹುಬ್ಬದ ಸಡಗರ ಮುಗಿಯುತ್ತಾ ಬಂದಾಗ ಊರವರೆಲ್ಲಾ ಸೇರಿ "ಊರೊರ್ಮೆ" ಅಥವಾ "ಊರುಪತ್ತಿ" (ವನಭೋಜನ) ಏರ್ಪಡಿಸುತ್ತಾರೆ. ಈ ಸಂದರ್ಭದಲ್ಲಿ ಊರ ಕೆಲವು ಜನ ಬೇಟೆಯಲ್ಲಿ ನಿಪುಣರಾದವರು ಬೇಟೆಯಾಡಿ ಬರುತ್ತಾರೆ. ಇದಕ್ಕೆ "ಊರೊರ್ಮೆ ಬೋಟೆ" ಎನ್ನುತ್ತಾರೆ (ವನಭೋಜನದ ಬೇಟೆ). ಕೈಲು ಮುಹೂರ್ತ ಹಬ್ಬದಂದು ಆಯುಧಪೂಜೆ ಮಾಡದೆ ಬೇಟೆಗೆ ಹೋಗಬಾರದು. ಮದುವೆ ಮುಹೂರ್ತ ನಡೆಯುವ ಹಿಂದಿನ ದಿನಕ್ಕೆ "ಊರ್‌ಕೂಡುವೊ" ಎನ್ನುತ್ತಾರೆ. ಈ ದಿನ ಅಥವಾ ಅದರ ಹಿಂದಿನ ದಿನ ಬೇಟೆಯಾಡಿ ಮಾಂಸ ತರುತ್ತಾರೆ. ಇದಕ್ಕೆ "ಮಂಗಲ ಬೋಟೆ" (ಮದುವೆ ಶಿಕಾರಿ) ಎನ್ನುತ್ತಾರೆ.

ಊರ ಹಬ್ಬದ ಸಂದರ್ಭದಲ್ಲಿ "ದೇವಕೆಟ್ಟ್" (ಹಬ್ಬದ ನಡಾವಳಿಕೆ) ಹಾಕುತ್ತಾರೆ. ಅಂದಿನಿಂದ ಹಬ್ಬ ಮುಗಿಯುವ ತನಕ ಶಿಕಾರಿಗೆ ಹೋಗುವಂತಿಲ್ಲ. ಎಂದೂ ಗುಂಡೇಟು ತಗುಲಿ ಸತ್ತುಬಿದ್ದ ಮೃಗವನ್ನು ನೋಡುತ್ತಾ ಕನಿಕರದಿಂದ "ಅಯ್ಯೋ ಪಾಪ!" ಎಂದು ಉದ್ಗರಿಸಿದರೆ ಆತನನ್ನು ಬೇಟೆಯ ಗುಂಪಿನಿಂದ ಹಾಗೂ ಭೋಜನ ಕೂಟದಿಂದ ಬೈದು ಓಡಿಸಿಬಿಡುತ್ತಾರೆ! ಕಾರಣಾಂತರ ಗಳಿಂದ ಶಿಕಾರಿಗೆ ಹೋಗಲಾಗದವರ ಮನೆಗೂ ಸಿಕ್ಕಿದ ಮಾಂಸದಲ್ಲಿ ಸ್ವಲ್ಪ ಸ್ವಲ್ಪ ಭಾಗವನ್ನು ಕೊಟ್ಟು ಕಳುಹಿಸುವ ಪದ್ಧತಿ ಇದೆ.

ಗುಬ್ಬಿ, ಹದ್ದು, ಅಳಿಲು, ದನಕರುಗಳು, ಕಾಡುಕೋಳಿ, ಇಲಿ, ಹಾವು, ನವಿಲು - ಇವುಗಳನ್ನು ಗುಂಡಿಟ್ಟು ಕೊಲ್ಲುವಂತಿಲ್ಲ. ಇವುಗಳ ಹಾವಳಿ ಗದ್ದೆ, ತೋಟ, ಮನೆ, ಕೊಟ್ಟಿಗೆಗಳಲ್ಲಿ ಅತಿಯಾಗಿದ್ದರೆ ಬೇರೆ ಯಾವುದೇ ವಿಧಾನದಲ್ಲಿ ಓಡಿಸಬಹುದು ಇಲ್ಲವೇ ಕೊಲ್ಲಬಹುದು.

ತೆಂಗಿನಮರ ಮತ್ತು ಅರಳೀಮರದ ಮೇಲಿರುವ ಯಾವುದೇ ಪಕ್ಷಿ ಪ್ರಾಣಿಗಳಿಗೆ ಬಂದೂಕದಿಂದ ಹೊಡೆಯಬಾರದು. ಯಾಕೆಂದರೆ ತೆಂಗಿನಮರ "ಕಲ್ಪವೃಕ್ಷ"; ಅರಳೀಮರ "ದೈವವೃಕ್ಷ". ಬಂದೂಕಿನ ನಳಿಕೆಯ ಬಾಯಿಯನ್ನು ಗುಂಡು ತುಂಬಿರುವಾಗ ಬೆನ್ನ ಹಿಂಭಾಗಕ್ಕೆ, ನೆಲಕ್ಕೆ ಚುಚ್ಚಿ ಹಿಡಿದುಕೊಳ್ಳಬಾರದು. ಆಗಾಗ, ಹೊಡೆದ ಗುಂಡು ಗುರಿ ತಪ್ಪುತ್ತಿದ್ದರೆ ಮಂತ್ರಿಸಿದ ಕೋಳಿಮೊಟ್ಟೆಗೆ ಗುಂಡು ಹೊಡೆದು ಕೋವಿಯ 'ದೃಷ್ಟಿ ತೆಗೆಯುವುದು' ಜನರಲ್ಲಿರುವ ಒಂದು ನಂಬಿಕೆ. ಇದಕ್ಕೆ "ಮುಟ್ಟಿ" ಮಾಡುವದು ಎನ್ನುತ್ತಾರೆ. ಈ ರೀತಿ ಕೊಡಗಿನಲ್ಲಿ ಪ್ರಾಣಿ ಬೇಟೆಯ ಚಿತ್ರಣವಿದೆ.

**ಹೆಚ್ಚಿನ ವಿವರಗಳು :**

ಕೊಡಗಿನಲ್ಲಿ ಬೇಟೆಯ ಮುಖ್ಯದೇವತೆ "ಬೋಟೆಕಾರ ಅಯ್ಯಪ್ಪ (ಬೇಟೆಗಾರ ಅಯ್ಯಪ್ಪ) ಅಥವಾ ಸಾರ್ಥಾವು" ಎಂಬ ವನದೇವತೆ.

ಈ ದೇವತೆಯು ಕೊಡಗಿನ ಇತರ ಎಲ್ಲಾ ದೇವತೆಗಳಂತೆ (Deity) ಮಲಬಾರಿನ "ಬೈತೂರು" ದೇವಸ್ಥಾನದಿಂದ ಬಹಳ ಹಿಂದೆ ಹೊರಟು ಬಂದು ಕೊಡಗಿನ ಅನೇಕ ಭಾಗಗಳಲ್ಲಿ ನೆಲೆ ನಿಂತವುಗಳಾಗಿವೆ. ಇವೆಲ್ಲಾ ಮಲೆಯಾಳೀ ದೇವತೆಗಳು. ವ್ಯಕ್ತಿಯ ಮೈಮೇಲೆ ಆವೇಶ ಬಂದಾಗ ಈ ಭಾಷೆಯಲ್ಲೇ ಮಾತನಾಡುತ್ತವೆ. ಪ್ರಶ್ನೆಗಳನ್ನು, ಸಮಸ್ಯೆ ಸಂದೇಹಗಳನ್ನು ಕೇಳುವವರು ಅವರವರ ತಾಯ್ನುಡಿಯಲ್ಲೇ ಕೇಳುತ್ತಾರೆ. ಈ ದೇವತೆಗಳಿಗೆ ಉತ್ತರ ಮಲೆಯಾಳೀ ಭಾಷೆಯಲ್ಲಿರುತ್ತದೆ. ಈ ರೀತಿ ಮಲೆಯಾಳ ದೇಶದ (ಮಲಬಾರ್ ಪ್ರಾಂತ್ಯದ) ಕಣ್ಣೂರು ಜಿಲ್ಲೆಯ "ಬೈತೂರ್" ಎಂಬ ಮೂಲ ನೆಲೆಯಿಂದ ಬಂದ ಇತರ ದೇವತೆಗಳೆಂದರೆ - ಶ್ರೀಭದ್ರಕಾಳಿ, ಭಗವತಿ, ಚಾವುಂಡಿ (ಚಾಮುಂಡಿ), ಪಾಷಾಣ ಮೂರ್ತಿ, ವಿಷ್ಣುಮೂರ್ತಿ, ಮಂದಣಮೂರ್ತಿ, ಕುಳಿಯ (ಗುಳಿಗ), ಚೊಡಲ್ಪಿ (ಬಾಣಂತಿಯರ ದೇವತೆ), ನಾಥ (ನಾಗದೇವತೆ) ಪುಲಿಚಾವುಂಡಿ (ಹುಲಿ ಚಾಮುಂಡಿ) ನರಿಪೂದ (ಹುಲಿಭೂತ) ಇತ್ಯಾದಿ.

ಇವುಗಳಲ್ಲಿ ಬೇಟೆಗಾರ ಅಯ್ಯಪ್ಪನನ್ನು ಮಲಬಾರಿನಿಂದ ಕರೆಸಲ್ಪಟ್ಟ "ತಂತ್ರಿ"ಗಳು (ಮಂತ್ರವಾದಿಗಳು) ಸೂಕ್ತ ಜಾಗದಲ್ಲಿ, ದಟ್ಟಡವಿಯ ಮಧ್ಯೆ, ಉತ್ತಮ ಜಾತಿ ವೃಕ್ಷದಡಿಯಲ್ಲಿ ನಿರಾಕಾರ ಶಿಲೆಯ ರೂಪದಲ್ಲಿ ಪ್ರತಿಷ್ಠಾಪಿಸಿ ಪೂಜೆ ಮಾಡುವಂತೆ ಆಯಾ ಊರಿನ ಅರ್ಚಕರಿಗೂ, ಪೂಜೆ ಮಾಡಿಸುವಂತೆ ಕೊಡವ ಜನಾಂಗದವರಿಗೂ ಆದೇಶ ನೀಡಿಹೋಗಿರುತ್ತಾರೆ. ಇಂಥಾ ದೇವತೆಗಳ ವೇಷಗಳನ್ನು ಧರಿಸಿ ಮೈಮೇಲೆ ಆವೇಶವನ್ನು ಬರಿಸಿಕೊಂಡು ಭಕ್ತರ ಕಷ್ಟಗಳನ್ನು ಪರಿಹರಿಸುವ ಜವಾಬ್ದಾರಿಯನ್ನು ಪಣಿಕರು, ಬಣ್ಣರು, ಮಲೆಯರು, ಕಣಿಯರು - ಎಂಬ ಉಪಜಾತಿಯವರು ವಹಿಸಿಕೊಂಡಿರುತ್ತಾರೆ. ಇವರು ವೇಷಧಾರಣೆ ಮಾಡುವುದಕ್ಕೆ (ಕೋಲ ಕಟ್ಟುವುದು) ಚಂಡೆ-ಮದ್ದಳೆ ಬಾರಿಸುವುದಕ್ಕೆ ಅವರ ವಂಶಸ್ಥರೇ ಇರುತ್ತಾರೆ.

ಬೇಟೆಗಾರ ಅಯ್ಯಪ್ಪ ದೇವರ ಪೂಜೆಗೆ "ಧಾರೆ" ಹಬ್ಬ ಎನ್ನುತ್ತಾರೆ. ಪಾಯಸದ ನೈವೇದ್ಯ ಈ ದೇವತೆಗೆ ಪ್ರಧಾನ ಆಹಾರ. ಈ ದೇವತೆಯ ಗಣಕೂಟಗಳಲ್ಲಿ "ಬೋಟೆ ಚಾವುಂಡಿ" (ಬೇಟೆ ಚಾಮುಂಡಿ), "ಕರಿ ಚಾವುಂಡಿ" (ಕರಿ ಚಾಮುಂಡಿ) "ಮಂಜಾವುಂಡಿ" (ರಕ್ತ ಚಾಮುಂಡಿ) - ಹೀಗೆ ಅನೇಕ ರಕ್ತವನ್ನು ಬಯಸುವ ದೇವತೆಗಳು ಇರುತ್ತವೆ. (*ಸೂಚನೆ: ಕೆಲವು ದೇವರುಗಳ ಫೋಟೋ ತೆಗೆಯಲು ಬಿಡುವುದಿಲ್ಲ.*)

ಯಾವುದೇ ದೇವತೆಯ ನಿರಾಕಾರ ವಿಗ್ರಹದೆದುರು ಅನೇಕ ಕಬ್ಬಿಣದ ತ್ರಿಶೂಲಗಳಿರುವುದು ಸಾಮಾನ್ಯ. ಅರಣ್ಯವಾಸಿ ದೇವತೆಗಳಿಗೆ ಗುಡಿ ಕಟ್ಟುವುದು ನಿಷಿದ್ಧ. ಕೆನ್ನಾಯಿಗಳನ್ನು ಹೋಲುವ ನಾಯಿಯ ಮಣ್ಣಿನ ರೂಪವನ್ನು ಕುಂಬಾರನಿಂದ ಮಾಡಿಸಿ ದೇವರಿಗೆ ಒಪ್ಪಿಸುತ್ತಾರೆ. ಹೀಗೆ ಹರಕೆ ಒಪ್ಪಿಸಲು ಕಾರಣಗಳು : ೧) ತಾನು ಸಾಕಿರುವ ಬೇಟೆನಾಯಿಗೆ ಇದ್ದಕ್ಕಿದ್ದಂತೆ ರೋಗರುಜಿನ ಬಂದರೆ ೨) ಬೇಟೆಯ ಕಾಲದಲ್ಲಿ ಅಕಸ್ಮಾತ್ ಯಾವುದೇ ಬೇಟೆಗಾರನಿಂದ ಬೇಟೆನಾಯಿಗೇ ಗುಂಡೇಟು ತಗುಲಿ ಅದು ಸತ್ತುಹೋದರೆ ೩) ಬೇಟೆಯ ಮೃಗದ ಧಾಳಿಗೆ ಸಿಕ್ಕಿ ನಾಯಿ ಸತ್ತು ಹೋದರೆ ೪) ಬೇಟೆ ಕಾಲದಲ್ಲಿ ಯಾವುದೇ ಆಪತ್ತು ಒದಗದಂತೆ ರಕ್ಷಣೆ ನೀಡುವಂತೆ ದೇವರನ್ನು ಬೇಡಿಕೊಳ್ಳುವಾಗ ಮಣ್ಣಿನ ನಾಯಿಯ ರೂಪವನ್ನು ಕೊಡುತ್ತೇವೆಂದು ಹರಕೆ ಮಾಡಿಕೊಳ್ಳುತ್ತಾರೆ. ಒಂದೊಂದು "ದೇವನೆಲೆ"ಯಲ್ಲಿ ಇಂಥಾ ವಿಗ್ರಹಗಳು ನೂರಾರು ಇರುತ್ತವೆ. ಯಾವಾಗ ನಮ್ಮ ಘನ ಸರ್ಕಾರದವರು ಕಾಡಿನಲ್ಲಿ ಬೇಟೆಯಾಡುವುದನ್ನು ನಿಷೇಧಿಸಿದರೋ ಅಂದಿನಿಂದ ಈ ರೀತಿ ಮಣ್ಣಿನ ನಾಯಿಯ ವಿಗ್ರಹಗಳನ್ನು ಕಾಣಿಕೆಯಾಗಿ ಅರ್ಪಿಸುವುದು ಇಲ್ಲವಾಗಿದೆ. (ಯಾಕೆಂದರೆ ಈಗ ಬೇಟೆಯಾಡುವುದೇ ಇಲ್ಲವಲ್ಲಾ!)

ಸಾರ್ಥಾವು (ಅಯ್ಯಪ್ಪ) ದೇವರ ಹಿಂಬಾಲಕರಿಗೆ (ಗಣಗಳು) ಹಿಂದೆ-ನಾಡು ಸಾರಾಯಿ, ಸೇಂದಿ ಹಾಗೂ ಪ್ರಾಣಿಗಳ "ಲಿವರ್" ನೈವೇದ್ಯಕ್ಕೆ ಬೇಕಾಗುತ್ತಿತ್ತು. ಈಗ-ಬ್ರಾಂಡಿ, ವಿಸ್ಕಿ, ರಮ್, (ಬೀರ್ ಆಗುವುದಿಲ್ಲ) ಜೊತೆಗೆ ಕೋಳಿ, ಸಾಕಿದ ಹಂದಿ, ಆಡು (ಕುರಿ ಅಪರೂಪ)ಗಳನ್ನು ಕುಯ್ದು ಅವುಗಳ "ಲಿವರ್"ನ್ನು ಕೆಂಡದಲ್ಲಿ ಸುಟ್ಟು ನೈವೇದ್ಯ ಇಟ್ಟು ಉಳಿದ ಮಾಂಸವನ್ನು ಪಾಲುಮಾಡಿ ಮನೆಗೆ ಕೊಂಡೊಯ್ಯುತ್ತಾರೆ. ಕಾಡುಪ್ರಾಣಿಗಳ ಮಾಂಸವನ್ನು ತಕ್ಕಡಿಯಲ್ಲಿಟ್ಟು ತೂಕ ಮಾಡುವುದಾಗಲೀ, ಸೇರಿನಂತಹ ಅಳತೆ ಪಾತ್ರೆಯಲ್ಲಿ ಅಳತೆ ಮಾಡಿ ಹಂಚುವುದಾಗಲೀ ನಿಷಿದ್ಧ. (ಮಾಂಸದ ಹಂಚಿಕೆಯ ಕುರಿತು ಹಿಂದೆಯೇ ಬರೆದಿದ್ದೇನೆ) ಈ ರೀತಿ ಇಡೀ ಮಾಂಸವನ್ನು ಪ್ರತಿಯೊಬ್ಬರಿಗೂ ಪಾಲು ಮಾಡಿ ಹಂಚುವುದಕ್ಕೆ ಕೊಡವ ಭಾಷೆಯಲ್ಲಿ "ಒದಿ ಇಡುವೊ" ಎನ್ನುತ್ತಾರೆ.

ಬೇಟೆಗೆ ಹೊರಡುವ ಮುನ್ನ ಬೇಟೆಗಾರರೆಲ್ಲಾ ದೇವರೆದುರು ಭಕ್ತಿಯಿಂದ ನಿಂತು ಅರ್ಚಕರಿಂದ ಪೂಜೆ ಮಾಡಿಸಿ, ತೀರ್ಥ ಪ್ರಸಾದ ಸ್ವೀಕರಿಸಿ, ಭಂಡಾರಕ್ಕೆ ಕಾಣಿಕೆ ಹಾಕಿ ಆ ಊರಿನಲ್ಲಿರುವ ದೇವತೆಗಳನ್ನು ಹೆಸರ್ಹಿಡಿದು ಕರೆಯುತ್ತಾರೆ. ಉದಾಹರಣೆಗೆ ನಮ್ಮ ಊರಿನಲ್ಲಿ ಎಂಟು ಪ್ರಮುಖ ದೇವರ ಕಾಡುಗಳಿವೆ. ಪ್ರತೀ ಕಾಡಿನಲ್ಲೂ ಒಂದೊಂದು ಅಯ್ಯಪ್ಪ ದೇವರ ಸ್ಥಾನ (ನೆಲೆ) ಇದೆ. ಅವುಗಳನ್ನು ಹೀಗೆ ಕರೆಯುವ ವಾಡಿಕೆ ಇದೆ :

ಉತ್ತರಾಟ್ ಅಯ್ಯಪ್ಪಾ ಹೋದ್ಯೋ (ಎರಡು ಸಲ ಹೇಳಬೇಕು)
ಕ್‌ರ್‌ಕಾಡ್ ಅಯ್ಯಪ್ಪಾ ಹೋದ್ಯೋ ” ”
ಪಡ್‌ಚಿ ಕಾಡ್ ” ” ” ”
ನಾಚಂಗಾಡ್ ” ” ” ”
ಮುಂಡೋಣಿ ” ” ” ”
ಬೊಳ್ಳಂಗೊಲ್ಲಿ ” ” ” ”
ಮುದ್ದನಕಾಡು ” ” ” ”
ಪೋರಾಟ್ ” ” ” ”

ಹೀಗೆ ಎಂಟು ಕಾಡಿನಲ್ಲಿ ನೆಲೆಸಿರುವ ಅಯ್ಯಪ್ಪನನ್ನು ಉಳಿದ ಸಣ್ಣಪುಟ್ಟ ಗ್ರಾಮದೇವತೆಗಳನ್ನೂ ಕೂಗಿ ಕರೆದು ಬೇಡಿಕೊಂಡು ಬೇಟೆಗೆ ಹೊರಡುತ್ತಾರೆ. ಇಲ್ಲಿ "ಹೋದ್ಯೋ" ಅಂದರೆ "ಜಯವಾಗಲಿ" ಎಂಬ ಅರ್ಥ. ಈ ಶಬ್ದವನ್ನು ನಿತ್ಯ ಮಾತಿನಲ್ಲಿ ಬಳಸುವುದಿಲ್ಲ.

ಈ ರೀತಿ ಬೇಡಿಕೊಂಡು, ಬೇಟೆಗಾರರಲ್ಲಿ ಹಿರಿಯವನೊಬ್ಬ ದೇವರಲ್ಲಿ ಈ ರೀತಿ ಪ್ರಾರ್ಥಿಸುತ್ತಾನೆ :

"ಈ ದಿನ ನಾವು ಇಲ್ಲಿ ಸೇರಿದ (ಉದಾ:ಹತ್ತು) ಜನರು ನಿನ್ನ ಅಪ್ಪಣೆಯನ್ನು ಪಡೆದುಕೊಂಡು ಕೋವಿ, ಕತ್ತಿ, ಭರ್ಚಿ, ನಾಯಿಗಳ ಸಮೇತ ಕಾಡುಪ್ರಾಣಿಯ ಬೇಟೆಗೆ ಹೊರಟಿದ್ದೇವೆ. ಈ ಸಂದರ್ಭದಲ್ಲಿ ನಮ್ಮಲ್ಲಿ ಯಾರಿಗೂ ಕಾಡುಪ್ರಾಣಿಗಳಿಂದ, ನಮ್ಮ ನಮ್ಮದೇ ಆದ ಭರ್ಚಿ ಬಂದೂಕಗಳಿಂದ ಆಪತ್ತು-ವಿಪತ್ತು ಬಾರದಂತೆ ರಕ್ಷಿಸಿ, ಒಳ್ಳೊಳ್ಳೆಯ ಮೃಗಗಳು ಬೇಟೆಗೆ ಸಿಕ್ಕಿ ನಮ್ಮೆಲ್ಲರಿಗೂ ಸಂತೋಷವಾಗುವಂತೆ ಆಶೀರ್ವದಿಸು. ಎಲ್ಲವನ್ನು ತಿಳಿದ ನೀನು ಮತ್ತು ನಮ್ಮ ಗ್ರಾಮದ ಇತರ ದೇವತೆಗಳು, ನಾವೆಲ್ಲಾ ಒಟ್ಟಾಗಿ ಹೊರಟು, ಒಟ್ಟಾಗಿಯೇ ವಾಪಾಸು ಸುಖವಾಗಿ ಬರುವಂತೆ ರಕ್ಷಿಸು" - ಎಂದು ಹೇಳಿ ಕೈಮುಗಿದು, ಪರಸ್ಪರ ಹಿರಿಯರ ಕಾಲ್ಮುಟ್ಟಿ ನಮಸ್ಕರಿಸಿ ಬಂದೂಕು ಹೆಗಲಿಗೇರಿಸಿ ಹೊರಡುತ್ತಾರೆ. (ಇದರ ಕ್ರಮವನ್ನು ಹಿಂದೆಯೇ ಕೊಡಲಾಗಿದೆ).

ಸಾಮಾನ್ಯವಾಗಿ ಕಾಡುಕೋಣ, ಕಾಡೆಮ್ಮೆಗಳ ಗೊರಸಿನ ಹೆಜ್ಜೆಯಿಂದ ಜಾಡು ತಿಳಿಯಬಹುದು. ಹಾಗೆಯೇ ಕಾಡುಹಂದಿ, ಮುಳ್ಳುಹಂದಿ, ಚಿಪ್ಪುಹಂದಿಗಳ ಜಾಡನ್ನೂ ತಿಳಿಯಬಹುದು. ಆನೆಗಳ ಜಾಡು ತಿಳಿಯುವುದು ಅವು ಬಿದಿರು, ಕಬ್ಬು, ಬಾಳೆ ಗಿಡಗಳು, ಬೈನೆಮರ (ಈಚಲುಮರ) ಇತ್ಯಾದಿಗಳನ್ನು ಮುರಿದು ಹಾಕಿರುವುದನ್ನು ನೋಡಿ ಹಾಗೂ ಅವುಗಳ ಲದ್ದಿಯಿಂದ ತಿಳಿಯಬಹುದು. ಮೊಲಗಳ ಹಿಕ್ಕೆ, ಮುಳ್ಳುಹಂದಿಗಳ ಉದುರಿದ ಮುಳ್ಳು, ಚಿಪ್ಪುಹಂದಿಯ ಉದುರಿದ ಚಿಪ್ಪು ಹಾಗೂ ತೋಡಿದ ಬಿಲಗಳಿಂದಲೂ ಜಾಡು ತಿಳಿಯಬಹುದು. ಹುಲಿ, ಚಿರತೆ, ಸಿಂಹಗಳ ಇರುವಿಕೆಯನ್ನು ಅವು ಸಾಕಿದ ನಮ್ಮ ಹಸುಕರುಗಳನ್ನು ಹಿಡಿದು,

ಕೊಂದು, ಕಚ್ಚಿ ಎಳೆದೊಯ್ದಾಗಲೂ ಅವುಗಳ ಗರ್ಜನೆಯಿಂದಲೂ ತಿಳಿಯಬಹುದು. ಆನೆ, ಸಿಂಹ, ಹುಲಿ, ಚಿರತೆಗಳು ಒಂಟಿಯಾಗಿದ್ದಾಗ ಹೆಚ್ಚು ಅಪಾಯಕಾರಿ. ಗುಂಡೇಟು ತಗುಲಿ ಸಾಯದೇ ಇದ್ದರೂ ಇವು ಅಪಾಯಕಾರಿ. ಮರಿಗಳ ಜೊತೆ ಇದ್ದಾಗಲೂ ನಾವು ಭಯ ಪಡಬೇಕಾದ್ದೇ! ಆದರೆ ನೀರಾಟವಾಡು ತ್ತಿದ್ದಾಗ, ಗುಂಪಿನೊಡನೆ ತಮ್ಮ ಪಾಡಿಗೆ ತಾವು ಹೋಗುತ್ತಿರುವಾಗ, ಮಲಗಿದ್ದಾಗ - ನಾವು ನಮ್ಮ ಪಾಡಿಗೆ ಇದ್ದುಬಿಟ್ಟರೆ ಅಪಾಯ ಕಡಿಮೆ. ಹೆಚ್ಚಿನಂಶ ಯಾವುದೇ ಮೃಗಗಳು ತಮ್ಮ ರಕ್ಷಣೆಗೋಸ್ಕರ ಮತ್ತು ನಮ್ಮ ಹೆದರಿಕೆಯಿಂದ ಭೀತಿಗೊಳಗಾಗಿ ಆಕ್ರಮಣ ಮಾಡುತ್ತವೆ. ನಮ್ಮ ಮೇಲೆ ಹರಿಹಾಯುತ್ತವೆ.

ಯಾವುದೇ ಕಾಡುಪ್ರಾಣಿಗಳನ್ನು ಕಂಡಾಗ ನಾವು ಕೆಣಕಬಾರದು. ಹೆದರಿಕೊಂಡಾಗ ಬೊಬ್ಬಿಡುತ್ತಾ ಓಡಬಾರದು. ಸದ್ದಿಲ್ಲದೇ ನಾವು ಪರಾರಿಯಾಗಬೇಕು. ಬಂದೂಕವನ್ನು ಅವಕ್ಕೆ ತೋರಿಸಿ ಗುರಿ ಇಡುವವರಂತೆ ನಟಿಸಬಾರದು. ಆನೆ ಅಟ್ಟಿಸಿಕೊಂಡು ಬಂದಾಗ ಮರ ಹತ್ತುವ ಪ್ರಯತ್ನ ಮಾಡಬಾರದು. ಕಾಡು ಮೃಗಗಳನ್ನು ಕಂಡು ಪಲಾಯನ ಮಾಡುವಾಗ ಧೈರ್ಯ ಹಾಗೂ ಬುದ್ಧಿವಂತಿಕೆಯನ್ನುಪಯೋಗಿಸಬೇಕು. ಎತ್ತರ ಜಾಗದಿಂದ ಜಿಗಿಯಬಾರದು.

ಬೇಟೆನಾಯಿಗಳು ಸಾಮಾನ್ಯವಾಗಿ ಕಂತ್ರಿನಾಯಿಗಳೇ ಆಗಿರುತ್ತವೆ. ಆದರೆ ಅವು ಮರಿಯಾಗಿದ್ದಾಗಲೇ 'ಛೂ' ಬಿಟ್ಟು ಕೋಳಿ, ಹಂದಿ, ದನಕರುಗಳನ್ನು ಬೊಗಳಿ ಓಡಿಸುವಂತೆ ತರಬೇತಿ ಕೊಟ್ಟಿರುತ್ತಾರೆ. ಪ್ರತೀ ದಿನವೂ (ಹಸಿಮಾಂಸದ ರುಚಿ ಗೊತ್ತಾದರೆ ಬೇಟೆಯನ್ನು ನಾಯಿಗಳೇ ತಿಂದಾವು! ) ಬೇಯಿಸಿದ ಮಾಂಸ, ಮೀನುಗಳನ್ನು ತಿನ್ನಿಸುತ್ತಾರೆ. ಆಹಾರಕ್ಕಾಗಿ ಕೋಳಿ, ಹಂದಿ, ಆಡುಗಳನ್ನು ಕಡಿದಾಗ ಅವುಗಳ ರಕ್ತವನ್ನು ಸಂಗ್ರಹಿಸಿ ನೆಕ್ಕಿಸುತ್ತಾರೆ. ನಾಯಿಗಳು ಒಟ್ಟಿಗಿದ್ದಾಗಲೇ ಅವುಗಳಿಗೆ ಬೊಗಳುವ, ಓಡಿಸುತ್ತಾ ಹೋಗುವ, ಕಚ್ಚುವ ಧೈರ್ಯ ಹೆಚ್ಚಿರುತ್ತವೆ.

ಹೊಡೆದು, ಬಡಿದು ಶಿಕ್ಷೆ ಕೊಟ್ಟು ನಾಯಿಗಳನ್ನು ಪಳಗಿಸಲಾಗುವುದಿಲ್ಲ. ನಮ್ಮ ಮನಸ್ಸಿಗೆ ತೋಚಿದ ರೀತಿಯಲ್ಲಿ ತರಬೇತಿ ಕೊಟ್ಟು, ಪಳಗಿಸಿ, ಹೇಳಿದಂತೆ ಕೆಲಸ ಮಾಡಿಸಬಹುದು. ಕಟ್ಟಿ ಹಾಕಿರುವ ನಾಯಿಗೆ ಯಾವಾಗಲೂ ಉಗ್ರತೆ ಹೆಚ್ಚು.

ಸಿಳ್ಳೆ ಹಾಕುವುದು ಸಾಮಾನ್ಯವಾಗಿ, ನಾಯಿಗಳನ್ನು ಹತ್ತಿರಕ್ಕೆ ಕರೆಯಲು. ಪ್ರಾಣಿಗಳತ್ತ ಓಡಿಸಬೇಕಾದರೆ ಛೂ!ಛೂ! ಎನ್ನುತ್ತಾ ಪ್ರಾಣಿಗಳ ದಿಕ್ಕಿಗೆ ನಾವೂ ಅವುಗಳ ಜೊತೆಯಲ್ಲೇ ಓಡಬೇಕು. ನಾಯಿಗಳು ನಮ್ಮ ಧ್ವನಿಯ ಏರಿಳಿತಗಳನ್ನು ಬಹುಬೇಗ ಕಲಿಯುತ್ತವೆ. ಪಕ್ಷಿಗಳ ಬೇಟೆಯಲ್ಲಿ ಅವುಗಳ ಧ್ವನಿಯನ್ನು ಅನುಕರಿಸಬಹುದು. ಪ್ರಾಣಿಗಳ ಬೇಟೆಯಲ್ಲಿ ಧ್ವನಿಯ ಅನುಕರಣೆ ಮಾಡಿದರೆ ಅವು ಪರಾರಿಯಾಗುತ್ತವೆ.

ಯಾರಾದರೊಬ್ಬ ಪ್ರಾಣಿಗಳ ಸುಳಿವನ್ನರಿತಾಗ, ಸ್ಮಗ್ಲರ್‌ಗಳು "ಕೋಡ್‌ಶಬ್ದ" ಗಳನ್ನು ಬಳಸುವಂತೆ ಎಲ್ಲರಿಗೂ ತಿಳಿಸಿರುವ ಶಬ್ದಗಳನ್ನೇ ಉಪಯೋಗಿಸುತ್ತಾರೆ. ಬೇಟೆ ಕಾಲದಲ್ಲಿ ಸೂಕ್ಷ್ಮ ಶಬ್ದಗಳನ್ನು ಹೊರತುಪಡಿಸಿ ಸಿಕ್ಕಾಬಟ್ಟೆ ಸದ್ದು ಮಾಡಿದರೆ ಮೃಗಗಳು ತಪ್ಪಿಸಿಕೊಳ್ಳುತ್ತವೆ. ಯಾವುದೇ

ಹೊಸ ಶಬ್ದ ಕೇಳಿಸಿದರೂ ಅವು ಜಾಗೃತವಾಗುತ್ತವೆ. ಬೇಟೆಗಾರರಿಗೆ ನಿಲ್ಲುವ, ಕೂರುವ, ಓಡುವ, ಬಂದೂಕು ಹಾರಿಸುವ ಸೂಚನೆಗಳನ್ನು ಎಲ್ಲರೂ ಒಟ್ಟಿಗೆ ಒಂದೆಡೆ ಇರುವಾಗಲೇ ತಿಳಿಸಿ, ಅವರನ್ನು ನಿಶ್ಚಿತ ಸ್ಥಳದಲ್ಲಿ ನಿಲ್ಲಿಸಿ ಇಲ್ಲವೇ ಕೂರಿಸುತ್ತಾರೆ. ಮೃಗಗಳನ್ನು ಕಂಡ ವ್ಯಕ್ತಿ ಮಾತ್ರ ಸೂಚನೆ ನೀಡುತ್ತಾನೆ. ಆ ಸೂಚನೆ ಸಂದರ್ಭಕ್ಕೆ ತಕ್ಕಂತೆ ಇರುತ್ತದಷ್ಟೆ.

ಅನುಭವಶಾಲಿ ಬೇಟೆಗಾರ, ತನ್ನ ಬಂದೂಕಿನಿಂದ ಸಿಡಿದ ಗುಂಡು ಪ್ರಾಣಿಗೆ ತಗುಲಿದೆಯೋ ಇಲ್ಲವೋ ಎಂಬುದನ್ನು ಅದರ ಶಬ್ದದಿಂದಲೇ ಕಂಡುಹಿಡಿದು ಬಿಟ್ಟಿರುತ್ತಾನೆ. ಹೊಡೆಯುವ ಗುಂಡು ಪ್ರಾಣಿಯ ಹಣೆ, ಕಿವಿಯ ಹತ್ತಿರ, ಎಡಗೈಯ ಸಮೀಪ ಬಿದ್ದಿದ್ದರೆ ಅದು ಅಲ್ಲೇ ಸಾಯುತ್ತದೆ. ಬೆನ್ನು, ಹೊಟ್ಟೆ, ತೊಡೆಗಳಿಗೆ, ಹಿಂಭಾಗಕ್ಕೆ ಗುಂಡೇಟು ಬಿದ್ದರೆ ಅದು ರಕ್ತ ಚೆಲ್ಲುತ್ತಾ ಓಡಿ ತಪ್ಪಿಸಿಕೊಳ್ಳುತ್ತದೆ. ನಿಜವಾದ ಬೇಟೆಗಾರನ ಎದುರು ಒಂದು ಬೃಹತ್‌ಗಾತ್ರದ ಆನೆ ನಿಂತಿದ್ದರೆ ಕೇವಲ, ಕಿರುಬೆರಳಿನ ಅರ್ಧದಷ್ಟೇ ಉದ್ದವಿರುವ "ಪಾಯಿಂಟ್ 2-2 (point two-two)" ತೋಟಾದಿಂದಲೇ ಹೊಡೆದುರುಳಿಸಬಲ್ಲ! ಹಾರುತ್ತಿರುವ ಹಕ್ಕಿಯ ಕಣ್ಣಿಗೇ ಹೊಡೆಯಬಲ್ಲ! ಹಾರುವ ಹಕ್ಕಿಗೆ ಹೊಡೆಯುವಾಗ 12th Bore ಬಂದೂಕಿನಲ್ಲಿ ತರಿಕಲ್ಲಿನ ತೋಟಾವನ್ನು ಬಳಸುವರು. ಈ ತೋಟಾದಿಂದ ಸಿಡಿದ ಗುಂಡು ಬಹಳ ಅಗಲ ಚದುರುವುದು.

ಒಂದು ಮೃಗಕ್ಕೆ ಒಬ್ಬ ಗುಂಡೇಟು ಹೊಡೆದಾಗ ಅದು ಓಡಲುಪಕ್ರಮಿಸಿದರೆ, ಅದರ ಹಿಂದೆ ಓಡುತ್ತಾ ಇನ್ನೊಬ್ಬ ಹೋಗಬಾರದು. ಅದು ಹಾದು ಹೋಗುವ ದಿಕ್ಕಿನಲ್ಲಿ ಇನ್ನೊಬ್ಬ ಬೇಟೆಗಾರ ಇದ್ದರೆ ಅವನೇ ಇನ್ನೊಂದು ಗುಂಡನ್ನು, ಇದ್ದಲ್ಲೇ ಇದ್ದು ಹೊಡೆಯಬೇಕು. ಇಲ್ಲವೇ ಎಲ್ಲರೂ ಈಚೆಗೆ ಬಂದು ಒಂದೆಡೆ ಸೇರಿ ಆ ಪ್ರಾಣಿ ಓಡಿದ ದಿಕ್ಕಿನತ್ತ ಒಟ್ಟಿಗೇ ಸಾಗಬೇಕು. ಮೈಮೇಲೆ ಹಾರಿಬೀಳುವ ಹುಲಿ, ಸಿಂಹ, ಚಿರತೆಗಳು ಬೇಟೆಗಾರ ನಿಂತಿರುವ ಜಾಗದ ಕೆಳ ಭಾಗದಲ್ಲಿದ್ದರೆ ಮಾತ್ರ ಹೊಡೆಯಬೇಕು. ತಾನು ಕೆಳಗಿದ್ದು ಮೇಲಿರುವ ಪ್ರಾಣಿಗಳಿಗೆ ಹೊಡೆಯುವುದು ಅಪಾಯಕಾರಿ. ತೀರ ಎದುರಿಗೆ ನಿಂತುಬಿಟ್ಟಿದ್ದರೆ ಅದರ "ಹಣೆಗೇ" ಗುರಿ ಇಡಬೇಕು (ಇಲ್ಲವೇ ಕಣ್ಣಿಗೆ).

ಜೋಡಿ ನಳಿಗೆಯ ಬಂದೂಕದಿಂದ ಗುಂಡು ಹೊಡೆಯುವುದಾದರೆ, ಎರಡೂ ನಳಿಗೆಗಳಿಗೆ ಕಾಡತೂಸು (Cartridge) ತುಂಬಿಸಿ, ಮೊದಲು ಎಡನಳಿಗೆಯ ತೋಟಾ (ಕಾಡತೂಸು)ವನ್ನು ಸಿಡಿಸಿ ಅನಂತರ ಅವಶ್ಯಬಿದ್ದರೆ ಬಲಭಾಗದ ನಳಿಗೆಯಿಂದ ಗುಂಡು ಹಾರಿಸಬೇಕು. ಎಂದಿಗೂ ಬಲಭಾಗದ ನಳಿಗೆಯಿಂದ ಮೊದಲ ಗುಂಡು ಹಾರಿಸಬಾರದು.

ಬೇಟೆಗೆ ಹೊರಡುವ ಮುನ್ನ ಬೇಟೆಗಾರರು ಪ್ರಾರ್ಥನೆ, ಹರಕೆ ಮಾಡಿಕೊಳ್ಳುವ ಉದ್ದೇಶ ಇಷ್ಟೆ : ತಮಗಾಗಲೀ ತಮ್ಮ ನಾಯಿಗಳಿಗಾಗಲೀ ಅಪಾಯ ಒದಗಬಾರದು. ಬೇಟೆಯಲ್ಲಿ ಯಾವುದಾದರೊಂದು ಮೃಗ ಸಿಗುವಂತಾಗಬೇಕು. ಬರಿಗೈಯಿಂದ ವಾಪಾಸು ಬಂದು ಊರವರ ಅಪಮಾನಕ್ಕೆ ಕಿಡಿನುಡಿಗೆ ಒಳಗಾಗಬಾರದು - ಎಂದು ಹಾರೈಸಿಕೊಂಡೇ ಬೇಟೆಗೆ ಹೊರಡುತ್ತಾರೆ.

ಯಾವುದೇ ಪ್ರಾಣಿಯನ್ನು ಕೊಲ್ಲಲು ನಿರ್ಬಂಧವಿಲ್ಲ. ಬೇಟೆ-ಎಂಬುದು ಒಂದು ಕ್ರೂರಕೃತ್ಯ. ಇಲ್ಲಿ ಕನಿಕರ-ಕರುಣೆಗೆ ಜಾಗವಿಲ್ಲ. ಮೋಜಿಗಾಗಿ ಬೇಟೆಯಾಡುವವರೂ ಇದ್ದಾರೆ. ಬೇಟೆಯೂ ಒಂದು ಕಲೆ, ಬಂದೂಕು ಹಾರಿಸುವುದೂ ಒಂದು ವಿದ್ಯೆ. ಅದನ್ನು ಹಿಡಿಯುವ ರೀತಿ, ಸಿಡಿಸುವ ವಿಧಾನ, ಕಾಡತೂಸುಗಳನ್ನು ನಳಿಕೆಗೆ ತುಂಬಿಸುವ ಮತ್ತು ತೆಗೆಯುವ ಚುರುಕುತನ, ಹುಳ, ಇರುವೆ, ಹುಪ್ಪಟೆ, ಕೀಟಗಳ ಹಿಂಸೆಯನ್ನು ಸಹಿಸುವ ತಾಳ್ಮೆ (ಸೊಳ್ಳೆ, ಜಿಗಣೆಗಳಿಂದ) ಹಾವು-ಚೇಳುಗಳ ಬಾಧೆಯಾಗದಂತೆ ಸೂಕ್ಷ್ಮತೆ- ಎಲ್ಲಾ ಅನುಭವಕ್ಕೆ ಬಂದರೇನೇ ಗೊತ್ತಾಗುವುದು. ಧೈರ್ಯಕ್ಕೆ ಇಲ್ಲಿ ಮೊದಲ ಪ್ರಾಶಸ್ತ್ಯ. ಕಿವಿ, ಕಣ್ಣು ಚುರುಕಾಗಿರಲೇಬೇಕು. ಬೇಟೆಯಲ್ಲಿ ಶಕ್ತಿಗಿಂತ ಯುಕ್ತಿಗೇ ಮೊದಲ ಸ್ಥಾನ. ಕತ್ತಲಲ್ಲಿ ಬೇಟೆಗೆ ಕೂರುವುದು ಕಠಿಣ ಕೆಲಸ. ಒಬ್ಬೊಬ್ಬನೇ ಬೇಟೆಗೆ ಹೋಗಿ ಬರುವುದು ದುಸ್ಸಾಹಸದ ಕಾರ್ಯ. ಬೇಟೆಗೆ ಹೋಗುವವರು ಹೊಚ್ಚ ಹೊಸ ಬಂದೂಕನ್ನು ತೆಗೆದುಕೊಂಡು ಹೋಗುವುದು ಕಮ್ಮಿ. ಸ್ವಲ್ಪ ಹಳೆಯ ಅನುಭವವಿರುವ ಕೋವಿ ಇದ್ದರೆ ಇಟ್ಟಗುರಿ ತಪ್ಪುವುದು ಅಪರೂಪ. ವೈರತ್ವ, ವ್ಯಾಜ್ಯ ಇರುವವರೊಂದಿಗೆ ಬೇಟೆಗೆ ಹೋಗಬಾರದು. ಸಂಯಮ, ತಾಳ್ಮೆ ಇದ್ದವರಿಗೆ ಮಾತ್ರ ಬೇಟೆಯಲ್ಲಿ ಜಯ ಗಳಿಸಲು ಸಾಧ್ಯ.

ಕೊಡಗಿನವರು, ಅದರಲ್ಲೂ ಮುಖ್ಯವಾಗಿ ಕೊಡವರು ಬೇಟೆಗಾರ ಜನಾಂಗದವರು - ಎನ್ನುವುದಕ್ಕೆ ಕೆಲವು ವಿವರಗಳನ್ನು ತಿಳಿಯಬಹುದು.

ಕೊಡವರಲ್ಲಿ ಗಂಡುಮಗು ಹುಟ್ಟಿದ ಕೂಡಲೇ ಆಕಾಶದ ಕಡೆಗೆ, ಗಾಳಿಯಲ್ಲಿ ಒಂದು ಗುಂಡು ಹಾರಿಸುತ್ತಾರೆ. ಕೊಡವ ಕುಟುಂಬದ ಒಂದು ಗಂಡುಮಗು, ಮೊತ್ತ ಮೊದಲು ಕೇಳುವ ಹೊರಗಿನ ಶಬ್ದವೆಂದರೆ ಬಂದೂಕಿನಿಂದ ಸಿಡಿದ ಗುಂಡಿನ ಶಬ್ದ!

ಮಗು ಹುಟ್ಟಿದ ೧೧ನೇ ದಿನ ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರ, ನಾಮಕರಣ ಮಾಡುತ್ತಾರೆ. ತೊಟ್ಟಿಲಿನಲ್ಲಿ ಮಲಗಿದ ಗಂಡು ಮಗುವಿನ ಕೈಗೆ ಪುಟ್ಟದಾದ ಬಿದಿರಿನ ಬಿಲ್ಲುಬಾಣಗಳನ್ನು ಕೊಟ್ಟು "ವೀರನಾಗಿ, ಶೂರನಾಗಿ, ಧೀರನಾಗಿ, ಬೇಟೆಗಾರನಾಗಿ, ಯುದ್ಧದಲ್ಲಿ ನಿಪುಣನಾಗಿ ಬಾಳು" ಎಂದು ಹರಸುತ್ತಾರೆ.

ಪ್ರತಿಯೊಬ್ಬ ಕೊಡವನ ಮನೆಯಲ್ಲೂ ಕನಿಷ್ಟ ಪಕ್ಷ ಒಂದಾದರೂ ಕೋವಿ, ಇದ್ದೇ ಇರುತ್ತದೆ. ಇನ್ನೂ ಕೆಲವರ ಮನೆಯಲ್ಲಿ ಖಡ್ಗ, ಭರ್ಚಿ, ಕಠಾರಿ, ಒಡಿಕತ್ತಿ (ಕಡಿಗತ್ತಿ) ಇಟ್ಟಿರುತ್ತಾರೆ. ಇವು ಬೇಟೆಗೂ ಯುದ್ಧಕ್ಕೂ ಅತ್ಯವಶ್ಯಕವಾದ ಆಯುಧಗಳು. (ಆಯುಧಪೂಜೆ) ಕೈಲ್ ಮುಹೂರ್ತ ಹಬ್ಬ (ಸೆಪ್ಟೆಂಬರ್ ೩)ದ ದಿನ ಎಲ್ಲಾ ಆಯುಧ ಗಳನ್ನು ಪೂಜಿಸಿದ ತರುವಾಯವೇ ಬೇಟೆಗೆ ಹೊರಡುವುದು ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ. ಈ ಹಬ್ಬದ ಹಿಂದಿನ ದಿನಗಳಲ್ಲಿ ಯಾರೂ ಅಡವಿಯೊಳಗೆ ನುಗ್ಗಿ ಬೇಟೆಯಾಡುವುದಿಲ್ಲ. ಕಾಡುಪ್ರಾಣಿಗಳು ಊರೊಳಗೆ ಬಂದು ಉಪದ್ರವ ಕೊಟ್ಟರೆ ಮಾತ್ರ ಗುಂಡಿಕ್ಕಿ ಕೊಲ್ಲುತ್ತಾರೆ.

ಹಿಂದಿನ ಕಾಲದಲ್ಲಿ ಕೊಡಗಿನ ರಾಜರು ಅತ್ಯುತ್ತಮ ಗುರಿಕಾರರಿಗೆ, ಬೇಟೆಗಾರರಿಗೆ ಖಡ್ಗ

ಇಲ್ಲವೇ ಬಂದೂಕು ನೀಡಿದರೆ ಅದರಲ್ಲಿ ರಾಜರ ಹೆಸರಿನ ಮೊದಲಕ್ಷರವನ್ನು ಚಿನ್ನದ ಲೇಪನದಲ್ಲಿ ಬರೆಯಿಸಿ ಇನಾಮಾಗಿ ನೀಡುತ್ತಿದ್ದರು.

ಬ್ರಿಟಿಷರ ಕಾನೂನು ಕೊಡಗಿನಲ್ಲಿದ್ದಾಗ ಜಮ್ಮಾ ಆಸ್ತಿ ಹೊಂದಿರುವ ಕೊಡಗಿನ ಪ್ರತೀ ನಾಗರೀಕನೂ ಬಂದೂಕವನ್ನಿಟ್ಟುಕೊಳ್ಳಲು ಅರ್ಹನಾಗಿದ್ದನು. ಬಂದೂಕ ವನ್ನಿಟ್ಟುಕೊಳ್ಳಲು ಯಾರಿಗೂ ಪರವಾನಗಿ ಬೇಕಿರಲಿಲ್ಲ.

ಇತ್ತೀಚೆಗಿನ ವರ್ಷಗಳಲ್ಲಿ ಮನುಷ್ಯನು ಮನುಷ್ಯನನ್ನು ಬಂದೂಕಿನಿಂದ ಸುಟ್ಟು ಕೊಂದುಹಾಕುವ ದುರ್ಬುದ್ಧಿ ಬೆಳೆಸಿಕೊಂಡಿರುವುದರಿಂದ ಈಗ ಬಂದೂಕು ಇಟ್ಟುಕೊಳ್ಳಲು ಸರಕಾರದ ಪರವಾನಗಿ ಬೇಕಾಗಿದೆ. ಕಾಡುಗಳಲ್ಲಿ ಬೇಟೆ ನಿಷಿದ್ಧವಾದ್ದರಿಂದ ಇಂದಿನ ಪೀಳಿಗೆಯವರಿಗೆ "ಬೇಟೆ"ಗೆ ಹೋಗುವುದೆಂದರೆ ಏನೆಂದೇ ತಿಳಿದಿಲ್ಲ!

ಬೇಟೆಯ ಕಾಲದಲ್ಲಿ ಸಿಗುವ ಪ್ರಾಣಿಗಳಿಗಿಂತಲೂ ಜತೆಯಲ್ಲಿ ಬಂದಿರುವ ಬೇಟೆಗಾರನೇ ಎಲ್ಲರಿಗೂ ಮುಖ್ಯ. ದಟ್ಟಡವಿಯಲ್ಲಿ ಕೆಲವೊಮ್ಮೆ ಒಬ್ಬಿಬ್ಬರು ತಪ್ಪಿಸಿ ಕೊಳ್ಳುತ್ತಾರೆ. ಇದು ಗೊತ್ತಾದ ಕೂಡಲೇ ತಪ್ಪಿಸಿಕೊಂಡವರನ್ನು ಹುಡುಕುವುದೇ ಮುಖ್ಯವಾಗುತ್ತದೆ. ಆಗ ಇತರ ಯಾವುದೇ ಪ್ರಾಣಿಗಳು ಕಣ್ಣಿಗೆ ಕಂಡರೂ ಕೊಲ್ಲಲು ಮನಸ್ಸಾಗುವುದಿಲ್ಲ.

ಕೆಲವೊಮ್ಮೆ ಬೆಟ್ಟಗುಡ್ಡಗಳನ್ನು ಹತ್ತುವಾಗ, ಇಳಿಯುವಾಗ, ಗಿಡಗಂಟಿಗಳನ್ನು ಕಡಿದು ದಾರಿಮಾಡಿಕೊಳ್ಳುವಾಗ - ಕತ್ತಿ, ಕೊಡಲಿ, ಕಲ್ಲು-ಮುಳ್ಳು-ಮರದ ಮೋಟುಗಳು ತಗುಲಿ ಗಾಯವಾಗುವುದೂ ಉಂಟು. ಆದ್ದರಿಂದ ಕೆಲವೊಂದು ಪ್ರಥಮ ಚಿಕಿತ್ಸೆಯ ಔಷಧಿಗಳನ್ನು ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನೂ ಕೊಂಡೊಯ್ದಿರುತ್ತಾರೆ.

ಬೇಟೆಯಲ್ಲಿ ಅರ್ಧ ದಿನದ ಬೇಟೆ, ಒಂದು ದಿನದ ಬೇಟೆ, ಎರಡು ದಿನದ ಬೇಟೆ, ಒಂದಿರುಳಿನ ಬೇಟೆ ಎಂದು ನಿಶ್ಚೈಸಿ ಹೊರಟಿರುತ್ತಾರೆ. ತಮಗೂ ತಮ್ಮ ನಾಯಿಗಳಿಗೂ ಸಾಕಾಗುವಷ್ಟು ರೊಟ್ಟಿ-ಬುತ್ತಿಗಳನ್ನು ಹೊತ್ತುಕೊಂಡಿರುತ್ತಾರೆ. ಎರಡು ದಿನಕ್ಕಿಂತ ಹೆಚ್ಚು ದಿನ ಕಾಡಿನಲ್ಲೇ ಬೆಟ್ಟಗುಡ್ಡಗಳಲ್ಲೇ ಇರಬೇಕಾಗಿ ಬಂದರೆ, ಮೊದಲೇ ಕೆಲವು ಆದಿವಾಸಿಗಳನ್ನು (ಎರವರು, ಕುರುಬರು, ಕುಡಿಯರು) ಕಳುಹಿಸಿ ಬೇಟೆಯಾಡುವ ತಾಣ, ಉಳಿದುಕೊಳ್ಳಲು ಸೂಕ್ತ ಏರ್ಪಾಡು ಮಾಡಿಡುವಂತೆ ತಿಳಿಸಿರುತ್ತಾರೆ.

ಬೇಟೆಗೆ ಸಿಕ್ಕಿರುವ ಪ್ರಾಣಿ ತುಂಬಿದ ಗರ್ಭಿಣಿ ಎಂದು ಗೊತ್ತಾದರೆ ಅದನ್ನು ಕೊಲ್ಲುವುದಿಲ್ಲ. ಆಕಸ್ಮಾತ್ ಕೊಂದುಬಿಟ್ಟಿದ್ದರೂ ಗರ್ಭಿಣಿ ಮೃಗದ ಮಾಂಸವನ್ನು ತಿನ್ನುವುದಿಲ್ಲ. ಬೇಟೆಗೆ ಹೋಗುವವನ ಪತ್ನಿಯೂ ತುಂಬು ಗರ್ಭಿಣಿಯಾಗಿದ್ದಲ್ಲಿ ಆತ ಬೇಟೆಗೆ ಹೋಗುವಂತಿಲ್ಲ. ಗರ್ಭಿಣಿಯ ಗಂಡ ಪ್ರಾಣಿ ಹತ್ಯೆ ಮಾಡಿದರೆ ಅವುಗಳ "ಶಾಪ" ತಟ್ಟುತ್ತದೆ-ಎಂಬ ಪಾಪಭೀತಿ ಇರುವುದರಿಂದ ಆತ ಉಳಿದವರೊಂದಿಗೆ ಹೋಗುವುದಿಲ್ಲ.

ಬೇಟೆಗೆ ಹೊರಟವರೆಲ್ಲರೂ ಮೊದಲು ಒಂದೆಡೆ ಜೊತೆ ಸೇರಿ, ಮಾತುಕತೆಯಾಡಿ ಬೇಟೆಯ ಕ್ರಮವನ್ನು ನಿಶ್ಚೈಸಿಕೊಳ್ಳುತ್ತಾರೆ. ಈ ರೀತಿ ಎಲ್ಲರೂ ಸೇರುವ ಜಾಗಕ್ಕೆ "ಅಂಬಲ" ಎನ್ನುತ್ತಾರೆ. ಇದಕ್ಕೆ ಸುತ್ತ ಗೋಡೆ ಇರುವುದಿಲ್ಲ. ಗೋಡೆ ಕಟ್ಟಿ ಒಳಗೆ ದೇವರ ಗರ್ಭಗುಡಿಯ ಹಾಗಿದ್ದು ಅಲ್ಲಿ ದೀಪ, ತ್ರಿಶೂಲ ಇದ್ದು, ಬಾಗಿಲು ಇದ್ದರೆ ಅದು "ಕೈಮಡ" (ಸಣ್ಣಗುಡಿ) (ಮಠ) ಆಗುತ್ತದೆ. ಇಲ್ಲಿ ನೈವೇದ್ಯ ಇಡುತ್ತಾರೆ.

**ಬೇಟೆಯ ಬಗ್ಗೆ ಕೆಲವು ನಂಬಿಕೆಗಳು**

೧. ಬೇಟೆಗೆ ಹೊರಟಾಗ ದಾರಿಯಲ್ಲಿ ಮೊದಲು ಮೊಲವನ್ನು ಕಂಡರೆ ಆ ದಿನದ ಬೇಟೆಯಲ್ಲಿ ಏನೂ ಸಿಗುವುದಿಲ್ಲ.

೨. ಕಾಡುಜಾತಿಯನ್ನು ಬೇಟೆಯ ಬಳಿಕ ಕತ್ತರಿಸುವಾಗ ಏಚಿ (ಎಲಚಿ, ಬೋರೆ) ಸೊಪ್ಪನ್ನು ಹರಡಿ, ಅದರ ಮೇಲೆ ಕತ್ತರಿಸಬಾರದು. (ಇದು ಯಾಕೆಂದು ಕೇಳಬಾರದು!)

೩. ಕೋವಿಯನ್ನು ಮುಟ್ಟಾದ ಹೆಂಗಸು ಅಥವಾ ಹೊಲೆಯರು ಮುಟ್ಟಿದರೆ, ಅಥವಾ ಅದರ ಮೇಲೆ ದಾಟಿ ಹೋದರೆ, ಅಥವಾ ಕೋವಿಯಿಂದ ಕಾಗೆಗೆ ಗುಂಡು ಹೊಡೆದು ಗುರಿ ತಪ್ಪಿದರೆ ಕೋವಿಗೆ 'ಮುಟ್ಟಿ'ಯಾಗುವುದು. ಆ ಬಳಿಕ ಅದರಿಂದ ಹೊಡೆದ ಗುಂಡಿನ ಗುರಿ ತಪ್ಪಿಹೋಗುವುದು. ಇದಕ್ಕೆ ಪರಿಹಾರವಾಗಿ 'ಮುಟ್ಟಿ' ತೆಗೆಸಬೇಕು.

-'ಪಟ್ಟೋಲೆ ಪಳಮೆ'ಯಿಂದ

**ಬೋಂದದ ಮುಕ್ಕಾಟಿರ ಐಪಣ್ಣನ ಚರಿತ್ರೆ**

ಕೊಡಗಿನ ಲಿಂಗಾಯತ ಪಾಳೇಗಾರನಾಗಿದ್ದ ಎರಡನೆಯ ಲಿಂಗರಾಜೇಂದ್ರ ಒಡೆಯನು ಒಮ್ಮೆ ವಿರಾಜಪೇಟೆಯಿಂದ ತನ್ನ ಪರಿವಾರ ಸಹಿತ ಕುದುರೆಯನ್ನೇರಿ ಮಡಿಕೇರಿಗೆ ಹೋಗುತ್ತಿದ್ದನು. ಕೊಂಡಂಗೇರಿಯ ಮಾರ್ಗವಾಗಿ ಮೂರ್ನಾಡಿನ ಹತ್ತಿರ ಬರುವಾಗ ಒಬ್ಬ ಸುಂದರನೂ ದೃಢಕಾಯನೂ ಆಗಿದ್ದ ತರುಣನು ಹೆಗಲಮೇಲೆ ಕೋವಿಯಿರಿಸಿ ತನ್ನವರೊಡನೆ ಹೋಗುತ್ತಿರುವುದನ್ನು ಕಂಡು, ಅವನ ಬಗ್ಗೆ ವಿಚಾರಿಸಿದನು. ಆಗ ರಾಜನ ದಿವಾನ ಕಚೇರಿಯಲ್ಲಿ ನಿರೂಪಗಳನ್ನೂ, ಕಂದಾಯದ ಲೆಕ್ಕಗಳನ್ನು ಬರೆಯುವ ಕಾಸಾಮುನ್ಷಿ (ಗುಮಾಸ್ತ) ಮುದ್ದಯ್ಯನು ರಾಜನೊಡನಿದ್ದವನು, ಆ ಯುವಕನು ತನ್ನ ತಮ್ಮನೆಂದನು. ಅವನು ವಿರಾಜಪೇಟೆಯ ಬಳಿಯ ಬಿಳುಗುಂದ (ಆಗಿನ ಕಾಲದಲ್ಲಿ ಅಪಭ್ರಂಶವಾಗಿ 'ಬೋಂದ'ವೆಂದೇ ಕರೆಯಲ್ಪಡುತ್ತಿದ್ದ) ಗ್ರಾಮದ ಮುಕ್ಕಾಟಿರ ಮನೆತನದ ಐಪಣ್ಣನು.

ಐಪಣ್ಣನಿಗೆ ಬೇಟೆಯಲ್ಲಿ ಹೆಚ್ಚಿನ ಆಸಕ್ತಿಯಿರುವುದೆಂದು ಗೊತ್ತಾದಾಗ ಲಿಂಗರಾಜನು ಕುದುರೆಯಿಂದಿಳಿದು, ತನ್ನಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿ ಗದ್ದೆಯಲ್ಲಿ ಮೇಯುತ್ತಿದ್ದ ಕೋಣವೊಂದರ ಮೇಲೆ ಕುಳಿತಿದ್ದ ಕಾಗೆಯನ್ನು ಗುಂಡು ಹೊಡೆದು ಉರುಳಿಸಿದನು.

ಸ್ವತಃ ಬೇಟೆಗಾರನಾಗಿದ್ದ ಲಿಂಗರಾಜನು ಐಪಣ್ಣನನ್ನು ಸುಮಾರು ಅಷ್ಟೇ ದೂರದಲ್ಲಿದ್ದ ಇನ್ನೊಂದು ಕೋಣದ ಮೇಲಿದ್ದ ಕಾಗೆಯನ್ನು ಹೊಡೆದುರುಳಿಸಲು ಆದೇಶವಿತ್ತನು. ಐಪಣ್ಣನು ಇದರಲ್ಲಿ ಜಯಶೀಲನಾದನು. ಸಂಪ್ರೀತನಾದ ರಾಜನು, ಅವನನ್ನು ಮಡಿಕೇರಿಯಲ್ಲಿದ್ದ ತನ್ನ ಅರಮನೆಗೆ ಕರೆದೊಯ್ದು, ಕೆಲವು ದಿನಗಳ ಬಳಿಕ ಅವನಿಗೆ ಲಿಂಗಧಾರಣೆ ಮಾಡಿಸಿ, ಚೆನ್ನಬಸವಪ್ಪನೆಂದು ನಾಮಕರಣ ಮಾಡಿಸಿದನು. ರಾಜನ ಒಬ್ಬ ಪತ್ನಿಯಾಗಿದ್ದ ಕಾಂತುಮೂರ್ನಾಡಿನ ಪಳಂಗಂಡ ಮನೆತನದಿಂದ ಬಂದಿದ್ದ ದೇವಕಿಯ ಮೊದಲ ಮಗಳು ಮುದ್ದಮ್ಮಾಜಿಯು ವಿವಾಹಯೋಗ್ಯಳಾಗಿದ್ದು, ಅವಳನ್ನು ಈ ಯುವಕನಿಗೆ ಕೊಟ್ಟು ಮದುವೆ ಮಾಡಿಸಿದನು. ಇದು ನಡೆದುದು ಕ್ರಿ.ಶ. ೧೮೧೬ರಲ್ಲಿ. *(ಆಧಾರ : ಕೊಡಗಿನ ಇತಿಹಾಸ : ಡಿ. ಎನ್. ಕೃಷ್ಣಯ್ಯ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೭೪)*

## ಬೇಟೆಯ ಬಗ್ಗೆ ಗಾದೆಗಳು

೧. ಅಚ್ಚಕ್ ಅರಿಯತ ಕೊಚ್ಚಕನುಂಡಾ,
ಬೀಪ್‌ನಕ ಅರಿಯತ ಬೋಟೆನಾಯಿ ಉಂಡಾ?

*ಕನ್ನಡ* : ಪ್ರೀತಿ ಅರಿಯದ ಅಕ್ಕನಿರುವಳೇ,
ಸಿಳ್ಳೆಹಾಕಿದಾಗ ತಿಳಿದುಕೊಳ್ಳದ ಬೇಟೆನಾಯಿ ಇದೆಯಾ?

೨. ಅಣ್ಣ ಚತ್ತದ್ ನಂದಾಚಿ; ಅಂಬ್ ಬಿಲ್ಲ್ ನಾಕಾಚಿ
- ಅಣ್ಣ ಸತ್ತದ್ದು ಒಳ್ಳೆಯದಾಯಿತು; ಅಂಬು, ಬಿಲ್ಲು ನನಗಾಯಿತು.

೩. ಕಂಡ ಪಾಂಬ್‌ನ ಕೊಂದಕ ಮರ್‌ಚಿ ಪಾಂಬ್ ಕಾಂಗ
- ಕಂಡ ಹಾವನ್ನು ಕೊಂದರೆ ಮತ್ತೆ ಹಾವು ಕಾಣಿಸದು.

೪. ಪಳ್ಳೆನಾಯಿಕ್ ಬೋಟೆಲ್ ಪಾಲ್ ಕೊಡ್‌ಪಕಾಗ; ಪೊಣ್ಣ್‌ಕ್ ಮನೆಲ್ ಕೊರುವು ಕೊಡಪಕಾಗ.

- ಹೆಣ್ಣು ನಾಯಿಗೆ ಬೇಟೆಯ (ಮಾಂಸದ) ಪಾಲು ಕೊಡಬಾರದು;
ಹೆಣ್ಣಿಗೆ ಮನೆಯಲ್ಲಿ ಯಜಮಾನಿಕೆ ಕೊಡಬಾರದು.

೫. ಪಂದಿ ಕುತ್ತ್‌ನ ನಾಯಿ ಕರ್‌ಗಲ್ಲ್ ಕಂಡಕ ಬೊತ್ತು.
- (ಕಾಡು) ಹಂದಿಯಿಂದ ತಿವಿಸಿಕೊಂಡ ನಾಯಿ ಕರಿಕಲ್ಲು ಕಂಡರೂ ಹೆದರೀತು.

# ದಕ್ಷಿಣ ಕನ್ನಡದಲ್ಲಿ ಪ್ರಾಣಿ ಬೇಟೆ

◆ *ನರೇಂದ್ರ ರೈ ದೇರ್ಲ*

ಪ್ರಾಣಿ, ಪಕ್ಷಿ, ಜಲಚರಗಳನ್ನು ವಿವಿಧ ಪರಿಕರ - ಸೂಕ್ಷ್ಮ ತಂತ್ರಗಳಿಂದ ಹೊಡೆದು ಕೊಲ್ಲುವುದೇ ಬೇಟೆ. ಶಿಷ್ಟ ಸಾಹಿತ್ಯದಲ್ಲಿ ಈ ವಿಧಾನಕ್ಕೆ ಮೃಗಯೆ, ಆಚ್ಛೋದನ, ಮೃಗವ್ಯ, ಅಚ್ಛೋಟನ, ಅಖೇಟನ, ಪಾಪರ್ದ್ಧಿ, ಶಿಕಾರಿ ಎಂಬ ಹೆಸರಿವೆ. ಬೇಟೆ ನಡೆಯುವ ಪರಿಸರ ಮತ್ತು ಸಾಯುವ ಪ್ರಾಣಿಗಳನ್ನು ಆಧಾರವಾಗಿಟ್ಟುಕೊಂಡು ಶಿಕಾರಿಯನ್ನು ಹಲವು ವಿಧಗಳಾಗಿ ವಿಂಗಡಿಸಬಹುದು. ಕಾಡಿನಲ್ಲಿ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುವುದಕ್ಕೆ 'ಕಾಡುಬೇಟೆ' ಎಂದೂ, ನೀರಿನಲ್ಲಿರುವ ಮೀನು, ಏಡಿ, ಆಮೆ ಮೊದಲಾದುವುಗಳನ್ನು ಬೇಟೆಯಾಡುವುದಕ್ಕೆ 'ಮೀನು ಬೇಟೆ' ಅಥವಾ 'ನೀರಬೇಟೆ' ಎಂದೂ ಹೆಸರು. ಇವೆರಡೂ ಬೇಟೆಯ ಪ್ರಮುಖ ವಿಧಗಳು.

ಬೇಟೆಯಾಡಿ ಪ್ರಾಣಿ, ಪಕ್ಷಿ, ಜಲಚರಗಳನ್ನು ಕೊಲ್ಲುವವನಿಗೆ 'ಬೇಟೆಗಾರ' ಅಥವಾ 'ಮೃಗಯಿ' ಎಂದು ಹೆಸರು. ಬೇಟೆಯಾಡಲು ಮೃಗಯುವಿಗೆ ಸಹಾಯ ಮಾಡುವವನಿಗೆ 'ಚೋಂಟ್ರ' ಎಂದು ಕರೆಯುತ್ತಾರೆ. ಬೇಟೆಯನ್ನೇ ಜೀವನಾವಶ್ಯಕ ವೃತ್ತಿಯನ್ನಾಗಿಸಿಕೊಂಡ ಜನಾಂಗವೊಂದಿದೆ. ಅವರೇ ಬೇಡರು.

ಮಾನವನ ಇತಿಹಾಸದಲ್ಲಿ ಬೇಟೆ ಯಾವಾಗ, ಎಲ್ಲಿ ಆರಂಭವಾಯಿತೆಂದು ನಿಖರವಾಗಿ ಹೇಳಲಾಗದು. ಮಾನವ ಸಂಸ್ಕೃತಿಯ ತೀರಾ ಮೊದಲಿನ ಅವಸ್ಥೆಯನ್ನು ಅವಲೋಕಿಸಿದಾಗ ಆಗಿನ ಜನರು ದನ ಸಾಕುವುದನ್ನಾಗಲಿ, ಒಕ್ಕಲುತನವನ್ನಾಗಲಿ ಅರಿತಿಲ್ಲವೆಂಬುದು ನಿಶ್ಚಿತ. ಪ್ರಾಚೀನ ಜನರ ಸಂಸ್ಕೃತಿಯನ್ನು ಅವರು ಸೇವಿಸುತ್ತಿದ್ದ ಆಹಾರದ ಮೂಲಕ ನೋಡಿದರೆ, ಮೂಲತಃ ಆದಿಮಾನವ ಮಾಂಸಾಹಾರಿ ಎಂದು ತಿಳಿಯುತ್ತದೆ. ಪ್ರಾಕ್ತನ ಆಧಾರವೂ ಇದನ್ನು ದೃಢಪಡಿಸುತ್ತದೆ.

ಬೇಟೆಯನ್ನೇ ಪರಂಪರಾಗತ ವೃತ್ತಿಯನ್ನಾಗಿಸಿಕೊಂಡವರನ್ನು ಬೇಡರೆಂದು ಕರೆಯುತ್ತಾರೆ. ಇಂಥ ಜನರು ಹೆಚ್ಚಾಗಿ ಕಾಡುಗುಡ್ಡಗಳಲ್ಲಿ ವಾಸಿಸುತ್ತಾರೆ. ರಾಮಾಯಣವನ್ನು ಬರೆದ ವಾಲ್ಮೀಕಿ ಬೇಡನಾದುದರಿಂದ ಇವರೂ ತಮ್ಮನ್ನು ವಾಲ್ಮೀಕಿಗಳೆಂದು ಕರೆಯುವುದುಂಟು. ಶಬರ್, ಬೇಡ, ಬೇಡರ್ ಎಂಬ ಹೆಸರುಗಳುಳ್ಳ ಈ ಜನಾಂಗದವರು ಕಷ್ಟಜೀವಿಗಳು. ಬಿಲ್ಲು, ಬಾಣ ಮತ್ತು ಭರ್ಚಿಗಳು ಇವರು ದಿನನಿತ್ಯದ ಬೇಟೆಯಲ್ಲಿ ಬಳಸುವ ಪರಿಕರಗಳು. ಇವರು ಕಾಡಿನಲ್ಲಿರುವ

ಪ್ರಾಣಿ ಪಕ್ಷಿಗಳ ಚಲನವಲನಗಳನ್ನು ಸುಲಭವಾಗಿ ಅರಿತು ಸೂಕ್ಷ್ಮವಾಗಿ ಹಿಡಿಯಬಲ್ಲರು. ಬೇಡರು ಕಪ್ಪು ವರ್ಣದವರು. ಇವರು ಸಾಂಘಿಕ ನೆಲೆಯಲ್ಲಿ ಬದುಕುವವರು.

ಬೇಡಗನ್ನು ನಾಯಕರೆಂದೂ ಕರೆಯುತ್ತಾರೆ. ಇವರ ಇತರ ಹೆಸರುಗಳೆಂದರೆ ತಳವಾರ, ವಾಲ್ಮೀಕಿ, ನಾಯಕ, ನಾಯಕವಾಡಿ, ಬೇರದ್, ವೇದನ್ ಮತ್ತು ಬೋಯ ಎಂದು. ಇತ್ತೀಚಿಗೆ ಇವರು ಬೇಸಾಯದಲ್ಲೂ ತೊಡಗಿದ್ದಾರೆ. ವಿಜಯನಗರ ಅರಸರ ಮತ್ತು ಹೈದರಾಲಿಯ ಸೈನ್ಯದಲ್ಲಿ ಬೇಡರು ಸೈನಿಕರಾಗಿ ಸೇವೆ ಸಲ್ಲಿಸಿದ್ದಾರೆ. ಈ ಜನರು ಹೆಚ್ಚಾಗಿರುವುದು ರಾಜ್ಯದ ಉತ್ತರ ಭಾಗದಲ್ಲಿ. ಬೇಡರಲ್ಲಿ ಊರುಬೇಡ, ಮ್ಯಾಸಬೇಡ ಎಂಬ ಎರಡು ವರ್ಗಗಳಿವೆ. ದಕ್ಷಿಣ ಕನ್ನಡ - ಕರಾವಳಿಗೆ ಸಂಬಂಧಿಸಿದಂತೆ ಬೇಟೆಯನ್ನೇ ಜೀವನಾಸರೆಯನ್ನಾಗಿಸಿಕೊಂಡ ಜನ-ಜನಾಂಗದವರಿಲ್ಲ. ಗಿರಿಜನ, ಹರಿಜನರು ಮುಖ್ಯವಾಗಿ ಮೇರ, ಮನ್ಸರು ಆಂಗಿಕವಾಗಿ ಬೇಟೆಯಲ್ಲಿ ತೊಡಗುತ್ತಾರೆ. ಸಾಂಪ್ರದಾಯಿಕ ತಂತ್ರಗಳನ್ನು ಬಳಸಿಕೊಂಡು ಮೊಲ, ಹಕ್ಕಿ, ಮೀನುಗಳನ್ನು ಹಿಡಿಯುತ್ತಾರೆ. ಗಾಳ, ಉರುಳು, ಮುಡಕ್ಕಾನೆ, ಚೋಕ್ಕೋಳು, ಕರ್ಪು, ಮುಂತಾದ ಗ್ರಾಮ್ಯ ತಂತ್ರ-ವಿಧಾನಗಳಿಂದ ಅನಿಯತವಾಗಿ ಪ್ರಾಣಿ-ಪಕ್ಷಿ-ಮೀನುಗಳನ್ನು ಹಿಡಿಯುತ್ತಾರೆ. ಬೇಟೆಯನ್ನೇ ಪೂರ್ಣ ಪ್ರಮಾಣದಲ್ಲಿ ನಡೆಸುವ, ಅದರಿಂದಲೇ ಬದುಕುವ ಕುಟುಂಬಗಳು ಇಲ್ಲಿಲ್ಲ.

ಬೇಟೆಗೆ ಕರಾವಳಿ-ಮಲೆನಾಡಿನ ಪರಿಸರ-ಪ್ರಕೃತಿ ಪೂರಕವಾಗಿಯೇ ಇದೆ. ಸಮೃದ್ಧ ಕಾಡು, ಗಹನ ಕಣಿವೆ ಕಂದರಗಳು, ತುಂಬಿ ಹರಿಯುವ ನದಿಗಳು, ಅಭಯಾರಣ್ಯಗಳು ಈ ಪ್ರದೇಶದಲ್ಲಿರುವುದರಿಂದ ಸಹಜವಾಗಿಯೇ ಪ್ರಾಣಿ, ಪಕ್ಷಿ, ಮೀನುಗಳಿಗೆ ಇಲ್ಲಿ ಬರವಿಲ್ಲ. ಶತಮಾನದ ಹಿಂದೆ ಇಂಗ್ಲಿಷ್ ಅಧಿಕಾರಿಗಳು ಕೂಡಾ ಇಲ್ಲಿನ ಕಾಡುಗಳಲ್ಲಿ ಬೇಟೆಯಾಡಿದ ಉಲ್ಲೇಖವಿದೆ. ಇಲ್ಲಿಯ ಬೇಟೆಗಾರರ ಅನುಭವಗಳು ಸಾಹಿತ್ಯ ರೂಪಗಳನ್ನೂ ಪಡೆದಿದೆ. ಅನುಭವಿ ಬೇಟೆಗಾರರಾದ ಶ್ರೀ ಕೆದಂಬಾಡಿ ಜತ್ತಪ್ಪ ರೈ, ಬಂಡಡ್ಕ ಅಪ್ಪಯ್ಯಗೌಡ, ಶೈಪಂಜೆ ವಿಷ್ಣುಭಟ್ ಮುಂತಾದವರ ಬೇಟೆಯ ಕೃತಿಗಳು ಪ್ರಶಸ್ತಿ - ಪುರಸ್ಕಾರಗಳನ್ನು ಗಳಿಸಿವೆ. ಕೆಲವು ವಿಶ್ವವಿದ್ಯಾನಿಲಯಗಳ ಪದವಿ ವಿದ್ಯಾರ್ಥಿಗಳಿಗೆ ಅವು ಪಠ್ಯವಾಗಿವೆ.

ದಕ್ಷಿಣ ಕನ್ನಡ ಅಥವಾ ತುಳುನಾಡಿನಲ್ಲಿ ಬೇಟೆ ಒಂದು ಬಗೆಯ ಕ್ರೀಡೆಯಂತೆಯೂ ಹಾಸು ಹೊಕ್ಕಾಗಿದೆ. ಇಲ್ಲಿಯ ಪ್ರಾಚೀನ ಹಾಡು-ಕತೆಗಳಲ್ಲಿ ಮೃಗಬೇಟೆಯ ಕುರಿತು ವಿಪುಲ ಮಾಹಿತಿಯಿದೆ. 'ಕೋಟಿ ಚೆನ್ನಯ', 'ತುಳುನಾಡ ಸಿರಿ', 'ವಜ್ರದಂತ ಕುಮಾರ', 'ಅಗೋಳಿ ಮಂಜಣ್ಣ'', ಮುಂತಾದ ಜಾನಪದ ಕತೆ-ಐತಿಹ್ಯಗಳಲ್ಲಿ ಬೇಟೆಯ ಪ್ರಸ್ತಾಪವಿದೆ. ತುಳುನಾಡು-ಮಲೆನಾಡುಗಳ ಜನರ ಬದುಕಿನಲ್ಲಿ ಮೃಗಬೇಟೆ ಜನಪದರ ಸಾಹಸ - ನೋಟ, ಆಹಾರ, ಸ್ವಯಂ ರಕ್ಷಣೆ ಮುಂತಾದ ಮೂಲಗಳ ಹಿನ್ನೆಲೆಗಳಿಂದ ಮೇಳೈಸಿದೆ.

ಬೇಟೆ ಕಂಬಳ ಕೋಲ ತಾಳಮದ್ದಳೆಗಳಲಿ
ನಮ್ಮ ಹಿರಿಯರ ಹುರುಪು ನೋಡಬೇಕು

ಅಶ್ವಧಾಟಿಯ ಹಿಡಿದು ನಮ್ಮಜ್ಜ ಜೈಮಿನಿಯ
ಓದುತಿರೆ ಸರಸತಿಯೆ ಕುಣಿಯಬೇಕು -

ಕಯ್ಯಾರ ಕಿಞ್ಞಣ್ಣ ರೈಯವರ ಈ ಕಾವ್ಯಭಾಗ ತೌಳವ ಜನತೆಯ ಬೇಟೆಯ ಆಸಕ್ತಿಯನ್ನು ಸ್ಪಷ್ಟಪಡಿಸುತ್ತದೆ.

ಬೇಟೆಗಾರರು ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ತಮ್ಮದೇ ಆದ ಬೇಟೆಯ ದೇವರನ್ನು ಆರಾಧಿಸುತ್ತಿದೆ. ಬೇಟೆಗೆ ಸಂಬಂಧಿಸಿದ ಇಂಥ ಆರಾಧನೆಯಲ್ಲಿ ಪ್ರಾದೇಶಿಕ ಭಿನ್ನತೆಯೂ ಇದೆ. ದಕ್ಷಿಣ ಕನ್ನಡದ 'ಕೆಡ್ವಾಸ' ಅಥವಾ 'ಕೆಡ್ಡಸ' ಎಂಬ ಹಬ್ಬ ಬೇಟೆಯ ಉದ್ದೇಶದಿಂದ ಹೆಚ್ಚಿನ ಮಹತ್ವವನ್ನು ಪಡೆದಿದೆ. ಈ ಹಬ್ಬ ವರ್ಷಕ್ಕೊಮ್ಮೆ ಆಚರಿಸಲ್ಪಡುತ್ತದೆ. ಅಂದು ಜನಪದರು ವಿಶೇಷವಾಗಿ ಬೇಟೆಯಲ್ಲಿ ತೊಡಗುತ್ತಾರೆ. ಆದರೆ ಅದು ಪರಿಪೂರ್ಣ ಆರಾಧನೆಯ ವಿಧಿ ಅಥವಾ ಕ್ರಮವಲ್ಲ. ಕೆಡ್ವಾಸದ ಹೊರತಾಗಿ ಇಲ್ಲಿ ಬೇರೆ ಹಬ್ಬದ ದಿನಗಳಲ್ಲೂ ಶಿಕಾರಿಗೆ ಒಗ್ಗೂಡುವ ಪದ್ಧತಿಯಿದೆ. ಹಬ್ಬದ ನೆಪದಲ್ಲಿ ಒಗ್ಗೂಡುವ ಕೆಡ್ವಾಸಬೇಟೆಗೆ ಕಾರಣಗಳು ಹಲವಾರು. ಕೆಡ್ವಾಸದ ದಿನ ವನ್ಯಜೀವಿಗಳು ಬಾಕಿ ದಿನಗಳಂತಿರದೆ ಅವು ವಿಶೇಷವಾಗಿ ಅಂದು ಜ್ವರ-ಕಾಲು ನೋವುಗಳಿಂದ ಬಳಲಿಕೊಂಡಿರುತ್ತದೆ ಎಂಬ ಕಲ್ಪನೆಯಿದೆ. ಆದುದರಿಂದ ಅಂದು ಅವು ಸುಲಭವಾಗಿ ಜೊತೆಗಾರರಿಗೆ ಶರಣಾಗುತ್ತವೆ ಎಂಬ ಕಲ್ಪನೆಯಿದೆ. "ಋತುಮಾನದ ಸಂಧಿ ಕಾಲದಲ್ಲಿ ಹವಾಮಾನ ವ್ಯತ್ಯಾಸದಿಂದ ಇಂಥದ್ದೊಂದು ಜಾಡ್ಯ ಜರಗಬಹುದಾದುದು ಅಸಂಭವ. ತಮ್ಮ ಹೊಲ ತೋಟಗಳಿಗೆ ನುಗ್ಗಿ ಬೆಳೆಯನ್ನು ನಾಶಪಡಿಸುವ ವಿವಿಧ ಪ್ರಾಣಿಗಳನ್ನು ಸಾಮೂಹಿಕವಾಗಿ ಹಬ್ಬದ ನೆಪದಿಂದ ಬೇಟೆಯಾಡುವ ಒಂದು ಸಂದರ್ಭವೂ ಋತುಮಾನಕ್ಕನುಸರಿಸಿ ಕಲ್ಪಿತವಾಗಿರಬಹುದು" ಎನ್ನುತ್ತಾರೆ ಖ್ಯಾತ ಜನಪದ ತಜ್ಞ ಪ್ರೊ. ಅಮೃತ ಸೋಮೇಶ್ವರ ಅವರು. ಕೆಡ್ವಾಸದ ದಿನ ಮಾಂಸದೂಟ ಮಾಡದಿದ್ದರೆ ಅಂಥವರ ಎಲುಬು ನುಗ್ಗುನುರಿಯಾಗುವುದೆಂಬ ಇನ್ನೊಂದು ಸಾಮಾನ್ಯ ನಂಬಿಗೆಯೂ ಇಂಥ ನಂಬಿಕೆಗೆ ಇಂಬು ಕೊಡುತ್ತದೆ. ಈ ಮೇಲಿನ ಕಾರಣಗಳ ಹೊರತಾಗಿ ಪ್ರಕೃತಿ ಸಮತೋಲನದ ನಿಯಮವೂ ಇದಕ್ಕೊಂದು ಕಾರಣವಾಗಿರಬಹುದು. ಮಿತಿ ಮೀರಿದ ಪ್ರಾಣಿಗಳನ್ನು ಕೊಂದರೆ ಸಹಜವಾಗಿಯೇ ಪ್ರಕೃತಿಯ ನಿಯಂತ್ರಣವಾಗುವುದು.

ಕೆಡ್ವಾಸದಂದು ಬೇಟೆಗೆ ಹೊರಡುವ ಮೊದಲು 'ಬೇಟೆ ದೇವ'ರನ್ನು ಪೂಜಿಸುತ್ತಾರೆ. ಸಾಮೂಹಿಕವಾಗಿ ಬೇಟೆ ನಡೆಯುವ ಮೊದಲು ಪುರುಷಭೂತ ಮತ್ತು ಮಗ್ಗೆರ್ಲು ದೈವಗಳನ್ನು ಪ್ರಾರ್ಥಿಸಲಾಗುವುದು. ಇವೆರಡು ಭೂತಗಳನ್ನು ಪ್ರಾರ್ಥಿಸಿದ ಅನಂತರ ಬೇಟೆ ಆರಂಭವಾಗುತ್ತದೆ.

ತುಳುನಾಡಿನಲ್ಲಿ ಕೆಡ್ವಾಸದ ಹೊರತಾಗಿ ಬೇರೆ ದಿನಗಳಲ್ಲೂ ಬೇಟೆಯಾಡುತ್ತಾರೆ. ದೀಪಾವಳಿ, ಯುಗಾದಿಯ ಸಂದರ್ಭಗಳಲ್ಲೂ ಬೇಟೆ ಸೇರುವ ಕ್ರಮವಿದೆ. ಊರಿನ ಒಬ್ಬ ಪ್ರಮುಖನ, ನಿರ್ದೇಶನ, ಖರ್ಚಿನಲ್ಲಿ ಬೇಟೆ ನಡೆಯುತ್ತದೆ. ಬೇಹುಗಾರ, ಸೇವಕರ ಊಟ ತಿಂಡಿಗಳನ್ನು ನೀಡಿ, ಅಂದಿನ ಖರ್ಚನ್ನು ತುಂಬುವ ಅವರಿಗೆ ಬೇಟೆಯಲ್ಲಿ ದೊರೆತ ಮಾಂಸದಲ್ಲಿ ಸಿಂಹಪಾಲು. ಈ ಉದ್ದೇಶದಿಂದ ಬೇಟೆಯಾಡಿಸುವ ಪ್ರಮುಖರು ಬೇಟೆಯ ಮೊದಲು ತಮ್ಮ ಉದ್ದೇಶ

ಈಡೇರಬೇಕೆಂದು ಮನೆದೇವರಿಗೆ ಹರಕೆ ಹೊರುವುದಿದೆ. ಬೇಟೆ ಪ್ರಾರಂಭವಾಗುವ ಮೊದಲು ನಲಿಕೆ ಜನಾಂಗದವರು ಒಂದಷ್ಟು ಮಂದಿ ಡೋಲು ಬಡಿಯುತ್ತಾ ಬೇಟೆಗಾರರನ್ನು ಪುಸಲಾಯಿಸಿ, ಹೊಗಳಿ, ಬೊಬ್ಬೆ ಹೊಡೆದು ಒಂದಷ್ಟು ಮುಂದುವರಿದು ಒಂದು ಮುಷ್ಟಿ ಮರಳನ್ನು ಬಿಸಾಡಿ ಹಿಂತಿರುಗುತ್ತಾರೆ. ಇದೊಂದು ಮೃಗಾಕರ್ಷಣೆಯ ಕ್ರಮ ಅಥವಾ ವಿಧಿ. ಈ ಪೂರ್ವವಿಧಿ ಮುಗಿದ ತಕ್ಷಣ ಸೇವಕರು ಉತ್ಸಾಹದಿಂದ ಕಾಡಿಗೆ ನುಗ್ಗುತ್ತಾರೆ. ಬೇಟೆಯಲ್ಲಿ ಮಾಂಸ ದೊರೆತರೆ ಒಂದು ಪಾಲನ್ನು ಮುಗೇರ ದೈವಕ್ಕೆ ಇಟ್ಟು ಪೂಜಿಸುತ್ತಾರೆ. ಅನಂತರ ಉಳಿದ ಮಾಂಸವನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ದಕ್ಷಿಣ ಕನ್ನಡದ ದೇವಾಲಯಗಳಲ್ಲಿ ಜಾತ್ರೆ ಮುಗಿದ ಮರುದಿನ ದೇವರು ಮೃಗಬೇಟೆಗೆ ಹೋಗುವ ವಿಧಿ ಕೆಲವೆಡೆ ಇಂದೂ ಉಳಿದು ಬಂದಿದೆ. ಕಾಡಿನ ಕ್ರೂರ ಮೃಗಗಳನ್ನು ನಿಗ್ರಹಿಸಿ ರಕ್ಷಿಸಲು ದೇವರೇ ಮೃಗಬೇಟೆಯಾಡುತ್ತಾನೆ ಎಂಬ ಕಲ್ಪನೆ ಇದಕ್ಕೆ ಕಾರಣವಾಗಿರಬಹುದು.

ತುಳುನಾಡಿನ ಜಾನಪದ ಸಾಹಿತ್ಯದಲ್ಲಿ ಪ್ರಕಟವಾಗುವ ಬೇಟೆಯ ವಿವರಗಳು ಅಲ್ಲಿಯ ಬೇಟೆ ಸಂಸ್ಕೃತಿ - ಪರಂಪರೆಗೆ ಕೈಗನ್ನಡಿ. ಬೇಟೆಯ ಸಂದರ್ಭದಲ್ಲಿ ಪೆರ್ಮಲೆಯ ಬಲ್ಲಾಳನಿಗೆ ನಂಜಿನಮುಳ್ಳು ಚುಚ್ಚುವುದು; ಕೋಟಿಚೆನ್ನಯರು ಸಾಗುವಳಿಯಲ್ಲಿ ತೊಡಗಿರುವಾಗ ಬೆಳೆಯನ್ನು ಹಾಳುಮಾಡಲು ಬರುವ ಹಂದಿಯನ್ನು ಬೇಟೆಯಾಡುವುದು ಮುಂತಾದ ಪ್ರಸಂಗಗಳಿವೆ. 'ತುಳುನಾಡ ಸಿರಿ' ಪಾಡ್ದನದಲ್ಲಿ ಬೇಲೂರಿ ಕ್ಷತ್ರಿಯರು ಮತ್ತು ಕೊಬ್ರಾಡಿ ಕೋಡ್ಸರಾಳ್ವರು ಬೇಟೆಯಾಡುವುದು; ಬಲಶಾಲಿ ಬೇಟೆನಾಯಿಗಳ ಪ್ರಾವೀಣ್ಯ; ಬೇಟೆಯಾಡುವ ವ್ಯಾಪ್ತಿ ಮತ್ತು ಬೇಟೆಗೆ ಹೋಗುವ ದಾರಿಯನ್ನು ಗುರುತಿಸಲು ನಿಶಾನಿಯನ್ನು ಕಟ್ಟುವುದು ಇತ್ಯಾದಿಗಳ ಕುರಿತು ತಿಳಿಯುತ್ತದೆ. ರಾಜಕುಮಾರ ವಜ್ರಂದಕುಮಾರನು ಪಟ್ಟವೇರಿದ ಮರುದಿನವೇ ತನ್ನ ಪರಿವಾರದೊಂದಿಗೆ ವಜ್ರದ ದಂಡಿಗೆಯಲ್ಲಿ ಕೂತು ಕಾಡಿಗೆ ಬೇಟೆಗೆಂದು ಹೋಗುವ ಚಿತ್ರ ವಜ್ರಂದಕುಮಾರ ಪಾಡ್ದನದಲ್ಲಿದೆ.

ತುಳುವರ ಬೇಟೆಯ ಸಾಹಸ-ಸಾಧನೆಯನ್ನು ಎರಡು ಶತಮಾನಗಳ ಹಿಂದೆ ಇಲ್ಲಿ ಬದುಕಿದ್ದ ಎನ್ನಲಾದ ಅಗೋಳಿ ಮಂಜಣ್ಣನ ಕಥೆಯಿಂದಲೂ ತಿಳಿಯಬಹುದು. ಮಂಜಣ್ಣನ ಬೇಟೆಯ ಸಾಹಸ ತುಳುವರಲ್ಲಿ ಈಗಲೂ ಪ್ರಚಲಿತವಿದೆ. ಕಾಡಿಗೆ ಸೊಪ್ಪು ಹೆರೆಯಲು ಹೋದ ಮಂಜಣ್ಣ ಪೊದರ ಮಧ್ಯೆ ಮಲಗಿದ್ದ ದೊಡ್ಡ ಹಂದಿಯೊಂದನ್ನು ಕಂಡು ಹೆದರದೆ ಕೆಚ್ಚೆದೆಯಿಂದ ಕತ್ತಿಯಿಂದಲೇ ಅದರ ಹಿಂಗಾಲನ್ನು ಕಡಿಯುತ್ತಾನೆ. ಮುಂದೆ ಓಡಲಾರದ ಹಂದಿಯನ್ನು ಎದುರಿಸಿ, ಕೊಂದು ತಾನೇ ಹೊತ್ತುಕೊಂಡು ಮನೆಗೆ ತಂದು ತಾಯಿಯಿಂದ ಹೊಗಳಿಸಿಕೊಳ್ಳುತ್ತಾನೆ.

ಬೇಟೆಗೆ ಸಂಬಂಧಿಸಿದ 'ಪಿಲಿಪಂಜಿ ಕುಣಿತ' (ಪಂಜಿ = ಹಂದಿ) ದಕ್ಷಿಣ ಕನ್ನಡದಲ್ಲಿ ಜನಪ್ರಿಯ ಜಾನಪದ ಕುಣಿತ. ಪಿಲಿ ಅಂದರೆ ಹುಲಿ. ಈ ಕುಣಿತದಲ್ಲಿ ಹಂದಿ ಮತ್ತು ಹುಲಿಯೇ ಪ್ರಧಾನ ವೇಷ-ಪಾತ್ರವಾಗಿರುವುದರಿಂದ ಇದಕ್ಕೆ 'ಪಿಲಿಪಂಜಿ ಕುಣಿತ' ಎಂಬ ಹೆಸರಿದೆ. ಈ ಪ್ರಾಣಿ ಸಂಬಂಧಿ ಕುಣಿತದಲ್ಲಿ ಒಂದು ಹುಲಿವೇಷ, ಒಂದು ಹಂದಿ ವೇಷ, ಇನ್ನೆರಡು ಜಿಂಕೆ ವೇಷಗಳಿರುತ್ತವೆ. ಒಬ್ಬನು ಬೇಟೆಗಾರನ ವೇಷ ಧರಿಸುತ್ತಾನೆ. ಎಲ್ಲರೂ ನಿಯಮಬದ್ಧವಾಗಿ

ಹಾಡಿಗೆ ಸರಿಯಾಗಿ ಕುಣಿಯುತ್ತಾರೆ. ಈ ಕುಣಿತಕ್ಕೆ ನಿರ್ದಿಷ್ಟವಾದ ವಿಧಾನವಿದೆ. ಇಲ್ಲಿ ಹುಲಿ ಮತ್ತು ಹಂದಿ ರೈತರ ದನಕರುಗಳನ್ನು, ಬೆಳೆ ಪೈರನ್ನು ತಿಂದುಹಾಕುವ ದುಷ್ಟ ಮೃಗಗಳನ್ನು ಸಂಕೇತಿಸುತ್ತವೆ. ಇಂಥ ಮೃಗಗಳು ಬೆಳೆ ಪೈರನ್ನು ಮುಂದೆ ಹಾಳು ಮಾಡಬಾರದೆಂದು, ಅವನ್ನು ನಿರ್ನಾಮ ಮಾಡುವುದಕ್ಕಾಗಿ ಹರಕೆ ಮತ್ತು ಸಾಂಕೇತಿಕವಾಗಿ ಈ ಕುಣಿತವನ್ನು ನಡೆಸುತ್ತಾರೆ. ದಕ್ಷಿಣ ಕನ್ನಡದ ಮೇರರ ಜಾನಪದ ಕುಣಿತಗಳಲ್ಲಿ ಇದು ಹೆಚ್ಚು ಪ್ರಸಿದ್ಧವಾಗಿದೆ.

ತುಳುನಾಡಿನ ಬೇಟೆ ಸಂಸ್ಕೃತಿ - ನಡಾವಳಿಗಳಲ್ಲಿ ನಾಯಿಗಳಿಗೂ ಪ್ರಾಮುಖ್ಯತೆ ಇದೆ. ಮನುಷ್ಯನಿಗೆ ಬೇಟೆಯಲ್ಲಿ ನಾಯಿಗಳೂ ನೆರವಾಗಿವೆ. ಘಟ್ಟದಿಂದ, ಬಯಲು ಸೀಮೆಯಿಂದ ಬೇಟೆಗಾಗಿ ವಿಶೇಷ ನಾಯಿಗಳನ್ನು ತರಿಸುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ಪಳಗಿದ ನಾಯಿಗಳು ಮಾನವನ ಸಹಾಯವಿಲ್ಲದೆ ಏಕಾಂಗಿಯಾಗಿ ಬೇಟೆಯಾಡುತ್ತವೆ. ಬೇಟೆಯಲ್ಲಿ ಮಾಂಸ ದೊರೆತರೆ ಭಾಗವಹಿಸಿದ ನಾಯಿಗಳಿಗೂ ಬೇಹುಗಾರ, ಸೋಹುವರಿಗೆ ಸಿಗುವಂಥ ಪಾಲು ಸಿಗುತ್ತದೆ. ಆ ಮಾಂಸದ ಪಾಲನ್ನು 'ನಾಯಿಪಾಲು' ಎಂದು ಕರೆಯುತ್ತಾರೆ.

ಬೇಟೆ, ತುಳುನಾಡಿನಲ್ಲೀಗ ಅನಿರೀಕ್ಷಿತವಾಗಿ ನಡೆಯುವುದೇ ಹೆಚ್ಚು. ರಾತ್ರಿ ಹೊತ್ತು ಊರಿಗೆ ನುಗ್ಗಿ, ಹಂದಿ, ಮೊಲ ಮುಂತಾದುವುಗಳು ಬೆಳೆ ಪೈರಿಗೆ ತೊಂದರೆ ಉಂಟು ಮಾಡಿದಾಗ ಬೈಲು-ಊರಿನ ಸರಹದ್ದಿನಲ್ಲೇ ಪ್ರಾಣಿಗಳು ಅವಿತಿರಬೇಕೆಂದು ನಿರ್ಧರಿಸಿ ಊರ ಜನ ಒಟ್ಟಾಗಿ ಬೇಟೆಗೆ ಸಿದ್ಧತೆ ನಡೆಸುತ್ತಾರೆ. ಪ್ರಾಣಿಗಳು ನುಗ್ಗಿ ಬಂದ ಕಂಡಿ, ಅವುಗಳ ಹೆಜ್ಜೆ ಗುರುತುಗಳನ್ನು ಆಧರಿಸಿ ಅವು ಇಂಥದ್ದೇ ಕಾಡು ಭಾಗದಲ್ಲಿರಬಹುದು ಎಂದು ಯೋಚಿಸಿ ಆ ಭಾಗಕ್ಕೆ ಸನ್ನದ್ಧರಾಗಿ ನುಗ್ಗುತ್ತಾರೆ. ಕಾಡಿನ ಹೊರಭಾಗದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ಜಾಗದಲ್ಲಿ ಎಲ್ಲರೂ ಒಂದಾಗಿ ಕೋವಿಗಳನ್ನು ಹೊಂದಿರುವವರು ಎಲ್ಲೆಲ್ಲಿ, ಯಾವ ಯಾವ ಕಿಂಡಿಗಳಲ್ಲಿ ನಿಲ್ಲಬೇಕೆಂದು ವ್ಯೂಹವನ್ನು ಯೋಜಿಸುತ್ತಾರೆ. ಇಂಥ ಸಂದರ್ಭದಲ್ಲಿ ಹಿರಿಯ ಅನುಭವಿ ಬೇಟೆಗಾರ ಉಳಿದವರಿಗೆ ನಿರ್ದೇಶನ ಕೊಡುತ್ತಾನೆ. ಚತುರ ಈಡುಗಾರರು ಕಾಡು ಪ್ರಾಣಿಗಳು ಕಾಡಿನಿಂದ ಕಾಡಿಗೆ ನುಸುಳಬಲ್ಲ ಕಿಂಡಿಗಳಲ್ಲಿ ಸನ್ನದ್ಧರಾಗುತ್ತಾರೆ. ಮೈಯೆಲ್ಲ ಕಿವಿಯಾದವರಂತೆ ಕೋವಿಯನ್ನು ಬಗಲಲ್ಲಿಟ್ಟುಕೊಂಡು ಕಾಯುತ್ತಾರೆ. ಕತ್ತಿ, ದೊಣ್ಣೆ, ಪಟಾಕಿ, ತಮಟೆಗಳನ್ನು ಹೊಂದಿದ ಸೇವಕರು ಯಾವುದಾದರೂ ಒಂದು ಭಾಗದಿಂದ ಸಾಮೂಹಿಕವಾಗಿ ಕಾಡಿಗೆ ನುಗ್ಗುತ್ತಾರೆ. ಯಾವ ಮೂಲೆಯನ್ನೂ ಬಿಡದೆ ಶೋಧಿಸುತ್ತಾರೆ. ಉತ್ಪುತ್ಪು - ಇಡಿ ಇಡಿ ಎಂದು ಬೊಬ್ಬೆ ಹೊಡೆದು ಅವಿತಿದ್ದ ಕಾಡುಪ್ರಾಣಿಗಳನ್ನು ಎಬ್ಬಿಸಿ ಸೋಹುಗಾರರ ಕಡೆಗೆ ನುಗ್ಗಿಸುತ್ತಾರೆ. ಕೋವಿ ಸಿಡಿದಾಗ ಹಂದಿ ಬಿದ್ದಿರಬಹುದೆಂದು ಖುಶಿಯಿಂದ, ಮತ್ತಷ್ಟು ಉತ್ಸಾಹದಿಂದ ಬೊಬ್ಬೆ ಹೊಡೆದು ಕಾಡು ಸೇರುತ್ತಾರೆ.

ದೊರೆತ ಬೇಟೆಯನ್ನು ಕಾಡಿನಲ್ಲೇ ಮಾಂಸ ಮಾಡಿ ಹಂಚುವಾಗಲೂ ಕೆಲವೊಂದು ಕ್ರಮ, ವಿಧಿಗಳಿವೆ. ಕಾಡಿನ ಭೂತಕ್ಕೆ ಒಂದು ಪಾಲನ್ನು ಇಡುವ ಕ್ರಮವಿದೆ. ಮಾಂಸವನ್ನು ಎಲ್ಲರೂ ಹಂಚಿಕೊಂಡ ನಂತರ ಆ ಜಾಗವನ್ನು ಬಿಟ್ಟು ಕದಲುವ ಮೊದಲು ಒಂದು ಬಾರಿ ಗಾಳಿಯಲ್ಲಿ ಗುಂಡು ಸಿಡಿಸುವ ಕ್ರಮವಿದೆ.

ಪ್ರಾಣಿ, ಹಕ್ಕಿ, ಜಲಚರಗಳನ್ನು ಬೇಟೆಯಾಡಲು ಹಲವು ಬಗೆಯ ವಿಧಾನ-ತಂತ್ರಗಳು ಬಳಕೆಯಲ್ಲಿವೆ. ನಮ್ಮ ಪೂರ್ವಜರು ಬೇರೆ ಬೇರೆ ರೀತಿಯ ಆಯುಧಗಳಿಂದ, ವಿವಿಧ ತಂತ್ರಗಳಿಂದ ಬೇಟೆಯಾಡುತ್ತಾ ಬಂದಿದ್ದಾರೆ. ಕಲ್ಲು, ಕೊಡಲಿ, ಬಿಲ್ಲು ಬಾಣ, ಬಲೆ, ಈಟಿ, ಕವಣೆ, ಗಾಳ, ಬಂದೂಕುಗಳನ್ನು ಉಪಯೋಗಿಸಿಕೊಂಡು ತಮ್ಮ ಉದ್ದೇಶಗಳನ್ನು ಈಡೇರಿಸಿಕೊಂಡಿದ್ದಾರೆ. ಬೇಟೆಗೆ ಸಂಬಂಧಿಸಿದ ಜಾನಪದ ಮತ್ತು ಶಿಷ್ಟ ಸಾಹಿತ್ಯದಲ್ಲಿ ಇಂಥ ವಿವಿಧ ವಿಧಾನಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಇಂದಿಗೂ ಬಳಕೆಯಲ್ಲಿರುವ ಕೆಲವು ಪ್ರಮುಖ ಬೇಟೆಗಳ ವಿಧಾನಗಳಿವು -

### ಬಲೆಯ ಬೇಟೆ

ಬಲೆಯ ಸಹಾಯದಿಂದ ಪ್ರಾಣಿ, ಜಲಚರಗಳನ್ನು ಸುಲಭವಾಗಿ ಬೇಟೆಯಾಡ ಬಹುದು. ಹಳೆಗನ್ನಡದ ಬಹುತೇಕ ಕೃತಿಗಳಲ್ಲಿ ಬಲೆಬೇಟೆಯ ಕುರಿತು ವಿವರಣೆಯಿದೆ. ಈ ವಿಧಾನದಿಂದ ಪ್ರಾಣಿಗಳನ್ನು ಬೇಟೆಯಾಡಬೇಕಾದರೆ ನಾಲ್ಕಾರು ಬಲೆಗಳು, ಎಂಟು-ಹತ್ತು ಜನ, ಮೂರು ನಾಲ್ಕು ನಾಯಿಗಳು ಬೇಕಾಗುತ್ತದೆ. ಬಲೆಗಳನ್ನು ಒಂದಕ್ಕೊಂದು ಜೋಡಿಸಿ ಕಾಡಿನ ಹೊರಭಾಗದಲ್ಲಿ ಕಟ್ಟುತ್ತಾರೆ. ಬಲೆಯ ಮುಂಭಾಗದಲ್ಲಿ ನಿಂತ ಸೇವಕರು ನಾಯಿಗಳೊಂದಿಗೆ ಬೊಬ್ಬಿಡುತ್ತಾ ಕಾಡು ಸೇರುವರು. ಹೆದರಿ ಕಂಗಾಲಾದ ಪ್ರಾಣಿಗಳು ನೇರವಾಗಿ ಬಲೆಗೆ ಬಂದು ಬೀಳುತ್ತವೆ. ಬಲಶಾಲಿಗಳಾದ ಕಾಡು ಹಂದಿ, ಸಿಂಹಗಳನ್ನೂ ಕೂಡಾ ಇಂಥ ವಿಧಾನದಿಂದ ಹಿಡಿಯಬೇಕು. ಬಲೆಯ ಮೂಲಕ ಇದೇ ತಂತ್ರವನ್ನು ಅವಲಂಬಿಸಿ ಮೀನುಗಳನ್ನು ಹಿಡಿಯಬಹುದು.

### ಸಾರಾಕಿ ಬೇಟೆ

ಸಾರಾಕಿ ಬೇಟೆಯನ್ನು ಒಬ್ಬನೇ ವ್ಯಕ್ತಿ ಆಡುತ್ತಾನೆ. ಪ್ರಾಣಿಗಳು ಅಡ್ಡಾಡುವ ಕಿಂಡಿಗಳನ್ನು ಪತ್ತೆ ಹಚ್ಚಿ ಅಥವಾ ಅವು ನೀರು ಕುಡಿಯಲು, ಪೈರು ತಿನ್ನಲು ಬರುವ ದಾರಿಯನ್ನು ಅರಿತು, ನಿಗಾ ಇರಿಸಿ, ಅವು ಬಂದಾಗ ಗುರಿ ಇಟ್ಟು ಹೊಡೆದು ಕೊಲ್ಲುತ್ತಾನೆ. ಇಂಥ ಬೇಟೆಯಲ್ಲಿ ಬೇಟೆಗಾರ ಪ್ರಾಣಿಗಳೊಂದಿಗೆ ಮುಖಾಮುಖಿಯಾಗುವುದಿಲ್ಲ.

### ಮರಸು ಬೇಟೆ

ಮರಸು ಬೇಟೆ ಬೆಳದಿಂಗಳ ಬೆಳಕಿನಲ್ಲಿ ಸಾಧ್ಯ. ಪ್ರಾಣಿಗಳು ನುಸುಳುವ ಜಾಗದಲ್ಲಿ ಎತ್ತರದಲ್ಲಿ ಕುಳಿತು ಚಂದ್ರನ ಬೆಳಕಿನಲ್ಲಿ ಪ್ರಾಣಿಗಳಿಗೆ ಗುರಿಯಿಟ್ಟು ಹೊಡೆಯುವುದು. ರಾತ್ರಿ ಹೊತ್ತಿನ ಇಂಥ ಬೇಟೆಯಲ್ಲಿ ಈಡುಗಾರನಿಗೆ ಹೆಚ್ಚು ಪ್ರಾವೀಣ್ಯತೆ ಇರಬೇಕು.

### ಲೈಟು ಶಿಕಾರಿ

ದೀಪದ ಸಹಾಯದಿಂದ ರಾತ್ರಿ ಹೊತ್ತು ಪ್ರಾಣಿಗಳನ್ನು ಗುರುತಿಸಿ ಆಡುವ ಬೇಟೆಯೇ ಲೈಟು ಶಿಕಾರಿ. ಇಂಥ ಬೇಟೆ ಪ್ರಾಚೀನ ಕಾಲದಲ್ಲೇ ಇತ್ತೆಂಬುದು ನಿಶ್ಚಿತ. ಪಂಪ ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ದೀಪದ ಬೇಟೆಯ ಬಗ್ಗೆ ಹೇಳುತ್ತಾನೆ. ರಾತ್ರಿಯ ಹೊತ್ತು ಪ್ರಕಾಶಮಾನವಾದ ಬ್ಯಾಟರಿಯ ಬೆಳಕನ್ನು ಪ್ರಾಣಿಗಳ ನೆಲೆಗಳಿಗೆ ಹಾಯಿಸಿದಾಗ ಬೆಳಕನ್ನು

ಗಮನಿಸುವ ಪ್ರಾಣಿಗಳ ಕಣ್ಣುಗಳು ಹೊಳೆಯುತ್ತವೆ. ಆಗ ಬೇಟೆಗಾರ ಕಣ್ಣಿನ ಪ್ರತಿಫಲನ, ಪ್ರತಿಬಿಂಬದ ಎತ್ತರ ಎಲ್ಲವನ್ನು ಗಮನಿಸಿ ಯಾವ ಪ್ರಾಣಿ ಎಂಬುದನ್ನು ಅರಿತು ಗುಂಡು ಹೊಡೆಯುತ್ತಾನೆ. ಇಂಥ ಬೇಟೆಯಲ್ಲಿ ಅಪಾಯವೂ ಇದೆ. ರಾತ್ರಿ ಹೊತ್ತು ಬೇಟೆಗಾರನ ಪರಿಸರದಲ್ಲಿ ಅಲೆದಾಡುವ ಜಾನುವಾರು, ನಾಯಿಗಳು, ಕೆಲವೊಮ್ಮೆ ಮನುಷ್ಯರೂ ಕೂಡಾ ಬೇಟೆಗಾರನ ಗುಂಡಿಗೆ ಆಹುತಿಯಾಗುವ ಸಾಧ್ಯತೆಗಳಿವೆ. ಇತ್ತೀಚೆಗೆ ಲೈಟುಶಿಕಾರಿಗಾಗಿ ನೆರವಾಗುವ ಬಹುದೂರದವರೆಗೆ ಪ್ರಕಾಶಮಾನವಾದ ಬೆಳಕು ಹಾಯಿಸುವ ಹೆಡ್‌ಲೈಟುಗಳೂ ಬಂದಿವೆ.

**ಸೋಹು ಬೇಟೆ**

ದೊಡ್ಡ ಸೋಹುಬೇಟೆಗೆ ಸುಮಾರು ೧೦-೧೫ ಕೋವಿಗಾರರು (ಬಂದೂಕುಧಾರಿಗಳು) ೧೫-೨೦ ಮಂದಿ ಹಳು ನೋಡುವವರು, ಏಳೆಂಟು ಬೇಟೆನಾಯಿಗಳೂ ಇರಬೇಕು. ಕೋವಿಕಾರರು ಪ್ರಾಣಿಗಳಿರುವ ತಾಣದ ಸುತ್ತ ಬಿಲ್ಲಿನಲ್ಲಿ ಅಥವಾ ಕಿಂಡಿಗಳಲ್ಲಿ ನಿಲ್ಲುತ್ತಾರೆ. ಕಾಡು, ಸೋವುವವರು ನಾಯಿಗಳೊಂದಿಗೆ ಕಾಡಿನೊಳಗೆ ನುಸುಳಿ ಜೋರಾಗಿ ಬೊಬ್ಬೆ ಹೊಡೆಯುತ್ತಾರೆ. ಪ್ರಾಣಿಗಳನ್ನು ಹೆದರಿಸಿ, ಬಿಲ್ಲಿನ ಕಡೆಗೆ ಸರಿಯುವಂತೆ ಮಾಡುತ್ತಾರೆ. ಕೆಲವೊಮ್ಮೆ ಸಿಡಿಮದ್ದನ್ನು ಸಿಡಿಸುವುದೂ ಇದೆ. ಪ್ರಾಣಿಗಳು ತಮ್ಮ ನೆಲೆಯಿಂದ ಚದುರಿ ಬಿಲ್ಲಿನತ್ತ ಬಂದಾಗ ಕೋವಿಧಾರಿಗಳು ಈಡು ಹೊಡೆಯುತ್ತಾರೆ. ಈ ವಿಧಾನ ಈಗಲೂ ಪ್ರಚಲಿತವಿದೆ. ಮಲೆನಾಡಿನಲ್ಲಿ ಇದಕ್ಕೆ 'ಕೂಡು ಬೇಟೆ' ಎಂದೂ ಕರೆಯುತ್ತಾರೆ.

**ಶಿಸ್ತುಬೇಟೆ ಅಥವಾ ಕೋವಿ ಎತ್ತಿಕಟ್ಟುವುದು**

ರಾತ್ರಿ ಹೊತ್ತು ಪ್ರಾಣಿಗಳು ಅಡ್ಡಾಡುವ ಜಾಗವನ್ನು ನಿಖರವಾಗಿ ಅರಿತು ಅಲ್ಲಿ ವ್ಯವಸ್ಥಿತವಾಗಿ ಕೋವಿಯನ್ನು ಜೋಡಿಸಿ, ಅವುಗಳನ್ನು ಕೊಲ್ಲುವ ವಿಧಾನವೇ 'ಶಿಸ್ತು ಬೇಟೆ'. ಹಂದಿ, ಹುಲಿ, ಜಿಂಕೆ, ಮುಳ್ಳುಹಂದಿ ಮುಂತಾದ ಪ್ರಾಣಿಗಳನ್ನು ಈ ವಿಧಾನದಿಂದ ಬೇಟೆಯಾಡಬಹುದು. ಈ ವಿಧಾನದಲ್ಲಿ ಕೋವಿ ಸ್ವಯಂಚಾಲಿತ ಯಂತ್ರದಂತೆ ಕಾರ್ಯ ನಿರ್ವಹಿಸುತ್ತದೆ. ಪ್ರಾಣಿಗಳು ಯಾವುದೆಂದು ಹೆಜ್ಜೆಯ ಆಧಾರದಿಂದ ತಿಳಿದು, ಅವುಗಳ ಎತ್ತರವನ್ನು ನಿರ್ಧರಿಸಿ ಕೋವಿಗಳನ್ನು ಎರಡು ಕಂಬಗಳ ಮೇಲೆ ಜೋಡಿಸಲಾಗುವುದು. ಕೋವಿಯ ಅಟಬಿಲ್ಲಿಗೆ (ಟ್ರಿಗರ್) ಒಂದು ದಾರವನ್ನು ಕಟ್ಟಿ ಆ ದಾರದ ಇನ್ನೊಂದು ತುದಿಯನ್ನು ಪ್ರಾಣಿಗಳು ಅಡ್ಡಾಡುವ ದಾರಿಗೆ ಅಡ್ಡವಾಗಿ ಹತ್ತು ಗಜ ದೂರದಲ್ಲಿರುವ ಗಟ್ಟಿಕಂಬಕ್ಕೆ ಕಟ್ಟಲಾಗುವುದು. ಕೋವಿಯನ್ನು ಈಡು ಆಗುವಂತೆ ಕುದುರೆಯನ್ನು ಎಳೆದು ಇಡಲಾಗುವುದು. ಪ್ರಾಣಿ ಆ ದಾರಿಯಲ್ಲಿ ಬಂದು ಅಡ್ಡವಾಗಿ ಕಟ್ಟಿದ ದಾರಕ್ಕೆ ತಾಗಿದಾಗ, ದಾರದ ಒತ್ತಡದಿಂದ ತತ್‌ಕ್ಷಣ ಗುಂಡು ಸಿಡಿದು ಪ್ರಾಣಿಗೆ ತಾಗುವುದು. ಮಲೆನಾಡಿನಲ್ಲಿ ಬಹುವಾಗಿ ಬಳಕೆಯಲ್ಲಿರುವ ಈ ತಂತ್ರ ಬಹಳ ಅಪಾಯಕಾರಿ. ಈ ತಂತ್ರಕ್ಕೆ ಮನುಷ್ಯರು, ಜಾನುವಾರುಗಳು ಆಹುತಿಯಾದ ದೃಷ್ಟಾಂತಗಳಿವೆ.

**ಕರ್ಪು ತೋಡುವುದು :**

ಪ್ರಾಣಿಗಳು ಉತ್ತರದಿಂದ ಜಿಗಿದು-ನೆಗೆದು ಓಡಾಡುವ ಜಾಗವನ್ನು ಗುರುತಿಸಿ ಅಲ್ಲಿ ಕರ್ಪು

(ಗುಂಡಿ) ಮಾಡಿ ಸುಲಭವಾಗಿ ಅವುಗಳನ್ನು ಬೇಟೆಯಾಡಬಹುದು. ಹಂದಿ ಬೇಟೆಗೆ ಈ ಉಪಾಯ - ವಿಧಾನ ಫಲಕಾರಿ. ಸುಮಾರು ನಾಲ್ಕು ಅಡಿ ಉದ್ದ ಅಗಲ, ಹತ್ತು ಅಥವಾ ಹನ್ನೆರಡು ಅಡಿ ಆಳವಿರುವ ಹೊಂಡಗಳನ್ನು ಈ ತಂತ್ರದಲ್ಲಿ ಬಳಸುತ್ತಾರೆ. ಇಂಥ ಹೊಂಡದ ಒಳಗಡೆ ಚೂಪಾದ ಭರ್ಚಿ-ಗೂಟಗಳನ್ನು ಹುದುಗಿಡಬೇಕು. ಅನಂತರ ಹೊಂಡದ ಮೇಲೆ ಹೆಚ್ಚು ಗಟ್ಟಿಯಿಲ್ಲದ ಒಣಮರದ ತೆಳುಕೊಂಬೆಗಳನ್ನು ಹರಡಿ ಅದರ ಮೇಲೆ ತೆಳುವಾಗಿ ಮಣ್ಣನ್ನು ಚೆಲ್ಲಬೇಕು. ಪ್ರಾಣಿಗಳು ಆ ಜಾಗದಲ್ಲಿ ಹೊಂಡವಿದೆ ಎಂಬುದನ್ನು ಅರಿಯದೆ ಮೇಲಿನಿಂದ ಜಾರಿ ನೇರವಾಗಿ ಹೊಂಡದೊಳಗೆ ಬೀಳುತ್ತವೆ. ಇದು ಬೇಟೆಯಲ್ಲಿ ಪ್ರಾಣಿಗಳನ್ನು ಜಯಿಸುವ ಸುಲಭ ತಂತ್ರ.

### ಉರುಳು

ಕಾಡುಪ್ರಾಣಿಗಳು ದಿನಾ ಅಡ್ಡಾಡುವ ಬೇಲಿ ಮತ್ತು ಧರೆಗಳ ಮೇಲಿನ ಕಿಂಡಿಗಳಲ್ಲಿ ಉರುಳುಗಳನ್ನು ಇಟ್ಟು ಅದರೊಳಗೆ ಪ್ರಾಣಿಗಳು ಬಂಧಿಸಲ್ಪಡುವ ತಂತ್ರವಿದು. ಗಟ್ಟಿಯಾದ ಮರ ಅಥವಾ ಕಂಬಕ್ಕೆ ಇಂಥ ಉರುಳುಗಳನ್ನು ಕಟ್ಟಿ ಪ್ರಾಣಿಗಳ ತಲೆಯಷ್ಟೇ ನುಸುಳುವಂತೆ ಹಗ್ಗವನ್ನು ಕುಣಿಕೆ ಹಾಕಿ ಇಡಲಾಗುವುದು. ಉರುಳು ಸುಲಭವಾಗಿ ಗೋಚರವಾಗದಂತೆ ಹಸಿರು ಎಲೆಗಳಿಂದ ಅವನ್ನು ಮರೆಮಾಡಲಾಗುವುದು. ಸಹಜವಾಗಿ ನುಗ್ಗುವ ಪ್ರಾಣಿಗಳು ಕುಣಿಕೆಯೊಳಗೆ ತಲೆಯಿಟ್ಟು ಓಡಲಾರದೆ, ಬಿಡಿಸಿಕೊಳ್ಳಲಾರದೆ ಸಿಕ್ಕಿಹಾಕಿಕೊಳ್ಳುತ್ತವೆ. ಹಂದಿ, ಮೊಲ ಮುಂತಾದ ಪ್ರಾಣಿಗಳನ್ನು ಈ ತಂತ್ರದಿಂದ ಸುಲಭವಾಗಿ ಮಣಿಸಬಹುದು. ಕೆಲವೊಮ್ಮೆ ಜಾನುವಾರುಗಳೂ ಈ ಉರುಳಿಗೆ ಬಲಿಬಿದ್ದು ಸತ್ತು ಹೋದ ದಾಖಲೆಗಳಿವೆ. ಉರುಳಿಗೆ ನೈಲಾನ್ ಹಗ್ಗ ಅಥವಾ ಕಬ್ಬಿಣದ ತಂತಿ, ಗೇರ್ ವೈರ್‌ಗಳನ್ನು ಉಪಯೋಗಿಸ ಲಾಗುತ್ತದೆ.

### ನಾಡಬಾಂಬು ಪ್ರಯೋಗ

ಇತ್ತೀಚೆಗೆ ಕರಾವಳಿ ಜಿಲ್ಲೆಯಲ್ಲಿ ಬೇಟೆಯಲ್ಲಿ ಬಳಕೆಯಾಗುವ ನೂತನ ತಂತ್ರವಿದು. ಕಾಡು ಪ್ರಾಣಿಗಳು ತಿನ್ನುವ ಆಹಾರದಲ್ಲಿ ಬಾಂಬು ಇಟ್ಟು ಅವುಗಳ ತಲೆಯನ್ನು ಸ್ಫೋಟಿಸುವುದು. ಸ್ಫೋಟಿಸುವ ಮದ್ದಿನಿಂದ ಉಂಡೆಯಾಕಾರದಲ್ಲಿ ಬಾಂಬು ಕಟ್ಟಿ ಅದನ್ನು ಪ್ರಾಣಿಗಳು ತಿನ್ನುವ ಆಹಾರದ ಮಧ್ಯೆ ಇಟ್ಟು, ಅವುಗಳು ನುಸುಳುವ ಜಾಗದಲ್ಲಿ ಇರಿಸುವುದು. ಹೆಚ್ಚಾಗಿ ಕೋಳಿಯ ಕರುಳನ್ನು ಇದಕ್ಕಾಗಿ ಉಪಯೋಗಿಸಲಾಗುವುದು. ಮಾಂಸದ ಆಸೆಯಿಂದ ಅದನ್ನು ಬಾಯಿಗೆ ಹಾಕಿಕೊಂಡು ಹಂದಿ ಮುಂತಾದ ಪ್ರಾಣಿಗಳು ಜಗಿಯತೊಡಗುವಾಗ ಬಾಂಬು ಬಾಯಿಯೊಳಗೇ ಸಿಡಿಯುತ್ತದೆ. ಇಡೀ ತಲೆಯೇ ಛಿದ್ರಗೊಂಡು ಆ ಪ್ರಾಣಿ ತಕ್ಷಣ ಸಾಯುತ್ತದೆ. ಬಹಳ ಅಪಾಯಕಾರಿಯಾದ ಈ ತಂತ್ರಕ್ಕೆ ಅನೇಕ ನಾಯಿಗಳು ಅಷ್ಟೇ ಅಲ್ಲ, ಸ್ವತಃ ತಂತ್ರಗೂಡುವ ಬೇಟೆಗಾರರೂ ಬಾಂಬಿಗೆ ಆಹುತಿಯಾದ ದೃಷ್ಟಾಂತ ಇದೆ.

### ಪ್ರಾಣಿ ಬೇಟೆ - ವಾಸ್ತವವಾದ; ವಿರೋಧವಾದ

ಈ ಶತಮಾನದ ಆರಂಭದ ದಿನಗಳಲ್ಲಿ ದಕ್ಷಿಣ ಕನ್ನಡದ ಕಾಡುಗಳಲ್ಲಿ ಬೇಟೆ ಮಿತಿ ಮೀರಿ ನಡೆಯುತ್ತಿತ್ತು. ಕೆಲವು ಪ್ರಭಾವೀ ಈಡುಗಾರರು ಜಿಲ್ಲೆಯ ವ್ಯಾಪ್ತಿಯನ್ನು ಮೀರಿ ಘಟ್ಟದ

ಮೇಲೆ ಅಂದರೆ ಕೊಡಗು, ಸಕಲೇಶಪುರ, ಶಿವಮೊಗ್ಗ, ಶೃಂಗೇರಿ, ಆಗುಂಬೆ, ಕುದುರೆಮುಖಗಳಿಗೂ ಬೇಟೆಗೆಂದು ಸರಕಾರದಿಂದಲೂ ನಿಯೋಜಿಸಲ್ಪಟ್ಟಿದ್ದ ನರಭಕ್ಷಕ ಹುಲಿಯನ್ನು ಕೊಲ್ಲಲು ಕೆಲವರನ್ನು ಪಕ್ಕದ ಊರುಗಳಿಗೂ ಕರೆಯಲಾಗುತ್ತಿತ್ತು. ಕೋವಿ, ತೋಟಗಳನ್ನು ನೀಡಿ ಅವರನ್ನು ಪುರಸ್ಕರಿಸಲಾಗುತ್ತಿತ್ತು. ಹುಲಿಗಳನ್ನು ನಿರ್ದಿಷ್ಟ ಸಂಖ್ಯೆಯಲ್ಲಿ ಕೊಂದವರಿಗೆ ಸಾಮಾಜಿಕವಾಗಿ ವಿಶೇಷ ಮಾನ್ಯತೆ ಇತ್ತು. 'ಹುಲಿ ಮದುವೆ'ಯ ಸನ್ಮಾನ-ಪುರಸ್ಕಾರ ಪಡೆದ ಅನೇಕ ಈಡುಗಾರರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದರು. ಕೆದಂಬಾಡಿ ಜತ್ತಪ್ಪ ರೈ, ಚಿಲ್ಮೆತ್ತಾರು ಪಕೀರ ರೈ ಮೊದಲಾದವರು ಇಂಥ ಗೌರವಕ್ಕೆ ಪಾತ್ರರಾಗಿದ್ದರು.

ಬೇಟೆಯಲ್ಲಿ ಸತ್ತ ಬಲಶಾಲಿ ಪ್ರಾಣಿಗಳ ಚರ್ಮ, ಕೊಂಬು, ಉಗುರುಗಳ ಪ್ರದರ್ಶನ ಈ ಜಿಲ್ಲೆಯ ಮನೆತನದ ಮಹಾಮನೆಗಳಲ್ಲಿ ಇಂದಿಗೂ ಉಳಿದಿದೆ. ಭಾರೀ ಮನೆಗಳ ಗೋಡೆ, ಅಟ್ಟಗಳ ಮೇಲೆ ಹುಲಿ ಚರ್ಮ, ಉಗುರು; ಜಿಂಕೆಗಳ ಕೊಂಬು ಚರ್ಮಗಳ ಪಳೆಯುಳಿಕೆಗಳನ್ನು ಇವತ್ತಿಗೂ ಕಾಣಬಹುದು. ಜಿಂಕೆಯ ಚರ್ಮದಲ್ಲಿ ಬಾಣಂತಿಯರು ಎಣ್ಣೆ ಹಚ್ಚಿ ಮಲಗುವ ಕ್ರಮ ಇಂದಿಗೂ ಉಳಿದಿದೆ. ಅಂಥ ಚರ್ಮ, ಕೊಂಬು, ಉಗುರುಗಳು ಈ ಜಿಲ್ಲೆಯ ಗತ ಬೇಟೆಗಾರರ ಸಾಹಸ-ಪ್ರತಿಭೆಗೆ ಸಾಕ್ಷಿಯೂ ಹೌದು.

ಇಂದು ಕೃಷಿಭೂಮಿ ಹಿಗ್ಗಿ ಕಾಡು ಕುಗ್ಗಿದೆ. ಪ್ರಾಣಿಗಳಿಗೆ ಸಹಜವಾಗಿ ಉಳಿಯುವ ನೆಲೆ ಕಡಿಮೆಯಾಗಿದೆ. ಇಷ್ಟಾದರೂ ದಕ್ಷಿಣ ಕನ್ನಡದಲ್ಲಿ ಕಾಡು-ಕಾಡು ಪ್ರಾಣಿಗಳಿಗೆ ಇಂದಿಗೂ ಬರವಿಲ್ಲ. ಹುಲಿ, ಜಿಂಕೆಗಳ ಸಂಖ್ಯೆ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾದರೂ ಹಂದಿ, ಮುಳ್ಳುಹಂದಿ, ಕಡವೆ, ಕಾಟಿ, ಮೊಲ, ಕಾಡುಕೋಳಿ ಮುಂತಾದ ಪ್ರಾಣಿಗಳಿಗೆ ಬರವಿಲ್ಲ. ರಹಸ್ಯವಾಗಿ ಇವುಗಳ ಬೇಟೆ ಇಂದಿಗೂ ಮುಂದುವರಿದಿದೆ.

ಇಂದು ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯ ಉದ್ದೇಶದಿಂದ ಬೇಟೆಯ ನಿಷೇಧ ಇಲ್ಲೂ ಇದೆ. ಕಡಿಮೆ ಪ್ರಮಾಣದ, ಕಾಡಿಗೆ ಶೋಭೆಯೆನಿಸಿದ ಪ್ರಾಣಿಗಳ ಉಳಿವಿಗಾಗಿ ಸರಕಾರ ಈ ಕಾನೂನನ್ನು ಮಾಡಿದೆ. ನಮ್ಮ ಬೆಂಬಲವಾಗಿ ನಿಂತು, ನಮ್ಮ ಸುತ್ತಲಿನ ಪ್ರಕೃತಿಗೆ ಸೊಬಗನ್ನು ತರುವ ವನ್ಯ ಸಂಪತ್ತು ಮನುಷ್ಯನ ಅವಿವೇಕದಿಂದ ನಾಶವಾಗುತ್ತಿರುವುದು ತಪ್ಪು. ಇದು ಪ್ರಾಕೃತಿಕವಾಗಿ ಬಹು ದೊಡ್ಡ ದುರಂತ.

ಮನುಷ್ಯ ಮತ್ತು ಪ್ರಾಣಿಗಳು ಇಂದು ಬದುಕುವ ಪರಿಸರ ಬೇರೆ ಬೇರೆ. ಇಷ್ಟಾದರೂ, ಮಾನವ ತನ್ನನ್ನು ಉಳಿಸಿಕೊಳ್ಳಬಲ್ಲವನಾಗಿದ್ದೂ ಅಸಹಾಯಕ ಪ್ರಾಣಿಗಳನ್ನು ಮಾಂಸದಾಸೆಗೆ, ವಿನೋದಕ್ಕೆ ಬೇಟೆಯಾಡುತ್ತಿದ್ದಾನೆ. ಕಳ್ಳಬೇಟೆ, ವಿಷಪ್ರಾಶನ, ಬಲೆ, ಉರುಳು ಬಂಧನದಿಂದ ನಿತ್ಯ ಕಾಡುಪ್ರಾಣಿಗಳು ಸಾಯುತ್ತಿವೆ.

**ಬೇಟೆಯ ಪರಿಕರಗಳು**

ಬೇಟೆಯಲ್ಲಿ ಆಯುಧಗಳ ಸ್ಥಾನ ಪ್ರಮುಖವಾದುದು. ಆಯುಧಗಳಿಲ್ಲದೆ ಬೇಟೆಯಾಡಲು

ಸಾಧ್ಯವಿಲ್ಲ. ಪ್ರಾಣಿಬೇಟೆ ಮತ್ತು ಮೀನುಬೇಟೆಗಳಲ್ಲಿ ವಿವಿಧ ರೀತಿಯ ಪರಿಕರಗಳು ಬಳಕೆಯಲ್ಲಿವೆ. ಮಾನವ ಇತಿಹಾಸದಲ್ಲಿ ಬೇಟೆ ಪ್ರಾರಂಭವಾದಂದಿನಿಂದ ಇಂದಿನವರೆಗೆ ಬೇರೆ ಬೇರೆ ರೀತಿಯ ಆಯುಧಗಳು ಬಳಕೆಗೆ ಬಂದಿವೆ. ಈಗ ಪ್ರಾಚೀನ ಕಾಲದ ಬೇಟೆ ಪರಿಕರಗಳು ಬಳಕೆಯಲ್ಲಿಲ್ಲದಿದ್ದರೂ, ಅವೇ ವಿಕಾಸ ಹೊಂದಿ ನವೀನ ರೀತಿಯಲ್ಲಿ ಉಪಯೋಗದಲ್ಲಿವೆ. ಪ್ರಾಚೀನ ಜನರ ಉದ್ಯೋಗದ ಬಗ್ಗೆ ಅಧ್ಯಯನ ಮಾಡಿದರೆ ಬೇಟೆಯ ಸಾಧನಗಳ ಪ್ರಗತಿಯ ಬಗ್ಗೆ ತಿಳಿಯುತ್ತದೆ. ಆದಿಮಾನವ ಜೀವನೋಪಾಯಕ್ಕಾಗಿ ತಾನು ಬೇಟೆಯಾಡಲೇಬೇಕೆಂಬ ಅನಿವಾರ್ಯ ಪರಿಸ್ಥಿತಿಯಲ್ಲಿ ಇಂತಹ ಆಯುಧಗಳ ನಿರ್ಮಾಣವಾಗಿದ್ದಿರಬಹುದು. ಆರಂಭದ ಹಂತದಲ್ಲಿ ನಿಸರ್ಗದಲ್ಲಿ ಸಾಮಾನ್ಯವಾಗಿ ದೊರೆಯುವ ಕಲ್ಲು, ಮೂಳೆ, ಮರದ ತುಂಡುಗಳೇ ಬೇಟೆಯ ಪರಿಕರಗಳಾಗಿದ್ದಿರಬಹುದು. ಈ ಪರಿಕರಗಳ ಸಂಶೋಧನೆಯೇ ಮುಂದಿನ ಸುಸಜ್ಜಿತ ಆಯುಧಗಳ ತಯಾರಿಕೆಗೆ ಪ್ರೇರಕವಾಗಿದ್ದಿರಬಹುದೆಂದು ತಿಳಿಯಬಹುದು.

ಪುರಾತನ ಯುಗದಲ್ಲಿ ಬೇಟೆಗೆ ಕಲ್ಲಿನ ಆಯುಧಗಳನ್ನು ಉಪಯೋಗಿಸ ಲಾಗುತ್ತಿತ್ತೆಂಬುದನ್ನು ವಿಶ್ವಕೋಶದಲ್ಲಿ ಈ ರೀತಿ ಹೇಳಲಾಗಿದೆ. 'ಚೂಪಾದ ಕಲ್ಲುಗಳನ್ನು ಸಂಗ್ರಹಿಸಿ ಅದನ್ನು ಉದ್ದವಾದ ಮರದ ಕೋಲಿಗೆ ಜೋಡಿಸಿ ಅದರ ಸಹಾಯದಿಂದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಆಯುಧಗಳ ಹರಿತವಾದ ಪಾರ್ಶ್ವದಿಂದ ಚರ್ಮವನ್ನು ಕತ್ತರಿಸುವುದು, ಮಾಂಸವನ್ನು ತುಂಡು ಮಾಡುವುದು, ಗಟ್ಟಿಯಾದ ಮೂಳೆಯನ್ನು ಜಜ್ಜುವುದು ಇತ್ಯಾದಿ ಕೆಲಸವನ್ನು ಮಾಡುತ್ತಿದ್ದರು. (ವಿಶ್ವಕೋಶ ಸಂ. ೧೧, ೧೯೮೩) ಕಲ್ಲಿನ, ಮರದ ಮತ್ತು ಮೂಳೆಗಳ ಉಪಯೋಗದ ಅನಂತರ ಪ್ರಾಚೀನ ಶಿಲಾಯುಗದಲ್ಲಿ ಧನುರ್ವಿದ್ಯೆಯ ಉದಯವಾಯಿತೆಂಬುವುದಕ್ಕೆ ಆಧಾರಗಳಿವೆ. 'ಪ್ರಾಣಿಗಳ ಚರ್ಮದಿಂದಲೋ, ಕಾಡು ಹುಲ್ಲನ್ನು ಹೊಸೆದೋ ಹಗ್ಗವನ್ನು ಮಾಡಿ, ಬಿದಿರು ದಬ್ಬೆಯನ್ನೋ, ಮರದ ಕೋಲನ್ನೋ ಬಿಲ್ಲಿನ ಹಾಗೆ ಬಗ್ಗಿಸಿ ಅದರ ಕೊನೆಗಳಿಗೆ ಹಗ್ಗವನ್ನು ಕಟ್ಟಿ, ಅದರಿಂದ ಚೂಪಾದ ಮರದ ಭಲ್ಲೆಯನ್ನು ದೂರಕ್ಕೆ ಹೋಗುವ ಹಾಗೆ ಎಸೆದಾಗ ಧನುರ್ವಿದ್ಯೆಯ ಉದಯವಾಗಿದೆ.' (ಶಿಲ್ಪ ಮತ್ತು ನಾಗರಿಕತೆ : ೧೯೬೮ : ಪುಟ ೧೧) ಇದೇ ಯುಗದಲ್ಲಿ ಬೆಂಕಿಯ ಅನ್ವೇಷಣೆಯೂ ಆಗಿದೆ ಎನ್ನಬಹುದು. 'ನಿಯಾಂತರ್ ತಲಾಯ್ಡ್' ಎಂಬ ಕಾಲದಲ್ಲಿ ಬೇಟೆಯ ಆಯುಧಗಳು ಹೆಚ್ಚು ಆಧುನಿಕವಾಗಿದ್ದವು. 'ಈ ಯುಗದಲ್ಲಿ ಮುಖ್ಯವಾಗಿ ತುರ್ಕಿಸ್ತಾನ, ಆಸ್ಟ್ರೇನ್ ಪರ್ವತಾವಳಿ ಮತ್ತು ಮಂಗೋಲಿಯ ಪ್ರದೇಶಗಳಲ್ಲಿ ಮೌಸ್ಟೀರಿಯ ಎಂಬ ಆಯುಧಗಳು ಬಳಕೆಗೆ ಬಂದವು. ಇಲ್ಲಿ ವಿಶಿಷ್ಟವಾದ ಮೂಳೆಯ ಆಯುಧಗಳು, ಚೂಪಾದ ಮೊನೆಗಳು ಮತ್ತು ಪಿಕಾಸಿಯಂತಹ ಕೊಡಲಿಗಳು ಬಳಕೆಗೆ ಬಂದವು'. (ವಿಶ್ವಕೋಶ ಸಂ. ೧೧, ೧೯೮೩).

ಶಿಲಾಯುಗದ ನಂತರ ಮಾನವನು ಬೇಟೆಯಾಡುವಲ್ಲಿ ಹೆಚ್ಚು ಪ್ರಗತಿಯನ್ನು ಸಾಧಿಸಿದನು. ಲೋಹಯುಗದಲ್ಲಿ ನವೀನ ರೀತಿಯ ಹತ್ಯಾರಗಳು ಬಳಕೆಗೆ ಬಂದುವು. ಈ ಯುಗದಲ್ಲಿ 'ಮಾನವ ಬೇಟೆಯಾಡಲು ಕಬ್ಬಿಣದ ಗುದ್ದಲಿ, ಕೊಡಲಿ, ಈಟಿ, ಖಡ್ಗಗಳನ್ನು ಉಪಯೋಗಿಸಲು ಆರಂಭಿಸಿದನು. ದೊರೆತ ಮಾಂಸವನ್ನು ಅರೆ ಬರೆ ಬೇಯಿಸಿ ತಿನ್ನುವುದು ರುಚಿಗೂ, ಜೀರ್ಣಕ್ಕೂ

ಒಳ್ಳೆಯದು ಎಂದು ಅರಿತುಕೊಂಡನು'. (ಬೇಟೆಯ ಉರುಳು : ೧೯೮೨, ಪುಟ ೧೦) ಲೋಹಯುಗದ ಅನಂತರ ಬೇಟೆಯ ಪರಿಕರಗಳಲ್ಲಿ ಹೆಚ್ಚಿನ ಬದಲಾವಣೆ, ಸುಧಾರಣೆ ಆಗಿದೆ. ಹಳೆಯ ಸಾಧನ ಮಾದರಿಯಲ್ಲೇ ಹೊಸ ಪರಿಕರಗಳು ರಚನೆಯಾಗಿವೆ. ಬಿಲ್ಲು, ಬಾಣ, ಈಟಿ, ಖಡ್ಗ, ಕವಣೆ, ಗಾಳ, ಬಲೆ ಮೊದಲಾದುವುಗಳೊಂದಿಗೆ ಇನ್ನಷ್ಟು ಹೊಸ ತಂತ್ರಗಳು ಈ ಹಂತದಲ್ಲಿ ಪ್ರಯೋಗಕ್ಕೆ ಬಂದವು. ಪ್ರಾಣಿಗಳು ಸುಳಿದಾಡುವ ಜಾಗದಲ್ಲಿ ಕರ್ಪು (ಹೊಂಡ) ತೋಡುವುದು, ನೀರಿನಲ್ಲಿ ಮಾದಕ ವಸ್ತುವನ್ನು ಸೇರಿಸಿ ಮೀನು ಬೇಟೆಯಾಡುವುದು, ರಾತ್ರಿಯ ಹೊತ್ತು ಪ್ರಕಾಶಮಾನವಾದ ಬೆಳಕನ್ನು ಹಾಯಿಸಿ ಪ್ರಾಣಿಗಳನ್ನು ಬೇಟೆಯಾಡುವುದು, ಪ್ರಾಣಿಗಳಂತೆ ಕೂಗಿ ಅಥವಾ ಪ್ರಾಣಿಗಳ ಚರ್ಮವನ್ನು ಹೊದ್ದು ಅವುಗಳನ್ನು ಆಕರ್ಷಿಸುವುದು, ಪ್ರಾಣಿಗಳ ಇರುವಿಕೆಯನ್ನರಿತು ಡೋಲು ರಣಕಹಳೆಗಳಿಂದ ಅವುಗಳನ್ನು ಕಂಗೆಡಿಸಿ ಸೆರೆ ಹಿಡಿಯುವುದು. ಹಕ್ಕಿ ಬೇಟೆಗೆ ಮರೆಕ್ಕೋಲು ಒಡ್ಡುವುದು ಹೀಗೆ ಬೇರೆ ಬೇರೆ ವಿಧಾನಗಳು ಬಳಕೆಗೆ ಬಂದು ಬೇಟೆ ಸುಲಭ ಸಾಧ್ಯವಾಯಿತು. ಈ ರೀತಿಯ ಬೇಟೆಯಲ್ಲಿ ಮನುಷ್ಯನೊಂದಿಗೆ ನಾಯಿಯ ಪಾತ್ರವೂ ಪ್ರಧಾನವಾಗಿತ್ತು.

ರಾಮಾಯಣ, ಮಹಾಭಾರತದ ಕಾವ್ಯಗಳಲ್ಲಿ ಬೇಟೆಯ ವರ್ಣನೆಗಳು ಬರುವ ಕಡೆ ಬೇಟೆಯ ಸಾಧನಗಳ ಬಗ್ಗೆಯೂ ಉಲ್ಲೇಖವಿದೆ. ಕನ್ನಡದ ಕವಿಗಳು ಮೃಗಯಾ ವರ್ಣನೆಯನ್ನು ಮಾಡುವ ಸಂದರ್ಭಗಳಲ್ಲಿ ಬೇಟೆಯ ಬೇರೆ ಬೇರೆ ವಿಧಾನ-ಪರಿಕರಗಳನ್ನು ಪರಿಚಯಿಸಿದ್ದಾರೆ.

ಇಂದಿನ ಯಂತ್ರಯುಗದಲ್ಲಿ ಪ್ರಾಣಿಗಳನ್ನು ಸುಲಭವಾಗಿ ಬೇಟೆಯಾಡುವಂತಹ ಕೋವಿಗಳು ಬಳಕೆಗೆ ಬಂದಿವೆ. ಇವುಗಳಿಂದ ದೂರದಿಂದಲೇ ಗುರಿಯಿಟ್ಟು ಪ್ರಾಣಿಗಳನ್ನು ತ್ವರಿತವಾಗಿ ಹೊಡೆದುರುಳಿಸಬಹುದು. ಆನೆ, ಹುಲಿಯಂತಹ ಬಲಶಾಲಿ ಪ್ರಾಣಿಗಳನ್ನು ಕೋವಿಯಿಂದ ಬೇಟೆಯಾಡಬಹುದು. ಸಮರ್ಥ ಈಡುಗಾರರಿಂದ ಓಡುತ್ತಿರುವ ಪ್ರಾಣಿಗಳನ್ನೂ, ಹಾರುತ್ತಿರುವ ಹಕ್ಕಿಗಳನ್ನೂ ಬೇಟೆಯಾಡಬಹುದು. ಯಂತ್ರಯುಗದಲ್ಲಿ ಮೊದಲಿಗೆ ಬೆಳಕಿಗೆ ಬಂದುದು ಜಾಮುಂಗೆ ಕೋವಿ. ಅದರ ಅನಂತರ ಬುತ್ತಿಕೋವಿ, ಕೇಪಿನ ಕೋವಿ, ತೋಟಾ ಕೋವಿ, ಜೋಡು ನಳಿಗೆಯ ಕೋವಿಗಳು ಬಳಕೆಗೆ ಬಂದುವು. ಇತ್ತೀಚೆಗೆ ಆಧುನಿಕ ರೀತಿಯಲ್ಲಿ ತಯಾರಾದ ರೈಫಲ್, ಕಾಂಬಿನೇಶನ್ ರೈಫಲುಗಳು ಬಳಕೆಗೆ ಬಂದಿವೆ.

**ಜಾಮುಂಗೆ ಕೋವಿ :**

ಇದು ಕೋವಿಗಳಲ್ಲಿ ಅತಿ ಪ್ರಾಚೀನವಾದುದು. ಸ್ವರೂಪದಲ್ಲಿ ಇದು ಕೇಪಿನ ಕೋವಿಯ ತದ್ರೂಪ. ಕೇಪಿನ ಕೋವಿಗಿಂತ ಹೆಚ್ಚು ಭಾರ. ಇದರ ಪಾತಿ, ನಳಿಗೆಗಳು ಕೇಪಿನ ಕೋವಿಗಿಂತ ದಪ್ಪ. ಇದರಲ್ಲಿ ಈಡು ಹೊಡೆಯುವಾಗ ಅಪಾಯ ಹೆಚ್ಚು. ಕುದುರೆಯನ್ನು ಮೇಲೆತ್ತಿ ಉರಿಯುತ್ತಿರುವ ತೆಂಗಿನ ನಾರಿನ ಬತ್ತಿಯನ್ನು ನಿಪ್ಪಲಿನ ಮುಖಾಂತರ ಒಳಗೆ ಎಳೆದುಕೊಂಡು ಅದು ನಿಧಾನವಾಗಿ ಕಿಡಿಕಾರುವಾಗ ಕುದುರೆಯನ್ನು ನಿಪ್ಪಲಿಗೆ ಮುಚ್ಚುವಂತೆ ಬಿಟ್ಟರೆ ಈಡಾಗುವುದು. ಇದು ಓಡುತ್ತಿರುವ ಪ್ರಾಣಿಗಳನ್ನು ಬೇಟೆಯಾಡಲು ಉಪಯೋಗವಾಗದು.

**ಬತ್ತಿ ಕೋವಿ :**

ಜಾಮುಂಗೆ ಕೋವಿಯನ್ನೇ ಸ್ವಲ್ಪ ಸುಧಾರಿಸಿ ಬತ್ತಿಕೋವಿಯನ್ನು ಸಿದ್ಧಗೊಳಿಸ ಲಾಗಿದೆ. ಉರಿಯುವ ಬತ್ತಿಯನ್ನು ಕೈಯಿಂದಲೇ ನಿಪ್ಪಲಿಗೆ ಮುಟ್ಟಿಸಿ ಬೆಂಕಿ ಉರಿಸಿ ಈಡು ಮಾಡುವ ಬದಲು, ಹತ್ತಿಯ ಬತ್ತಿಯನ್ನು ಕುದುರೆಗೆ ಸಿಕ್ಕಿಸಿ ಅದರ ಬೆಂಕಿಯನ್ನು ನಿಪ್ಪಲಿಗೆ ತಾಗುವಂತೆ ಟ್ರಿಗರನ್ನು ಮೀಟಿದರೆ ಕೂಡಲೇ ಅದು ಬೆಂಕಿಯನ್ನು ಎಳೆದುಕೊಂಡು ಬೆಂಕಿ ಕರಿಮದ್ದಿಗೆ ತಾಗುವುದು. ಆ ಕೂಡಲೇ ನಿಪ್ಪಲನ್ನು ಮುಚ್ಚಿ ಕೋವಿಯನ್ನು ಬೇಕಾದ ಕಡೆ ಗುರಿಯಿಡಬೇಕು, ಕೂಡಲೇ ಮದ್ದು ಘರ್ಷಿಸಿ ಈಡಾಗುವುದು.

**ಕೇಪಿನ ಕೋವಿ :**

ಕೇಪಿನ ಕೋವಿಯು ಜಾಮುಂಗೆ ಮತ್ತು ಬತ್ತಿಕೋವಿಯಷ್ಟು ಅಪಾಯಕಾರಿಯಲ್ಲ. ಈ ಕೋವಿಯನ್ನು ಎದೆಗಾನಿಸಿ ಗುರಿಯಿಟ್ಟು ಸ್ಥಿರಹೆಜ್ಜೆಯಲ್ಲಿ ನಿಂತು ಕುದುರೆಯನ್ನು ಸದ್ದಾಗದಂತೆ ಮೇಲೆತ್ತಿ ಟ್ರಿಗರನ್ನು ಒತ್ತಿದರೆ ಕುದುರೆ ನಿಪ್ಪಲಿಗೆ ಘರ್ಷಿಸಿ ಕೇಪು ಸಿಡಿದು ಈಡಾಗುವುದು. ಕೇಪಿನ ಕೋವಿಗೆ ತುಂಬಿಸುವ ಈಡು ಹೊಡೆಯಬೇಕಾದ ಪ್ರಾಣಿಯ ಬಲಿಷ್ಠತೆಯನ್ನು ಅವಲಂಬಿಸಿರುವುದು.

**ತೋಟಾ ಕೋವಿ :**

ತೋಟಾ ಕೋವಿಯು ಆಧುನಿಕ ರೀತಿಯ ಬಂದೂಕು. ಇದರಿಂದ ಹೆಚ್ಚು ಸುರಕ್ಷಿತವಾಗಿ ಶೀಘ್ರವಾಗಿ ಈಡು ಮಾಡಬಹುದು. ಮೊದಲೇ ಮದ್ದುಗುಂಡುಗಳಿಂದ ಸಿದ್ಧವಾದ ತೋಟಗಳನ್ನು ನಳಿಗೆಗೆ ತುಂಬಿಸುವುದು ಮತ್ತು ಈಡು ಮಾಡುವುದು ಇಷ್ಟೇ ಇದರಲ್ಲಿರುವ ಕೆಲಸ. ಈಡು ಆದ ಕೂಡಲೇ ಸೆಕೆಂಡಿನ ಅಂತರದಲ್ಲಿ ಬೇರೊಂದು ತೋಟವನ್ನು ತುಂಬಿಸಿ ಗುಂಡು ಹೊಡೆಯಲು ಈ ಬಂದೂಕಿನಿಂದ ಸಾಧ್ಯ. ಇದರಲ್ಲಿ ಕೆಲವೊಮ್ಮೆ ಎರಡು ನಳಿಗೆಯ ಕೋವಿಗಳೂ ಇವೆ.

**ಕಾಂಬಿನೇಷನ್ ರೈಫಲ್ :**

ಇದು ಆನೆಯಂತಹ ದೊಡ್ಡ ದೊಡ್ಡ ಪ್ರಾಣಿಗಳನ್ನು ಬೇಟೆಯಾಡಲು ಬಳಕೆಯಲ್ಲಿದೆ. ಇದು ಆಕಾರದಲ್ಲಿ ಜೋಡುನಳಿಗೆಯ ಕೋವಿಯಂತೆಯೇ ಇರುತ್ತದೆ. ಇದು ಎರಡು ನಳಿಗೆಗಳಿಂದ ಕೂಡಿ ಬಹುಭಾರವಾಗಿರುವುದು. ಇದರ ಎಡನಳಿಗೆಯು ಹಂದಿ, ಹುಲಿ ಕಡವೆಗಳಿಗೆ ಈಡು ಮಾಡಲು ತಕ್ಕುದಾದ ಹನ್ನೆರಡನೆಯ ಬೋರಿನ ತೋಟ ತುಂಬಿಸುವ ನಳಿಗೆ. ಬಲದ ನಳಿಗೆಯು ಸುರುಳಿ ಸುತ್ತಿ ಗುಂಡು ಹೋಗುವ ರೈಫಲ್ ನಳಿಗೆ. ಇದರ ತೋಟೆಯು ಕೂಡ ಬೆಲೆ ಬಾಳುವ ಅತ್ಯಂತ ಶುದ್ಧ ಮದ್ದಿನಿಂದ ಒಡಗೂಡಿದ ಕಂಚು ಹಿತ್ತಾಳೆಯ ತೋಟ' (ಬೇಟೆಯ ಉರುಳು : ೧೯೮೨ : ಪುಟ ೨೮).

**ದಕ್ಷಿಣ ಕನ್ನಡದಲ್ಲಿ ಬೇಟೆ - ಸಾಹಿತ್ಯ ದಾಖಲೆಗಳು**

ದಕ್ಷಿಣ ಕನ್ನಡ ಜಿಲ್ಲೆಯ ಕೆದಂಬಾಡಿ ಜತ್ತಪ್ಪ ರೈಯವರು ಹೊಸಗನ್ನಡದ ಮೃಗಯಾ ಸಾಹಿತ್ಯಕ್ಕೆ ನೀಡಿದ ಕೊಡುಗೆ ಹಿರಿದು. ಬೇಟೆಯ ಗೀಳನ್ನು ಬಾಲ್ಯದಲ್ಲೇ ಬೆಳೆಸಿಕೊಂಡ ರೈಯವರು

ಅದನ್ನು ಪ್ರಕಟಿಸಿದ್ದು ತನ್ನ ಬದುಕಿನ ಐದನೆಯ ದಶಕದಲ್ಲಿ. ಈ ನಡುವೆ ಅವರು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿರಲಿಲ್ಲ. ೧೯೭೮ ರಲ್ಲಿ ರೈಯವರ 'ಬೇಟೆಯ ನೆನಪುಗಳು' ಪ್ರಕಟವಾಗುವವರೆಗೆ ಹೊಸಗನ್ನಡದಲ್ಲಿ ಮೃಗಯಾ ಸಾಹಿತ್ಯ ಇಲ್ಲವೆನ್ನುವಷ್ಟರ ಮಟ್ಟಿಗೆ ವಿರಳವಾಗಿತ್ತು. ಬೇಟೆಯನ್ನೇ ಪೂರ್ಣವಾಗಿ ವಸ್ತುವೆಂದು ಸ್ವೀಕರಿಸಿಕೊಂಡು ಬರೆದ ಕೃತಿ ಬೇರೊಂದು ಇರಲಿಲ್ಲ. ಇಂಗ್ಲಿಷಿನಿಂದ ಅನುವಾದಗೊಂಡು ಬಂದ ಮೂರು ನಾಲ್ಕು ಕೃತಿಗಳು ಮತ್ತು ಕಾಕೆಮಾನಿಯವರ ಬಿಡಿಲೇಖನಗಳು ಅಲ್ಲಲ್ಲಿ ಪ್ರಕಟವಾಗಿದ್ದವು.

ಕುವೆಂಪು ಅವರು ತಮ್ಮ ಬೃಹತ್ಕಾದಂಬರಿಗಳಾದ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಹಾಗೂ 'ಮಲೆನಾಡಿನ ಚಿತ್ರಗಳು' ಎಂಬ ಪ್ರಬಂಧ ಸಂಕಲನದಲ್ಲಿ ಮಲೆನಾಡಿನಲ್ಲಿ ಅನುಭವಿಸಿದ ಬೇಟೆಯನ್ನು ಸೊಗಸಾಗಿ ವರ್ಣಿಸಿದ್ದರು. ಇಂಗ್ಲಿಷಿನಂತೆ ಪ್ರತ್ಯೇಕ ವಸ್ತುವನ್ನಾಗಿ ಸ್ವೀಕರಿಸಿಕೊಂಡು ಬರೆಯಲಾದ ಕೃತಿಗಳು ಕನ್ನಡದಲ್ಲಿ ಅಪರೂಪ. ಅಂತಹ ಸಂದರ್ಭದಲ್ಲಿ ಕೆದಂಬಾಡಿ ಜತ್ತಪ್ಪ ರೈಯವರ 'ಬೇಟೆಯ ನೆನಪುಗಳು', 'ಈಡೊಂದು ಹುಲಿಯೆರಡು;', 'ಬೇಟೆಯ ಉರುಳು' ಮತ್ತು 'ಬೆಟ್ಟದ ತಪ್ಪಲಿಂದ ಕಡಲಕರೆಗೆ' - ಎಂಬ ನಾಲ್ಕು ಮೃಗಯಾ ಸಾಹಿತ್ಯ ಕೃತಿಗಳು ಪ್ರಕಟಗೊಂಡವು. ಇವೆಲ್ಲದರ ವಸ್ತು ಒಂದೇ. ಅದು ಅವರ ಸ್ವಂತದ್ದು. ಒಂದೇ ರೀತಿಯ ವಸ್ತು ಎಂಬ ದೃಷ್ಟಿಯಿಂದ ಅವುಗಳಲ್ಲಿ ವೈವಿಧ್ಯತೆಗೆ ಕೊರತೆಯಿಲ್ಲ. ಅವು ಒಂದೇ ಕೇಂದ್ರ ಬಿಂದುವಿನ ಬೇರೆ ಬೇರೆ ಪದರಗಳನ್ನು ದರ್ಶಿಸುತ್ತವೆ. ಇದರಿಂದಾಗಿ ಅವು ಮೃಗಯಾ ಸಾಹಿತ್ಯಲೋಕದಲ್ಲಿ ತನ್ನದೇ ಸ್ಥಾನವನ್ನು ಪಡೆದಿವೆ.

**ಬೇಟೆಯ ನೆನಪುಗಳು :**

'ಬೇಟೆಯ ನೆನಪುಗಳು' - ಕೆದಂಬಾಡಿ ಜತ್ತಪ್ಪ ರೈಯವರ ಮೊದಲ ಮೃಗಯಾ ಸಾಹಿತ್ಯ ಕೃತಿ. ಮೊದಲೇ ಸೂಚಿಸಿದಂತೆ ಹೊಸಗನ್ನಡದ ಮೃಗಯಾ ಸಾಹಿತ್ಯದಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ. ಬೇಟೆಯನ್ನು ವಸ್ತುವನ್ನಾಗಿ ಸ್ವೀಕರಿಸಿಕೊಂಡು ಬರೆಯಲಾದ ಮೊದಲನೆಯ ಕೃತಿ ಇದಾಗಿದೆ. ರೈಯವರ ಬೇಟೆಯ ಅನುಭವಗಳ ಮೊದಲ ಕಂತು ಇದರಲ್ಲಿದೆ. 'ನನ್ನ ಶಿಕಾರಿಯ ಸಾಹಸಕ್ಕೆ ಸಂಬಂಧಿಸಿದ ಕೆಲವು ಪ್ರಸಂಗಗಳು ಮಾತ್ರ ಇಲ್ಲಿ ಕಾಣಿಸಿಕೊಂಡಿವೆ. ನೆನಪಿನ ಉಗ್ರಾಣದಲ್ಲಿ ಇನ್ನೂ ವಿಪುಲ ಸಾಮಗ್ರಿಗಳು ಉಳಿದಿವೆ' - (ಬೇಟೆಯ ನೆನಪು : ೧೯೭೯ : ಅರಿಕೆಯಲ್ಲಿನ ಮಾತು) ಎಂಬ ರೈಯವರ ಮಾತು ಈ ಕೃತಿಯಲ್ಲಿ ಅವರ ಅನುಭವ ಪರಿಪೂರ್ಣವಾಗಿ ಹೊರಬಂದಿಲ್ಲ ಎಂಬುದನ್ನು ಸೂಚಿಸುತ್ತದೆ. ಓದುಗ ಅವರ ಸಂಪೂರ್ಣ ಬೇಟೆಯ ಅನುಭವವನ್ನು ತಿಳಿಯಬೇಕಾದರೆ ಮೇಲೆ ತಿಳಿಸಿದ ನಾಲ್ಕೂ ಕೃತಿಗಳನ್ನು ಓದಬೇಕು.

'ಬೇಟೆಯ ನೆನಪು' - ಕೃತಿಯಲ್ಲಿ ಕೊನೆಯ ಶಬ್ದಕೋಶವು ಸೇರಿ ಒಟ್ಟು ಒಂಬತ್ತು ಅಧ್ಯಾಯಗಳಿವೆ. ಅವು ಅನುಕ್ರಮವಾಗಿ, ಪ್ರವೇಶ; ಮೊದಲ ಹುಲಿಶಿಕಾರಿ; ಜೀವಂತ ಹುಲಿಯ ಮೀಸೆಯನ್ನು ಕಿತ್ತು ತರುವ ಮೋಂತು; ದೊಣ್ಣೆಯಿಂದ ಹುಲಿಯನ್ನು ಕೊಂದ ಕುಂಞಿಮೋನು;

ಕತ್ತಲಲ್ಲಿ ವಿಪತ್ತು; ಬ್ರಿಟಿಷ್ ಕುಟುಂಬದೊಂದಿಗೆ ಕುದುರೆಮುಖದಲ್ಲಿ; ನೋಡಬೇಕು ಹುಲಿ ಹಂದಿಯ ಹೋರಾಟ; ಮತ್ತು ಗಾರ್ಡರಿ ಬಲಿಪ ಶಿಕಾರಿ.

ಮೊದಲ ಅಧ್ಯಾಯದಲ್ಲಿ ರೈಯವರು ತನ್ನ ಪರಿಸರದ ಕೃಷಿ, ಪ್ರಾಣಿ-ಪಕ್ಷಿಗಳು, ಕಾಡು ಬೆಟ್ಟ-ನದಿ-ಹೊಳೆಗಳು, ವಿವಿಧ ಜಾತಿ-ಜನಾಂಗ-ವರ್ಗಗಳನ್ನು ತಿಳಿಸುವು ದರೊಂದಿಗೆ ಐದು ದಶಕಗಳ ಹಿಂದಿನ ದಕ್ಷಿಣ ಕನ್ನಡ ಜಿಲ್ಲೆಯನ್ನು ಪರಿಚಯಿಸಿದ್ದಾರೆ. ತಾನು ಮತ್ತು ತನ್ನ ಕುಟುಂಬದ ಬಗ್ಗೆ ತಿಳಿಸಿ ತಾನು ಬೇಟೆಗೆ ಆಕರ್ಷಿತರಾದುದರ ಹಿನ್ನೆಲೆಯನ್ನು ವಿವರಿಸಿದ್ದಾರೆ. ಅವರು ಶಿಕಾರಿಯ ಬಗ್ಗೆ ಕೇಳಿದ, ನೋಡಿದ ಒಟ್ಟು ಅನುಭವಗಳು ಇದರಲ್ಲಿವೆ. ಹಂದಿ, ಹುಲಿ, ಕಾಡುಕೋಣ ಇಂತಹ ಕ್ರೂರಮೃಗಗಳು ದಿನನಿತ್ಯ ಕೃಷಿಕರಿಗೆ ಕೊಡುವ ಕಾಟ, ಅದಕ್ಕೆ ಹಗಲು ಹೊತ್ತು ಕಾಡನ್ನು ಸೋವಿ ಮಾಡುವ ಬೇಟೆ, ರಾತ್ರಿಯ ಮರಸು ಬೇಟೆ, ಭರ್ಚಿ, ಕೋವಿ, ಕತ್ತಿ ಮೊದಲಾದ ಆಯುಧಗಳನ್ನು ಹೊಂದಿದ ಬೇಟೆಗಾರರ ಜನಾಂಗಗಳ ಪರಿಚಯ ಈ ಅಧ್ಯಾಯದಲ್ಲಿದೆ. ಬೇಟೆಯಲ್ಲಿರುವ ವಿವಿಧ ತಂತ್ರಗಳಾದ ಕರ್ಪು ತೋಡುವುದು, ಕೋವಿ ಎತ್ತಿ ಕಟ್ಟುವುದು, ಸಾರ್ತೆ ಬೇಟೆ, ಲೈಟು ಶಿಕಾರಿಗಳ ಬಗ್ಗೆ ವಿವರಣೆಯಿದೆ. ಕಾಡು ಸೋವಲು ಬೇಟೆಗಾರರು ಸೇರುವ ರೀತಿ, ಬೇಟೆಯಾದ ಮೇಲೆ ಕಾಡಿನ ಭೂತಕ್ಕೆ ಮಾಂಸಮೂಟ ಬಡಿಸುವ ಬಗ್ಗೆ ಇಲ್ಲಿ ಮಾಹಿತಿ ಇದೆ.

ಜತ್ತಪ್ಪ ರೈಯವರು ಮೊತ್ತಮೊದಲ ಬಾರಿಗೆ ಈಡು ಹೊಡೆದು ತನ್ನ ಮಹದಾಸೆಯನ್ನು ಈಡೇರಿಸಿಕೊಂಡುದು ಸ್ವಾರಸ್ಯಕರವಾದ ಕಥೆ. ಊರಲ್ಲಿ ಕಾಡುಮೃಗಗಳ ಹಾವಳಿ ಜಾಸ್ತಿಯಾದಾಗ ಅವುಗಳ ನಿಯಂತ್ರಣಕ್ಕೆ ಇಂಗ್ಲಿಷ್ ಜಿಲ್ಲಾಧಿಕಾರಿಯೊಬ್ಬರು ಬರುತ್ತಾರೆ. ರೈಯವರು ಆಗ ಹದಿನಾಲ್ಕು ವರ್ಷ ಪ್ರಾಯದ ಬಾಲಕ. ಆಗ ಅವರಜ್ಜ ಕೊರಗಪ್ಪ ರೈ ಪ್ರಸಿದ್ಧ ಈಡುಗಾರರು. ಇವರ ಗುರಿತಪ್ಪದ ಈಡಿನ ಕೌಶಲ್ಯವನ್ನು ಕಂಡ ಇಂಗ್ಲಿಷ್ ಅಧಿಕಾರಿ ಜೋಡುನಳಿಗೆಯ ಕೋವಿಯನ್ನು ಬಹುಮಾನವನ್ನಾಗಿ ನೀಡುವನು. ಆಗ ಮೊಮ್ಮಗ ರೈಗೆ ಬೇಟೆಯಲ್ಲಿ ಅಜ್ಜನನ್ನು ಮೀರಿಸಬೇಕೆಂಬಾಸೆ ಚಿಗುರಿತು. ಆ ಆಸೆಯನ್ನು ರೈಯವರು ಸ್ವಲ್ಪ ಸಮಯದಲ್ಲೇ ಈಡೇರಿಸಿಕೊಂಡರು. ರೈಯವರ ಮೊತ್ತಮೊದಲ ಗುಂಡು ತಪ್ಪಿಹೋದರೂ ಎರಡನೆಯ ಗುಂಡು ಹುಸಿಯಾಗಲಿಲ್ಲ. ಹೀಗೆ ಶಿಕಾರಿಯ ಜೀವನಕ್ಕೆ ಅಡಿಯಿಟ್ಟ ರೈ ಮುಂದೆ ಐದು ವರ್ಷಗಳಲ್ಲಿ ದಿನವೊಂದಕ್ಕೆ ಸರಾಸರಿ ಐದರಂತೆ ಗುಂಡು ಹೊಡೆದರಂತೆ.

ಮುಂದಿನ ಏಳು ಅಧ್ಯಾಯಗಳಲ್ಲಿ ರೈಯವರು ತನ್ನ ಜವ್ವನದ ಕಾಲದಲ್ಲಿ ಬೇರೆ ಬೇರೆ ಪರಿಸರದಲ್ಲಿ ಬೇಟೆಯಾಡಿದ ರೋಚಕ ಅನುಭವಗಳಿವೆ. ಮೊಧಲ ಹುಲಿಶಿಕಾರಿಯಲ್ಲಿ ರೈಯವರ ಬೇಟೆಯ ಪ್ರೌಢಿಮೆ ಪ್ರಕಟವಾಗದಿದ್ದರೂ ಆ ಪರಿಸರದಲ್ಲಿ ಜನರ ಮೇಲಿದ್ದ ಅವರ ಪ್ರಭಾವದ ಅರಿವಾಗುವುದು. ಬಾವಿಯಲ್ಲಿ ಬಿದ್ದ ಹುಲಿಯನ್ನು ಸುಲಭವಾಗಿ ಕೊಂದು, ಅದನ್ನು ಕೊಂದ ಬಗೆಯನ್ನು ಹಿರಿಯರಿಗೆ ತಿಳಿಸದೆ ಹುಲಿ ಕೊಂದ ವೀರರಿಗೆ ಮಾಡುವಂತಹ ಮೆರವಣಿಗೆಯ ಗೌರವವನ್ನು ಪಡೆದ ರೈಯವರ ಉಪಾಯ ಗಮನಾರ್ಹ.

ಜೀವಂತವಾಗಿರುವ ಹುಲಿಯ ಮೀಸೆಯನ್ನು ತರುವ ಮೋಂತುವಿನ ಕತೆ ಮೂರನೆಯ ಅಧ್ಯಾಯಲ್ಲಿದೆ. ಜೀವಂತವಿರುವ ಹುಲಿಯ ಮೀಸೆಯನ್ನು ಕಿತ್ತು ತರುತ್ತೇನೆಂದು ಬಡಾಯಿಕೊಚ್ಚಿ ಸವಾಲು ಹಾಕಿದ ಮೋಂತು ಮರದ ಅಟ್ಟಳಿಗೆಯಲ್ಲಿ ಹುಲಿಯ ಸದ್ದಾಗುತ್ತದೆಂದು ಭಾವಿಸಿಯೇ ರೈಯವರ ತಲೆಯ ಮೇಲೆ ಉಚ್ಚೆ ಹುಯಿದುಕೊಂಡ ಪ್ರಸಂಗ ನಗು ತರುವಂತದ್ದು. ಅನಿರೀಕ್ಷಿತವಾಗಿ ಹುಲಿ ಎದುರಾದಾಗ ಪ್ರಾಣದಾಸೆಯಿಂದ ಕೈಯಲ್ಲಿದ್ದ ದೊಣ್ಣೆಯಿಂದಲೇ ಏಕಾಂಗಿಯಾಗಿ ಹೋರಾಡಿ ಹುಲಿಯನ್ನು ಜಯಿಸಿದ ಕುಂಞಿಮೋನುವಿನ ಸಾಹಸಗಾಥೆ ನಾಲ್ಕನೆಯ ಅಧ್ಯಾಯದಲ್ಲಿದೆ. ರಾತ್ರಿ ಬೇಟೆಯಾಡಲು ಹೋಗಿ ಸಂಕವಾಳವನ್ನು ಕೊಂದು ಅದರ ಹತ್ಯೆಯಿಂದ ಹೆದರಿ ಹಿರಿಯರಿಗೆ ಸುಳ್ಳು ಹೇಳಿದ ಲೇಖಕರ ನೆನಪು 'ಕತ್ತಲೆಯಲ್ಲಿ ವಿಪತ್ತು' ಎಂಬ ಅಧ್ಯಾಯದಲ್ಲಿದೆ.

ಲೇಖಕರು ಬ್ರಿಟಿಷ್ ಕುಟುಂಬದೊಂದಿಗೆ ಕುದುರೆಮುಖದಲ್ಲಿ ಕಳೆದ ನೆನಪು ಸ್ವಾರಸ್ಯಕರವಾದುದು. ವಿದ್ಯಾವಂತ ಬ್ರಿಟಿಷ್ ಕುಟುಂಬಧ ಜವ್ವನೆ ರೋಸ್ಲಿಯೊಂದಿಗೆ ರೈಯವರು ನಡೆಸಿದ ಮೋಜಿನ ಮೃಗಬೇಟೆ, ಬೇಟೆಯಾಡಿದ ಪ್ರಾಣಿ ಹೆಣ್ಣೇ ಗಂಡೇ ಎಂಬ ಬಗ್ಗೆ ಇವರಿಬ್ಬರು ಕಟ್ಟಿದ ಪಂಥ, ಸೋತ ರೋಸ್ಲಿ ಕಾಡುಕೋಣದ ಬೀಜವನ್ನು ತಲೆಯಲ್ಲಿ ಹೊತ್ತು ತಂದ ಪ್ರಸಂಗ ಹಾಸ್ಯದಿಂದ ಕೂಡಿದೆ.

ಕೂಡುಬೇಟೆಯಲ್ಲಿ ಭಾಗವಹಿಸಿದ ರೈಯವರು ಮರದ ಮರೆಯಲ್ಲಿ ನಿಂತು ಹಂದಿ ಮತ್ತು ಹುಲಿಯ ಹೋರಾಟವನ್ನು ನೋಡಿದ್ದೂ, ಗಾರ್ಡರು ಪೆಟ್ಟಾದ ಹುಲಿಯನ್ನು ಕಂಡು ಮೂರ್ಛೆ ಹೋದ ಕತೆ-ಕೊನೆಯ ಅಧ್ಯಾಯಗಳಲ್ಲಿವೆ. ಹೀಗೆ ರೈಯವರು ಬೇಟೆಗೆ ಸಂಬಂಧಿಸಿದ ತನ್ನ ಹಳೆಯ ನೆನಪುಗಳನ್ನು ಈ ಕೃತಿಯಲ್ಲಿ ಹಂಚಿಕೊಂಡಿದ್ದಾರೆ.

ಜತ್ತಪ್ಪ ರೈಯವರು ತನ್ನ ಮೊದಲನೆಯ ಕೃತಿಯಲ್ಲಿ ಹೇಳದೆ ಇರುವ ಬೇಟೆಯ ಅನುಭವಗಳನ್ನು ಈ ಕೃತಿಯಲ್ಲಿ ವರ್ಣಿಸಿದ್ದಾರೆ. ತಮ್ಮ ಏರುಜವ್ವನದ ಕಾಲದಲ್ಲಿ ಅನುಭವಿಸಿದ ಕೆಲವು ರೋಚಕ ಪ್ರಸಂಗಗಳು ಇಲ್ಲಿವೆ. ಮೊದಲ ಪುಸ್ತಕದಲ್ಲಿ ರೈಯವರು ಮುಖ್ಯವಾಗಿ ಹಂದಿ ಮತ್ತು ಹುಲಿ ಬೇಟೆಯ ಬಗ್ಗೆ ತಿಳಿಸಿದರೆ, ಇಲ್ಲಿ ಹಂದಿ, ಹುಲಿಯ ಬೇಟೆಯೊಂದಿಗೆ ಕರಡಿ, ಆನೆ, ಕಾಡುಕೋಣಗಳನ್ನು ಬೇಟೆಯಾಡಿದ ಅನುಭವಗಳನ್ನು ಪ್ರಕಟಿಸಿದ್ದಾರೆ. ಕಾಡು ಬೇಟೆಯಾಡಿದ ಅನುಭವದೊಂದಿಗೆ ನೀರಬೇಟೆಯ ಬಗ್ಗೆಯೂ ಇಲ್ಲಿ ಮಾಹಿತಿ ಇದೆ. ಲೇಖಕರು ಮೀನಿಗಾಗಿ ನೀರಿಗೆ ತೋಟೆ ಹಾಕುವ ವಿಧಾನವನ್ನು ಪರಿಚಯಿಸಿದ್ದಾರೆ.

ಈ ಕೃತಿಯ ಶೀರ್ಷಿಕೆಯನ್ನೊಳಗೊಂಡ ಮೊದಲ ಅಧ್ಯಾಯ ಸ್ವಾರಸ್ಯಕರವಾದುದು. ಕಾಮಕೇಳಿಯಲ್ಲಿ ತೊಡಗಿದ ಎರಡು ಹುಲಿಗಳನ್ನು ಒಂದೇ ಈಡಿನಿಂದ ಕೊಂದ ಲೇಖಕರ ಸಾಹಸ ಇಲ್ಲಿ ಪ್ರಕಟಗೊಂಡಿದೆ. ಬಲಶಾಲಿಯಾದ ಹುಲಿಯನ್ನು ಕೂಡಿ ಹಾಕಲು ಬೋನು ತಯಾರಿಸುವ ವಿಧಾನವನ್ನು ರೈಯವರು ಇಲ್ಲಿ ತಿಳಿಸಿದ್ದಾರೆ. ಕುದುರೆಮುಖದಲ್ಲಿ ರೈ ಮತ್ತು ಇಂಗ್ಲಿಷ್ ಹುಡುಗಿ ರೋಸ್ಲಿ ಕಾಡುಕೋಳಿಯ ಬೇಟೆಗೆಂದು ಹೋಗಿ ಅನಿರೀಕ್ಷಿತವಾಗಿ ಕರಡಿಗಳನ್ನು ಕಂಡು ಅವುಗಳನ್ನು ಎದುರಿಸಿ ಬೇಟೆಯಾಡಿದ ರೀತಿ ಕುತೂಹಲಕಾರಿಯಾದುದು.

ಬೇಟೆಗೆ ಸಂಬಂಧಿಸಿದಂತೆ ಕೆಲವು ನಿಯಮಗಳಿವೆ. ಕಾಡುಸೋವುವಲ್ಲಿ ಈಡು ಹೊಡೆಯುವಲ್ಲಿ, ಸತ್ತ ಪ್ರಾಣಿಗಳ ಮಾಂಸವನ್ನು ಹಂಚುವುದರಲ್ಲಿ ನಿಬಂಧನೆಗಳಿವೆ. ಇಂತಹ ನಿಬಂಧನೆಗಳ ಮತ್ತು ರಾತ್ರಿ ಹೊತ್ತು ನಡೆಸುವ ಲೈಟುಶಿಕಾರಿಯ ಬಗ್ಗೆ ಈ ಕೃತಿಯಲ್ಲಿ ಮಾಹಿತಿ ದೊರೆಯುತ್ತದೆ. ಬೇಟೆಗಾರನೊಬ್ಬನಿಗೆ ಹಂದಿಯೊಂದು ಹಾಯ್ದು ಉಂಟಾದ ಗಾಯದಿಂದ ಹಂದಿ, ಬೇಟೆಯಲ್ಲಿ ಎಷ್ಟು ಅಪಾಯಕಾರಿ ಎಂಬುದು ತಿಳಿಯುತ್ತದೆ. ಅಪಾಯಕಾರಿಯಾದ ಇಂತಹ ಹಂದಿಯೊಂದನ್ನು ಲೇಖಕರು ಬೇಟೆಯಾಡಿ ಕೊಂದ ಸಾಹಸದ ಪ್ರಸಂಗವೊಂದು ಸ್ವಾರಸ್ಯಕರವಾಗಿದೆ. ನರಹಂತಕ ಹುಲಿಯನ್ನೂ, ಮೊತ್ತಮೊದಲಿಗೆ ಆನೆಯನ್ನು ಬೇಟೆಯಾಡಿದ ರೈಯವರ ಸಾಹಸಗಾಥೆ ಎರಡು ಅಧ್ಯಾಯಗಳಲ್ಲಿದೆ. ಆನೆಯನ್ನು ಕೊಲ್ಲುವ ಹಿರಿಯ ಬೇಟೆಗಾರರ ಅನುಭವವನ್ನು ರೈಯವರು ಇಲ್ಲಿ ಉಲ್ಲೇಖಿಸಿದ್ದಾರೆ. 'ಆನೆಯ ಮರ್ಮಸ್ಥಳವು ಅದರ ತಲೆಮಧ್ಯದಲ್ಲಿ ಎದ್ದು ತೋರುವ ಗಂಡಸ್ಥಳ. ಗುರಿಯನ್ನು ಮರ್ಮಕ್ಕೆ ಹೊಡೆಯುವ ಈಡುಗಾರನು ಈಡುಗಾರಿಕೆಯಲ್ಲಿ ತುಂಬ ಪಳಗಿದ ಗುರಿಗಾರನಾಗಿರಬೇಕು. ಹೀಗಿಲ್ಲವಾದರೆ ಆನೆಯ ಹಿಂದಿಸಿಂದ ಅದು ನಡೆಯುವಾಗ ಅದರ ಅಂಗಾಲಿಗೆ ಹೊಡೆಯಬೇಕು. ರೈಫಲಿನ ಗುಂಡು ಅಂಗಾಲಿಗೆ ತಗುಲಿದರೆ ಆನೆಯು ಕೆಳಮುಖವಾಗಿ ಆದ ಗಾಯದಿಂದ ಕೆಲಕಾಲದವರೆಗೆ ರಕ್ತಸೋರಿ ಸಾಯುತ್ತದೆ". (ಈಡೊಂದು ಹುಲಿಯೆರಡು : ೧೯೭೬ : ಪುಟ ೧೧೫), ಆನೆ, ಕರಡಿ, ಹುಲಿ, ಮೊದಲಾದ ಕ್ರೂರ ಮೃಗಗಳನ್ನು ಬೇಟೆಯಾಡಿದ ರೈಯವರ ಎದೆಗಾರಿಕೆ-ಈಡುಗಾರಿಕೆಯ ಅನುಭವಗಳು ಕೃತಿಯ ತುಂಬ ಪ್ರಕಟಗೊಂಡಿವೆ.

**ಬೇಟೆಯ ಉರುಳು :**

'ಬೇಟೆಯ ಉರುಳು' ಕೆದಂಬಾಡಿ ಜತ್ತಪ್ಪ ರೈಯವರ ಮೂರನೆಯ ಮೃಗಯಾ ಸಾಹಿತ್ಯ ಕೃತಿ. ಈ ಕೃತಿ ೧೯೮೨ ರಲ್ಲಿ ಪ್ರಕಟವಾಯಿತು. ಇದನ್ನು ಭಾವೀ ಜನಾಂಗಕ್ಕಾಗಿ ಬರೆದುದೆಂದು ಲೇಖಕರು ಆರಂಭದಲ್ಲೇ ಹೇಳಿದ್ದಾರೆ. ಈ ಕೃತಿಯಲ್ಲಿ ಚಿಕ್ಕ ಪ್ರಾಣಿಗಳಿಂದ ಆರಂಭಗೊಂಡು ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವವರೆಗೆ ಜಾಣ್ಮೆ, ವಿಶಿಷ್ಟತೆಗಳ ಸಜೀವ ವಿವರಣೆಯಿದೆ. ಬೇಟೆಯು ಕಾನೂನುಬಾಹಿರವೆಂದು ದೂರವಾಗುತ್ತಿರುವ ಈ ಕಾಲದಲ್ಲಿ ಬೇಟೆಯ ಸಂಬಂಧದ ಸಾಕ್ಷ್ಯಚಿತ್ರದ ದಾಖಲೆಯು ಇದಾಗಿದೆ. ಇದರ ವಸ್ತು ಬೇಟೆಯೇ ಆದರೂ ಲೇಖಕರ ಉಳಿದ ಕೃತಿಗಳಿಗಿಂತ ಇದು ಭಿನ್ನವಾಗಿದೆ.

ತುಳು ಜನಪದರು ಪ್ರಾಣಿಗಳನ್ನು ಹಿಡಿಯಲು ತಮ್ಮದೇ ಆದ ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆ. ಬಲೆ, ಕರ್ಪು ತೋಡುವುದು, ಕೋವಿ ಎತ್ತಿ ಕಟ್ಟುವುದು ಮುಂತಾದ ಗ್ರಾಮೀಣ ಜನರ ಬೇಟೆಯ ವಿಧಾನಗಳ ಪರಿಚಯ 'ಬೇಟೆಯ ಉರುಳು'ನಲ್ಲಿದೆ. ಯಂತ್ರ ಯುಗದಲ್ಲಿ ಬಳಕೆಗೆ ಬಂದ ಬೇಟೆಯ ಸುಧಾರಿತ ರೀತಿಯ ಕೋವಿ, ಮದ್ದುಗುಂಡುಗಳನ್ನು ಪರಿಚಯಿಸಿ, ಅವುಗಳನ್ನು ಬಳಸುವ ಕ್ರಮಗಳನ್ನು ರೈಯವರು ತಿಳಿಸಿದ್ದಾರೆ.

ಈ ಕೃತಿಯಲ್ಲಿ ರೈಯವರು 'ಹಾರೋತಿ'ಯ ಬಗ್ಗೆ ಅಪೂರ್ವವಾದ ಮಾಹಿತಿಯನ್ನು

ನೀಡಿದ್ದಾರೆ. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾಭಾವಿಕವಾಗಿದ್ದರೂ ಉಳಿದ ಕಡೆ ಅಪರೂಪ. ಈ ಓತಿಗೆ ತುಳುವಿನಲ್ಲಿ 'ರಾವೋತಿ' ಎಂದು ಕರೆಯುತ್ತಾರೆ. ಈ ಪ್ರಾಣಿಯನ್ನು ಕಾಣಲು ಪ್ರಪಂಚದ ವಿಜ್ಞಾನಿಗಳು ಸದಾ ಬಿಡುಗಣ್ಣಿನಿಂದ ಕಾಯುತ್ತಿದ್ದಾರೆಂದು ಲೇಖಕರೇ ಕೃತಿಯ ಅರಿಕೆಯಲ್ಲಿ ತಿಳಿಸಿದ್ದಾರೆ. ಲೇಖಕರು ಇದರ ಸ್ವರೂಪವನ್ನು ಎಲ್ಲರಿಗೂ ತಿಳಿಯುವ ಹಾಗೆ ಪರಿಚಯಿಸಿದ್ದಾರೆ. ಇದೇ ಭಾಗದಲ್ಲಿ ಮಲೆನಾಡಿನ ಅಪಾಯಕಾರಿ ಕೀಟ-ಜಂತುಗಳ ಮಾಹಿತಿಯಿದೆ.

ಮಲೆನಾಡಿನಲ್ಲಿ ಮಳೆಗಾಲದಲ್ಲಿ ಮಾತ್ರ ಕಾಣಸಿಗುವ ಬೇಟೆಗಾರರು ಹೆಚ್ಚಾಗಿ ಬಯಸುವ ಹಕ್ಕಿಯಾದ 'ಗೂರ್ಮೆ'ಯನ್ನು ಬೇಟೆಯಾಡುವ ವಿಧಾನ ಈ ಕೃತಿಯಿಂದ ಲಭ್ಯ. ರಾಗಿಯ ಪೈರನ್ನು ತಿನ್ನಲು ಬಂದ ನವಿಲುಗಳು ಮಳೆ ಬಂದು ಬಿಟ್ಟಾಗ ಕುಣಿಯುವ ಸೊಬಗನ್ನು ರೈಯವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

**ಬೆಟ್ಟದ ತಪ್ಪಲಿಂದ ಕಡಲತಡಿಗೆ :**

'ಬೆಟ್ಟದ ತಪ್ಪಲಿಂದ ಕಡಲತಡಿಗೆ' - ಬೇಟೆಗೆ ಸಂಬಂಧಿಸಿದಂತೆ ಕೆದಂಬಾಡಿ ಜತ್ತಪ್ಪ ರೈಯವರು ಬರೆದ ನಾಲ್ಕನೆಯ ಕೃತಿ. ಇತ್ತೀಚಿನವರೆಗೆ ಇದು ಅವರ ಕೊನೆಯ ಮೃಗಯಾ ಸಾಹಿತ್ಯ ಕೃತಿಯೂ ಹೌದು. ಇದು ೧೯೮೮ರಲ್ಲಿ ಪ್ರಕಟವಾಯಿತು. ಲೇಖಕರ ಮೊದಲ ಕೃತಿಗಳಿಗಿಂತ ಇದು ಗಾತ್ರದಲ್ಲಿ ಚಿಕ್ಕದಾಗಿದೆ. 'ಪ್ರವೇಶ' ಮತ್ತು 'ಮಲೆಯ ಮಾರಿ ಮನೆಗೆ ನುಗ್ಗಿದಾಗ' ಎಂಬ ಎರಡು ಅಧ್ಯಾಯಗಳಲ್ಲಿ ಕೃತಿ ಪರಿಪೂರ್ಣಗೊಂಡಿದೆ. ರೈಯವರ ಬೇಟೆಯ ಅನುಭವ-ನೆನಪುಗಳು ಇಲ್ಲೂ ಮೊದಲಿನ ಕೃತಿಗಳಂತೆ ಆಸಕ್ತಿಪೂರ್ಣವಾಗಿಯೇ ಇದೆ. ತಮ್ಮ ಬದುಕಿನಲ್ಲಿ ಬೇಟೆಗೆ ಹೆಚ್ಚಿನ ಮಹತ್ವವನ್ನು ನೀಡಿ ಅದನ್ನು ಜೀವನದ ಒಂದು ಭಾಗವನ್ನಾಗಿಸಿಕೊಂಡು ರೈಯವರು ಅಲ್ಲಿ ಕಂಡುಂಡ ಕೆಲವು ಸತ್ಯದರ್ಶನವನ್ನು ಇಲ್ಲಿ ಪ್ರಕಟಿಸಿದ್ದಾರೆ. ಬೇಟೆಯ ಮೂಲಕ ರೈಯವರು ಕಂಡುಂಡ ಕೆಲವು ಜೀವನ ಮೌಲ್ಯಗಳು ಇಲ್ಲಿವೆ.

ಕೇರಳದಲ್ಲಿರುವ ಬೇಟೆಯ ಸ್ವರೂಪವನ್ನು ತಿಳಿಸಿದ ಲೇಖಕರು ಅಲ್ಲಿರುವ ತನ್ನ ಆಪ್ತ ಬೇಟೆಗಾರರನ್ನು ಪರಿಚಯಿಸಿದ್ದಾರೆ. ಕೇರಳದಲ್ಲಿ ಕಾಡುಬೇಟೆಗೆ 'ನಾಯಾಟ' ಎಂದು ಹೆಸರು. ಬೇಟೆಯಲ್ಲಿ ನಾಯಿಯ ಪಾತ್ರ ಮಹತ್ವದ್ದಾಗಿರುವುದರಿಂದ ಈ ಹೆಸರು ಬಂದಿರುವುದಾಗಿ ಲೇಖಕರು ತಿಳಿಸಿದ್ದಾರೆ. ಕೇರಳಕ್ಕೆ ಬೇಟೆಗೆ ಹೋದ ರೈಯವರು 'ಗನ್‌ಬೋಟ್' ಎಂದು ಅಲ್ಲಿಯವರಿಗೆ ಪರಿಚಿತರಾಗಿ, ಒಂದೇ ಕ್ಷಣದಲ್ಲಿ ಐದಾರು ಹಂದಿಗಳನ್ನು ಬೇಟೆಯಾಡಿ ಮಲಯಾಳೀ ಬೇಟೆಗಾರರಿಂದ 'ಕೆನನ್‌ಶಿಫ್' ಎಂಬ ಬಿರುದು ಪಡೆದ ಪ್ರಸಂಗ ಸ್ವಾರಸ್ಯಕರವಾದುದು.

ಸರಕಾರದ ಕೋರಿಕೆಯ ಮೇರೆಗೆ ರೈಯವರು ನರಭಕ್ಷಕ ಹುಲಿಯೊಂದನ್ನು ಬೇಟೆಯಾಡುವರು. ನರಭಕ್ಷಕ ಗಂಡು ಹುಲಿ ಸತ್ತಾಗ ಹೆದರಿದ ಹೆಣ್ಣು ಹುಲಿ ಮತ್ತು ಮರಿಗಳು ಪರಸ್ಪರ ದೂರವಾಗುವುವು. ತಬ್ಬಲಿ ಮರಿಗಳನ್ನು ಹುಡುಕುತ್ತಾ ಬಂದ ಹೆಣ್ಣು ಹುಲಿ ಮನೆಯೊಂದಕ್ಕೆ ನುಗ್ಗಿದಾಗ ರೈಯವರು ಸುಲಭವಾಗಿ ಅದನ್ನು ಬೇಟೆಯಾಡುವರು. ತಬ್ಬಲಿ ಹುಲಿಮರಿಗಳನ್ನು ಚಂದು ನಂಬಿಯಾರ್

ಸಾಕುತ್ತಾನೆ. ಇವುಗಳಲ್ಲಿ ಹೆಣ್ಣು ಹುಲಿಮರಿಯು ಸಾಯುವುದು. ಗಂಡು ಹುಲಿಮರಿಯು 'ವ್ಯಾಘ್ರತುಂಡ' ಎಂಬ ಹೆಸರನ್ನು ಪಡೆದು ನಂಬಿಯಾರರ ಆಶ್ರಯದಲ್ಲಿ ಬೆಳೆಯುತ್ತದೆ. ಹೀಗೆ ಸಾಕಿ ಬೆಳೆಸಿದ 'ವ್ಯಾಘ್ರತುಂಡ' ತನ್ನ ತಾವಿನಿಂದ ತಪ್ಪಿಸಿಕೊಂಡು ಅಪಾಯಕಾರಿಯಾಗಿ ಊರಿಗೆ ಉಪಟಳ ನೀಡುತ್ತದೆ. ಅನಿವಾರ್ಯವಾಗಿ ರೈಯವರು ಕೊನೆಗೆ ಇದನ್ನು ಬೇಟೆಯಾಡಬೇಕಾಗುವುದು. ಹೀಗೆ ಕೇರಳದ ಕಾಡುಗಳಲ್ಲಿ ರೈಯವರು ಹಂದಿ ಹುಲಿ ಮೊದಲಾದುವುಗಳನ್ನು ಬೇಟೆಯಾಡಿದ ಸ್ವಾರಸ್ಯಕರವಾದ ಅನುಭವ ಈ ಕೃತಿಯಲ್ಲಿದೆ. ಗಾಳದಿಂದ ಮೀನು ಹಿಡಿಯುವ ಬಗ್ಗೆಯೂ ಇಲ್ಲಿ ಮಾಹಿತಿ ಲಭ್ಯ.

**ಶಿಕಾರಿಯ ಸೀಳುನೋಟ :**

'ಶಿಕಾರಿಯ ಸೀಳುನೋಟ' ಬಡ್ಡಡ್ಕ ಅಪ್ಪಯಗೌಡರ ಬೇಟೆಯ ಅನುಭವಗಳ ನ್ನೊಳಗೊಂಡ ಕೃತಿ. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯಲ್ಲಿ ಶ್ರೇಷ್ಠ ಈಡುಗಾರನೆಂದು ಪ್ರಖ್ಯಾತರಾಗಿದ್ದ ಗೌಡರ ಬೇಟೆಯ ಬದುಕಿನ ಹಲವು ಅನುಭವಗಳು ಇಲ್ಲಿ ಒಟ್ಟಾಗಿವೆ. ಬರಹಗಾರರಲ್ಲದ ನುರಿತ ಬೇಟೆಗಾರರಾದ ಗೌಡರ ಬೇಟೆಯ ಜೀವನದ ರೋಚಕ ಅನುಭವಗಳನ್ನು ನಿರೂಪಿಸಿ ಕೃತಿರೂಪಕ್ಕೆ ಅಳವಡಿಸಿದವರು ಪ್ರಭಾಕರ ಶಿಶಿಲರು. ಈ ಕೃತಿ ೧೯೮೫ರಲ್ಲಿ ಪ್ರಕಟವಾಯಿತು.

ಅಪ್ಪಯ್ಯಗೌಡರು ಹುಟ್ಟಿ ಬೆಳೆದ ಊರು ಸುಳ್ಯವು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಖಗಮೃಗಗಳಿಂದ ಅರಣ್ಯಮಯವಾಗಿದ್ದು ಅಲ್ಲಿ ಜನಜೀವನವೇ ಕಷ್ಟಸಾಧ್ಯವಾಗಿತ್ತೆಂದು ಕಥಾನಕದಿಂದ ತಿಳಿಯುತ್ತದೆ. ಅಂದು ಪ್ರಾಣಿಗಳ ಹಾವಳಿ ವಿಪರೀತವಾಗಿದ್ದು, ಅವುಗಳನ್ನು ಕೊಲ್ಲುವುದಕ್ಕಾಗಿ ಸರಕಾರವೇ ಪರವಾನಿಗೆ ಕೊಡುತ್ತಿತ್ತು. ಮಾನವ ಜೀವನಕ್ಕೆ ಅಪಾಯಕಾರಿಯಾದ ಹುಲಿಯನ್ನು ಬೇಟೆಯಾಡಿದವರಿಗೆ ಸರಕಾರ ಸತ್ಕಾರ, ಗೌರವ ಧನವನ್ನು ನೀಡುತ್ತಿತ್ತು. ಇಂತಹ ಸಂದರ್ಭದಲ್ಲಿ ಸುಳ್ಯದ ಸುತ್ತಮುತ್ತ ನೂರಕ್ಕಿಂತಲೂ ಹೆಚ್ಚು ಹುಲಿ, ಇನ್ನೂರಕ್ಕಿಂತಲೂ ಹೆಚ್ಚು ಕಾಡೆಮ್ಮೆ - ಕಾಡು ಕೋಣ, ಲೆಕ್ಕವಿಲ್ಲದಷ್ಟು ಜಿಂಕೆ, ಮೊಲಗಳನ್ನು ಬೇಟೆಯಾಡಿದ ಅಪ್ಪಯ್ಯಗೌಡರ ಸಾಹಸ ಸಾಧನೆ ಗಮನಾರ್ಹ. ಪರಿಸ್ಥಿತಿಯ ಅನಿವಾರ್ಯ ಒತ್ತಡದಿಂದ ಪ್ರಾಣಿ ಬೇಟೆಯಲ್ಲಿ ತೊಡಗಿ ಅಪೂರ್ವ ಈಡುಗಾರಿಕೆಯನ್ನು ತೋರಿಸಿ, ಪ್ರಾಣಾಪಾಯಕಾರಕ ಮೃಗಗಳನ್ನು ಮುಖಾಮುಖಿ ಎದುರಿಸಿ ಸಾಹಸದಿಂದ ಅವುಗಳನ್ನು ಜಯಿಸಿದ ಗೌಡರ ಬೇಟೆಯ ಬದುಕಿನ ಚಿತ್ರ ಶಿಕಾರಿಯ ಸೀಳುನೋಟದಲ್ಲಿದೆ.

'ನಾನೂ ಬೇಟೆಗಾರನಾದೆ' ಎಂಬ ಭಾಗದಲ್ಲಿ ಅಪ್ಪಯ್ಯಗೌಡರು ಬೇಟೆಗೆ ನಾಂದಿ ಹಾಡಿದ ವಿವರಣೆಯಿದೆ. ಗೌಡರ ಅಭಿಪ್ರಾಯದಂತೆ, ಅಂದು 'ಹುಲಿ ಬೇಟೆಯಾಡಬಲ್ಲವರಿಗೆ ಪೌರಾಣಿಕ, ಅತಿಮಾನುಷ ವ್ಯಕ್ತಿತ್ವಗಳಿಗೆ ಸಲ್ಲುವ ಗೌರವ ದೊರೆಯುತ್ತಿತ್ತು. ಅವರ ಸಾಹಸ ಕೃತ್ಯಗಳ ಬಗ್ಗೆ ದಂತಕಥೆಗಳು ಹುಟ್ಟುತ್ತಲೇ ಇರುತ್ತಿದ್ದವು', 'ನಾನು ಬೇಟೆಗಾರನಾದುದು ದಂತಕತೆಯಾಗಬೇಕು, ಅತಿಮಾನವನೆಂದು ವರ್ಣಿಸಲ್ಪಡಬೇಕು ಅಥವಾ ಸರಕಾರದ ಬಹುಮಾನ ದೊರೆಯಬೇಕೆಂಬ ಹಂಬಲದಿಂದಲ್ಲ. ಪರಿಸರ ನನ್ನನ್ನು ಬೇಟೆಗಾರನನ್ನಾಗಿ ರೂಪಿಸಿತು' (ಶಿಕಾರಿಯ

ಸೀಳುನೋಟ : ೧೯೮೫ : ಪು. ೮೩) ಎಂದು ಗೌಡರು ಬೇಟೆಗಾರರಾದ ಬಗ್ಗೆ ಹೇಳಿಕೊಂಡಿದ್ದಾರೆ. ಗೌಡರ ತಂದೆ ಸಮರ್ಥ ಈಡುಗಾರರು. ಅಪ್ಪನ ಬೇಟೆಯ ಸಾಹಸಗಾಥೆ ಮಗನನ್ನೂ ಆ ಹಾದಿಯಲ್ಲೇ ಮುಂದುವರಿಯುವಂತೆ ಪ್ರಚೋದಿಸಿತು. ಬೇಟೆಯಲ್ಲಿ ತಂದೆಯಂತಾಗಬೇಕೆನ್ನುವ ಆಸೆ ಸ್ವಾಭಾವಿಕವಾಗಿಯೇ ಚಿಗುರೊಡೆದು, ಹನ್ನೆಡು ವರ್ಷ ಪ್ರಾಯದಲ್ಲೇ ಅಪ್ಪಯ ಗೌಡರು ಮೊದಲ ಬಾರಿಗೆ ಕಡವೆಯೊಂದನ್ನು ಬೇಟೆಯಾಡಿದರು. ಅಂದಿನಿಂದ ನಿರಂತರವಾಗಿ ಗೌಡರ ಈಡುಗಾರಿಕೆಯ ಸಾಹಸ ಮುಂದುವರಿಯಿತು. ಅವರು ಹುಲಿ, ಹಂದಿ, ಕಾಡೆಮ್ಮೆ-ಕಾಡುಕೋಣ, ಒರಿಂಕ, ಮೊಲ ಮೊದಲಾದವುಗಳನ್ನು ಬೇಟೆಯಾಡಿದರು.

'ಹುಲಿಯನ್ನು ಬೇಟೆಯಾಡದಾತ ಪೂರ್ಣಪ್ರಮಾಣದ ಬೇಟೆಗಾರನಲ್ಲ' ಎಂಬುದು ಗೌಡರ ನಿಲುವು. ಹುಲಿಯೊಂದನ್ನು ಬೇಟೆಯಾಡಲೇ ಬೇಕೆಂದು ಬಯಸಿದ ಗೌಡರು ಮೊದಲ ಬಾರಿಗೆ ಕೋವಿಯನ್ನು ಎತ್ತಿ ಕಟ್ಟಿ ಹುಲಿಯನ್ನು ಕೊಲ್ಲುತ್ತಾರೆ. ಹುಲಿಯಿರುವ ಜಾಗದಲ್ಲಿ ತಾನಿರದೆ, ಅದನ್ನು ಮುಖಾಮುಖಿಯಾಗಿ ಎದುರಿಸದೆ ಕೋವಿಯನ್ನು ಎತ್ತಿಕಟ್ಟಿ ಬೇಟೆಯಾಡುವುದು ದೊಡ್ಡ ಸಾಧನೆಯಲ್ಲ. ಈ ದೃಷ್ಟಿಯಿಂದ ಗೌಡರ ಮೊದಲ ಹುಲಿ ಬೇಟೆಯನ್ನು ದೊಡ್ಡ ಸಾಧನೆ ಎಂದು ಪರಿಗಣಿಸುವಂತಿಲ್ಲದಿದ್ದರೂ, ಸಾಮಾನ್ಯವಾಗಿ ಹಂದಿಯನ್ನು ಬೇಟೆಯಾಡುವ ವಿಧಾನದಿಂದಲೇ ಹುಲಿಯನ್ನು ಕೊಂದ ಗೌಡರ ತಂತ್ರಕ್ಕೆ ಮೆಚ್ಚಬೇಕು. ಮುಂದೆ ಗೌಡರು ಹಲವಾರು ಹುಲಿಗಳನ್ನು ಬೇಟೆಯಾಡಿ 'ಹೈದ ಅಪ್ಪಯ್ಯ', 'ಹುಲಿ ಅಪ್ಪಯ್ಯ'ನಾದ ಕತೆ ಸ್ವಾರಸ್ಯಕರವಾದುದು.

ಬೇಟೆಯಲ್ಲಿ ಪ್ರಾಣಿಗಳನ್ನು ಮುಖಾಮುಖಿಯಾಗಿಯೇ ಎದುರಿಸಿ ಬೇಟೆ ಯಾಡಬೇಕೆಂಬುದು ಗೌಡರ ಜಾಯಮಾನ. ಆದುದರಿಂದಲೇ ಅವರು ರಾತ್ರಿಯ ಲೈಟು ಶಿಕಾರಿಯನ್ನು ಹೆಚ್ಚು ಬಯಸುವುದಿಲ್ಲ. ಪಕ್ಷಿಗಳನ್ನು ಬೇಟೆಯಾಡುವಾಗ ಅವುಗಳನ್ನು ಹಾರಿಸಿಯೇ ಬೇಟೆಯಾಡುವವರು. ಗೌಡರು ಬೇಟೆಯನ್ನು ಸಾಹಸ ಎಂದು ತಿಳಿದಿದ್ದರೂ, ತನ್ನ ಕ್ರೌರ್ಯದ ಬಗ್ಗೆ ನೊಂದುಕೊಂಡಿದ್ದಾರೆ. 'ಮಾನಿಷಾಧ.....' ಅಧ್ಯಾಯದಲ್ಲಿ ತಾಯಿಹುಲಿಯ ಬೇಟೆಯಾಡಿ ತಬ್ಬಲಿ ಹುಲಿ ಮರಿಗಳು ಸತ್ತಾಗ ಗೌಡರು ಪಡುವ ವೇದನೆ ಮಾರ್ಮಿಕವಾದುದು.

ಈ ಕೃತಿಯಲ್ಲಿ 'ಮಣಿನಾಯಿಟ್ಟು' (ಮಲಯಾಳದಲ್ಲಿ ಗಂಟೆಯ ಬೇಟೆ) ಎಂಬ ಬೇಟೆಯ ಬಗ್ಗೆ ಮಾಹಿತಿಯಿದೆ. ಹುಲಿ ಕೊಂದವರಿಗೆ ಗೌರವ ಧನ ಕೊಡುವ ಕ್ರಮ, ಹುಲಿಮದುವೆ, ಕಾಡು ಬೇಟೆಯ ಕ್ರಮ, ಕೆನ್ನಾಯಿಗಳ ಬೇಟೆ ಮುಂತಾದ ಬೇಟೆಗೆ ಸಂಬಂಧಿಸಿದ ವಿಷಯಗಳು ಈ ಕೃತಿಯಲ್ಲಿ ಲಭ್ಯ.

**ಬೇಟೆಯ ಸುತ್ತಮುತ್ತ :**

'ಬೇಟೆಯ ಸುತ್ತಮುತ್ತ' ಕೃತಿಯನ್ನು ಬರೆದವರು ಕೈಂತಜೆ ವಿಷ್ಣುಭಟ್ಟರು. ಇದು ಲೇಖಕರ ಚೊಚ್ಚಲಕೃತಿ. ಈ ಕೃತಿಯಲ್ಲಿ 'ಸ್ವಾನುಭವದ ವಿವರಗಳನ್ನು ಇತರರಿಂದ ಕೇಳಿ ತಿಳಿದ ಸ್ವಾರಸ್ಯಕರವಾದ ವಿಚಾರಗಳನ್ನು ಪರಿಸರ ಹಾಗೂ ಜೀವಜಗತ್ತಿನ ಚಿತ್ರಣದೊಂದಿಗೆ ನೀಡಿರುತ್ತೇನೆ. ಬೇಟೆ ಹಾಗೂ ಅದಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ಒಗ್ಗೂಡಿಸಿ ವಿಚಾರಶೀಲರ

ಪರಿಶೀಲನೆಗಾಗಿ ನಿರೂಪಿಸುತ್ತೇನೆ' ಎಂದು ಲೇಖಕರು ಅರಿಕೆ ಮಾಡಿಕೊಂಡಿದ್ದಾರೆ. (ಅರಿಕೆ) ಆತ್ಮಕಥನದ ರೂಪದಲ್ಲಿರುವ ಈ ಬರವಣಿಗೆ ಲೇಖಕರ ಅನುಭವಗಳ ವೈವಿಧ್ಯತೆಯನ್ನು ಪ್ರದರ್ಶಿಸುತ್ತದೆ.

ಈ ಕೃತಿಯಲ್ಲಿ ಒಟ್ಟು ಹತ್ತು ಅಧ್ಯಾಯಗಳಿವೆ. ಎಲ್ಲ ಅಧ್ಯಾಯಗಳಲ್ಲಿ ಬೇಟೆಯ ವರ್ಣನೆಯಿಲ್ಲ. 'ಬೇಟೆ' ಎಂಬ ಒಂದು ಕೇಂದ್ರ ಬಿಂದುವಿನ ಸುತ್ತ ಲೇಖಕರು ಅನುಭವಿಸಿದ ನಾನಾ ನೆನಪುಗಳು ಇಲ್ಲಿವೆ. ಒಂದೇ ಮೂಲಬಿಂದುವಿನ ವಿವಿಧ ಪದರುಗಳು ಕೈಂತಜೆಯವರ ಬೇಟೆಯ ಬದುಕಿನ ಸ್ವರೂಪವನ್ನು ದರ್ಶಿಸುತ್ತವೆ.


ಕೈಂತಜೆಯವರ ಹಿರಿಯರೆಲ್ಲ ಉತ್ತಮ ಬೇಟೆಗಾರರು. ಶಿಕಾರಿದಾರರ ಸಂಕುಲದಲ್ಲಿ ಬೆಳೆದ ಕೈಂತಜೆಯವರು ಬಾಲ್ಯದಲ್ಲೇ ಬೇಟೆಯ ಗೀಳನ್ನು ಬೆಳೆಸಿಕೊಂಡಿದ್ದರು. 'ನಮ್ಮ ತೋಟದೊಳಗೆ ನಮ್ಮ ಬೇಟೆಯ ಸರಹದ್ದು ನಿಶ್ಚಿತವಾಗಿದ್ದು. ಸಾಯಂಕಾಲದ ಹೊತ್ತಿನಲ್ಲಿ ತೋಟಕ್ಕೆ ಮಂಗಗಳು ಬರುತ್ತಿದ್ದವು. ನಾವು ಮೂವರು ಮದ್ದು ತುಂಬಿಸಿ ಕೋವಿ ಹಿಡಿದು ತೋಟಕ್ಕೆ ಹೋದೆವು. ಸೀಯಾಳ (ಎಳೆನೀರು) ತಿನ್ನುತ್ತಿದ್ದ ಮಂಗವೊಂದು ನಮ್ಮನ್ನು ಕಂಡು ಸನಿಹದ ಬೇರೊಂದು ಮರಕ್ಕೆ ಲಾಗ ಹಾಕಿತು. ಕೋವಿ ಎತ್ತಿ ಗುಂಡು ಹಾರಿಸಿದೆ. ಮಂಗ ನೇತಾಡಿ ಉರುಳಿಬಿತ್ತು. ಹೀಗೆ ನನ್ನ ಬೇಟೆಗೆ ನಾಂದಿಯಾಯಿತು' (ಪುಟ ೬) ಹೀಗೆ ಕೈಂತಜೆಯವರು ಚಿಕ್ಕಂದಿನಲ್ಲೇ ಬೇಟೆಯಾಡುವುದನ್ನು ಕಲಿತ ಬಗ್ಗೆ ತಿಳಿಸಿದ್ದಾಗ, ಮೊದಲ ಬಾರಿಗೆ ಮಂಗವನ್ನು ಬೇಟೆಯಾಡಿದ ಕೈಂತಜೆಯವರು ಮುಂದೆ ಹಂದಿಬೇಟೆಗೆ ಭಡ್ತಿ ಹೊಂದಿದರು. ಕೇಪಿನ ಕೋವಿಯಿಂದ ಲೇಖಕರು ತೋಟಾಕೋವಿಗೆ ಮುಂದಡಿಯಿಟ್ಟರು.

ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಲೇಖಕರು ನಡೆಸಿದ ಬೇಟೆಯ ಅನುಭವಗಳು ಮುಂದಿನ ಅಧ್ಯಾಯಗಳಲ್ಲಿ ಹರಡಿಕೊಂಡಿವೆ. ಮಲೆಗಳಲ್ಲಿ, ಏಲಕ್ಕಿ-ಅಡಿಕೆ-ಗೇರು ತೋಟಗಳಲ್ಲಿ ಒಡನಾಡಿ ಶಿಕಾರಿದಾರರೊಂದಿಗೆ ಕೈಂತಜೆಯವರು ಸೇರಿ ಕೂಡು ಬೇಟೆ, ಮರಸು ಬೇಟೆ, ಲೈಟು ಶಿಕಾರಿ ನಡೆಸಿದ ಬಗ್ಗೆ ವಿವರಣೆಯಿದೆ. ಬೇಟೆಯೊಂದಿಗೆ ಪ್ರಕೃತಿಗೆ ಸಂಬಂಧಿಸಿದ ಹಲವು ಮಾಹಿತಿ ಈ ಕೃತಿಯಲ್ಲಿ ಲಭ್ಯ. 'ಪರಿಸರದ ವನಸಿರಿ' ಎಂಬ ಅಧ್ಯಾಯದಲ್ಲಿ ಕೊಡಗಿನ ಮಲೆಗಳಲ್ಲಿ ಬೆಳೆಯುವ ಸಸ್ಯಸಂಪತ್ತು ಹಾಗೂ ವಿವಿಧ ಪ್ರಾಣಿಗಳ ಬಗ್ಗೆ ಅಪೂರ್ವವಾದ ಮಾಹಿತಿ ದೊರೆಯುತ್ತದೆ. ಪ್ರಕೃತಿಯ ಕೊಡುಗೆಯಾದ ವಿವಿಧ ಜಾತಿಯ ಬೆತ್ತಗಳು, ಪ್ರಾಣಿಗಳು ಅವು ಬೆಳೆಯುವ ನೆಲೆ, ಹರಿದಾಡುವ ಜಾಗ, ಅವುಗಳ ಮಹತ್ವವನ್ನು ಲೇಖಕರು ಕೂಲಂಕುಷವಾಗಿ ತಿಳಿಸಿದ್ದಾರೆ. ಮಲೆನಾಡಿನಲ್ಲಿ ಬೆಳೆಯುವ ಅಪಾಯಕಾರಿ ಸಸ್ಯಗಳ ಬಗ್ಗೆ ಇಲ್ಲೇ ಉಲ್ಲೇಖವಿದೆ. ಕೆಡ್ಡಾಸಬೇಟೆ, ಐತಿಹ್ಯಗಳು, ಪಳಮೆಗಳ ಮೂಲಕ ಜಾನಪದ ವಿವೇಚನೆಯ ನಿದರ್ಶನಗಳೂ ಈ ಕೃತಿಯಲ್ಲಿವೆ.

ಬೇಟೆಗೆ ಸಂಬಂಧಿಸಿದ, ಮುಖ್ಯವಾಗಿ ಹಂದಿಬೇಟೆಯಾಡುವಲ್ಲಿ ಅನುಸರಿಸುವ ವಿಧಿ-ವಿಧಾನಗಳ ಬಗ್ಗೆ ಬಹಳ ಮುಖ್ಯವಾದ ಮಾಹಿತಿಗಳು ಈ ಕೃತಿಯಿಂದ ದೊರೆಯುತ್ತವೆ.


ಪ್ರಾಣಿಬಾಧೆಯ ನಿವಾರಣೋಪಾಯವಾಗಿ ಅನುಸರಿಸಬಹುದಾದ ಹಲವಾರು ಜಾನಪದ ವಿಧಾನಗಳು, ಬೇಟೆಯ ಕೋವಿಗಳಿಗೆ ಬಳಸುವ ಮದ್ದುಗುಂಡುಗಳು, ಶಿಕಾರಿದಾರರು ಬೇಟೆಯಲ್ಲಿ ಅನುಸರಿಸಬೇಕಾದ ರೀತಿ-ನೀತಿಗಳ ಬಗ್ಗೆ ಕೈಂತಜೆಯವರು ಹೆಚ್ಚಿನ ಮಾಹಿತಿಯನ್ನು ನೀಡಿದ್ದಾರೆ.


*ಚಿತ್ರಗಳು :*



- ಉರುಳು

ಕರ್ಪು ತೋಡುವುದು





ಶಿಸ್ತುಬೇಟೆ (ಕೋವಿ ಎತ್ತಿ ಕಟ್ಟುವುದು) ಮಾನವನ ಸಹಾಯವಿಲ್ಲದೆ ಈ ತಂತ್ರದಲ್ಲಿ ಕೋವಿಯು ಸ್ವಯಂ ಚಾಲಿತವಾಗಿ ಈಡು ಹೊಡೆಯುತ್ತದೆ.

# ಬಯಲು ಸೀಮೆಯಲ್ಲಿ ಹಕ್ಕಿ ಬೇಟೆ

◆ ಎಂ. ಎಸ್. ಪ್ರಕಾಶ್

ಭಾರತದ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವ, ನಮ್ಮ ಶಿಲ್ಪಕಲೆಯಲ್ಲಿ ನೆಲೆ ನಿಂತಿರುವ ಗಂಡಬೇರುಂಡ, ನಾಟ್ಯಕಲೆಯನ್ನು ಪ್ರತಿಬಿಂಬಿಸುವ ನವಿಲು, ನ್ಯಾಯ ದೇವತೆಯಾಗಿ ಹಂಸ, "ಟುವ್ವಿ, ಟುವ್ವಿ ಎಂದು ಹಕ್ಕಿ ಹಾಡುತಿದೆ ನೋಡಿದಿರಾ" ಎಂದು ಹಕ್ಕಿಯ ನೀನಾದವನ್ನು ಮನೆಮನೆಗೂ ತಲುಪಿಸಿದ ಕವಿಯ ವಾಣಿ, ಒಂದೇ ಎರಡೇ, ಮನುಷ್ಯನ, ಮನುಕುಲದ ಸುತ್ತ ಮುತ್ತ ಹೆಣೆದುಕೊಂಡಿರುವ ಹಕ್ಕಿಪಕ್ಷಿಗಳು ಇಲ್ಲದ ಊರು ಕೇರಿಗಳಿಲ್ಲ, ನಾಡಿಲ್ಲ.

ನಮ್ಮೊಡನಿರುವ, ಹೊಲಗದ್ದೆಗಳ ಸುತ್ತಮುತ್ತ, ಬೆಟ್ಟಗುಡ್ಡಗಳಲ್ಲಿ ಕಾನನದ ಮಡಿಲಲ್ಲಿ, ನೀರ ತಡಿಯಲ್ಲಿ, ಗಿಡ ಮರಗಳಲ್ಲಿ ನೆಲೆನಿಂತು ಜೀವನ ಸಾಗಿಸುತ್ತಿರುವ ಹಕ್ಕಿ ಪಕ್ಷಿಗಳು ಯಾವುವೆಂದು ನೋಡೋಣ. ಗಿಳಿ, ಪಾರಿವಾಳ, ಕಾಡುಕೋಳಿ, ಚಿಟಗೋಳಿ, ಮಿಂಚುಳ್ಳಿ, ಮೈನಾಹಕ್ಕಿ, ಗೀಜುಗು/ಗೀಜಗ, ಗೊರವಂಕ, ಬೆಳ್ಳಕ್ಕಿ, ಮರಕುಟುಕ, ನೆಲಕುಟುಕ, ಕೊಕ್ಕರೆ-ಕಂಚುಗಾರ ಕೊಕ್ಕರೆ, ಗುಮ್ಮೊಡಲ, ಗುಂಗುಟಿಕ, ಗುಳುಮುಳುಕ, ನವಿಲು, ಕೋಗಿಲೆ, ಕೆಂಬೂತ, ಕಾಗೆ, ಹಂಸ, ಬಾತು, ಬಾವಲಿ/ - ಹಿರೇಹಕ್ಕಿ/ಈರೇಹಕ್ಕಿ/ತೊಲಗನಹಕ್ಕಿ; ಕಪಟ, ಗೌಜಗಲು, ನೀರಹಕ್ಕಿಗಳು-ನೀರುಕಾಗೆ, ಮಡಿವಾಳ ಹಕ್ಕಿ, ಸಿಳ್ಳಾರ ಹಕ್ಕಿ ಮುಂತಾದವು. ಹೆಸರು ಹೇಳಲು ಬಾರದ ಹತ್ತಾರು ಹಕ್ಕಿಗಳು ಹಾರಾಡುತ್ತಿರುತ್ತವೆ.

ಬಯಲು ಪ್ರದೇಶದಲ್ಲಿ ಎರಡು ತರಹದ ಹಕ್ಕಿಬೇಟೆಯನ್ನು ಕಾಣಬಹುದು. ಮೊದಲನೆಯದು ಕಾಡುಗಳಿಲ್ಲದ ಬಯಲು ಪ್ರದೇಶದ ಬೇಟೆ. ಇಲ್ಲಿ ದೊಡ್ಡ ಚಿಕ್ಕ ಹಕ್ಕಿಗಳೆನ್ನದೆ, ಕಂಡ, ಕೈಗೆ ಸಿಕ್ಕಿದ ಎಲ್ಲ ಹಕ್ಕಿಗಳನ್ನು ಬೇಟೆಯಾಡುತ್ತಾರೆ. ಆದರೆ ಬಂಡೀಪುರ, ನಾಗರಹೊಳೆ, ಬಿಳಿಗಿರಿರಂಗನಬೆಟ್ಟ, ಹುಣಸೂರಿನ ಸುತ್ತಮುತ್ತಲಿರುವ ಕಾಡು ಪ್ರದೇಶಗಳಲ್ಲಿ ಕಾಡುಕೋಳಿ, ಚಿಟ್ಟುಗೋಳಿ, ನವಿಲು ಮುಂತಾದ ಮಾಂಸವುಳ್ಳ ಹಕ್ಕಿಗಳನ್ನು ಮಾತ್ರ ಬೇಟೆಯಾಡುತ್ತಾರೆ. ಈ ಪ್ರದೇಶಗಳಲ್ಲಿ ಮಾಂಸಕ್ಕೆ ಪ್ರಧಾನ್ಯತೆ ಇರುವುದರಿಂದ, ಅಂದರೆ ಮಾಂಸ ಹೆಚ್ಚಿರುವ ಪ್ರಾಣಿ ಪಕ್ಷಿಗಳು ಲಭ್ಯವಿರುವುದರಿಂದ, ಸಣ್ಣ ಪುಟ್ಟ ಹಕ್ಕಿಗಳನ್ನು ಬೇಟೆಯಾಡಲು ಇಚ್ಛಿಸುವುದಿಲ್ಲ.

ಪ್ರಾಣಿ ಬೇಟೆಗೆ ಬೇಕಾದಂತಹ ಬರ್ಜಿ, ಈಟಿ, ಕೊಡಲಿ ಮುಂತಾದ ಆಯುಧಗಳು

ಹಕ್ಕಿಬೇಟೆಗೆ ಬೇಕಾಗಿಲ್ಲ, ಯಾವುದೇ ಅಪಾಯವನ್ನು ಎದುರಿಸಬೇಕಾದ ಪ್ರಸಂಗವಿಲ್ಲ. ಅಪಾಯ ಬರುವುದು ಅಪರೂಪ ಅಂದ ಮೇಲೆ ನಿರ್ಭಯವಾಗಿ ಬೇಟೆಯಾಡಬಹುದು. ಆದರೂ ಅವುಗಳನ್ನು ಹಿಡಿಯಲು, ಮಣಿಸಲು ಸಾಧನಗಳು, ಉಪಾಯ ಬೇಕೇಬೇಕು. ಬಲೆ, ಕೋವಿ, ಉರುಳು-ಉಳ್ಳು, ಕ್ಯಾಟರಿಬಿಲ್ಲು ಮೋಟು ದೊಣ್ಣೆ (ಸುಮಾರು ಒಂದು-ಒಂದೂವರೆ-ಎರಡು ಅಡಿ ಉದ್ದದ ಕೋಲು) ಕಲ್ಲು, ಕುಡಗೋಲು ಅಥವಾ ಮಚ್ಚು. ಇಷ್ಟಿದ್ದರೆ ಸಾಕು. ಬ್ಯಾಟರಿಯ ಅವಶ್ಯಕತೆಯೂ ಇದೆ.

**ಕಾಡುಕೋಳಿಯ ಬೇಟೆ :**

ಬಯಲು ಸೀಮೆಯ ಎಲ್ಲ ಕಡೆ ಕಾಡುಕೋಳಿಗಳು ಕಂಡುಬರುತ್ತವೆ. ಆದರೆ ಬಿಳಿಗಿರಿ ರಂಗನಬೆಟ್ಟ ಹುಣಸೂರು ಸುತ್ತಮುತ್ತಲಿನ ಕಾಡು ಬಂಡೀಪುರ ಮುಂತಾದ ಕಾಡು ಪ್ರದೇಶದಲ್ಲಿ ಹೆಚ್ಚು ಕಂಡುಬರುತ್ತವೆ. ಅಂತೆಯೇ ಚಿಟ್ಟುಗ್ಗೋಳಿಗಳೂ ಸಹ ಕಾಡಿನಲ್ಲಿ ಹೆಚ್ಚು ಕಂಡುಬರುತ್ತವೆ. ಕಾಡುಕೋಳಿಗಳು ಊರ ಕೋಳಿಗಳನ್ನೇ ಹೋಲುತ್ತವೆ. ಗಂಡು ಕೋಳಿಯಾದ ಹುಂಜ ವರ್ಣಮಯವಾಗಿರುತ್ತದೆ. ಕೊಕ್ಕಿನ ಮೇಲೆ ಕಿರೀಟದಂತೆ ಕೆಂಪು ಬಣ್ಣದ ಬಾಸಿಂಗವಿರುತ್ತದೆ. ಹೆಣ್ಣು ಕೋಳಿಗಳನ್ನು ಹೆಂಟೆ ಎಂದು ಕರೆಯುತ್ತಾರೆ. ಇವು ಗಾತ್ರದಲ್ಲಿ ಸ್ವಲ್ಪ ಚಿಕ್ಕದಾಗಿದ್ದು, ಬೂದು ಬಣ್ಣದ್ದಾಗಿರುತ್ತವೆ. ಕಾಡುಕೋಳಿಗಳು ಹಾರುವುದು ಕಡಿಮೆ. ಶತ್ರುಗಳು ಕಂಡಾಗ ಮಾತ್ರ ಹಾರಿ ಮರದ ಮೇಲೆ ಕುಳಿತುಕೊಳ್ಳುತ್ತವೆ. ಇಲ್ಲವೆ ಓಡಿ ಪೊದೆ, ಮೆಳೆಗಳ ಮರೆಯಲ್ಲಿ ಮರೆಯಾಗುತ್ತವೆ.  ಹುಂಜ ಗೂಡು ಕಟ್ಟುವುದಾಗಲಿ, ಮೊಟ್ಟೆಗೆ ಕಾವು ಕೊಡುವುದಾಗಲಿ ಮಾಡುವುದಿಲ್ಲ. ಹೆಂಟೆ ಮಾತ್ರ ಮೊಟ್ಟೆಯಿಟ್ಟು, ಕಾವು ಕೊಟ್ಟು ಮರಿಮಾಡಿ, ಮರಿಗಳನ್ನು ಪೋಷಿಸುತ್ತದೆ.

ಚಿಟಗೋಳಿ/ಚಿಟ್ಟೆಗೋಳಿಯಲ್ಲಿ ಹುಂಜ ಮತ್ತು ಹೆಂಟೆಗಳಲ್ಲಿ ಅಂತಹ ವ್ಯತ್ಯಾಸ ಕಂಡುಬರುವುದಿಲ್ಲ. ಬೂದು ಬಣ್ಣದ ಇವು ಎರಡೂ ಒಂದೇ ತರಹ, ಒಂದೇ ಗಾತ್ರ ಇರುತ್ತವೆ. ನಿಗಾ ಇಟ್ಟು ನೋಡಿದಾಗ ಮಾತ್ರ ಗಂಡು ಕೋಳಿಯಲ್ಲಿ ಒಂದೆರಡು ಕೆಂಪು ಮಿಶ್ರಿತ ಕಂದು ಪುಕ್ಕಗಳಿರುವುದು ಕಂಡುಬರುತ್ತದೆ. ಕಾಡುಕೋಳಿಗಳಿಗಿಂತ ಇವು ಬಹು ಚುರುಕಾಗಿರುತ್ತವೆ. ಗಾತ್ರದಲ್ಲಿ ಸ್ವಲ್ಪ ಚಿಕ್ಕವು.

ಕಾಡು ಪ್ರದೇಶಗಳಲ್ಲಿ ಬಲೆಬೀಸಿ, ಉರುಳು-ಉಳ್ಳ ಒಡ್ಡಿ ಬೇಟೆಯಾಡುತ್ತಾರೆ. ಕಾಡುಕೋಳಿಗಳು/ಚಿಟ್ಟೆಗೋಳಿಗಳು ಓಡಾಡುವ ಜಾಗವನ್ನು ಗುರುತಿಸಿಕೊಂಡು, ಬಲೆಯನ್ನು ಒಡ್ಡುತ್ತಾರೆ. ಬಲೆಯನ್ನು ಕೋಲುಗಳ ಸಹಾಯದಿಂದ ನಿಲ್ಲಿಸಿರುತ್ತಾರೆ. ಅವು ಬಲೆಯ ಸಮೀಪದಲ್ಲಿ ಓಡಾಡುವಾಗ, ಗಾಬರಿಗೊಳ್ಳುವಂತೆ ಮಾಡುತ್ತಾರೆ. ಗಾಬರಿಗೊಂಡ ಹಕ್ಕಿಗಳು ತಪ್ಪಿಸಿಕೊಳ್ಳಲು ಓಡಿ ಬಲೆಯಲ್ಲಿ ಬೀಳುತ್ತವೆ.

ಉರುಳು ಹಾಕಿ ಹಿಡಿಯುವುದು ಮತ್ತೊಂದು ವಿಧಾನ. ಹಕ್ಕಿಗಳು ಓಡಾಡುವ ಜಾಗದಲ್ಲಿ ಗೂಟಗಳನ್ನು ಹೊಡೆದು, ಅದಕ್ಕೆ ೧೫-೨೦ ಅಡಿ ಉದ್ದದ ಗಟ್ಟಿಯಾದ ದಾರವನ್ನು ಕಟ್ಟಿ,

ದಾರದ ಮತ್ತೊಂದು ತುದಿಯನ್ನು ಗಿಡಕ್ಕೆ ಕಟ್ಟಿ, ಮದ್ಯದಲ್ಲಿ ಸರಳ ಕುಣಿಕೆಯನ್ನು ಹಾಕಿರುತ್ತಾರೆ (ಉರುಳು). ಇದರ ಮೇಲೆ ಒಂದು ಕಡ್ಡಿಯನ್ನು ಇಟ್ಟಿರುತ್ತಾರೆ. ಹಕ್ಕಿಯು ಆಹಾರ ಅನ್ವೇಶಿಸುತ್ತಾ / ಹುಡುಕುತ್ತಾ, ಇರುವಾಗ, ಈ ಕಡ್ಡಿಗಳ ಮೇಲೆ ಕಾಲಿಡುತ್ತವೆ. ಕೂಡಲೆ ಕಡ್ಡಿ ಸರಿದು, ಕಾಲು ಉರಳಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಉರುಳ ಮೇಲೆ ಕಾಲಿಟ್ಟ ಕೂಡಲೆ ಬಿಗಿಯಾಗುವಂತೆ ಉರುಳು ಹಾಕುವುದು ಬಹುಮುಖ್ಯ ಇಲ್ಲದಿದ್ದಲ್ಲಿ, ಉರುಳಿಗೆ ಕಾಲು ಸಿಕ್ಕಿಕೊಳ್ಳದೆ ಉದ್ದೇಶ ಫಲಿಸದು.

ಹಕ್ಕಿಗಳು ಹೆಚ್ಚಿರುವ ಕಾಡು ಪ್ರದೇಶಗಳಲ್ಲಿ ಈ ವಿಧಾನಗಳು ಬಳಕೆಗೆ ಬರುತ್ತವೆ. ಆದರೆ, ಕಾಡುಗಳನ್ನು ಹೊರತುಪಡಿಸಿದ ಬಯಲಿನಲ್ಲಿ ಇದಾವ ವಿಧಾನವೂ ಪ್ರಯೋಜನಕ್ಕೆ ಬಾರದು. ಬಯಲು ಪ್ರದೇಶಗಳಲ್ಲಿ ಇವುಗಳು ಕಡಿಮೆ. ಅಂದಮೇಲೆ ಓಡಾಟವೂ ಕಡಿಮೆ. ಇಂತಹ ಸಂದರ್ಭದಲ್ಲಿ ಕಂಡುಬರುವ ಹಕ್ಕಿಗಳನ್ನು ಕಲ್ಲಿನಿಂದ, ವೊಟುದೊಣ್ಣೆಯಿಂದ ಹೊಡೆದು ಉರಿಸುತ್ತಾರೆ. ಈ ಹಿಂದೆಯೇ ಹೇಳಿದಂತೆ ಈ ಹಕ್ಕಿಗಳು ಹೆಚ್ಚು ಹಾರಲಾರವು, ಓಡಬಹುದಷ್ಟೆ. ಹಾರಿದರೂ ಮರದ ಮೇಲೆ ಕುಳಿತುಕೊಳ್ಳುತ್ತವೆ. ಬಿದಿರುಮೆಳೆ ಸಿಕ್ಕಿದರೆ ಅಲ್ಲಿ ಕೂರುವುದು ಜಾಸ್ತಿ. ಅವು ಹೇಗೆ ಎಲ್ಲಿ ಕುಳಿತರೂ ಕಲ್ಲು ಕ್ಯಾಟರಿಬಿಲ್ಲುಗಳಿಂದ ಹೊಡೆದು ಕೆಳಗಿಳಿಯುಂತೆ ಅಥವಾ ಅಲ್ಲಿಯೇ ಪೆಟ್ಟುಬಿದ್ದು ಕೆಳಗುರುವಂತೆ ಮಾಡುತ್ತಾರೆ. ಓಡಿದರೂ ಗಿಡಮಳೆ ಪೊದರು ಗಿಡಗಳ ಅಡಿಯಲ್ಲಿ ಕೂರಬಹುದು. ಬಯಲಿನಲ್ಲಿ ಎಲ್ಲೆಂದರಲ್ಲಿ ಇಂತಹ ತಾಣಗಳು ಸಿಗುವುದು ಕಡಿಮೆ. ಆದ್ದರಿಂದ ಓಡಾಡಿಸಿ, ಗುರಿಯಿಟ್ಟ ಹೊಡೆದು ಹಿಡಿಯುತ್ತಾರೆ. ಸಾಕು ನಾಯಿಗಳು ಸಹ ಅವುಗಳ ಓಟ ತಡೆಗಟ್ಟಲು ಹಿಡಿಯಲು ಒಡೆಯನಿಗೆ ಸಹಕರಿಸುತ್ತವೆ.

**ಕೆಂಬೂತ : (couclas)**

ಕೆಂಬೂತ, ಕೋಗಿಲೆ, ಕಾಗೆ ಈ ಮೂರು ಹಕ್ಕಿಗಳು ಸರಿಸುಮಾರು ಒಂದೇ ಗಾತ್ರದವು ಒಂದೇ ಆಕಾರದವು. ಆದರೆ ಪುಕ್ಕದ ಬಣ್ಣ ಮಾತ್ರ ಭಿನ್ನವಾಗಿರುತ್ತದೆ. ಕೆಂಬೂತ ಕಾಗೆಯಷ್ಟೆ, ದೇಹ ಕಪ್ಪಾಗಿದ್ದರೂ, ಪುಕ್ಕ ಮಾಸಲು ಕೆಂಪು ಬಣ್ಣಕ್ಕಿರುತ್ತದೆ. ಉದರ ಭಾಗವೆಲ್ಲ ಕಪ್ಪು. ಕಾಡುಗಳಲ್ಲಿ ಇವು ಹೆಚ್ಚಿವೆ. ಬಿಳಿಗಿರಿ ರಂಗನಬೆಟ್ಟದಲ್ಲಿ ಸ್ವಲ್ಪ ದಪ್ಪಗಿರುವ ಕೆಂಬೂತಗಳು ಕಂಡುಬರುತ್ತವೆ. ಹುಣಸೂರು ಬಳಿಯಿಂದ ಕಳ್ಳಬೆಟ್ಟ ಹಾಗೂ ಸುತ್ತಮುತ್ತಲಿನ ಕಾಡುಗಳಲ್ಲಿ ಕೆಂಬೂತ ಹೆಚ್ಚಿವೆ. ಗಾತ್ರದಲ್ಲಿ ಸ್ವಲ್ಪ ಕಡಿಮೆ ಅಥವಾ ದಪ್ಪದಾಗುವ ಮುನ್ನವೇ ಬೇಟೆಗೆ ತುತ್ತಾಗಬಹುದು. ಬಯಲಿನ ಪ್ರದೇಶದಲ್ಲಿ ಕಂಡುಬರುವುದು ಅಪರೂಪ.

ಕುರಚಲ ಗಿಡಗಳ ನಡುವೆ ಹುಳ ಹುಪ್ಪಟೆ, ಮಿಡತೆ, ಇಲಿ ಓತಿಕ್ಯಾತ ಮುಂತಾದವು ಗಳನ್ನು ಹಿಡಿದು ತಿನ್ನುತ್ತದೆ. ಅಲ್ಲದೆ ಹಕ್ಕಿಗೂಡುಗಳನ್ನು ಹುಡುಕಿ, ಮೊಟ್ಟೆ ಮರಿಗಳನ್ನು ಭಕ್ಷಿಸುತ್ತುದೆ. ಇದೊಂದು ಹಕ್ಕಿಯ ಕುಲಕ್ಕೆ ಆತಂಕಕಾರಿ ಹಕ್ಕಿ "ಕೊಡಲಿಯ ಕಾವೇ ಮರಕ್ಕೆ ಮೃತ್ಯುವೆಂಬಂತೆ", ಹಕ್ಕಿಯ ಮೊಟ್ಟೆ ಮರಿಗಳನ್ನು ತಿಂದು, ಹಕ್ಕಿಯ ಕುಲವನ್ನು ಹಾಳು ಮಾಡುವ ಅನಿಷ್ಟಕಾರಿಯಾಗಿದೆ.

ಬೇಟೆಯಾಡುವಾಗ ತನ್ನ ಶತ್ರುಗಳನ್ನು ಎದುರಿಸಲು ಗರಿಬಿಚ್ಚಿ (ಅಷ್ಟೇನು ಉದ್ದವಲ್ಲದ ಗಿಡ್ಡದ ಗರಿ) ಕೊರ್ರ್ ಕೊರ್ರ್ ಎಂದು ಕೂಗುತ್ತಾ ಶಬ್ಧ ಮಾಡುತ್ತದೆ. ಇದು ಗರಿಗೆದರಿ

ಕುಣಿಯಲಾರದು. ಕೆಂಬೂತ ಕುಣಿಯುವ ಬಗ್ಗೆ ಒಂದು ಗಾದೆ ಮಾತಿದೆ. "ನವಿಲು ಕುಣಿಯುವುದು ನೋಡಿ ಕೆಂಬೂತ ಪುಕ್ಕ ಕೆದರಿಕೊಂಡಂತೆ" ಎಂದು. ಇದನ್ನು ಕೆಲವು ಕಡೆ "ನವಿಲು ಕುಣಿಯುವುದು ನೋಡಿ ಕೆಂಬೂತ ಪುಕ್ಕ ಕಿತ್ತುಕೊಂಡಂತೆ" ಎಂದೂ ಹೇಳುತ್ತಾರೆ. ನವಿಲು ಕುಣಿಯುವ, ನರ್ತಿಸುವ ಸೊಬಗನ್ನು ಕಂಡ ಕೆಂಬೂತವು, ತನಗೂ ಅಂತಹ ಗರಿಗಳು ಹುಟ್ಟುತ್ತವೆ ಎಂದು ಇದ್ದ ಪುಕ್ಕಗಳನ್ನು ಕಿತ್ತುಕೊಂಡಿತಂತೆ ಎಂದು ಜನರ ಸ್ವಭಾವಕ್ಕೆ ಹೋಲಿಸಿ ಹೇಳುವುದು ಮಾಗಡಿಯ ಸುತ್ತಮುತ್ತ ಪ್ರಚಲಿತದಲ್ಲಿದೆ.

ಕೆಂಬೂತ ಹೆಚ್ಚು ಹಾರಲಾರದು. ಓಡಾಟವೆ ಜಾಸ್ತಿ. ಅಪಾಯ ಕಂಡಾಗ ಹಾರಿ ಮರದ ಮೇಲೆ ಕೂರುತ್ತದೆ. ಆದರೆ, ಇಂತಹ ಸಂದರ್ಭಗಳಲ್ಲಿ ಓಡಿ ಗಿಡಿ, ಪೊದರು, ಮೆಳೆಗಳ ಅಡಿಯಲ್ಲಿ ಅವಿತುಕೂರುವುದು ಹೆಚ್ಚು. ಮಧ್ಯಾಹ್ನದ ಉರಿಬಿಸಿಲಿನಲ್ಲಿ ಇದರ ಕಣ್ಣು, ಬಿಸಿಲಿನ ಜಳಕ್ಕೆ ಕೆಂಪಾಗುತ್ತದೆ. ಕೆಂಪಾದ ಕಣ್ಣುಮಂಜಾಗಿ ಸರಿಯಾಗಿ ಕಾಣುವುದಿಲ್ಲ. ಆದ್ದರಿಂದ ಬೇಟೆಯಾಡಲು ಈ ಸಮಯವನ್ನು ಬೇಟೆಗಾರ ಬಳಸಿಕೊಳ್ಳುತ್ತಾನೆ. ಮಂಜಾದ ಕಣ್ಣನ್ನು ಮಿಟುಕಿಸುತ್ತಾ, ಕುಳಿತಲ್ಲೇ ಕುಳಿತಿರುತ್ತದೆ. ಇದರ ಇರುವನ್ನು ಗುರುತಿಸಿಕೊಂಡ ಬೇಟೆಗಾರ ಕಲ್ಲು, ಕ್ಯಾಟರಿಬಿಲ್ಲು, ದೊಣ್ಣೆ ಯಾವುದಾದರೊಂದರಿಂದ ಹೊಡೆದು ಹಿಡಿಯುತ್ತಾನೆ. ಗುರಿ ತಪ್ಪಿದರೂ ತಾನು ಕುಳಿತ ಸ್ಥಳದಿಂದ ಅತ್ತ ಇತ್ತ ಓಡಾಡಿ ಹತ್ತಿರದಲ್ಲೆ ಕೂರುತ್ತದೆ. ಮತ್ತೆ ತನ್ನ ಗುರಿಯನ್ನು ಹಿಡಿದ ಬೇಟೆಗಾರ ಈ ಬಾರಿ ಗುರಿ ತಪ್ಪದಂತೆ ಹೊಡೆದು ಹಿಡಿಯುತ್ತಾನೆ. ಕಾಡಿನ ಸಮೀಪದಲ್ಲಿ, ಕಾರಿನಲ್ಲಿ ವಾಸಿಸುವವರು ಕೆಂಬೂತದ ಬೇಟೆಯಾಡುತ್ತಾರೆ.

**ಕೋಗಿಲೆ (Koel) :**

ಕೋಗಿಲೆಯ ಕಂಠಸಿರಿಗೆ ಮಾರುಹೋಗದವರಿಲ್ಲ. ಚೈತ್ರಮಾಸದ ಮಾಮರದ ಚಿಗುರಿನ ನಡುವೆ ಉರಿಯುವ ಕಂಠ ಮಾದುರ್ಯಕ್ಕೆ ತಲೆದೂಗದವರಿಲ್ಲ ".....ಮರಿದುಂಬಿ ಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದೇ ನಂದನ ದೋಳ್ ಬನವಾಸಿ ದೇಶದೋಳ್" ಎಂಬ ಕವಿ ವಾಣಿಯನ್ನು ನೋಡಿದಾಗ ಕೋಗಿಲೆಗೆ ಎಂಥ ಎಂತಹ ಸ್ಥಾನವಿದೆ ಎಂದು ತಿಳಿದುಬರುತ್ತದೆ.

ಕೋಗಿಲೆ ಕಾಗೆ ಬಳಗಕ್ಕೆ ಸೇರಿದ ಹಕ್ಕಿ. ಕುಕ್ಕು ಜಾತಿಯ ದ್ವಿತೀಯ ಹಕ್ಕಿ. ಕಾಗೆಯಂತೆ ಮೈ ಕಪ್ಪಾಗಿದ್ದರೂ, ಕಂದುಬಣ್ಣದ ಹೊಳಪುಳ್ಳ ಪುಕ್ಕಗಳಿರುತ್ತವೆ. ಉದರಭಾಗ, ಕೊರಳಿನ ಭಾಗ ಕಪ್ಪಾಗಿದ್ದರೂ, ಪುಕ್ಕ ಕಂದುಬಣ್ಣ ಮಿಶ್ರಿತ ಕೆಂಪು ಬಣ್ಣದಿಂದ ಕೂಡಿರುತ್ತದೆ. ಕೊಕ್ಕು ಕಾಗೆಯ ಕೊಕ್ಕನ್ನೇ ಹೋಲುತ್ತದೆ.

ಕೋಗಿಲೆ ಪರತಂತ್ರ ಜೀವಿ, ಇದರ ಬಳಗಕ್ಕೆ-ಜಾತಿಗೆ ಸೇರಿದ ಯಾವ ಹಕ್ಕಿಗಳೂ ಪರತಂತ್ರ ಜೀವಿಗಳಲ್ಲಿ ಕೋಗಿಲೆ ಕಂಠಸಿರಿಗೆ ಪ್ರಖ್ಯಾತಿಯಾಗಿರುವಷ್ಟೆ ಕುಖ್ಯಾತಿಗೂ ಹೆಸರಾಗಿದೆ. ಪ್ರಾಚೀನ ಕವಿಗಳು ಇದನ್ನು ಪರಪುಟ್ಟನೆಂದು ಕರೆದಿರುವುದು ಸಹಜವಾಗಿದೆ.

ಕೋಗಿಲೆ ಮರಿ ಮಾಡುವುದನ್ನು ತಿಳಿಯದವರೆ ಇಲ್ಲವೆನ್ನಬಹುದು. ಪರತಂತ್ರ ಜೀವಿಯಾದ

ಇದು, ಕಾಗೆ ಗೂಡಿನಲ್ಲಿ ಮೊಟ್ಟೆ ಇಡುತ್ತದೆ. ಮೊಟ್ಟೆಯಿಡುವ ಸಂದರ್ಭದಲ್ಲಿ, ಕಾಗೆ ಗೂಡುಗಳನ್ನು ಗುರುತಿಸುತ್ತದೆ. ಕಾಗೆ ಮೊಟ್ಟೆ ಇಟ್ಟು ಕಾವು ಕೊಡುತ್ತಿರುವುದನ್ನು ಗುರುತಿಸಿಕೊಂಡು, ಗಂಡು ಕೋಗಿಲೆಯು, ಅಲ್ಲಿ ಅಡ್ಡಾಡುತ್ತದೆ, ಕೋಗಿಲೆಯ ಬಗ್ಗೆ ವೈರತ್ವವಿರುವ ಕಾಗೆಗಳು, ಕೋಗಿಲೆಯನ್ನು ಕಂಡಕೊಡಲೆ ಒಟ್ಟಗೂಡಿ ಅಟ್ಟಿಸಿಕೊಂಡು ಹೋಗುತ್ತವೆ. ಕೋಗಿಲೆ ಅವುಗಳಿಗೆ ಸಿಕ್ಕದೆ ಅವುಗಳಿಂದ ದೂರವೂ ಸರಯದೇ ಆಟವಾಡಿಸುತ್ತಾ ಸಮಯದೂಡುತ್ತದೆ. ಕೋಗಿಲೆ ದೂರ ಹೋಗದ್ದನ್ನು ಕಂಡ ಕಾಗೆ ಓಡಿಸಲು ಪ್ರಯತ್ನಿಸುತ್ತಲೇ ಇರುತ್ತವೆ. ಈ ಸಮಯವನ್ನು ವ್ಯರ್ಥ ಮಾಡಿಕೊಳ್ಳದೆ ಹೆಣ್ಣು ಕೋಗಿಲೆಯು, ನಿರಾತಂಕವಾಗಿ ಕಾಗೆ ಮೊಟ್ಟೆಗಳ ಜೊತೆ ತನ್ನ ಮೊಟ್ಟೆಯಿಡುತ್ತದೆ. ಮೊಟ್ಟೆಯಿಡುವ ಮೊದಲು ಕಾಗೆಯ ಒಂದು ಮೊಟ್ಟೆಯನ್ನು ತಿಂದು ಅಥವಾ ಕೆಳಗೆ ಬೀಳಿಸಿ ತನ್ನ ಮೊಟ್ಟೆಯಿಡುತ್ತದೆ. ಇದರಿಂದ ಮೊಟ್ಟೆಗಳ ಸಂಖ್ಯೆ ಸಮವಾಗಿರುತ್ತದೆ, ತನ್ನ ಮೊಟ್ಟೆಗೆ ಯಾವುದೇ ತೊಂದರೆಯಿರುವುದಿಲ್ಲವೆಂದು ಕೋಗಿಲೆಯ ಇಂಗಿತ. ಆದರೆ ಕಾಗೆಗೆ ಮೊಟ್ಟೆ ಎಷ್ಟಿವೆ ಎಂದು ಎಣಿಸಲು ಬರುವುದಿಲ್ಲ ಎಂದು ತಿಳಿದು ಬಂದಿದೆ. ಅಂತೂ ಹೇಗೂ ಕಾಗೆ ಮೊಟ್ಟೆಗಳ ಜೊತೆ ತನ್ನ ಮೊಟ್ಟೆಯನ್ನಿಟ್ಟು ತನ್ನ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತದೆ.

ಕಾಗೆಯು ಕೋಗಿಲೆ ಮೊಟ್ಟೆಗೆ ಕಾವು ಕೊಟ್ಟ ಮರಿ ಮಾಡುವುದು ಗೊತ್ತಿದ್ದರೂ, ನೀಚಬುದ್ಧಿಯ ಕೋಗಿಲೆ ಮಾತ್ರ ಕಾಗೆಯ ಮೊಟ್ಟೆಯನ್ನು ಹಾಳುಮಾಡುತ್ತದೆ. ಪ್ರಕೃತಿಯ ವೈಚಿತ್ರವೇ ಹಾಗೇ ಅಲ್ಲವೆ?

ಕೋಗಿಲೆಯ ವಂಚನೆ ಅರಿಯಗ ಕಾಗೆ, ಅದರ ಮೊಟ್ಟೆಗೂ ಕಾವು ಕೊಟ್ಟು ಮರಿ ಮಾಡುತ್ತದೆ. ಆಗಲೂ ಪರಹಕ್ಕಿಯೆಂದು ಪರಿಗಣಿಸದೆ ಅಥವಾ ಅರಿವಾಗದೆ ಮರಿಯನ್ನು ಪೋಷಿಸುತ್ತದೆ. ತಾಯಿ ಮಮತೆಯಿಂದ ವಂಚಿತವಾದ ಮರಿ, ಪರಾಶ್ರಯದಲ್ಲಿ, ರೆಕ್ಕೆ ಬಲಿಯುವವರೆಗೂ ಹೇಗೊ ಕಾಲದೂಡತ್ತದೆ. ತನ್ನೊಡನಿರುವ ಹಕ್ಕಿಗಳಂತೆ ಧ್ವನಿಯೆತ್ತಿ ಕೂಗಲಾರದು, ಚಿಲಿಪಲಿಗಯ್ಯಲಾರದು. ಎಲ್ಲ ಮರಿಗಳಂತೆ ತಾನು ಉಲಿಯಲು ಸ್ವಾತಂತ್ರ್ಯವಿರುವುದಿಲ್ಲ. ಮೈಮರೆತು ಸಂತೋಷದಲ್ಲಿ 'ಕುಹು ಕುಹು' ಎಂದರೆ, ಕಾಗೆಯ ಕೊಕ್ಕಿನ ಪ್ರಹಾರ ತಪ್ಪುವುದಿಲ್ಲ. ಅಲ್ಲಿ ಉಳಿಯಲೂ ಸಾಧ್ಯವಾಗುವುದಿಲ್ಲ. ತಾನು ಹಾರಾಡಬಲ್ಲನೆಂದು ಖಾತರಿಯಾಗುವವರೆಗೆ ಸುಮ್ಮನಿದ್ದು, ನಂತರ ಗೂಡಿನಿಂದ ಹಾರಿ, ತನ್ನ ಜೀವನ ಕ್ರಮವನ್ನು ರೂಪಿಸಿಕೊಳ್ಳುತ್ತದೆ.

ಕೆಲವೊಮ್ಮೆ ಕೋಗಿಲೆಗಳು ಕಾಗೆಯನ್ನು ಓಡಿಸಿ, ಅದರ ಗೂಡಿನಲ್ಲಿ ಮೊಟ್ಟೆಯಿಡಲು ಸಾಧ್ಯವಾಗದಿದ್ದರೆ, ಮೊಟ್ಟೆಯಿಡುವ ಸಮಯ ಮೀರಿದಾಗ, ಬೇರೆ ದಾರಿ ಕಾಣದೆ, ಎಲ್ಲಿ ಯಾವ ಗೂಡಿದೆ, ಯಾವ ಹಕ್ಕಿಯದು ಎಂದು ಏನೂ ಆಲೋಚಿಸದೆ, ಸಿಕ್ಕ ಗೂಡಿನಲ್ಲಿ ತನ್ನ ಮೊಟ್ಟೆಯಿಟ್ಟು ತನ್ನ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತದೆ. ಆ ಹಕ್ಕಿಗಳು ಮರಿಮಾಡುವ ವಿಧಾನ ಸರಿ ಹೊಂದುವುದು ಕಷ್ಟ. ಒಂದು ವೇಳೆ ಮರಿಯಾದರೂ ಆ ಹಕ್ಕಿಗಳ ಆಹಾರ ಕ್ರಮ ಸೂಕ್ತವಾಗದೆ ಸಾವಪ್ಪುತ್ತವೆ. ಆದರೂ ಕೋಗಿಲೆಯ ವಂಶಾಭಿವೃದ್ಧಿ ಕ್ಷೀಣಿಸದೇ ಹೇಗೆ ಸಾಗುತ್ತಿದೆ ಎಂದು ಆಶ್ಚರ್ಯಕರವಲ್ಲವೇ?

ಇವುಗಳ ಬೇಟೆ ಕಾಡು ಬೆಟ್ಟ ಪ್ರದೇಶಗಳಲ್ಲಿ ಅಪರೂಪ. ಬಯಲು ಪ್ರದೇಶಗಳಲ್ಲಿ, ಹಕ್ಕಿಪಿಕ್ಕರು, ಅಲೆಮಾರಿಗಳು ಕೋಗಿಲೆಯನ್ನು ಹಿಡಿಯುತ್ತಾರೆ. ಕಾಡುಗಳಲ್ಲಿ ಬಹಳ ಕಡಿಮೆ ಇರುವ ಕೋಗಿಲೆಗಳಿಗಿಂತ, ಬಯಲುಸೀಮೆಯ ಕೋಗಿಲೆಗಳು ದಷ್ಟಪುಷ್ಟ ವಾಗಿರುತ್ತವೆ. ಅಲೆಮಾರಿಗಳು, ಹಕ್ಕಿಪಿಕ್ಕರು ತಾವು ಉಳಿದುಕೊಂಡ ಕಡೆ ಕಂಡುಬರುವ ಹಕ್ಕಿಗಳನ್ನು ಬೇಟೆಯಾಡುವುದು ಅವರ ಸ್ವಭಾವ. ಅಂತೆಯೇ ಕೋಗಿಲೆಯ ಸ್ವಭಾವವೆಂದರೆ, ತಾವು ಕುಹೂ ಎಂದು ಕೂಗಿದಾಗ ಯಾರಾದರು ಧ್ವನಿಗೂಡಿಸಿದರೆ, ಅವುಗಳೂ ಕೂಗುತ್ತವೆ. ಹಕ್ಕಿಪಿಕ್ಕರು ಈ ನೆಲೆಯಲ್ಲಿ ಅವುಗಳನ್ನು ಬೇಟೆಯಾಡುತ್ತಾರೆ. ಒರ್ವ ಕುಹೂ ಕುಹೂ ಎಂದು ಕೂಗಿದರೆ, ಆ ಹಕ್ಕಿಯೂ ಹಾಗೆ ಕೂಗುತ್ತದೆ. ಇದು ಸ್ವಲ್ಪ ಸಮಯ ಮುಂದುವರಿಯುತ್ತದೆ. ಮತ್ತೊರ್ವ ಕ್ಯಾಟರಿ ಬಿಲ್ಲಿನಿಂದ ಗುರಿಯಿಡಿದು ಹೊಡೆಯುತ್ತಾನೆ. ಅದು ಕೂಗುವ ಸಮಯದಲ್ಲಿ ಪ್ರತಿಧ್ವನಿತ ಕಡೆ ತನ್ನ ಲಕ್ಷ್ಯವನ್ನು ಹರಿಸುವುದರಿಂದ, ಬೇಟೆಗಾರ ಸಾವಧಾನವಾಗಿ ಗುರಿಯಿಟ್ಟು ಹೊಡೆಯಲು ಸಾಧ್ಯ ವಾಗುತ್ತದೆ. ಕ್ಯಾಟರಿಬಿಲ್ಲಿನಿಂದ ಗುರಿಯಿಟ್ಟು ಹೊಡೆಯುವುದರಲ್ಲಿ ಇವರು ಚಾಣಾಕ್ಷರು.

ಇವರು ಹಕ್ಕಿಬೇಟೆಯಲ್ಲಿ ಎಷ್ಟು ಚಾಣಾಕ್ಷರು ಎನ್ನವುದಕ್ಕೆ ಒಂದು ಮಾತು ಪ್ರಚಲಿತದಲ್ಲಿದೆ. "ಒಲೆಯ ಮೇಲೆ ಎಸರಿಟ್ಟು ಹಕ್ಕಿಯನ್ನು ಹೊಡೆದು ಕೊಡುತ್ತಾರೆ" ಎಂದು. ಅಂದರೆ, ಒಲೆಯ ಮೇಲೆ ಮಾಂಸವನ್ನು ಒದಗಿಸಿ ಕೊಡುತ್ತಾರೆ. ಆದರೆ ಹಕ್ಕಿಪಕ್ಷಿಗಳನ್ನು ಸಾರು ಮಾಡುವುದಕ್ಕಿಂತ ಸುಟ್ಟು ತಿನ್ನುವುದೇ ಹೆಚ್ಚು.

**ಕಾಗೆ :**

ಕುಕ್ಕೂ ಬಳಗಕ್ಕೆ ಸೇರಿದರ ಮೊದಲ ಹಕ್ಕಿಯಿದು. ಇದು ಊರು ಕೇರಿಗಳೆಲ್ಲೆಡೆ ಇರುವ ಹಕ್ಕಿ. ಕಾಡುಗಳಲ್ಲಿ ಬಹುಕಡಿಮೆ. ಬಯಲು ಪ್ರದೇಶದಲ್ಲಿ ಕಡಲೆಗಿಡಕ್ಕೆ ಇದರ ಹಾವಳಿ ಹೆಚ್ಚು. ಹಾಗೆಯೆ ಮೆಣಸಿನ ಹಣ್ಣುಗಳನ್ನು ಹಾಳು ಮಾಡುತ್ತದೆ. ಆದ್ದರಿಂದ ಬೇಳೆ ರಕ್ಷಣೆಗಾಗಿ ಇವುಗಳನ್ನು ಓಡಿಸುತ್ತಾರೆ. ಕಾಗೆಗಳು ಬೆಳೆಗೆ ಬಾರದಂತೆ ತಡೆಯಲು ಕಾಗೆಯನ್ನು ಹೊಡೆದು (ಸಾಯಿಸಿ) ಕಡಲೆಕಾಯಿ (ಶೇಂಗಾ) ಗಿಡವಿರುವ ಹೊಲದಲ್ಲಿ ಮೂರು-ನಾಲ್ಕು ಕಡೆ ಕಟ್ಟುತ್ತಾರೆ. ಕಡಲೆಕಾಯಿ ಗಿಡವಿರುವ ಹೊಲದಲ್ಲಿ ಮೂರುನಾಲ್ಕು ಕಡೆ ಕೋಲುಗಳನ್ನು ನೆಟ್ಟು, ದಾರಕಟ್ಟಿ, ದಾರಕ್ಕೆ ಸತ್ತಕಾಗೆಗಳನ್ನು ಕಟ್ಟುತ್ತಾರೆ. ಗಾಳಿಯ ಸುಳಿದಾಟಕ್ಕೆ ತಕ್ಕಂತೆ ಅವು ತೂಗಾಡುತ್ತಿರುತ್ತವೆ. ಇದನ್ನೇ ಕಂಡ ಕಾಗೆಗಳು, ಕಾಗೆ ಬಂದಿಯಾಗಿದೆ ಎಂದು ಭಾವಿಸಿ, ಹೆದರಿ ಕಡಲೆಕಾಯಿ ಗಿಡಕ್ಕೆ, ಮೆಣಸಿನ ಗಿಡಕ್ಕೆ ಬರುವುದಿಲ್ಲ.

ಕಾಗೆಗಳನ್ನು ಹಿಡಿಯುವುದು ಬಹು ಸುಲಭ. ಕಾಗೆ ಒಂದು ಅಗಳು ಅನ್ನ ಕಂಡರೂ ಸಾಕು, ತನ್ನ ಬಳಗವೆನ್ನೆಲ್ಲಾ ಕರೆಯುತ್ತದೆ, ಎಂಬ ನಾಣ್ಣುಡಿಯಿದೆ. ಅಂತೆಯೇ, ಹೊಲದ ಬದುವಿನ ಮೇಲೆ ಕುಳಿತು ಊಟ ಮಾಡಿದಂತೆ ಮಾಡಿ, ಒಂದಷ್ಟು ಅನ್ನ ಎರಚಿದರೆ ಸಾಕು, ಕೆಲ ಕ್ಷಣಗಳಲ್ಲಿ ಕಾಗೆಗಳು ಪ್ರತ್ಯಕ್ಷವಾಗುತ್ತವೆ. ಕೆಲವೊಮ್ಮೆ ಊಟಕ್ಕೆ ಕುಳಿತು ಕೊಳ್ಳತ್ತಿದ್ದಂತೆಯ ಬರುತ್ತವೆ. ಆಗ, ಕಲ್ಲಿನಿಂದಲೊ ಉರುಳು ಹಾಕಿಯೋ ಸುಲಭವಾಗಿ ಹಿಡಿಯಬಹುದು.

ಶನಿ ಮಹಾತ್ಮನ ವಾಹನವಾದ ಕಾಗೆಯನ್ನು ಹಿಡಿಯಲು ಹೆದರುತ್ತಾರೆ. ತಮಗೇನು ಕೇಡು ಉಂಟಾಗುವುದೋ ಎಂಬ ಭಯ. ಆದರೆ ಅಲಮಾರಿ ಜನಾಂಗದವರು, ಹಕ್ಕಿಪಿಕ್ಕಿರು ಇದಾವುದನ್ನು ಲೆಕ್ಕಿಸದೆ, ಎಲ್ಲ ಪಕ್ಕಿಗಳನ್ನು ಹಿಡಿದಂತೆ ಕಾಗೆಗಳನ್ನು ಹಿಡಿಯುತ್ತಾರೆ. ಇವರು ಹಿಡಿದ ಕಾಗೆಗಳನ್ನು ರೈತ ಹಣಕೊಟ್ಟು ಕಟ್ಟುತ್ತಾನೆ. ಕೆಲವರಂತೂ ಮುಟ್ಟಲೂ ಹೆದರಿ ಹಣಕೊಟ್ಟು ಹೊಲದಲ್ಲಿ ಕಟ್ಟಿಸುತ್ತಾರೆ. ಅಲೆಮಾರಿ ಜನಾಂಗದವರು ಕಾಗೆಗಳನ್ನು ತಿನ್ನುತ್ತಾರೆ ಎಂದು ತಿಳಿದು ಬಂದಿದೆ.

ಕಾಗೆ ಮನೆ ಹೊಕ್ಕರೆ ಕೆಡಕಾಗುತ್ತದೆ ಎಂಬ ನಂಬಿಕೆಯಿದೆ. ಹಳ್ಳಿಗಾಡಿನಲ್ಲಿ ಇಂದಿಗೂ ಕಾಗೆ ಮನೆ ಹೊಕ್ಕರೆ, ಅದು ಹೊಕ್ಕ, ತಿಥಿ, ವಾರ, ನಕ್ಷತ್ರ ಮುಂತಾದವುಗಳಿಗನುಗುಣವಾಗಿ, ಅದರ ತೀವ್ರತೆಯ ಮೇರೆಗೆ, ಅಂದರೆ ಕೆಟ್ಟ ನಕ್ಷತ್ರಗಳಲ್ಲಿ ಮನೆ ಹೊಕ್ಕರೆ ಇಂತಿಷ್ಟು ದಿನ, ಒಳ್ಳೆ ನಕ್ಷತ್ರದಲ್ಲಾದರೆ ಇಂತಿಷ್ಟು ದಿನ ಎಂದು ಮನೆ ಬಿಡುತ್ತಾರೆ. ಇಲ್ಲವೆ, ಪುಣ್ಯ ಮಾಡಿಸಿ ಮನೆಯಲ್ಲಿ ಉಳಿಯುತ್ತಾರೆ. ಮನೆ ಬಿಟ್ಟಾಗಲೂ ಸಹ ಮರುಪ್ರವೇಶ ಮಾಡುವ ಮುನ್ನ ಪುಣ್ಯ ಮಾಡಿಸುತ್ತಾರೆ.

ಉತ್ತರದ ಬಾಗಿಲಿನಿಂದ ಕಾಗೆ ನುಗ್ಗಿದರೆ, ಆ ಮನೆಯಲ್ಲಿ ಸಾವಾಗುತ್ತದೆ ಎಂಬ ನಂಬಿಕೆಯಿದೆ. ಕಾಗೆ ಹಾರುತ್ತಾ ತಲೆ ಸವರಿಕೊಂಡು ಹೋದರೆ ನಮ್ಮ ಪಾಪವೆಲ್ಲ ತೇಲಿಸಿಕೊಂಡು ಹೋಯಿತೆಂದು ಭಾವಿಸುತ್ತಾರೆ. ಅಂತೆಯೇ, ತಲೆಯ ಮೇಲೆ ಕುಳಿತರೆ, ದೇಹದ ಇನ್ನಾವ ಭಾಗಕ್ಕಾದರೂ ಸರಿಯೇ ಬಡಿದುಕೊಂಡು ಹೋದರೆ, ಅಪಾಯ ಕಟ್ಟಿಟ್ಟ ಬುತ್ತಿಯೆಂದು ನಂಬಿ, ಕೂಡಲೆ ಸ್ನಾನ ಮಾಡಿ, ದೇವರಿಗೆ ಪೂಜೆ ಸಲ್ಲಿಸಿ, ತುಪ್ಪದ ದೀಪ ಹಚ್ಚಿ ದೋಷ ಪರಿಹಾರಕ್ಕೆ ದೇವರನ್ನು ಪ್ರಾರ್ಥಿಸುತ್ತಾರೆ.

ಅಂತೆಯೇ, ಕಾಗೆ ಶಕುನಗಳನ್ನು ನಂಬುತ್ತಾರೆ. ಮನೆಯ ಅಂಗಳದಲ್ಲಿ, ಮುಂಬಾಗಿಲಿನಲ್ಲಿ ಕುಳಿತು ಕೂಗಿದರೆ, ನಂಟರು ಬರುತ್ತಾರೆ ಎಂಬ ನಂಬಿಕೆಯಿದೆ. ಒಳ್ಳೆಯ ಕೆಲಸಕ್ಕೆ ಹೊರಟಾಗ, ಅಡ್ಡ ಹಾರಿದರೆ ಒಳ್ಳೆಯದಲ್ಲ, ಅಂತೆಯೇ ಸಾವಾದ ಮನೆಯಲ್ಲಿ ತಿಥಿಯ ದಿನ ಹಾಕುವ ಕೂಳಿಗೆ, ಸತ್ತವರು ಕಾಗೆಯ ರೂಪದಲ್ಲಿ ಬಂದು ಸ್ವೀಕರಿಸುತ್ತಾರೆ ಎಂಬ ದೃಢವಾದ ನಂಬಿಕೆಯಿದೆ. ಇಂದಿಗೂ ತಿಥಿ ಮಾಡಿ, ಗೋರಿ ಪೂಜೆ ಸಲ್ಲಿಸಿ, ಎಡೆಯಿಟ್ಟು ಭೋಜನ ನಾಧಿ ಎಡೆಗಿಟ್ಟು ಆಹಾರಗಳನ್ನು, ಕಾಗೆ ತಿಂದು ಹೋಗುವವರೆಗೆ ಕಾಯುತ್ತಾರೆ. ಅವು ತಿಂದ ನಂತರವೇ, ತಿಥಿ ಊಟದ ವ್ಯವಸ್ಥೆ ಮಾಡುತ್ತಾರೆ. ಒಂದು ವೇಳೆ, ಎಡೆಗೆ ಕಾಗೆ ಬರುವುದು ತಡವಾದರೆ, ಮೃತವ್ಯಕ್ತಿ ತಮ್ಮ ಮೇಲೆ ಕುಪಿತರಾಗಿದ್ದಾರೆ ಎಂದು ಭಾವಿಸಿ, ತಮ್ಮ ತಪ್ಪನ್ನು ಕ್ಷಮಿಸಿ ಎಂದು ಮೊರೆಯಿಡುತ್ತಾರೆ, ಕಾಕತಾಳೀಯದಂತೆ, ತಕ್ಷಣವೇ ಕಾಗೆ ಎಡೆಗೆ ಬರುತ್ತದೆ ಎಂಬ ನಂಬಿಕೆ.

**ಗವುಜಗನಹಕ್ಕಿ - ಗೌಜಗ್ಲಕ್ಕಿ :**

ಬಯಲು ಸೀಮೆಯ ಹೊಲ, ಗುಡ್ಡ ಬೆಟ್ಟಗಳಲ್ಲಿ ಕಂಡುಬರುತ್ತವೆ. ಹೊಲಗಳಲ್ಲಿ ಜೋಳ, ತೊಗರಿ ಅವರೆಗಿಡದ ಕೆಳಗೆ ವಾಸಿಸುತ್ತವೆ. ಬೆಟ್ಟಗುಡ್ಡಗಳಲ್ಲಿ ಕುರುಚಲು ಗಿಡದ ಕೆಳಗೆ ಓಡಾಡಿಕೊಂಡಿರುತ್ತದೆ, ಗಿಡಗಳಲ್ಲಿ ಗೂಡು ಕಟ್ಟುತ್ತದೆ. ಬೂದು ಬಣ್ಣ, ಹೊಟ್ಟೆ ಬಿಳುಪು(ಮಾಸಲು) ಪುಟು ಪುಟು ಓಡಾಡುತ್ತಿರುತ್ತದೆ. ಮಾಗಿಯ ಕಾಲದಲ್ಲಿ ಇವುಗಳ ಜೊತೆಗೆ ಗುಬ್ಬಚ್ಚಿಯಷ್ಟು

ಗಾತ್ರದ ಅಥವಾ ಸ್ವಲ್ಪ ದಪ್ಪಗಿರುವ ಕೆಲವು ಹಕ್ಕಿಗಳು, ಜೋಳ, ತೊಗರಿ, ಹುಚ್ಚೆಳ್ಳು ಮುಂತಾದ ಗಿಡಗಳಲ್ಲಿ ಗೂಡುಕಟ್ಟಿ, ಹಸಿರು, ಕಪ್ಪು, ಚುಕ್ಕೆಗಳಿರುವ ಐದಾರು ಮೊಟ್ಟೆಗಳನ್ನಿಟ್ಟು ಮರಿಮಾಡುತ್ತವೆ. ಈ ಸಮಯದಲ್ಲಿ ಹಕ್ಕಿ ಪಕ್ಷಿಗಳಿಗೆ ಹಲವಾರು ಜಾತಿಯ ಕ್ರಿಮಿ ಕೀಟಗಳು, ಹುಳುಗಳು, ಮಿಡತೆ, ದಾಸರಹುಳು, ಅವರೆಹುಳು, ಜಿಡ್ಡುಳ, ಹೇನು, ಕಾಯಿಕೊರೆಯುವ ಹುಳು, ಹಸಿರು ಹುಳು ಮುಂತಾದವು ಹೊಲದಲ್ಲಿ ಕಂಡುಬರುತ್ತವೆ. ಈ ವೇಳೆ ಹಕ್ಕಿಗಳ ವಂಶಾಭಿವೃದ್ಧಿಗೆ ಸೂಕ್ತವಾದ ಕಾಲ.

ಇವು ರೈತನಿಗೆ ಉಪಕಾರಿ ಹಕ್ಕಿಗಳು. ಅವರೆ, ತೊಗರಿ, ಉದ್ದು, ಹೆಸರು, ಹಲಸಂದೆ ಮುಂತಾದ ಗಿಡಗಳ ಕಾಯಿಗಳನ್ನು ಕೊರೆದು ಹಾಳುಮಾಡುವ ಹಲವಾರು ಹುಳುಗಳನ್ನು ಈ ಹಕ್ಕಿಗಳು ತಿಂದು, ಕಾಯಿ ಉಳಿಯಲು ಸಹಕಾರಿಯಾಗಿವೆ, ಜಿಡ್ಡು ಹುಳುವಂತೂ ಹೂವಿನ ಹಂತದಲ್ಲಿಯೇ ಹಾಳುಮಾಡುತ್ತದೆ. ಆದರೆ ಹಕ್ಕಿಗಳು ಇಂತಹ ಹುಳಹುಪ್ಪಟೆ, ಕ್ರಿಮಿ ಕೀಟಗಳನ್ನು ತಿಂದು, ರೈತನಿಗೆ ಸಹಕಾರಿಯಾಗುವುದರ ಜೊತೆಗೆ, ಅವುಗಳೂ ದಷ್ಟ ಪುಷ್ಟವಾಗಿ ಬೆಳೆಯುತ್ತವೆ. ಸಮೃದ್ಧ ಆಹಾರ ಸಿಗುವ ಕಡೆ ಹಕ್ಕಿಗಳು ಮರಿಮಾಡುವುದು ಸ್ವಾಭಾವಿಕ. ಆದ್ದರಿಂದ, ಇಲ್ಲಿಯೇ ಗೂಡು ಕಟ್ಟಿ ನೆಲೆಯಾದ ಹಕ್ಕಿಗಳು, ಬೇಟೆಗಾರನ ಬಾಯಿ ಚಪಲಕ್ಕೆ ತುತ್ತಾಗುತ್ತದೆ. ಇವು ಗೂಡು ಕಟ್ಟಿರುವ ಜಾಗಗಳು ಹೊಲದ ಬಯಲಲ್ಲಿ ಓಡಾಡುವಾಗ ಕಂಡುಬರುತ್ತವೆ. ಸಂಜೆಯ ಹೊತ್ತಿನಲ್ಲಿ ಶಬ್ದವಾಗದಂತೆ, ಮೆತ್ತಗೆ ಹೆಜ್ಜೆ ಹಾಕುತ್ತ ಗೂಡಿನ ಬಳಿ ಹೋಗಿ, ಗೂಡಿನೊಳಕ್ಕೆ ಕೈಹಾಕಿ ಹಕ್ಕಿಯನ್ನು ನೇರವಾಗಿ ಹಿಡಿಯುತ್ತಾರೆ. ಮೊಟ್ಟೆ ಅಥವಾ ಎಳೆಮರಿಗಳು ಇವರ ದಾಳಿಗೆ ನಾಶವಾಗುತ್ತವೆ. ಬಲೆ ಒಡ್ಡಿ ಸಹ ಈ ಹಕ್ಕಿಗಳನ್ನು ಹಿಡಿಯುತ್ತಾರೆ. ಹೊಲದ ಒಂದು ಬದಿಯಲ್ಲಿ (ಹತ್ತು ಹನ್ನೆರಡು ಅಡಿಗಳಷ್ಟು ಬಿಟ್ಟು) ಬಲೆಯನ್ನು ಒಡ್ಡುತ್ತಾರೆ. ಬಲೆ ವಿರುದ್ಧ ದಿಕ್ಕಿನಿಂದ ಗಿಡಗಳನ್ನು ಅಳ್ಳಾಡಿಸುತ್ತಾ, ಒಂದು ಕಡ್ಡಿಯಿಂದ ಅವರೆ, ತೊಗರಿ ಗಿಡಗಳನ್ನು ಬಡಿಯುತ್ತಾ, (ಫಸಲಿಗೆ ಹಾನಿಯಾಗದಂತೆ) ಮುಂದೆ ಮುಂದೆ ಸಾಗುತ್ತಾರೆ. ಈ ಹಕ್ಕಿಗಳು ಮೊಟ್ಟೆ ಮರಿಗಳನ್ನು ಬಿಟ್ಟು ಹಾರಿ ಹೋಗುವುದಿಲ್ಲ. ಬದಲಾಗಿ ಗಿಡಗಳ ಅಡಿಯಲ್ಲಿ ಅಡಗಿ ಕೂರಲು ಪ್ರಯತ್ನಿಸುತ್ತವೆ. ಗಿಡದ ಅಲುಗಾಟ, ಕಡ್ಡಿಯ ಶಬ್ದಕ್ಕೆ ಹಾಗೆ ಮುಂದೆ ಮುಂದೆ ಸಾಗುತ್ತವೆ. ಬಲೆಗೆ ಬಿದ್ದು ಬೇಟೆಗಾರನಿಗೆ ಶರಣಾಗುತ್ತವೆ, ಇವುಗಳನ್ನು ಜೀವಂತವಾಗಿ ಹಿಡಿದು ಪಂಜರದೊಳಕ್ಕೆ ಬಿಡುತ್ತಾರೆ. ಇಲ್ಲವೆ ಗೋಣು ಮುರಿದು ಚೀಲಕ್ಕೆ ಹಾಕಿಕೊಳ್ಳುತ್ತಾರೆ. ಮೊಟ್ಟೆಯಿಡುವ ಹಕ್ಕಿ ಅಂದರೆ, ಮೊಟ್ಟೆಯಿಡಲು ಸಿದ್ಧವಾಗುವ ಹಕ್ಕಿ ಬಲುರುಚಿ ಎಂದು ಇವುಗಳನ್ನು ಹಿಡಿಯುತ್ತಾರೆ.

**ಬಾವಲಿ ಬೇಟೆ :**

ಬಾವಲಿ, ಈರೇಹಕ್ಕಿ-ಹೀರೇಹಕ್ಕಿ ತೊಲಗನ ಹಕ್ಕಿ ಮುಂತಾದ ಹೆಸರಿನಿಂದ ಕರೆಯುವ ಈ ಹಕ್ಕಿ ಹಕ್ಕಿಯೇ ಅಲ್ಲ. ಆಶ್ಚರ್ಯವಾಗುತ್ತಿದೆಯಲ್ಲವೆ? ಅಹುದು, ಇದಕ್ಕೆ ಹಕ್ಕಿಗಳಿಗಿರುವಂತೆ ಯಾವುದೇ ಪುಕ್ಕಗಳಿಲ್ಲ, ಮೊಟ್ಟೆಯಿಟ್ಟು ಮರಿ ಮಾಡುವುದೂ ಇಲ್ಲ.

ಬಾವಲಿ ಒಂದು ಸಸ್ತನಿ. ಇದು ಪ್ರಾಣಿಗಳಂತೆ ಮರಿಹಾಕುತ್ತದೆ. ಆದರೂ ಹಲವರ ಮನಸ್ಸಿನಲ್ಲಿ

ಇದು ಹಕ್ಕಿಯಾಗಿಯೇ ಉಳಿದಿದೆ. ಹಕ್ಕಿಯಂತೆ ಹಾರಾಡುತ್ತದೆ. ಚಟುವಟಿಕೆಗಳು ಹಕ್ಕಿಯಂತೆಯೇ, ಆದಕಾರಣ ಇದರ ಪರಿಚಯ ಇಲ್ಲಿಯೇ ಮಾಡಬಯಸುತ್ತೇನೆ. ಇದು ಹಕ್ಕಿಯಲ್ಲ ಸಸ್ತನಿ ಎಂದು ತಿಳಿಯಬೇಕು.

ಈರೇಹಕ್ಕಿಯು ಬಯಲು ಸೀಮೆಯ ಎಲ್ಲೆಡೆ ವಾಸಿಸುತ್ತದೆ. ಹಗಲೆಲ್ಲಾ ಮರದಲ್ಲಿ ನೇತಾಡಿಕೊಂಡಿರುವುದು. ರಾತ್ರಿಯಿಡೀ ಆಹಾರಕ್ಕಾಗಿ ಹಾರಾಡುವುದು ಇದರ ಮುಖ್ಯ ಲಕ್ಷಣ. ಹಣ್ಣುಹಂಪಲುಗಳು ಇದರ ಮುಖ್ಯ ಆಹಾರ. ಯಾವ ಯಾವ ಋತುವಿನಲ್ಲಿ ಯಾವ ಯಾವ ಜಾತಿಯ ಹಣ್ಣುಗಳು ಲಭ್ಯವಿರುತ್ತವೋ ಅಲ್ಲಲ್ಲಿ, ಅಂತಹ ಪ್ರದೇಶಗಳಲ್ಲಿ ಇದರ ಹಾರಾಟ ಜಾಸ್ತಿ. ಮಿಗಿಲಾಗಿ ಹಗಲು ವೇಳೆಯಲ್ಲಿ ಸುರಕ್ಷಿತವಾಗಿರುವ ಸ್ಥಳ ಅತಿ ಮುಖ್ಯ. ಇದರ ಬೇಟೆ ಎಲ್ಲೆಡೆ, ಎಲ್ಲ ಕಾಲಗಳಲ್ಲಿ ನಡೆದರೂ, ಚೈತ್ರಮಾಸದ ನಂತರ, ಜೇಷ್ಠ ಆಷಾಢಗಳಲ್ಲಿ ಮಾಗಡಿ ತಾಲ್ಲೋಕಿನ ಸುತ್ತಮುತ್ತ ಜಾಸ್ತಿ. ಇವು ಧಾರ್ಮಿಕ ನಂಬಿಕೆಗೆ ಪಾತ್ರವಾಗಿರುವುದರಿಂದ, ಗುಡಿ, ಗೋಪುರ, ಅದಕ್ಕೆ ಹೊಂದಿಕೊಂಡಂತೆ ಇರುವ ಮರಗಳಲ್ಲಿ ವಾಸವಾಗಿರುವುಗಳನ್ನು ಹಿಡಿಯುವುದಿಲ್ಲ. ಹಾಗೆಯೇ ಅರಳೀಮರದಲ್ಲಿ ವಾಸವಾಗಿರುವುಗಳನ್ನೂ ಸಹ ಹಿಡಿಯುವುದಿಲ್ಲ. ಬಯಲು ಸೀಮೆಯ ಎಲ್ಲೆಡೆ ಇಂಥ ನಂಬಿಕೆಗೆ ಪಾತ್ರವಾದ ವಾಸ ಸ್ಥಾನಗಳನ್ನು ಕಾಣಬಹುದು, ಉದಾಹರಣೆಗೆ ಟಿ.ನರಸೀಪುರ, ಬೆಳ್ಳೂರು ಮುಂತಾದವು.

ಇವುಗಳು ವಾಸಾಸ್ಥಾನಕ್ಕೆ ಮರಳುವುದು ತಡವಾದರೆ, ಅಂತಹ ಸಮಯದಲ್ಲಿ, ದಾರಿಯಲ್ಲಿ ಸಿಗುವ ಮರಗಳ ಆಶ್ರಯ ಪಡೆದು ಮರುದಿನ ತನ್ನ ವಾಸಸ್ಥಾನಕ್ಕೆ ಮರಳುವುದುಂಟು, ಹೀಗೆ ಒಂಟಿಯಾಗಿ ಅಥವಾ ಒಂದೆರಡು ಈರೇಹಕ್ಕಿಗಳು ಮರದ ತುದಿಯಲ್ಲಿ ಜೋತಾಡುತ್ತಿರುವುದನ್ನು ಕಾಣಬಹುದು. ಈ ಹಕ್ಕಿಗಳನ್ನು ಕೋವಿಯಿಂದ ಹೊಡೆದು ಬೇಟೆಯಾಡುತ್ತಾರೆ. ಇಲ್ಲವೆ ಕ್ಯಾಟರಿಬಿಲ್ಲಿನಿಂದ ಅಥವಾ ಕಲ್ಲಿನಿಂದ ಹೊಡೆದು ಬೀಳಿಸುತ್ತಾರೆ. ಗುರಿತಪ್ಪಿದಲ್ಲಿ ಅಲ್ಲಿಂದ ಮತ್ತೊಂದು ಕೊಂಬೆಗೋ ಮರಕ್ಕೋ ಹಾರಬಹುದಷ್ಟೆ ದೂರ ಹೋಗಲಾರದು. ಅಂತಹ ಸಮಯದಲ್ಲಿ ಅದಕ್ಕೆ ಗೊತ್ತಾಗದಂತೆ, ಶಬ್ದವಾಗದಂತೆ ಮರವೇರಿ ದೊಣ್ಣೆಯಿಂದ ಹೊಡೆದು ಹಿಡಿಯುತ್ತಾರೆ. ಇದು ಒಂದು ವಿಧಾನ.

ಹಕ್ಕಿಪಿಕ್ಕಿರು, ಅಲೆಮಾರಿಗಳು ಇನ್ನೂ ಕೆಲವು ಜನಾಂಗದವರು ಬಾವಲಿಯನ್ನು ವ್ಯವಸ್ಥಿತವಾಗಿ ಹಿಡಿಯುತ್ತಾರೆ. ಹಿಡಿದ ಬಾವಲಿಗಳನ್ನು ಮಾರಾಟ ಮಾಡುತ್ತಾರೆ. ಮಾಂಸಾಹಾರಿಗಳಾದ ಬಹಳಷ್ಟು ಜನಾಂಗದವರು ಹಿರೇಹಕ್ಕಿಯನ್ನು ತಿನ್ನುತ್ತಾರೆ. ಹಿಪ್ಪೆ, ಹತ್ತಿಹಣ್ಣುಗಳೆಂದರೆ ಇವಕ್ಕೆ ಬಲುಪ್ರಿಯ, ಆದ್ದರಿಂದ ಬಲೆ ಬೀಸಿ ಹಿಡಿಯುವ ವಿಧಾನವನ್ನು ಇವರು ಅನುಸರಿಸುತ್ತಾರೆ. ಬಲೆಯು ಸುಮಾರು ೬೦-೭೦ ಅಡಿ ಉದ್ದ, ಸುಮಾರು ೩೦ ಅಡಿ ಅಗಲವಿರುವ ಬಲೆಯನ್ನು ಬಳಸುತ್ತಾರೆ. ಹೆಚ್ಚು ಹಣ್ಣುಹಂಪಲುಗಳಿರುವ ಕಡೆ ಜೇಷ್ಠ ಆಷಾಢಮಾಸಗಳಲ್ಲಿ ದೊಡ್ಡ ಮರಕ್ಕೆ ಬಲೆಯನ್ನು ಕಟ್ಟುತ್ತಾರೆ. ಮರದ ಬುಡದಿಂದ ಸುಮಾರು ೧೦-೧೨ ಅಡ್ಡಿಗಳಷ್ಟು ಮೇಲೆ ಬಲೆಯನ್ನು ಕಟ್ಟುತ್ತಾರೆ. ಈ

ಬಲೆಯ ತುದಿಯನ್ನು ಮರದ ತುದಿಯಲ್ಲಿ ಕಟ್ಟಿರುತ್ತಾರೆ. ಮೇಲಿನ ತುದಿ ಕಟ್ಟಿರುವ ಜಾಗದಲ್ಲಿ ಬಲೆಯನ್ನು ಮೇಲಕ್ಕೇರಿಸಲು ಹಾಗೂ ಇಳಿಸಲು ಅನುಕೂಲವಾಗುವಂತೆ ಕಟ್ಟಿರುತ್ತಾರೆ. ಈ ಬಲೆಯನ್ನು ಸಂಜೆ ಕಟ್ಟಿ ಬಲೆ ಏರಿಸಲು ಇಳಿಸಲು ತೊಂದರೆ ಇಲ್ಲವೆಂದು ಖಾತರಿ ಪಡಿಸಿಕೊಳ್ಳುತ್ತಾರೆ. ನಾಟಕದ ಪರದೆಯನ್ನು ಏರಿಸಿ ಇಳಿಸುವಂತೆ. ಆದರೆ ನಾಟಕದ ಪರದೆಯ ಕೆಳ ತುದಿಗೆ ಬೊಂಬು ಅಥವಾ ಗಳ ಕಟ್ಟಿ ಸುತ್ತಲು ಅನುಕೂಲ ಮಾಡಿಕೊಂಡಿರುತ್ತಾರೆ. ಆದರೆ ಇಲ್ಲಿ ಬೊಂಬಿನಂತಹ ಪರಿಕರವನ್ನೇನು ಬಳಸುವುದಿಲ್ಲ. ಬೆಳಗ್ಗಿನಿಂದ ಸಂಜೆಯವರೆಗೆ ಮರದಲ್ಲಿ ಜೋತುಬಿದ್ದಿದ್ದ ಬಾವಲಿಗಳು ಸಂಜೆಯಾಗುತ್ತಲೇ ಜಾಗೃತವಾಗುತ್ತವೆ. ಆಹಾರಕ್ಕಾಗಿ ಮರದಿಂದ ಮರಕ್ಕೆ ಹಾರುತ್ತಾ ಸಾಗುತ್ತವೆ. ಇಂತಹ ಕಡೆಯಲ್ಲೆ ಬೇಟೆಗಾರ ಬಲೆಯನ್ನು ಕಟ್ಟಿರುತ್ತಾರೆ. ಬಲೆಯನ್ನು ಗುರುತಿಸದೆ, ಇವು ರೆಕ್ಕೆ ಬಡಿಯುತ್ತಾ ಬಲೆಗೆ ಸಿಕ್ಕಿಬೀಳುತ್ತವೆ. ಬಲೆಗೆ ಸಿಕ್ಕಿಬೀಳುತ್ತಿದ್ದಂತೆಯೇ ಬೇಟೆಗಾರ ಕೂಡಲೆ ಬಲೆ ಕೆಳಗಿಳಿಸಿ ತಲೆಯ ಮೇಲೆ ಹೊಡೆದು ಹಿಡಿದು, ಬಲೆಯನ್ನು ಮೇಲೇರಿಸುತ್ತಾನೆ. ಹಕ್ಕಿ ಬಲೆಗೆ ಬಿದ್ದು ಬಲೆ ಇಳಿಸುವುದು ತಡವಾದರೆ, ಬಲೆಗೆ ಬಿದ್ದ ಹಕ್ಕಿ ಕಿಚಗುಡುತ್ತಾ ಬಲೆಯಲ್ಲಿ ಒದ್ದಾಡುವುದರಿಂದ, ಬೇರೆ ಹಕ್ಕಿಗಳು ಹೆದರಿ ದೂರ ಓಡಬಹುದು. ಆದ್ದರಿಂದ ಬಲೆಗೆ ಬಿದ್ದಕೂಡಲೆ ತಡಮಾಡದೆ ಬಲೆ ಕೆಳಗಿಳಿಸಿ, ಹಕ್ಕಿಯನ್ನು ಹಿಡಿಯುತ್ತಾರೆ.

**ಪಾರಿವಾಳದ ಬೇಟೆ :**

ಪಾರಿವಾಳಗಳನ್ನು ಮಾಂಸಕ್ಕಾಗಿ-ಜೂಜಿಗಾಗಿ ಬೇಟೆಯಾಡಲಾಗುತ್ತದೆ. ಹಾಗೆಯೇ ಲಕ್ಕದ ಪಾರಿವಾಳಗನ್ನು ಔಷಧಿಗಾಗಿ ಸಾಕುತ್ತಾರೆ -ತಿನ್ನುತ್ತಾರೆ. ಜೂಜಿಗಾಗಿ ಮುಸ್ಲಿಮರು ಸಾಕುವುದು ಹೆಚ್ಚು. ಇವರ ಕೈಚಳಕದಲ್ಲಿ ಪಾರಿವಾಳ ಪಳಗುವಂತೆ (ಮಾಗಡಿ) ಬೇರೆಯವರ ಕೈಚಳಕದಲ್ಲಿ ಪಳಗಲಾರವು, ಇಲ್ಲವೆಂದಲ್ಲ.

ಪಾರಿವಾಳಗಳಲ್ಲಿ ಅನೇಕ ಪ್ರಭೇದಗಳಿವೆ. ಆದರೆ ಎಲ್ಲವೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿ ಇರುವುದರಿಂದ, ಇವುಗಳ ನಡುವೆ ವ್ಯತ್ಯಾಸವನ್ನು ಗುರುತಿಸುವುದು ಕಷ್ಟ. ಉಷ್ಣವಲಯ ಸಮಶೀತೋಷ್ಣವಲಯಗಳಲ್ಲಿ ಎಲ್ಲೆಡೆ ಇವುಗಳನ್ನು ಕಾಣಬಹುದು. ಪಾರಿವಾಳಗಳ ದೇಹ ಗುಂಡಗಿದ್ದು, ಪುಟ್ಟ ತಲೆಯಿರುತ್ತದೆ. ತುಂಬು ಮಾಂಸವಿರುವ ಹಕ್ಕಿ, ಕಾಲುಗಳೂ ಗಿಡ್ಡಕಡ್ಡಿಯಂತೆ. ಹೀಗಾಗಿ ಈ ಹಕ್ಕಿಗಳಿಂದ ಹೆಚ್ಚಿನ ಮಾಂಸ ಸಿಗುತ್ತದೆ.

ಸಾಮಾನ್ಯವಾಗಿ ಪಾರಿವಾಳಗಳು ಕಟ್ಟಡಗಳ ಸಂದುಗಳಲ್ಲಿ, ಹಳೆ ಕಟ್ಟಡ, ಗೋಪುರಗಳಲ್ಲಿ ಪಾಳುಬಿದ್ದ ಮನೆಗಳಲ್ಲಿ, ಕಲ್ಲುಗಳ ಇರುಕಿನಲ್ಲಿ ವಾಸಿಸುತ್ತವೆ. ಮನೆ ಕಟ್ಟುವಾಗ ಪಾರಿವಾಳದ ಗೂಡು ಮಾಡಿಸುವ ವಾಡಿಕೆ ಇದೆ. ಪಾರಿವಾಳವು ಎಲ್ಲ ಹಕ್ಕಿಗಳಂತೆ ಉತ್ತಮವಾದ ಗೂಡು ಕಟ್ಟುವುದಿಲ್ಲ. ಕಲ್ಲ ಇರುಕಿನಲ್ಲಿ, ಮರದ ಪೊಟರೆಗಳಲ್ಲಿ ಕಟ್ಟಡದ ಸಂದುಗೊಂದುಗಳಲ್ಲಿ ಗೂಡುಕಟ್ಟಿ, ನಾಲ್ಕಾರು ಪುಳ್ಳೆಗಳನ್ನಿಟ್ಟು, ಅದರ ಮೇಲೆ ಹುಲ್ಲಿನ ಕಡ್ಡಿಗಳನ್ನಾಗಿ ಗೂಡು ರೂಪಿಸುತ್ತದೆ. ಇದು ಗೂಡನ್ನು ಬೇಕಾಬಿಟ್ಟಿ ಕಟ್ಟುತ್ತದೆ. ಮರಿಯಾಗುವವರೆಗೆ ಗೂಡು ಸರಿಯಿದ್ದರೆ ಸಾಕೆನಿಸುವಷ್ಟು ಗೂಡು ಕಟ್ಟುತ್ತದೆ. ಮೊಟ್ಟೆ ಇಟ್ಟು ಮರಿ ಮಾಡುತ್ತದೆ.

ಪಾರಿವಾಳವನ್ನು ಅಂಚೆ ತಲುಪಿಸಲು ಪಳಗಿಸುತ್ತಿದ್ದದು ಕಂಡುಬರುತ್ತದೆ. ಅದಕ್ಕಾಗಿಯೇ ಇವುಗಳನ್ನು ಪ್ಯಾಸೆಂಜರ್ ಪಾರಿವಾಳವೆಂದು ಕರೆಯುವುದುಂಟು. ಕಥೆಗಳಲ್ಲಿ, ಅಂಚೆ ರವಾನಿಸುತ್ತಿದ್ದ ಉಲ್ಲೇಖವಿದೆ. ಇವುಗಳನ್ನು ಸಾಕಿ ಗೂಡಿನಿಂದ ಒಂದೆರಡು ಹೊರಗೆ ಬಿಟ್ಟರೆ ಮತ್ತೆ ಗೂಡಿಗೆ ಹಿಂತಿರುಗುವಾಗ ಮತ್ತೊಂದನ್ನು ಕರೆತರುತ್ತದೆಂದು ನಂಬಿಕೆ ಇದೆ. ಕೆಲವೊಮ್ಮೆ ಸಾಧ್ಯತೆಯೂ ಉಂಟು.

ಪಾರಿವಾಳದ ಒಂದು ಜಾತಿ ಪಾರಿವಾಳವನ್ನು ಲಕ್ವ ವಾಸಿಮಾಡುವ ಸಲುವಾಗಿ ಸಾಕುತ್ತಾರೆ. ಇವುಗಳನ್ನು ಲಕ್ವದ ಪಾರಿವಾಳವೆಂದು ಕರೆಯುತ್ತಾರೆ. ಬಹು ಉಷ್ಣದಾಯಕ ಮಾಂಸವಾದ್ದರಿಂದ, ಲಕ್ವ ಹೊಡೆದ ವ್ಯಕ್ತಿಗೆ ಲಕ್ವದ ಪಾರಿವಾಳದ ಮಾಂಸ ಸಿದ್ಧೌಷದಂತೆ. ಕೆಲವು ದಿನ ಕ್ರಮಬದ್ಧವಾಗಿ ಇದರ ಮಾಂಸವನ್ನು ತಿಂದರೆ, ಕಾಯಿಲೆಯನ್ನು ಇತರ ಔಷಧ ಸೇವನೆಗಿಂತ ಬಹು ಶೀಘ್ರವಾಗಿ ಗುಣವಾಗಿಸಬಲ್ಲ ಗುಣ ಇದಕ್ಕಿದೆ. ಆದಕಾರಣ ಲಕ್ವದ ಪಾರಿವಾಳವನ್ನು ಸಾಕುವುದು ಹೆಚ್ಚು.

ಜೂಜಿಗಾಗಿಯೂ ಪಾರಿವಾಳವನ್ನು ಸಾಕುತ್ತಾರೆ. ಇವುಗಳನ್ನು ಜೂಜಿನ ಪಾರಿವಾಳಗಳೆಂದೆ ಕರೆಯುವುದುಂಟು. ಈ ಪಾರಿವಾಳಗಳನ್ನು ಹಾರಿಬಿಟ್ಟು ಸಂಜೆಯ ಹೊತ್ತಿಗೆ ಮರಳುವಂತೆ ಪಳಗಿಸಿರುತ್ತಾರೆ. ಇಂತಿಷ್ಟು ಹೊತ್ತು ಹಾರಿಸುವುದಾಗಿ ಬಾಜಿ ಕಟ್ಟುತ್ತಾರೆ. ಇಲ್ಲವೇ ಇಬ್ಬರು ತಮ್ಮ ತಮ್ಮ ಪಾರಿವಾಳಗಳನ್ನು ಹಾರಿಬಿಟ್ಟು ಯಾವುದು ಮೊದಲು ಇಳಿಯುತ್ತದೊ ಅವರು ಸೋತಹಾಗೆ, ಹಾಗೆಯೇ ನಿಗದಿತ ಅವಧಿಯ ನಂತರ ಮೊದಲು ಇಳಿದರೂ ಅದು ಗೆದ್ದಂತೆ. ಇಲ್ಲಿ ಒಂದು ಸಮಸ್ಯೆ ಇದೆ. ಹಾರಿಬಿಟ್ಟ ಹಕ್ಕಿಗಳು ಬಾರದಿರುವ ಸಾಧ್ಯತೆಯುಂಟು. ಇಂತಹ ಸಮಯದಲ್ಲಿ ಹಿಂತಿರುಗಿದ ಹಕ್ಕಿ ಗೆಲ್ಲುತ್ತದೆ.

ಕಾಡಿನ ಪಾರಿವಾಳಗಳೆಂದರೆ ಮುಖ್ಯವಾಗಿ ಗುಮ್ಮಾಡಲ, ಮತ್ತು ಮನಿಯಾಡಲ ಹಾಗೂ ಚೋರೆ ಹಕ್ಕಿಗಳು.

**ಗುಮ್ಮಾಡಲ ಹಕ್ಕಿ :**

ಪಾರಿವಾಳಗಳಲ್ಲೆ ಅತಿ ತೂಕವುಳ್ಳ ಹಕ್ಕಿ. ಮಾಗಿಯ ಕಾಲದಲ್ಲಿ ಒಂಟಿಯಾಗಿ ಇಲ್ಲವೆ ಎರಡು ಮೂರು ಹಕ್ಕಿಗಳ ಜೊತೆಯಾಗಿ ಅತಿ ಎತ್ತರದಲ್ಲಿ ಹಾರುತ್ತಾ ಬಂದು ಹಣ್ಣುಗಳಿರುವ ಮರಗಳಲ್ಲಿ ಕೂಡುತ್ತವೆ. ಇವುಗಳು ನೋಡಲು ಸಿಗುವುದು ಬಹುಕಷ್ಟ. ಆದರೆ ದೂಪದ ಮರಗಳಿಗೆ ಹೇಳಿ ಕಳಿಸಿದಂತೆ ಬರುತ್ತವೆ. ಇವು ಬಯಲು ಸೀಮೆಯಲ್ಲಿ ಅತಿ ವಿರಳ.

**ಚೋರೆ ಹಕ್ಕಿಗಳು : (Spotted dove)**

ಇವುಗಳು ಸಹ ಪಾರಿವಾಳವನ್ನೆ ಹೋಲುತ್ತವೆ. ತಿಳಿಗೆಂಪು ಮಿಶ್ರಿತ, ಮಾಂಸ ತುಂಬಿದ ಎದೆ. ಗಿಡ್ಡಕಾಲುಗಳು ರೆಕ್ಕೆಗಳು ಕಪ್ಪುಬಿಳುಪು ಪಟ್ಟಿಯಿಂದ ಕೂಡಿರುತ್ತದೆ. ಎಲ್ಲೆಡೆ ಗುಡುಗುಡು ಓಡಾಡುತ್ತಿರುತ್ತದೆ.

ಇವು ಕಾಡಿನಲ್ಲಿ ಗುಂಪುಗುಂಪಾಗಿರುವುದರಿಂದ, ಈ ಹಕ್ಕಿಗಳನ್ನು ಬೇಟೆಯಾಡಿಯೇ ಹಕ್ಕಿ

ಬೇಟೆ ಕಲಿತರೆನ್ನಬಹುದು. ಗುಂಪಿನ ಮೇಲೆ ಗುರಿಯಿಟ್ಟು ಕಲ್ಲಿನಿಂದಲೂ; ದೊಣ್ಣೆಯಿಂದಲೂ ಹೊಡೆದರೆ ಸಾಕು ಬಂದಲ್ಲಿ ಬಂದು ಬೀಳುತ್ತವೆ.

ಬಯಲು ಸೀಮೆಯಲ್ಲಿ ಬಯಲಿನಲ್ಲಿ ಚಿಕ್ಕ ಚೋರೆ ಹಕ್ಕಿಗಳು ಕಂಡುಬರುತ್ತವೆ. ಹೆಸರಿನಲ್ಲಿರುವಂತೆಯೇ ಚೋರೆ ಹಕ್ಕಿಗಳು ಗಾತ್ರದಲ್ಲಿ ಚಿಕ್ಕದಾಗಿರುತ್ತವೆ. ಇವುಗಳಿಗೆ ರೆಕ್ಕೆಗಳ ಮೇಲೆ ಚುಕ್ಕೆಗಳಿರುವುದಿಲ್ಲ. ಕಾಳು ಕಡ್ಡಿ ಇರುವ ಕಡೆ ಹೆಚ್ಚು ಓಡಾಡುತ್ತಿರುತ್ತವೆ. ದವಸ ಧಾನ್ಯಗಳನ್ನು, ಕಣದಿಂದ ಮನೆಗೆ ಸಾಗಿಸುವಾಗ ಉದುರುವ ಕಾಳುಗಳನ್ನು ತಿನ್ನಲು, ನಮ್ಮೊಂದಿಗೆ ಬರುತ್ತಿರುತ್ತವೆ. ಕಾಳು ಸಿಗುವ ಎಲ್ಲ ಕಡೆ ಹಾರಾಡುತ್ತಾ, ಓಡುತ್ತಾ ಕಾಳುಗಳನ್ನು ತಿನ್ನುತ್ತಿರುವುದನ್ನು ನೋಡಬಹುದು. ಆದರೆ ನೀರಿರುವ ಗದ್ದೆಗಳಲ್ಲಿ ಇವು ಕಂಡುಬರುವುದಿಲ್ಲ.

ಪಾರಿವಾಳದ ಎಲ್ಲ ಜಾತಿಯ ಹಕ್ಕಿಗಳಿಗೂ ಬಲವಾದ ರೆಕ್ಕೆಗಳಿವೆ. ಹಾರುವಾಗ ಪಟಪಟನೆ ಸದ್ದುಮಾಡುತ್ತವೆ. ವೇಗವಾಗಿ ನೂರಾರು ಮೈಲಿ ಹಾರುತ್ತವೆ. ಆದ್ದರಿಂದಲೇ ಏನೋ ಇವುಗಳನ್ನು ಅಂಚೆ ಒಯ್ಯಲು ಬಳಸುತ್ತಿದುದು. ಚೋರೆ ಹಕ್ಕಿಗಳು ಅತಿ ವೇಗವಾಗಿ ಕಾಡಿನೊಳಗೆ ಮರಗಳ ನಡುವೆ ಹಾರಾಡುತ್ತವೆ.

**ಹೂವಿನ ಹಕ್ಕಿಗಳು : (Sunbird)**

ದುಂಬಿಯ ಕೆಲಸವನ್ನು ನಿರ್ವಹಿಸುವ ಹಕ್ಕಿಗಳೆಂದೇ ಕರೆಯಬೇಕು. ಏಕೆಂದರೆ, ಹೂವಿನಿಂದ ಹೂವಿಗೆ ಹಾರುತ್ತಾ, ಮಧುಪಾನ ಮಾಡಿ, ಅದರೊಟ್ಟಿಗೆ ಪರಾಗಸ್ಪರ್ಶಕ್ಕೆ ನೆರವಾಗುತ್ತಾ, ಹೂವಿನಿಂದ ಹೂವಿಗೆ, ಗಿಡದಿಂದ ಗಿಡಕ್ಕೆ ಪುಟ ಪುಟನೆ ಹಾಕುತ್ತಾ ಇರುತ್ತವೆ. ಮಧುಪಾನ ಹೀರಲು ಹೀರು ಕೊಕ್ಕಿಗೆ, ಪುಟ್ಟದೇಹ, ಕಿಚಿಕಿಚಿ ಎಂದು ಕೂಗುತ್ತಾ ಹೂವಿನಲ್ಲಿರುವ ಸಿಹಿ ಹನಿಯನ್ನು ಹೀರುತ್ತಿರುತ್ತವೆ. ಇವು ಗುಂಪಾಗಿ ಇರುವುದು ಕಡಿಮೆ. ಜೊತೆಯಾಗಿ ಇಲ್ಲವೆ ಒಂಟಿಯಾಗಿ ಇರುತ್ತವೆ. ಇವುಗಳಲ್ಲಿ ಮೂರು ನಾಲ್ಕು ಜಾತಿಯ ಹಕ್ಕಿಗಳು ಕಂಡುಬರುತ್ತವೆ. ಎಲ್ಲ ಹಕ್ಕಿಗಳ ದೇಹ ವಿನ್ಯಾಸ ಒಂದೇ. ಆದರೆ ಅವುಗಳ ಬಣ್ಣಮಾತ್ರ ಭಿನ್ನವಾಗಿರುತ್ತದೆ. ಈ ಬಣ್ಣ ಭಿನ್ನತೆಯಿಂದ ಮಾತ್ರ ಇವುಗಳನ್ನು ವರ್ಗೀಕರಿಸಬಹುದು.

ಕೆಂಪು ಬಣ್ಣದ ಎದೆಯ ಮೇಲೆ ಹಳದಿ ಚುಕ್ಕೆಗಳಿರುತ್ತವೆ. ನೆತ್ತಿ ನೀಲಿ ಬಣ್ಣಕ್ಕಿದ್ದು, ಬೆನ್ನಿನ ಅರ್ಧ ಮೇಲ್ಭಾಗ ಕಡುಗೆಂಪು ಬಣ್ಣಕ್ಕಿದ್ದು ಬಾಲ ಕಡೆಯ ಉಳಿದರ್ಧ ಭಾಗ ಹಳದಿಯಿಂದ ಕೂಡಿರುವ ಹಳದಿ **ಹೂವಿನ** ಹಕ್ಕಿ, ಹೂವಿನ ಹಕ್ಕಿಗಳಲ್ಲೆ ವರ್ಣಮಯ ವಾದುದು.

ನೇರಳೇ ಹೂವಿನ ಹಕ್ಕಿಗಳಲ್ಲಿ ಗಂಡುಹೆಣ್ಣಿನ ಬಣ್ಣ ಭಿನ್ನವಾಗಿರುತ್ತದೆ. ಹೆಣ್ಣು ಹಕ್ಕಿಯು ಹಳದಿ ಹೊಟ್ಟೆ, ಹಸಿರು ಮಿಶ್ರಿತ ಕಪ್ಪು ಬೆನ್ನಿನ ಸಾದಾಹಕ್ಕಿ. ಆದರೆ ಗಂಡು ಹಕ್ಕಿಯ ಕೊರಳು ನೇರಳೇ ಬಣ್ಣಕ್ಕಿರುತ್ತದೆ ಹಳದಿ ಒಡಲಿನ ನೀಲಿಬಣ್ಣದ ನೆತ್ತಿಯನ್ನು ಹೊಂದಿದೆ.

ಸ್ವಲ್ಪ ಹೆಚ್ಚುಕಡಿಮೆ ಮೇಲಿನ ವಿನ್ಯಾಸವೇ ಹೊಂದಿರುವ ನೀಲಿಬಣ್ಣದ ಹಕ್ಕಿಗಳು, ನೇರಳೆ

ಬಣ್ಣದ ಕೊರಳನ್ನು ಹೊಂದಿವೆ. ಆದರೆ ಕಡು ನೀಲಿಯಬಣ್ಣಕ್ಕಿರುತ್ತವೆ. ಗಂಡು ಹಕ್ಕಿ ಕಪ್ಪು ಮಿಶ್ರಿತ ಕಡುನೀಲಿ ಬಣ್ಣಕ್ಕಿರುತ್ತದೆ.

ಹೊಲ, ಗದ್ದೆ, ತೋಟ ಹೂವಿರುವ ಮನೆಯ ಮುಂದಿನ ತೋಟ ಎಲ್ಲೆಡೆ ಹಾರಾಡುತ್ತಿರುತ್ತವೆ ಬಹು ವೇಗವಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರಾಡುವುದರಿಂದ, ನಾವು ಗಮನಿಸಿರುವುದಿಲ್ಲ. ಅತಿ ನಾಜೋಕಾಗಿ ಗೀಜಿಗನ ಗೂಡಿನಂತಹ ಗೂಡು ಕಟ್ಟುತ್ತದೆ. ಆದರೆ ಗೀಜಗನಂತೆ ನಾರು ಹುಲ್ಲು ಮುಂತಾದವು ಗಳಿಂದ ಗೂಡು ನೇಯುವಂತೆ ನೇಯದೆ, ಒಣಗಿದ ಪಾಚಿ, ತೊಗಟೆಯ ಚೂರುಗಳು, ಬಟ್ಟೆಚೂರುಗಳಿಂದ ಗೂಡು ಕಟ್ಟುತ್ತವೆ. ಇದರಲ್ಲಿ ಮೊಟ್ಟೆಗಳಿನ್ನಿಟ್ಟು, ಕಾವು ಕೊಟ್ಟು ಮರಿ ಮಾಡುತ್ತವೆ.

**ಅಂಬರದ ಹಕ್ಕಿ : (Swibt-Swubt)**

ಪುಟ್ಟ ಹಕ್ಕಿ, ಸಣ್ಣದೇಹ, ದೇಹಕ್ಕೆ ಅಂಟಿಕೊಂಡಿರುವಂತಹ ತಲೆ, ಚಿಕ್ಕ, ಚೂಪಾದ ಕೊಕ್ಕು, ಕೊಕ್ಕಿನ ಮೇಲೆ ಬಾಸಿಂಗದಂತೆ ಕಾಣುವ ಪುಕ್ಕ, ಪಿಳಿಪಿಳಿ ಕಣ್ಣು, ಕಣ್ಣ ಸುತ್ತ ಕಪ್ಪನಿನ ಪುಕ್ಕ, ಸ್ವಲ್ಪ ಕೆಳಗೆ ಕೆಂಪಗಿನ ಪುಕ್ಕ, ಅತಿಗಿಡ್ಡ ಕಾಲು ನೆಪಮಾತ್ರಕ್ಕೆ ಕಾಲಿರುವಂತೆ ಕಾಣುತ್ತದೆ. ಆದರೆ ಬಲವಾದ ರೆಕ್ಕೆ, ಹಾಗೆಯೇ ವಿಸ್ತಾರಕೂಡ. ಉದ್ದವಾದ ಪುಕ್ಕ, ದೇಹಕ್ಕಿಂತ ದೊಡ್ಡದಾದ ರೆಕ್ಕೆ ಪುಕ್ಕಗಳು ಗಾಳಿಯನ್ನು ಸೀಳಿ ಬಹುವೇಗವಾಗಿ ರಾಕೆಟ್‌ನಂತೆ ಹಾರಬಲ್ಲ ಹಕ್ಕಿ. ಅತಿ ವೇಗವಾಗಿ ಹಾರುವುದರಿಂದಲೇ ಶತ್ರುಗಳಿಗೆ ಸಿಗದೆ ತಪ್ಪಿಸಿ ಕೊಳ್ಳುತ್ತದೆ.

ಟೆಲಿಫೋನ್ ತಂತಿಗಳ ಮೇಲೆ ಸಾಲು ಸಾಲಾಗಿ ಕುಳಿತಿರುವುದನ್ನು ಬಯಲು ಸೀಮೆಯ ಎಲ್ಲೆಡೆ ಕಾಣಬಹುದು. ಅತಿ ಎತ್ತರದಲ್ಲಿ ಹಾರಾಡುವ ಈ ಹಕ್ಕಿಗಳು ಹಾರಾಡುತ್ತಲೇ ಕ್ರಿಮಿ ಕೀಟಗಳನ್ನು ಹಿಡಿದು ತಿನ್ನುತ್ತವೆ. ಇವುಗಳ ಎಲ್ಲ ಚಟುವಟಿಕೆಗಳೂ ಹಾರಾಡುತ್ತಲೇ. ನಡೆದಾಟ ಬಹುವಿರಳ. ನೀರು ಕುಡಿಯುವಾಗಲೂ ಸಹ ಹಾರಾಡುತ್ತಲೇ ಬಂದು ಸ್ವಲ್ಪ ತಡೆದು ಕೊಕ್ಕಿನಿಂದ ನೀರು ಹೀರಿ ಮುಂದೆ ಸಾಗುತ್ತದೆ.

ಇದರ ಗೂಡು ಇತರ ಹಕ್ಕಿಗಳ ಗೂಡಿಗಿಂತ ಭಿನ್ನವಾಗಿದೆ. ಅತಿ ಚಿಕ್ಕಗೂಡು ಕಟ್ಟುತ್ತದೆ. ಗೂಡು ಮೊಟ್ಟೆಯಿಡಲು ಸಾಕಾಗುವಷ್ಟು ಗಾತ್ರಕ್ಕೆ ಮೊಟ್ಟೆಯಿಡುತ್ತದೆ. ಸ್ವಲ್ಪ ಮೊಟ್ಟೆ ಹೊರಗೆ ಕಾಣುವಂತೆ, ಮರದ ಕೊಂಬೆಯ ಮೇಲೆ ಜೊಂಡು ಅಥವಾ ಪಾಚಿಯಂತಹ ವಸ್ತುವಿನಿಂದ ಕಟ್ಟುತ್ತದೆ. ಅಲ್ಲಿ ಮೊಟ್ಟೆ ಇಟ್ಟು ಮರಿ ಮಾಡುತ್ತದೆ. ಹಕ್ಕಿ ಮರಿಯು ಕೊಂಬೆಯ ಬಣ್ಣಕ್ಕೆ ಇರುವುದರಿಂದ, ಅಲ್ಲಿ ಹಕ್ಕಿಮರಿ ಕುಳಿತಿದೆ ಎಂದು ಗೊತ್ತಾಗುವುದೇ ಇಲ್ಲ.

ಇದರ ಎಲ್ಲ ಚಟುವಟಿಕೆಗಳು ಅಂಬರದಲ್ಲೆ ಆಗುವುದರಿಂದ ಗಗನದಲ್ಲಿ ಹಾರಾಡುತ್ತಲೇ ದಿನ ಮಾಡುವುದರಿಂದ ಈ ಹಕ್ಕಿಗಳಿಗೆ ಅಂಬರದ ಹಕ್ಕಿಗಳು ಎಂದು ಹೆಸರು ಬಂದಿರಬಹುದು.

**ಗೀಜಗ :**

ಗುಬ್ಬಚ್ಚಿ (ಗುಬ್ಬಿ) ಜಾತಿಗೆ ಸೇರಿದ ಒಂದು ಹಕ್ಕಿ ಗೀಜಗ-ಗೀಜಂಗ. ಇವು ಸಾಮಾನ್ಯವಾಗಿ

ಗದ್ದೆಗಳ, ತೋಟಗಳ ಬಳಿಯಿರುವ ಮರಗಳಲ್ಲಿ ಗೂಡುಕಟ್ಟಿ ವಾಸಿಸುತ್ತವೆ. ಇವು ಗೂಡು ಕಟ್ಟಲು ಆಯ್ದುಕೊಳ್ಳುವ ಸ್ಥಳದ ಬಗ್ಗೆ ಮಾತ್ರ ತುಂಬಾ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತವೆ. ಈಚಲು ಮುಂತಾದ ಎತ್ತರದ ಮರದಲ್ಲಿ ಗೂಡುಕಟ್ಟುತ್ತದೆ. ಇಲ್ಲವೇ ಬಾವಿ, ಕಮರು, ಹರಿವನೀರಿನ ಕಡೆಗೆ ಚಾಚಿಕೊಂಡಿರುವ ಮರಗಳ ರೆಂಬೆಗಳ ತುದಿಯಲ್ಲಿ ಗೂಡುಕಟ್ಟುತ್ತದೆ. ಗೂಡಿಗೆ ಮೊಟ್ಟೆಗಳನ್ನು ತಿನ್ನಲು ಬರುವ ಹಾವು ಇತ್ಯಾದಿಗಳು ರೆಂಬೆಯ ತುದಿಗೆ ಬಂದರೆ ಕೆಳಗಿರುವ ಬಾವಿ ಕಮರಿನ ಪಾಲಾಗಬೇಕಾದುದರಿಂದ, ರಕ್ಷಣೆಗಾಗಿ ಇಂತಹ ಜಾಗಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ.

ಗಂಡು ಹಕ್ಕಿಗೂಡು ಕಟ್ಟುತ್ತವೆ. ಹೆಣ್ಣುಹಕ್ಕಿ ಆಗಮನಕ್ಕಾಗಿ ಕಾಯುತ್ತವೆ. ಜೊತೆಗಾಗಿ ಸಿಕ್ಕ ಕೆಲವು ದಿನ.ಅದರೊಡಗಿದ್ದು, ಅದು ಮೊಟ್ಟೆ ಇಡುವ ಕಸುವಿಗೆ ಬಂದಾಗ, ಆ ಗೂಡಿನಲ್ಲಿ ಅದನ್ನು ಬಿಟ್ಟು ಮತ್ತೊಂದು ಗೂಡು ಕಟ್ಟಲು ಹೋಗುತ್ತದೆ. ಹೆಣ್ಣು ಹಕ್ಕಿ ಗೂಡಿನಲ್ಲಿ ಮೊಟ್ಟೆಯಿಟ್ಟು ಮರಿಮಾಡಿ, ಮರಿಗಳನ್ನು ಪೋಷಿಸುತ್ತದೆ. ಇವು ಗೂಡು ಕಟ್ಟಿದ ಜಾಗಗಳಲ್ಲಿ ಅಪಾಯವಿಲ್ಲವೆಂದು ಕಂಡು ಬಂದರೆ, ಅಲ್ಲಿಯೇ ಹತ್ತಾರು ಗೂಡುಗಳನ್ನು ಕಟ್ಟುತ್ತವೆ.

ಇವುಗಳು ಹಿಂಡು ಹಿಂಡಾಗಿ ಗದ್ದೆಗಳಿಗೆ ಬರುವುದುಂಟು. ಹೀಗೆ ಬಂದ ಹಕ್ಕಿಗಳು ಬತ್ತ ಹಾಲು ತುಂಬುವ ಸಮಯದಲ್ಲಿ ಹಾಲನ್ನು ಹೀರಿ ಕಾಳು ಜಳ್ಳಾಗುವಂತೆ ಮಾಡುತ್ತವೆ. ಕೆಲ ನಿಮಿಷಗಳಲ್ಲಿ ಹಿಂಡುಬಂದು ಕುಳಿತ ಕಡೆ ಬತ್ತದ ತೆನೆಯನ್ನು ನಾಶ ಮಾಡುತ್ತವೆ. ಆದ್ದರಿಂದ ಇವುಗಳು ಗೂಡು ಕಟ್ಟದಂತೆ ತಡೆದು, ಗದ್ದೆಗೆ ಬರುವ ಹಕ್ಕಿಗಳ ಕಡೆ ಕವಣೆ ಬೀಸಿ ಹೊಡೆಯುತ್ತಾರೆ. ಕವಣೆಯ ಮರ್ರೊ ಎಂಬ ಸದ್ದಿಗೆ ಎದ್ದು ಓಡುತ್ತವೆ. ಇಲ್ಲವೆ ಗುಂಪಿನಲ್ಲಿ ಯಾವುದಾದರು ಹಕ್ಕಿ ಕವಣೆ ಏಟಿಗೆ ಬಲಿಯಾಗುತ್ತವೆ. ಅಲ್ಲದೆ ಗದ್ದೆಯ ಆಯಕಟ್ಟಿನಲ್ಲಿ ಕೋಲುಗಳನ್ನು ನಿಲ್ಲಿಸಿ, ಅದಕ್ಕೆ ಡಬ್ಬ ಕಟ್ಟಿ, ಅದರೊಳಗೆ ಸಣ್ಣ ಕಲ್ಲನ್ನು ಹಾಕಿರುತ್ತಾರೆ. ಇಂತಹ ಡಬ್ಬಗಳನ್ನು ನಾಲ್ಕಾರು ಕಡೆ ಕಟ್ಟಿ ಅವುಗಳಿಗೆ ದಾರದ ಸಂಪರ್ಕ ಏರ್ಪಡಿಸಿ. ಒಂದು ಕಡೆ ದಾರ ಹಿಡಿದು ಎಳೆದರೆ ಸಾಕು ಎಲ್ಲಿ ಡಬ್ಬಿಗಳು ದಡ,ದಡ ಸದ್ದು ಮಾಡುತ್ತವೆ. ಆಗ ಹಕ್ಕಿಗಳು ಹಾರಿಹೋಗುತ್ತವೆ. ಈ ಸಮಯವನ್ನು ಬಿಟ್ಟರೆ ಇದ್ದಂತೆ ನಿರ್ಭೀತಿಯಾಗಿ ಎಲ್ಲೆಡೆ ಹಾರಾಡುತ್ತಾ ಈ ಹಕ್ಕಿಗಳಿರುತ್ತವೆ.

**ನವಿಲು : (Peacock)**

ಹಕ್ಕಿ ಪಕ್ಷಿಗಳಲ್ಲಿ ಅತಿ ಸುಂದರವಾದುದು. ನಾಟ್ಯಮಯೂರಿಯೆಂದು ಖ್ಯಾತವಾಗಿದೆ. ಭಾರತದ ಸಂಸ್ಕೃತಿಯಲ್ಲಿ ಶಿಲ್ಪಕಲೆಯಲ್ಲಿ ಇದಕ್ಕೆ ಅಗ್ರಸ್ಥಾನವಿದೆ, ಹಾಸು ಹೊಕ್ಕಾಗಿದೆ, ಪಕ್ಷಿಗಳಲ್ಲಿ ದೊಡ್ಡದೆಂದೆ ಹೇಳಬಹುದು.

ನವಿಲುಗಳು ಚುಂಚನಗಿರಿ ಅದರ ಸುತ್ತಮುತ್ತಲಿನ ಬೆಟ್ಟಗುಡ್ಡಗಳಲ್ಲಿ, ಬಿಳಿಗಿರಿ ರಂಗನಬೆಟ್ಟ, ನಾಗರಹೊಳೆ, ಬಂಡಿಪುರ ಮುಂತಾದ ಕಡೆ ಕಂಡುಬರುತ್ತವೆ. ಕಾಡಿನ ಪ್ರದೇಶಗಳು ಬಿಟ್ಟರೆ ಬಯಲಿನಲ್ಲಿ ಕಂಡುಬರುವುದು ದುರ್ಲಭ.

ನವಿಲು ಕೋಳಿಯ ಬಳಗಕ್ಕೆ ಸೇರಿದುದು. ಇವು ಹಾರುವುದಕ್ಕಿಂತ ಓಡುವುದೇ, ಓಡಾಡುವುದೇ

ಹೆಚ್ಚು. ಮರದ ಕೊಂಬೆಯ ಮೇಲೆ ಕುಳಿತು ತನ್ನ ಗರಿಯನ್ನು ಕೊಂಬೆಯಿಂದ ಕೆಳಗೆ ಇಳಿಬಿಟ್ಟು ಕುಳಿತಾಗ ಅದರ ದೇಹ ವಿನ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ. ನವಿಲು ನರ್ತನವನ್ನು ನೋಡುವುದೇ ಚಂದ. ಗರಿಗೆದರಿ ನರ್ತಿಸಿದರೆ, ಇದರ ನರ್ತನಕ್ಕೆ ತಲೆದೂಗಲೇಬೇಕು.

ನವಿಲಿನ ಗರಿ ಮತ್ತು ಮಾಂಸಕ್ಕಾಗಿ ಬೇಟೆಯಾಡುತ್ತಾರೆ. ಇವುಗಳು ಆಹಾರ ಹುಡುಕುತ್ತಾ ಬೆಳಗಿನ ಸಮಯ, ನಂತರ ಸಂಜೆಯ ಸಮಯದಲ್ಲಿ ಓಡಾಡುತ್ತಿರುತ್ತವೆ. ಕೋಳಿಗಳಂತೆ ಇದೂ ಸಹ ಕೊಕ್ಕಿನಿಂದ ನೆಲವನ್ನು ಕುಕ್ಕುತ್ತಾ ಹೋಗುವುದನ್ನು ಕಾಣಬಹುದು. ಅಪಾಯ ಕಂಡಾಗ ಓಡಿ ಪೊದರು ಮೆಳೆಗಳ ಮರೆಯಲ್ಲಿ ಮರೆಯಾಗುತ್ತದೆ. ಇಲ್ಲವೇ ಹಾರಿ ಮರದ ಮೇಲೆ ಕೂರುತ್ತದೆ.

ನವಿಲುಗಳು ಓಡಾಡುವ ಜಾಗದಲ್ಲಿ ಕುಳಿತು ನವಿಲು ಕೂಗಿದಂತೆಯೇ ಕೂಗುತ್ತಾರೆ, ನವಿಲು ಶಬ್ದಕ್ಕೆ ಪ್ರತಿಕ್ರಿಯಿಸಿ, ಶಬ್ದ ಬಂದ ಕಡೆಗೆ ತನ್ನ ಲಕ್ಷ್ಯವನ್ನು ತಿರುಗಿಸುತ್ತದೆ. ಅತ್ತಕಡೆ ಹೆಜ್ಜೆ ಹಾಕುತ್ತದೆ. ಈ ಸಮಯವನ್ನು ಬಳಸಿಕೊಂಡು, ಕೋವಿ, ದೊಣ್ಣೆ ಮುಂತಾದದುದರಿಂದ ಹೊಡೆದು ಹಿಡಿಯುತ್ತಾರೆ. ಸಂಜೆಯ ಆಹ್ಲಾದಕರ ವಾತಾವರಣದಲ್ಲಿ ನವಿಲು ನರ್ತಿಸುವುದು ಹೆಚ್ಚು. ನರ್ತಿಸುವಾಗ, ಮೈ ಮರೆತು, ನರ್ತನಕ್ಕೆ ಹೆಚ್ಚು ಗಮನಕೊಟ್ಟು, ಸುತ್ತ ಮುತ್ತಲಿನ ಅಪಾಯವನ್ನು ನಿರ್ಲಕ್ಷಿಸುತ್ತದೆ. ಬೇಟೆಗಾರ ಇಂತಹ ಸಮಯವನ್ನು ವ್ಯರ್ಥಮಾಡಿಕೊಳ್ಳದೆ ಬೇಟೆಯಾಡುತ್ತಾನೆ, ಮಾಂಸದ ಜೊತೆಗೆ ಗರಿಯೂ ಸಿಗುತ್ತದೆ.

ಮುಸ್ಲಿಂ ಜನಾಂಗದವರು ನವಿಲಿನ ಮಾಂಸವನ್ನು ಬಹು ಇಷ್ಟಪಡುತ್ತಾರೆ. ಅಂತೆಯೇ ಗರಿಗಳನ್ನು ಹೆಚ್ಚು ಬಳಸುವವರೂ ಇವರೇ.

### ಗಿಣಿ : (Parrot)

ಗಿಳಿ-ಚಿಲಕ-ರಾಮಚಿಲಕ ಎಂದೆಲ್ಲಾ ಕರೆಯುವ ಗಿಳಿ ಪ್ರಪಂಚದಲ್ಲಿ ಮೂನ್ನೂರಕ್ಕೂ ಹೆಚ್ಚು ಪ್ರಬೇಧಗಳಿವೆ. ಆದರೆ ಬಯಲು ಸೀಮೆಯಲ್ಲಿ ಬೆರಳೆಣಿಕೆಯಷ್ಟು ಮಾತ್ರ. ಬಯಲು ಸೀಮೆಯ ಎಲ್ಲೆಡೆ ಗಿಣಿಗಳು ಕಂಡುಬರುತ್ತವೆ. ಸಾಲು ಮರಗಳಲ್ಲಿ ದೊಡ್ಡ ದೊಡ್ಡ ಮರಗಳಲ್ಲಿ ಹೆಚ್ಚು ವಾಸಿಸುತ್ತವೆ. ಮರದ ಪೊಟರೆಗಳಲ್ಲಿ, ಮರಕುಟಕ ಮಾಡಿದ ಮರ ಕೊರೆದ ಗೂಡುಗಳಲ್ಲಿ ವಾಸಿಸುತ್ತವೆ.

ಬಯಲು ಸೀಮೆಯಲ್ಲಿ ಮೂರು-ನಾಲ್ಕು ತರಹದ ಗಿಣಿಗಳು ಮಾತ್ರ ಕಂಡುಬರುತ್ತವೆ. ರಾಮಗಿಣಿ-ಮಾತಿನಗಿಣಿ, ಇವು ಬಯಲು ಮತ್ತು ಕಾಡಿನಲ್ಲಿ ಎರಡೂ ಕಡೆ ಕಂಡುಬರುತ್ತವೆ. ಸಾಮಾನ್ಯವಾಗಿ ಇವುಗಳನ್ನು ಹಿಡಿದು ಶಾಸ್ತ್ರ ಹೇಳಲು ಪಂಜರದಲ್ಲಿ ಬಂದಿಯಾಗಿ ಇಟ್ಟಿರುತ್ತಾರೆ. ನಾವು ಹೇಳಿದ ಮಾತನ್ನು, ಶಬ್ದವನ್ನು ಜ್ಞಾಪಕದಲ್ಲಿ ಇಟ್ಟುಕೊಂಡು, ನಾವು ಹೇಳಿದಂತೆಯೇ ಹೇಳುತ್ತದೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ನೀವು ಹೇಳಿಕೊಟ್ಟು, ಹೇಳು ಎಂದರೆ ಅದರಂತೆ ಮಾತ್ರ ಹೇಳುತ್ತದೆ. ತಾನಾಗಿಯೇ ಯಾವ ಶಬ್ದವನ್ನು ಗ್ರಹಿಸಿ ಪುನರುಚ್ಚಿಸುವುದಿಲ್ಲ.

ಅಥವಾ ಇತರ ಪ್ರಾಣಿಗಳ ಕೂಗನ್ನು ಅನುಕರಣೆ ಮಾಡುವುದಿಲ್ಲ. ಆದ್ದರಿಂದ ತಾನಾಗಿ ಗಿಳಿ ಮಾತನಾಡುವುದಿಲ್ಲ ಎಂಬ ಅಂಶ ಬಹಳಷ್ಟು ಜನಕ್ಕೆ ತಿಳಿದಿರಲಾರದು.

ಗಿಳಿ ಶಾಸ್ತ್ರವನ್ನು ಹೇಳುವವರು ತೆಲುಗಿನವರೆ ಜಾಸ್ತಿ. ಕನ್ನಡದವರು ಇಲ್ಲವೆಂದೇ ಹೇಳಬಹುದು. ರಸ್ತೆಯ ಬದಿಯಲ್ಲಿ ಇಂದಿಗೂ ಶಾಸ್ತ್ರ ಹೇಳುವುದನ್ನು ಕಾಣಬಹುದು. ಆದರೆ ಗಿಳಿ ಶಾಸ್ತ್ರ ಹೇಳುವುದಿಲ್ಲ. ಯಜಮಾನ ಕೆಲವು ವಿಷಯಗಳನ್ನು ಒಂದೊಂದು ಕಾರ್ಡಿನಲ್ಲಿ ಬರೆದು ಅಂತಹ ಹತ್ತಾರು ಕಾರ್ಡುಗಳನ್ನು ಜೋಡಿಸಿ ಇಟ್ಟಿರುತ್ತಾನೆ. ಶಾಸ್ತ್ರ ಕೇಳಲು ಬಂದವರಿಗೆ, ತನ್ನ ಯಜಮಾನನ ಅಣತಿಯಂತೆ (ತೆಲುಗಿನಲ್ಲಿ ಏನೋ ಹೇಳುತ್ತಾನೆ ಅದರಂತೆ) ಪಂಜರದೊಳಗಿನಿಂದ ಹೊರಬಂದು ಒಂದು ಕಾರ್ಡನ್ನು ಹೊರ ತೆಗೆದು ಹಾಕಿ ಪಂಜರದೊಳಗೆ ಹೋಗುತ್ತದೆ. ಅದನ್ನು ಓದಿ ನಾವು ಭವಿಷ್ಯ ಅರಿಯಬೇಕು.

ರಾಮಗಿಳಿ ರಕ್ತಗೆಂಪು ಕೊಕ್ಕನ್ನು ಹೊಂದಿದೆ. ಮೈಯೆಲ್ಲಾ ಎಲೆ ಹಸಿರು ಬಣ್ಣಕ್ಕಿರುತ್ತದೆ. ಆಕರ್ಷಕ ಹಸಿರು ಬಣ್ಣವೆನ್ನಬಹುದು. ಕೊಂಕಿರುವ ಕೊಕ್ಕು, ಕೊಕ್ಕು ಬಹು ಗಟ್ಟಿಯಾಗಿರುತ್ತದೆ. ಹಳದಿ-ನೀಲಿ ಮಿಶ್ರಿತ ಹಸುರಿನ ಉದ್ದವಾದ ಬಾಲದ ಪುಕ್ಕಗಳಿರುತ್ತದೆ. ಗಂಡುಹಕ್ಕಿಗೆ ಕೊರಳಿನ ಸುತ್ತ ಒಂದು ಉಂಗುರವಿರುತ್ತದೆ. ಕಿರ್‌ಕಿರ್ ಎಂದು ಕೂಗುತ್ತಾ ಗುಂಪುಗುಂಪಾಗಿ ಹಾರಾಡುತ್ತಿರುತ್ತವೆ.

ಕೊಕ್ಕು ಬಹಳ ಗಟ್ಟಿಯಾಗಿದೆ. ಹುಲಿ ಉಗುರಿನಂತಿದೆ. ಪಾದದ ವಿನ್ಯಾಸ ಮರಹತ್ತಲು, ಗಟ್ಟಿಯಾಗಿ ಹಿಡಿದುಕೊಳ್ಳಲು ಸಹಕಾರಿಯಾಗಿರುವಂತಿದೆ. ಮರವನ್ನು ಒಂಟಿ ಕಾಲಿನಲ್ಲೆ ಹಿಡಿದುಕೊಂಡು, ಮತ್ತೊಂದು ಕಾಲಿನಿಂದ ಹಣ್ಣು ಹಂಪಲುಗಳನ್ನು ಹಿಡಿದುಕೊಂಡು ತಿನ್ನುತ್ತದೆ. ಅಂದಮೇಲೆ ಪಾದದ ಬೆರಳುಗಳ ಹಿಡಿತ ಎಷ್ಟು ಬಿಗಿ ಎಂದು ಊಹಿಸಬಹುದು. ಕೊಕ್ಕು ಅಷ್ಟೇ ಗಡಸು. ಕಾಳನ್ನು ಸುಲಭವಾಗಿ ಕಡಿದು ತುಂಡಾಗಿಸುತ್ತದೆ, ಪುಡಿಯಾಗಿಸುತ್ತದೆ. ತನ್ನ ಕಾಲ ಬೆರಳಿನ ಹಿಡಿತ ಹಾಗೂ ಕೊಕ್ಕಿನ ಸಹಾಯದಿಂದ ಮರವೇರುತ್ತದೆ, ಓಡಾಡುತ್ತದೆ, ರೆಂಬೆಯಿಂದ ರೆಂಬೆಗೆ ಅಥವಾ ಮರದಿಂದ ಮರಕ್ಕೆ ಹಾರುತ್ತದೆ. ಒಟ್ಟಿನಲ್ಲಿ ಮರದ ಮೇಲೆ ಓಡಾಡುವುದೇ ಹೆಚ್ಚು.

ಬಯಲು ಸೀಮೆಯಲ್ಲಿ ಮೆಣಸಿನಕಾಯಿಯನ್ನು ಗಿಳಿ ಹಾಳು ಮಾಡುವುದು. ಗುಂಪು ಗುಂಪಾಗಿ ಮೆಣಸಿನಕಾಯಿ ಹೊಲಗಳಿಗೆ, ಧಾಳಿಯಿಟ್ಟು, ಕೆಲ ನಿಮಿಷಗಳಲ್ಲಿ ಬಹಳಷ್ಟು ಮೆಣಸಿನಕಾಯಿಯನ್ನು ತಿನ್ನುವುದಕ್ಕಿಂತ ಹೆಚ್ಚು ಹಾಳು ಮಾಡುತ್ತದೆ. ಹಿಂಡು ಎರಗಿ ಹೋದರೆ ಸಾಕು, ನೆಲದ ಮೇಲೆಲ್ಲಾ ಮೆಣಸಿಕಾಯಿ ಎರಚಾಡಿರುತ್ತದೆ. ಎಲ್ಲ ಕಾಯಿಗಳು ಸೀಳಲ್ಪಟ್ಟಿರುತ್ತವೆ, ಪ್ರಯೋಜನಕ್ಕೆ ಬಾರದಂತೆ ಮಾಡಿಬಿಡುತ್ತವೆ.

ಗಿಳಿಗಳು ಸಾಮಾನ್ಯವಾಗಿ ಮಾರ್ಚಿಯಿಂದ ಜೂನ್ ತಿಂಗಳ ನಡುವೆ ಗೂಡುಕಟ್ಟಿ ಮೊಟ್ಟೆ ಇಟ್ಟು ಮರಿಮಾಡುತ್ತದೆ. ಮರದ ಪೊಟರೆಗಳಲ್ಲಿ ಗೂಡು ಕಟ್ಟುವ ಇದು, ಒಂಟಿ ಕೊಂಬೆಯಲ್ಲಿ

ಇರುವ ಪೊಟರೆಗಳಲ್ಲಿ ಗೂಡು ಮಾಡುವುದು ಹೆಚ್ಚು. ಶತ್ರುಗಳಿಗೆ ಸಾಮಾನ್ಯವಾಗಿ ಸಿಕ್ಕದಂತಹ ಪೊಟರೆಗಳಲ್ಲಿ ಗೂಡು ಕಟ್ಟಿ ಮೊಟ್ಟೆ ಇಟ್ಟು ಮರಿ ಮಾಡುತ್ತದೆ. ಗಿಳಿ ಹಿಡಿಯುವವರು ಕೈಗೆ ಬಟ್ಟೆ ಸುತ್ತಿಕೊಂಡು ಹಿಡಿಯುತ್ತಾರೆ. ಇಲ್ಲದಿದ್ದಲ್ಲಿ ಬೆರಳುಗಳು ಗಿಳಿಯ ಕೊಕ್ಕಿಗೆ ಸಿಕ್ಕಿ ಚರ್ಮಕಿತ್ತು ಬಂದೀತು.

ಹಣ್ಣು ಹಂಪಲುಗಳು, ಕಾಳುಗಳು ಇದರ ಮುಖ್ಯ ಆಹಾರ. ಗಿಣಿ ಕಚ್ಚಿದ ಹಣ್ಣು ಬಹು ರುಚಿ ಎಂಬ ನಂಬಿಕೆ ಇದೆ. ಅಂತೆಯೇ, ಸಾಕು ಹಕ್ಕಿಯಾದ ಇದನ್ನು ಕೆಲವರು ಮನೆಯಲ್ಲಿ ಇಟ್ಟುಕೊಳ್ಳಬಾರದೆಂದು ಹೇಳುತ್ತಾರೆ. ಏಕೆಂದರೆ, ರಾತ್ರಿಯಲ್ಲಿ ಒಂಟಿ ಕಾಲಿನಲ್ಲಿ ನಿಂತು "ರಾಮರಾಮ" ಎನ್ನುತ್ತದೆ. ಇದರಿಂದ ಮನೆಗೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆಯಿದೆ. ಹಕ್ಕಿ ಪಿಕ್ಕಿರು, ಅಲೆಮಾರಿಗಳು ಹಾಗೂ ಕೆಲ ಜನಾಂಗದವರು ಗಿಳಿಯನ್ನು ತಿನ್ನುತ್ತಾರೆ.

**ಮಿಂಚುಳ್ಳಿ :**

ಹತ್ತಾರು ಬಗೆಯ ಮಿಂಚುಳ್ಳಿಗಳಿವೆ. ಆದರೆ ಬಯಲು ಸೀಮೆಯಲ್ಲಿ ಕೆಲವು ಮಾತ್ರ ಕಂಡುಬರುತ್ತವೆ. ಇವು ಸಾಮಾನ್ಯವಾಗಿ ಕೆರೆ, ಕಟ್ಟೆ, ಹೊಳೆ ಹಳ್ಳಕೊಳ್ಳಗಳ ಬಳಿ ಕಂಡುಬರುತ್ತವೆ. ನೀರ ಮೇಲೆ ಹಾರಾಡುತ್ತಾ, ಮೀನುಗಳನ್ನು ಗಮನಿಸುತ್ತಿರುತ್ತವೆ. ಮೀನು ಕಂಡಕೂಡಲೆ ರಭಸವಾಗಿ ನುಗ್ಗಿ ಕೊಕ್ಕಿನಿಂದ ಮೀನನ್ನು ಹಿಡಿದು ಮೇಲೇಳುತ್ತದೆ, ನಂತರ ಮರವೇರಿ ಕುಳಿತು ಮೀನು ತಿನ್ನುತ್ತವೆ. ಮೀನನ್ನು ಸಾಯಿಸಿಯೇ ತಿನ್ನುತ್ತವೆ.

ಪುಟ್ಟ ಹಕ್ಕಿ, ಉದ್ದ ಕೊಕ್ಕು ಚೂಪಾಗಿರುತ್ತದೆ. ಮರದ ಪೊಟರೆಗಳಲ್ಲಿ ಕೆಲವೊಮ್ಮೆ ಬಿಲಗಳಲ್ಲಿ ಮೊಟ್ಟೆ ಇಟ್ಟು ಮರಿಮಾಡುತ್ತದೆ. ಮಿಂಚುಳ್ಳಿಯ ಕೊಕ್ಕು ಇದರ ದೇಹಕ್ಕೆ ಸ್ವಲ್ಪ ದೊಡ್ಡದೆಂದೆ ಹೇಳಬಹುದು. ಕಾಡು ಮಿಂಚುಳ್ಳಿ ಮೈನಾ, ಹಕ್ಕಿಯಷ್ಟು ದಪ್ಪವಿರುತ್ತವೆ. ಉದರಭಾಗ ಹಾಗೂ ತಲೆ ಕಡು ಕಂದುಬಣ್ಣದಿಂದ ಕೂಡಿದ್ದು, ಪುಕ್ಕ ಕಡು ನೀಲಿ ಬಣ್ಣಕ್ಕಿರುತ್ತದೆ. ಕಾಲು ಮತ್ತು ಕೊಕ್ಕು ಕೆಂಪಗಿರುತ್ತದೆ. ಹುಳ ಹುಪ್ಪಟೆಗಳೇ ಇದರ ಆಹಾರ.

**ಮರಕುಟುಕ :**

ಬಯಲು ಸೀಮೆಯ ಉದ್ದಗಲಕ್ಕೂ ಕಂಡುಬರುವ ಹಕ್ಕಿ. ಮರವನ್ನು ತಮಟೆ ಬಡಿದಂತೆ ಟಕು ಟಕು ಕುಟುಕುತ್ತಾ ಕೈ ಹಿಡಿಯುವಷ್ಟು ಅಗಲ ಪೊಟರೆ ಕೊರೆದು ಅದರೊಳಗೆ ವಾಸಿಸುವುದು. ಕಪ್ಪು ಬಿಳುಪಿನ ರೆಕ್ಕೆ ಪುಕ್ಕಗಳನ್ನು ಹೊಂದಿದೆ. ತಲೆಮಾತ್ರ ವಿಶಿಷ್ಟವಾಗಿದೆ. ಕೊಕ್ಕುಳ್ಳ ಮುಂದಿನ ಭಾಗ, ಹಿಂಬಂದಿಗೆ ಕೊಕ್ಕಿಲ್ಲದಿದ್ದರೂ ಕೊಕ್ಕಿನಂತೆ ಉಳ್ಳಭಾಗ. ಕೊಕ್ಕಿರುವ ಮುಂಭಾಗಕ್ಕಿಂತ ಸ್ವಲ್ಪ ಕಡಿಮೆ ಉದ್ದವಿರುತ್ತದೆ. ಮರವನ್ನು ಹಿಡಿದುಕೊಳ್ಳಲು ಸಹಕಾರಿಯಾಗಿರುವಂತಹ ಬಹುಗಟ್ಟಿಯಾದ ಬೆರಳುಗಳು. ಒಂಟಿಯಾಗಿ ಇಲ್ಲವೆ ಜೊತೆಯಾಗಿ ಇರುತ್ತವೆ. ಗುಂಪಿನಲ್ಲಿ ಇರುವುದು ಬಹುಕಡಿಮೆ.

ಇವು ಮರಗಳನ್ನು ಕುಟುಕುಟು ಕುಟುಕುತ್ತಾ, ಆ ಶಬ್ದವನ್ನು ಸಂಗೀತಂತೆ ಆಲಿಸುವಂತೆ ಹುಳ ಹುಪ್ಪಟೆ, ಕಾಳುಗಳು ಇದರ ಆಹಾರ. ಹುಳುಗಳನ್ನು ಹುಡುಕಿ ತಿನ್ನುವುದೇ ಹೆಚ್ಚು. ಮರದ

ತೊಗಟೆಯನ್ನು (ಒಣ) ಬಿಡಿಸಿ, ತೊಗಟೆಯ ಹಿಂದಿರುವ ಮರದ ಹುಳುಗಳನ್ನು ತಿನ್ನುವುದನ್ನು ಕಾಣಬಹುದು.

**ಗೊರವಂಕ :**

ಬಿಳಿ ಮಿಶ್ರಿತ ಕಂದುಬಣ್ಣದ ಹಕ್ಕಿ ನೋಡಲು ಸಣ್ಣ ಪೆಂಗ್ವಿನ್‌ಗಳಂತೆ ಕಾಣುತ್ತವೆ. ಪುಟ್ಟತಲೆ ಕಪ್ಪುಮಿಶ್ರಿತ, ಬಿಳಿ ಕಂದು ಪುಕ್ಕಗಳಿಂದ ಕೂಡಿರುತ್ತದೆ. ಬಯಲು ಸೀಮೆಯ ಎಲ್ಲೆಡೆ ವಾಸಿಸುತ್ತದೆ. ಎಲ್ಲೆಡೆ ಓಡಾಡಿಕೊಂಡು ಕಾಳುಗಳನ್ನು ಹೆಕ್ಕಿ ತಿನ್ನುತ್ತಿರುತ್ತದೆ. ಗಿಡ್ಡ ದೃಢವಾದ ಕಾಲುಗಳು. ಕಾಳುಗಳನ್ನು ಹುಡುಕುತ್ತಾ ಹೊಲದ ಬಯಲಿನಲ್ಲಿ ಹೆಚ್ಚು ಓಡಾಡುವುದನ್ನು ಕಾಣಬಹುದು. ಹಕ್ಕಿಪಿಕ್ಕರಿಗೆ, ಅಲೆಮಾರಿಗಳಿಗೆ ಯಾವ ಹಕ್ಕಿಗಳೂ ದೊರಕದಿದ್ದಾಗ ಇವುಗಳಂತೂ ಸಿಕ್ಕೇ ಸಿಗುತ್ತವೆ. ಮಾಂಸ ತುಂಬಿದ ದೇಹ. ಅದಕ್ಕಾಗಿಯೇ ಇವುಗಳ ಮೇಲೆ ಕಣ್ಣು, ಇತರ ಜನಾಂಗದವರು ಇವುಗಳನ್ನು ಹಿಡಿಯುವುದು ಕಡಿಮೆ.

**ಕೊಕ್ಕರೆ :**

ಕೆರೆಯ ಅಂಗಳದಲ್ಲಿ ಸೋರೆ ಹೂವಿನಷ್ಟು ಬಿಳುಪಾದ ಕೋಳಿಗಳನ್ನು ದೊಡ್ಡ ದೇಹದ, ಉದ್ದ ಕಾಲಿನ ಹಕ್ಕಿಗಳನ್ನು ನೋಡವದರಿಲ್ಲ. ಮಲಗಿರುವ ದನಗಳ ಬಳಿ ಕುಳಿತು ಅದರ ಮೈಯಲ್ಲಿರುವ ಉಣ್ಣೆಯನ್ನು ಹಿಡಿದು ತಿನ್ನುತ್ತಿರುತ್ತವೆ. ಎಮ್ಮೆಗಳ ಮೇಲೆ ಕುಳಿತು ಸವಾರಿ ಮಾಡುತ್ತಾ ಇರುವುದನ್ನು ಕಾಣಬಹುದು. ಬಯಲು ಸೀಮೆಯಲ್ಲೇ ಅಲ್ಲ ಪ್ರಪಂಚದ ಉದ್ದಗಲಕ್ಕೂ ಕಂಡುಬರುತ್ತವೆ. ಬೆಳ್ಳಕ್ಕಿಗಳು, ಹಳದಿಬಣ್ಣದ ಕತ್ತಿನ ಜಕಾನಾ ಹಕ್ಕಿಗಳು ತಾವರೆ ಹೂವು ಗಿಡಗಳಿರುವ ಕೆರೆ ಕಟ್ಟೆಗಳಲ್ಲಿ ಹೆಚ್ಚು ಕಂಡುಬರುತ್ತವೆ. ಈ ತಾವರೆಯ ಎಲೆಗಳನ್ನು ಹೆಜ್ಜೆಯೂರಲು ಜಾಗ ಮಾಡಿಕೊಂಡು ಎಲೆ ಮುಳುಗದಂತೆ ಹಗುರವಾಗಿ ನಡೆಯುವ ಈ ಹಕ್ಕಿಯ ನಾಜೂಕಿನ ನಡಿಗೆಯನ್ನು ನೋಡಿಯೇ ಆನಂದಿಸಬೇಕು. ಕೊರ ಕೊರ ಎಂದು ಶಬ್ದ ಮಾಡುತ್ತಿರುತ್ತವೆ.

ಉದ್ದಕಾಲಿನ ಬಿಳಿ ಕೊಕ್ಕರೆಗೆ ಕಪ್ಪು ತಲೆ, ಕೊಕ್ಕಿರುತ್ತದೆ. ಇದನ್ನು ಕಂಚಗಾರ ಕೊಕ್ಕರೆ ಎಂದು ಕರೆಯುತ್ತಾರೆ. ನೀರು ಕಡಿಮೆ ಇರುವ ಕಡೆ ಸಣ್ಣ ಮೀನುಗಳನ್ನು, ಹುಳ ಹುಪ್ಪಟೆಗಳನ್ನು, ಸಣ್ಣ ಕಪ್ಪೆಗಳನ್ನು ಹಿಡಿದು ತಿನ್ನುತ್ತಿರುತ್ತವೆ.

ನೀರ ಹಕ್ಕಿಗಳಲ್ಲಿ ನಾಮ ಗೋಳಿಗಳು, ಹುಂಡೆ ಹಕ್ಕಿಗಳು ನೀರ್ಗೋಳಿಗಳು ಮುಂತಾದವು ಕಂಡುಬರುತ್ತವೆ. ಹುಳು ಮುಳುಕವಂತೂ ಸದಾ ನೀರಿನಲ್ಲಿ ಮುಳುಗುಹಾಕುತ್ತಾ, ಪುಡಿಮೀನು ಸೀಗಡಿ ಮುಂತಾದವುಗಳನ್ನು ತಿನ್ನುತ್ತಾ, ನೀರಿನಲ್ಲಿಯೇ ಇರುತ್ತವೆ. ಕಂದುಗೆಂಪು ಬಣ್ಣದ ಈ ಹಕ್ಕಿ ಬಾತುಕೋಳಿಯನ್ನು ಹೋಲುತ್ತದೆ. ಆಕಾರ ಚಿಕ್ಕದಷ್ಟೆ.

**ಮುತ್ತಿನ ಹಕ್ಕಿ :**

''ಮುತ್ತಿನ್ ಶೆಟ್ಟಿ ತೊರೆ ತೊರೆ'' ಎಂದು ಕೂಗುವ ಒಂದು ಹಕ್ಕಿಯಿದೆ. ಬೆಳಗಿನ ಹೊತ್ತಿನಲ್ಲಿ ಇಲ್ಲವೆ ಸಂಜೆಯ ಹೊತ್ತಿನಲ್ಲಿ ಇದು ಕೂಗುವುದು ಹೆಚ್ಚು. ಮಳೆಯ ಮೋಡ ನೋಡಿದಾಗಲೂ ಕೂಗುತ್ತದೆ. ಈ ಹಕ್ಕಿಯ ಹಿಂದೆ ಒಂದು ದಂತ ಕಥೆಯೇ ಇದೆ. ಒಮ್ಮೆ ಮುತ್ತು ರತ್ನದ

[illegible]

## ಗರುಡ :

[illegible] ಗರುಡ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. [illegible] ಗರುಡ ಎಂದು [illegible]. ಗರುಡ ಪುರಾಣವಿದೆ. ವಿಷ್ಣುವಿನ ವಾಹನ, [illegible] ದೈವತ್ವವೂ ಇದೆ. ಗರುಡಧ್ವಜ, ಗರುಡಪಕ್ಷಿ, ಗರುಡ ಮಂತ್ರವೂ ಉಂಟು. ಹೀಗೆ ಬಹುಮುಖಿ ಸ್ಥಾನ ಪಡೆದುಕೊಂಡ ಪಕ್ಷಿ ಮತ್ತೊಂದಿಲ್ಲ.

[illegible] ಬಣ್ಣದ ರೆಕ್ಕೆಯನ್ನು ಗರುಡ ಹೊಂದಿದೆ. ಬೆಟ್ಟ, ಗುಡ್ಡಗಳಲ್ಲಿ, ಎತ್ತರದ ಮರದ ತುದಿಯಲ್ಲಿ ವಾಸಿಸುತ್ತದೆ. ಇದರ ಗೂಡಿನಲ್ಲಿ ಸಂಜೀವಿನಿ ಕಡ್ಡಿ ಇರುತ್ತದೆ ಎಂಬ ನಂಬಿಕೆ ಇದೆ.

ಗರುಡನನ್ನು ಕಂಡರೆ ಹಾವು ಹೆದರಿ ಕ್ಷಣಾರ್ಧದಲ್ಲಿ ಮರೆಯಾಗುತ್ತದೆ. ಗರುಡನ ಕಣ್ಣಿಗೆ ಹಾವು ಬಿದ್ದರೆ, ಅದನ್ನು ಹಿಡಿಯುತ್ತದೆ. ಹಾವು ದೊಡ್ಡದಿದ್ದಲ್ಲಿ, ಗರುಡನಿಂದ ತಪ್ಪಿಸಿಕೊಳ್ಳಲು ಹೋರಾಡುತ್ತದೆ. ಗರುಡನನ್ನು ಸುತ್ತುವರಿದು, ಕಾಲುಗಳನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳುತ್ತದೆ. ಆದರೆ, ಗರುಡ ತೆಕ್ಕೆಗೆ ಸಿಕ್ಕಿಕೊಳ್ಳದಂತೆ ತಪ್ಪಿಸಿಕೊಂಡು ಕಾಲನ್ನು ಒಂದೆಡೆ ಊರದೆ ಬದಲಿಸುತ್ತಿರುತ್ತದೆ. ಅದೇ ಸಮಯದಲ್ಲಿ ಹಾವಿನ ತಲೆಯನ್ನು ಕುಕ್ಕಿ ಕುಕ್ಕಿ ಸೋಲುವಂತೆ ಮಾಡುತ್ತದೆ. ಹಾವು ಎಷ್ಟೇ ಒದರಾಡಿದರೂ ಬಿಡುವುದಿಲ್ಲ. ಹಾಗೆಯೇ, ಅದರ ತೆಕ್ಕೆಗೆ ಸಿಲುಕಿಕೊಳ್ಳದಂತೆ, ಆದರೆ, ಅದರ ಮೇಲಿನ ಹಿಡಿತ ತಪ್ಪದಂತೆ, ಒಂದು ಕಾಲಿನಿಂದ ಹಾವನ್ನು ಹಿಡಿದು ಮತ್ತೊಂದು ಕಾಲನ್ನು ಬದಲಿಸುವ ಆಟ ಕೆಲ ನಿಮಿಷ ನಡೆಯುತ್ತದೆ. ಹಾವು ಸ್ವಲ್ಪ ಸುಸ್ತಾದಂತೆ ಕಂಡುಬಂದಾಗ, ಒದರಾಟ ನಿಸ್ತೇಜವಾಗುತ್ತಾ ಬಂದಾಗ, ತಲೆಯ ಕಡೆಯಿಂದ ಇಡಿಯಾಗಿ ನುಂಗಲು ಪ್ರಾರಂಭಿಸುತ್ತದೆ, ಸಾಯುವವರೆಗೆ ಕಾಯುವುದಿಲ್ಲ.

ಹಾವನ್ನು ಹಿಡಿದು ಹಾರಿದಾಗ ಮಾತ್ರ, ಗರುಡ ಹಾರಲು ಅಡ್ಡಿಯಾಗುವಂತೆ ಹಾವು ರೆಕ್ಕೆಗೆ

ಸುತ್ತಿಕೊಳ್ಳಲು ತೊಡಗುತ್ತದೆ. ಆಗ ಗರುಡ ಹಾವಿನ ಮೇಲಿನ ಹಿಡಿತ ಸಡಿಲಿಸುತ್ತದೆ, ಇಲ್ಲವೆ ಪೂರ್ಣವಾಗಿ ಬಿಟ್ಟುಬಿಡುತ್ತದೆ. ಹಾವು ಕೆಳಗೆ ಬಿದ್ದು ತಪ್ಪಿಸಿಕೊಂಡು ಹೋಗುವ ಮುನ್ನ, ಮತ್ತೆ ಹಿಡಿಯುತ್ತದೆ. ಈ ಸಮಯದಲ್ಲಿ ಹಾವಿಗೆ ಬಿಲ, ಕಲ್ಲಿನ ಇರುಕು, ಸಂದು ಸಿಕ್ಕರೆ ಮಾತ್ರ ತಪ್ಪಿಸಿಕೊಳ್ಳುತ್ತದೆ. ಇಲ್ಲವಾದಲ್ಲಿ ಗರುಡನಿಗೆ ಮತ್ತೆ ಆಹುತಿಯಾಗುತ್ತದೆ.

ಕಾಳಿಂಗ ಮರ್ದನ ಸಮಯದಲ್ಲಿ ಕಾಳಿಂಗನ ತಲೆಯ ಮೇಲೆ ಶ್ರೀಕೃಷ್ಣ ನರ್ತಿಸಿದ/ಕುಣಿದ/ ತುಳಿದ, ಆಗ ಕಾಳಿಂಗನ ತಲೆಯ ಮೇಲೆ ಆತನ ಪಾದದ ಚಿಹ್ನೆ ಮೂಡಿತು. ಕಾಳಿಂಗನ ದರ್ಪ ಮುರಿದು, ಶ್ರೀಕೃಷ್ಣನಿಗೆ ಶರಣಾದಾಗ, ನಿರ್ಜನವಾದ ಮಡುವಿನಲ್ಲಿ ಯಾರಿಗೂ ತೊಂದರೆ ಕೊಡದೆ ವಾಸಿಸಲು ವಾಗ್ದಾನ ಮಾಡಿತು. ಆದ್ದರಿಂದ ಕಾಳಿಂಗನನ್ನು ಶ್ರೀಕೃಷ್ಣ ಕ್ಷಮಿಸಿ, ಹರಸಿ ಬಿಟ್ಟನೆಂದು ಕಥೆಯಲ್ಲಿ ಬರುತ್ತದೆ. ಹೀಗೆ ಕಾಳಿಂಗ ಸರ್ಪದ ತಲೆಯ ಮೇಲೆ ಶ್ರೀಕೃಷ್ಣನ ಪಾದದ ಮುದ್ರೆಯಿರುವುದರಿಂದ ಗರುಡ ಇದನ್ನು ಮುಟ್ಟುವುದಿಲ್ಲವೆಂಬ ನಂಬಿಕೆ ಇದೆ.

ಗರುಡ ಮಚ್ಚೆಯುಳ್ಳ ಜನರನ್ನು ಕಂಡರೆ ಹಾವು ಅವರ ಬಳಿ ಸುಳಿಯುವುದಿಲ್ಲವೆಂಬ ನಂಬಿಕೆಯಿದೆ. ಮಚ್ಚೆಯುಳ್ಳವರು ಹಾವು ತಮ್ಮ ಬಳಿ ಬರುವುದಿಲ್ಲವೆಂದು ಜಂಬ ಕೊಚ್ಚಿಕೊಂಡರೂ ಅಳುಕು ಇದ್ದೇ ಇರುತ್ತದೆ.

**ಗರುಡ ಪಚ್ಚೆ :**

(ಮಣಿ) ಕಿಟ್ಟೆಲ್ ನಿಘಂಟಿನಲ್ಲಿ ಕೊಟ್ಟಿರುವ ಅರ್ಥ An emerald used as an antidote against poison. ಹಾವಿನ ಕಡಿತದಿಂದಾದ ವಿಷವನ್ನು ಹೀರಿಕೊಳ್ಳಲು ಈ ಗರುಡ ಪಚ್ಚೆಯನ್ನು ಬಳಸುತ್ತಾರೆ. ಇದು ಸಾಮಾನ್ಯವಾಗಿ ಹಾವಾಡಿಗರ ಬಳಿ ಇರುತ್ತದೆ. (ಇವರ ಬಳಿ ಇರುವುದು ನಕಲಿ ಮಣಿಯೆಂದು ಹೇಳುತ್ತಾರೆ). ಹಾವು ಕಚ್ಚಿದ ಜಾಗದಲ್ಲಿ ಈ ಮಣಿಯನ್ನು ಇಡುತ್ತಾರೆ. ಇದು ಕಚ್ಚಿದ ಜಾಗಕ್ಕೆ ಅಂಟಿಕೊಳ್ಳುತ್ತದೆ. ವಿಷ ಪೂರ್ಣವಾಗಿ ಮಣಿ ಹೀರಿಕೊಂಡ ನಂತರ ಇದು ಕೆಳಗೆ ಬೀಳುತ್ತದೆ. ರೋಗಿ ಗುಣಮುಖವಾಗುತ್ತಾನೆ ಎಂಬ ನಂಬಿಕೆ ಇದೆ.

**ಗರುಡ ಪಾತಾಳ :**

ಕಿಟ್ಟೆಲ್ ನಿಘಂಟಿನಲ್ಲಿರುವ ಅರ್ಥ : A Medicinal herb said to be an antidote to snake bites. ಇದು ಒಂದು ಸೊಪ್ಪು. ಹಳ್ಳಿಯ ವೈದ್ಯರಿಗೆ (ಪಂಡಿತರಿಗೆ) ಮಾತ್ರ ಇದರ ಪರಿಚಯವಿರುತ್ತದೆ. ಹಾವು ಕಚ್ಚಿದಾಗ, ಈ ಸೊಪ್ಪನ್ನು ತರುವಾಗಲೇ ಹೊಸಕಿ ತರುತ್ತಾರೆ. ಈ ಸೊಪ್ಪಿನ ರಸವನ್ನು ಕುಡಿಸಿ, ಹೊಟ್ಟೆಯಲ್ಲಿರುವ ವಿಷವನ್ನು ವಾಂತಿಯ ಮೂಲಕ ಹೊರಬರುವಂತೆ ಮಾಡುತ್ತಾರೆ. ಸಾಮಾನ್ಯವಾಗಿ ಬೇರೆಯವರಿಗೆ ಇದನ್ನು ತೋರಿಸುವುದಿಲ್ಲ. ತಾನು ಇನ್ನು ಮುಂದೆ ಈ ವೈದ್ಯ ಕೆಲಸವನ್ನು ಮಾಡಲು ಸಾಧ್ಯವಿಲ್ಲವೆಂದು ತಿಳಿದಾಗ ಮಾತ್ರ (ವಯಸ್ಸಾದ ಮೇಲೆ), ನಂಬಿಕೆಯುಳ್ಳ ಓರ್ವರಿಗೆ ಇದರ ಪರಿಚಯ ಮಾಡಿಕೊಡುತ್ತಾರೆ. ಇಲ್ಲವಾದಲ್ಲಿ, ಈ ಸೊಪ್ಪಿನ ಔಷಧಿ ಗುಣ ಸಿದ್ಧಿಸುವುದಿಲ್ಲವೆಂಬ ನಂಬಿಕೆ.

**ಗರುಡ ಮೂಗು :**

ಚೂಪು, ತುದಿಯಲ್ಲಿ ಸ್ವಲ್ಪ ಬಾಗಿದ ಮೂಗನ್ನು ಗರುಡ ಮೂಗು ಎಂದು ಕರೆಯುತ್ತಾರೆ. ಈ ಮೂಗು ಉಳ್ಳವರು ಅದೃಷ್ಟವಂತರು ಆಯುರಾರೋಗ್ಯವಂತರು, ಇವರು ಹಿಡಿದ ಕೆಲಸ ಫಲಕಾರಿಯಾಗುತ್ತದೆ ಎಂಬ ನಂಬಿಕೆ ಇದೆ.

ದೇವಾಲಯಗಳ ಮುಂದೆ ಇರುವ (ನಿಲ್ಲಿಸಿರುವ ಒಂಟಿಕಂಬ) ಉದ್ದವಾದ ಕಂಬವನ್ನು / ಧ್ವಜಸ್ತಂಭವನ್ನು ಗರುಡಗಂಬ ಎಂದು ಕರೆಯುತ್ತಾರೆ. ದಾಸಯ್ಯನು ಹಿಡಿಯುವ ದೀವಟಿ (ಕಬ್ಬಿಣ ಅಥವಾ ಇತರ ಲೋಹದ)ಯನ್ನು ಸಹ ಗರುಡಗಂಬ ಎಂದು ಕರೆಯುತ್ತಾರೆ.

ಹೀಗೆ ಬಹುಮುಖಿ ವ್ಯಾಪ್ತಿಯನ್ನು ಗರುಡ ಹೊಂದಿದೆ.

**ಹದ್ದು : (Hawk, Falcon)**

ಹಿಂಸ್ರಪಕ್ಷಿ, ಶ್ಯೇನ, ಡೇಗೆ ಎಂಬ ಹೆಸರುಗಳಿಂದಲೂ ಹದ್ದನ್ನು ಕರೆಯುತ್ತಾರೆ. ಗರುಡನನ್ನೇ ಹೋಲುತ್ತದೆ. ಆದರೆ ಬಣ್ಣ ಮಾತ್ರ ಬೂದು, ಕಣ್ಣು ಬಹು ಸೂಕ್ಷ್ಮ. ಆಗಸದಲ್ಲಿ ಅದು ಎಷ್ಟೇ ಎತ್ತರದಲ್ಲಿ ಹಾರುತ್ತಿರಲಿ ಕೆಳಗಿನ ಎಲ್ಲ ಚಲನವಲನಗಳನ್ನು ಬಹು ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಜನರಿರುವ ಕಡೆ, ಊರುಗಳ ಬಳಿ ಹಾರಾಟ ಕಡಿಮೆ. ಬೆಟ್ಟಗುಡ್ಡಗಳ ಪೊಟರೆಗಳಲ್ಲಿ, ತೆವರಿನಲ್ಲಿ (ಕಲ್ಲು ಮುಳ್ಳುಗಳಿರುವ ಕುರಚಲು ಗಿಡ ಬೆಳೆದಿರುವ ಗುಡ್ಡ ಪ್ರದೇಶ) ವಾಸಿಸುತ್ತವೆ.

ಕೋಳಿಮರಿಯನ್ನು ಹಾರಿಸಿಕೊಂಡು ಹೋಗಲು ಮಾತ್ರ ಊರ ಬಳಿ ಹದ್ದು ಸುಳಿಯುತ್ತವೆ. ಕೋಳಿ ತನ್ನ ಮರಿಗಳನ್ನು ತನ್ನ ಸುತ್ತ ಇರುವಂತೆಯೇ ನೋಡಿಕೊಂಡು, ಮೇವು ಹುಡುಕುತ್ತಿರುತ್ತದೆ. ಮರಿಗಳು ಸ್ವಲ್ಪ ದಪ್ಪವಾಗುತ್ತಿದ್ದಂತೆ, ತಾಯಿಯಿಂದ ಸ್ವಲ್ಪ ದೂರ ಸರಿಯಲು ಧೈರ್ಯಮಾಡುತ್ತವೆ ಆದರೂ, ಕೋಳಿ ಕೂಗುತ್ತಾ, ಒಟ್ಟಗೂಡಿಸುವುದನ್ನು ಕಾಣಬಹುದು. ಹೀಗೆ ತಾಯಿ ಕೋಳಿಯಿಂದ ದೂರ ಸರಿಯುವ ಕೋಳಿಮರಿಯನ್ನು ಹದ್ದು ಹಾರಿಸುತ್ತದೆ. ಇಲ್ಲವಾದರೆ ಕೋಳಿ ಪ್ರತಿಭಟಿಸಿ, ಮರಿಯನ್ನು ಹಾರಿಸಿಕೊಂಡು ಹೋಗದಂತೆ ತಡೆಯುತ್ತದೆ.

ಹದ್ದು ಕೋಳಿಮರಿಯನ್ನು ಹಿಡಿದು ಹಾರುವಾಗ ಜನರ ಕಣ್ಣಿಗೆ ಬಿದ್ದರೆ, ಅದು ಸುಲಭವಾಗಿ ತಿನ್ನಲು ಬಿಡುವುದಿಲ್ಲ. ಅದು ಹಾರಿದ ಕಡೆಯಲ್ಲೆಲ್ಲಾ, ಓಡಿ ಕಲ್ಲು ಎಸೆದು, ಕ್ಯಾಟರಿಬಿಲ್ಲಿನಿಂದ ಕಲ್ಲನ್ನು ಗುರಿಯಿಟ್ಟು ಹೊಡೆದು, ಅದು ಮರದ ಮೇಲೆ ಕುಳಿತು ತಿನ್ನದಂತೆ ತಡೆಯುತ್ತಾರೆ. ಕೋಳಿಮರಿಯನ್ನು ಹಿಡಿದಾಗ ಹದ್ದು ಹಾರಿ ದೂರ ಹೋಗದೆ ಹತ್ತಿರದಲ್ಲೇ ಸಿಕ್ಕ ಮರಗಳೊಂದರ ಮೇಲೆ ಕುಳಿತು ತಿನ್ನಲು ತೊಡಗುತ್ತದೆ. ಹೀಗೆ ದೂರ ಹಾರದೆ, ಹತ್ತಿರದಲ್ಲೇ ಕುಳಿತಾಗ ಮಾತ್ರ ಕೋಳಿಮರಿಯನ್ನು ಬಿಡಿಸಿಕೊಳ್ಳಲು ಸಾಧ್ಯ. ದೂರ ಹಾರಿಹೋದರೆ, ಬಿಡಿಸಿಕೊಳ್ಳುವ ಪ್ರಯತ್ನ ವ್ಯರ್ಥವಾಗುತ್ತದೆ. ಹದ್ದು ಕೋಳಿಮರಿಯನ್ನು ತನ್ನ ಕಾಲಿನ ಪಂಜದಲ್ಲಿ ಬಿಗಿಯಾಗಿ ಹಿಡಿದಿರುತ್ತದೆ. ಆದರೆ, ಕೋಳಿಮರಿಗೆ ಯಾವುದೇ ಪ್ರಾಣಾಂತಿಕ ತೊಂದರೆಯಾಗಿರುವುದಿಲ್ಲ. ಹದ್ದು ದೂರ ಹಾರಿ ಹೋಗದೆ ಹತ್ತಿರದ ಮರದ ಮೇಲೆ ಕೂರಲು ಕಾರಣವೆಂದರೆ, ಮರಿ ತನ್ನ ಹಿಡಿತದಿಂದ

ತಪ್ಪಿಸಿಕೊಳ್ಳಬಹುದು ಎಂಬ ಭಯ, ಇಲ್ಲವಾದರೆ, ಬೇಗ ತಿನ್ನುವ ಆತುರ, ಈ ಸ್ವಭಾವದ ದೌರ್ಬಲ್ಯವನ್ನರಿತೇ ಮರಿಯನ್ನು ಬಿಡಿಸಿಕೊಳ್ಳಲು ಹದ್ದಿನ ಬೆನ್ನು ಹತ್ತುತ್ತಾರೆ.

ಹೀಗೆ ತಿನ್ನದಂತೆ ತಡೆದು ಕೋಳಿಮರಿಯನ್ನು ಹದ್ದಿನಿಂದ ಬಿಡಿಸಿಕೊಳ್ಳುವುದು, ಕಷ್ಟಸಾಧ್ಯದ ಕೆಲಸ. ಕೆಲವೊಮ್ಮೆ ಮಾತ್ರ ಯಶಸ್ವಿಯಾಗುತ್ತಾರೆ. ಕೋಳಿಮರಿಯನ್ನು ಹದ್ದಿನಿಂದ ಬಿಡಿಸಿಕೊಳ್ಳುವುದಕ್ಕೆ, ಅವರು ನೀಡುವ ಸಮಜಾಯಿಷಿಯೇ ಬೇರೆ. ಹದ್ದಿನಿಂದ ಬಿಡಿಸಿಕೊಂಡ ಕೋಳಿಮರಿಯ ಅಭಿವೃದ್ಧಿ ಜಾಸ್ತಿ. ಇದರ ಸಂತತಿಯ ಏಳಿಗೆ ಜಾಸ್ತಿ, ಎಂಬುದು ಅವರ ವಾದ.

**ಹದ್ದಿನ ಕಲ್ಲುಬೆಟ್ಟ :**

ಬೆಂಗಳೂರು-ಮಂಗಳೂರು ಮಾರ್ಗದ ಹೆದ್ದಾರಿಯಲ್ಲಿ ನೆಲ್ಲಿಗೆರೆ ಸಮೀಪ ಸಿಕ್ಕುವ ಒಂದು ದೊಡ್ಡ ಗುಡ್ಡಕ್ಕೆ ಹದ್ದಿನಕಲ್ಲು ಬೆಟ್ಟ ಎಂಬ ಹೆಸರಿದೆ. ಹೆಸರೇ ಸೂಚಿಸುವಂತೆ ಹದ್ದಿನ ಕಲ್ಲಿನಲ್ಲಿ ಹದ್ದುಗಳು ಬಹಳ. ಬೆಟ್ಟದ ಪೊಟರೆಗಳಲ್ಲಿ ಅವು ನೆಲೆಸಿವೆ. ಬೆಟ್ಟ ಹತ್ತುವಾಗಲೇ ಹದ್ದುಗಳನ್ನು ಅವುಗಳ ಗೂಡುಗಳನ್ನು ಕಾಣಬಹುದು. ಗಾಳಿ, ಪೀಡೆ, ಪಿಶಾಚಿಗಳನ್ನು ಬಿಡಿಸುವುದು, ಹದ್ದಿನ ಕಲ್ಲಿನಲ್ಲಿ ನಡೆಯುವ ಒಂದು ವಿಶೇಷ.

**ರಣಹದ್ದು :**

ಹದ್ದಿನಂತೆಯೇ ಇದರ ಬಣ್ಣ ಬೂದು, ಕತ್ತು ಮಾತ್ರ ಕೊಕ್ಕರೆಯಂತೆ ಉದ್ದವಾಗಿರುತ್ತದೆ. ಕೊಕ್ಕಿನಿಂದ ಕತ್ತಿನವರೆಗೆ ಬೋಳು. ಆದರೆ ಹದ್ದುಗಳಿಗಿಂತ ಗಾತ್ರದಲ್ಲಿ ದೊಡ್ಡದು, ಕರ್ಕಶವಾಗಿ ಕೂಗುತ್ತವೆ. ಬೆಟ್ಟ ಗುಡ್ಡ, ಕಾಡುಗಳಲ್ಲಿ, ಕಲ್ಲು ಪೊಟರೆಗಳಲ್ಲಿ ವಾಸಿಸುತ್ತವೆ. ಕಣ್ಣಿಗೆ ಬೀಳುವುದೇ ಅಪರೂಪ. ಆದರೆ ಸತ್ತ ಪ್ರಾಣಿಗಳಿರುವ (ಅನಾಥವಾಗಿ) ಕಡೆ ಮಾತ್ರ ಹೇಳಿ ಕಳುಹಿಸಿದಂತೆ ಹಾಜರಾಗುತ್ತವೆ. ಗುಂಪು ಗುಂಪಾಗಿ ಬರುವುದು ಹೆಚ್ಚು. ಸತ್ತ ಪ್ರಾಣಿಗಳ ಎಲುಬನ್ನು ಬಿಟ್ಟು ಉಳಿದಿದ್ದನ್ನೆಲ್ಲಾ ತಿಂದು ಸ್ವಚ್ಛಗೊಳಿಸಿ ಹೋಗಿಬಿಡುತ್ತವೆ. ಸತ್ತ ಪ್ರಾಣಿಗಳ ವಾಸನೆ ಬಡಿಯುತ್ತಿದ್ದಂತೆಯೇ ಆಗಸನದಲ್ಲಿ ಪ್ರತ್ಯಕ್ಷವಾಗುತ್ತವೆ. ಯಾವ ಅಪಾಯ ಇಲ್ಲವೆಂದು ಖಾತರಿಯಾದ ಕೂಡಲೆ ಧರೆಗಿಳಿದು ತಮ್ಮ ಕಾಯಕವನ್ನ ಮುಗಿಸಿ ಮಾಯವಾಗುವುದು ಇವುಗಳ ಸ್ವಭಾವ.

ಕಾಡಿನಲ್ಲಾದರೆ ತೋಳ ಮುಂತಾದ ಪ್ರಾಣಿಗಳಿಗೆ ಹೊಂಚು ಹಾಕಿ ಪ್ರಾಣಾಪರಣವಾದ ಪ್ರಾಣಿಗಳನ್ನು ತಿನ್ನಬೇಕು. ಬಯಲು ಸೀಮೆಯಲ್ಲಾದರೆ, ನಿರಾತಂಕ. ಯಾವ ಪ್ರಾಣಿಗಳ ಅಡೆತಡೆಯೂ ಇರುವುದಿಲ್ಲ.

ಯುದ್ಧ ಸಮಯದಲ್ಲಿ ಇವುಗಳ ಶಕುನ ನೋಡುತ್ತಿದ್ದುದು ಜಾಸ್ತಿ. ಇವು ಕಾಣಿಸಿಕೊಂಡ ಕಡೆ ಸೋಲಾಗುತ್ತದೆ ಎಂಬ ನಂಬಿಕೆಯಿತ್ತು.

**ಗಿಡುಗ (ಗಿಡಗ) :** ಹಗಲು ಸಂಚಾರದ ಹಿಂಸ್ರ ಪಕ್ಷಿ. ಡೇಗೆ, ಹೆಣ್ಣು ಹಕ್ಕಿಗೆ ಮಾತ್ರ ಈ ಹೆಸರು. ಡೇಗೆಗಳನ್ನು ಪಳಗಿಸುವ ವಿದ್ಯೆ - ಶ್ಯೇನ ಶಿಕ್ಷಣ. ಈ ವಿದ್ಯೆಯನ್ನು ಕಲಿಸುವ

ಮೂಲಕ, ಪಳಗಿಸುವ ಮೂಲಕ ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಸಾಕುವವನನ್ನು 'ಡೇಗೆಗಾರ' ಎಂದು ಕರೆಯುತ್ತಾರೆ. (Falconer).

ಡೇಗೆಗಾರ ಗಿಡುಗನಿಗೆ ಹೇಗೆ ಪಕ್ಷಿಗಳ ಮೇಲೆ ಎರಗಬೇಕು, ಬಡಿದುರುಳಿಸಬೇಕು ಎಂಬುದನ್ನು ಕಲಿಸಿರುತ್ತಾನೆ. ಅಲ್ಲದೆ ಗಿಡುಗನಿಗಿಂತಲೂ ದೊಡ್ಡದಾದ, ಬಲಿಷ್ಟವಾದ ಪಕ್ಷಿಗಳನ್ನು ಹೇಗೆ ಹೊಡೆದುರುಳಿಸಬೇಕು ಎಂಬುದನ್ನು ಚಾಕುವಿನ ವಿದ್ಯೆಯ ಮೂಲಕ ಕಲಿಸಿರುತ್ತಾನೆ. ಗಿಡುಗನ ಕಾಲಿಗೆ ಹರಿತವಾದ ಚಾಕುವನ್ನು ಕಟ್ಟಿ, ಇದರಿಂದ ಪಕ್ಷಿಯ ಮೇಲೆ ಎರಗಿ, ಹೊಡೆದು ಗಾಯಗೊಳಿಸಿ ಅಥವಾ ರೆಕ್ಕೆಗೆ ಹೊಡೆದು ಹಾರಲಾರದೆ ಕೆಳಗುರುಳಿಸುವ ವಿದ್ಯೆಯನ್ನು ಕಲಿಸಿರುತ್ತಾನೆ.

ಅಂತೆಯೇ, ತನ್ನ ಗಾತ್ರದ ಪಕ್ಷಿಗಳ ಮೇಲೆ ಹಠತ್ತಾಗಿ ಎರಗಿ, ಬಡಿದು ಗಾಯಗೊಳಿಸಿ, ಉರುಳಿಸುತ್ತದೆ. ತನಗಿಂತಲೂ ಬಲಿಷ್ಠವಾದ ಪಕ್ಷಿಗಳ ಮೇಲೆ ಎರಗಿದಾಗ, ತನ್ನ ಪ್ರಾಣದ ಹಂಗು ತೊರೆದು ಹೋರಾಡುತ್ತದೆ. ಅದರ ಗುರಿ ಒಂದೇ - ಎದುರಾದ ಪಕ್ಷಿಯನ್ನು ಹೊಡೆದುರುಳಿಸುವುದು. ಈ ಸಮಯದಲ್ಲಿ ಗಿಡುಗ ಗಾಯಗೊಳ್ಳುವುದುಂಟು. ಆದರೆ, ಗಿಡುಗನನ್ನು ಕಾಪಾಡಲು ಒಡೆಯ ಕೂಡಲೆ ಧಾವಿಸುತ್ತಾನೆ, ಶುಶ್ರೂಷೆ ನೀಡಿ, ಅಪಾಯದಿಂದ ಪಾರು ಮಾಡುತ್ತಾನೆ. ಈ ಕಾರಣದಿಂದಲೋ ಏನೋ, ಎಂತಹದೇ ಅಪಾಯ ಎದುರಾದರೂ, ಗಿಡುಗ ಬೆನ್ನು ತೋರಿಸದೇ, ಶಕ್ತಿ ಇರುವವರೆಗೂ ಹೋರಾಡುತ್ತದೆ, ಬಹುಶಃ ಗಿಡುಗನ ವಿಮುಖವಲ್ಲದ ಈ ಗುಣವೇ ಯಶಸ್ಸಿನ ಮೂಲವಾಗಿರಬಹುದು. ಪಕ್ಷಿಗಳ ಸೋಲಿಗೆ ಕಾರಣವಾಗಿರಬಹುದು.

ಬಯಲು ಸೀಮೆಯಲ್ಲಿ ಈ ಬೇಟೆ ಬಹು ಕಡಿಮೆ. ಮರಳುಗಾಡಿನ ಅಂಚಿನಲ್ಲಿ ವಾಸಿಸುವರು ಗಿಡುಗನನ್ನು ಪಳಗಿಸಿ ಬೇಟೆಯಾಡುವುದು ಹೆಚ್ಚು.

"ಹದ್ ಹಾರಿಸಿ ಗಿಡುಗನ ಕೈಗೆ ಕೊಟ್ಟಂಗೆ", "ಗಿಣಿ ಸಾಕಿದಂತೆ ಸಾಕಿ, ಗಿಡುಗನ ಕೈಗೆ ಕೊಟ್ಟಂಗೆ" ಎಂಬ ಗಾದೆಗಳುಂಟು.

ಹದ್ದಿನಿಂದ ಬೇಕಾದರೂ ತಪ್ಪಿಸಿಕೊಳ್ಳಬಹುದು, ಆದರೆ ಗಿಡುಗನಿಂದ ತಪ್ಪಿಸಿಕೊಳ್ಳುವುದು ತುಂಬಾ ಕಷ್ಟ.

ಎಂ. ಜಿ. ಈಶ್ವರಪ್ಪನವರು, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ ಎಂಬ ಕೃತಿಯಲ್ಲಿ ಹಕ್ಕಿಗಳನ್ನು ಕುರಿತು ಕೊಟ್ಟಿರುವ ಕೆಲವು ವಿವರಗಳು :

ಫಸಲು ಕೈಗೆ ಬರುವ ಸಂದರ್ಭ ಹತ್ತಿರ ಹತ್ತಿರ ಬಂದಂತೆ ಬೇರೆ ತರಹದ ಕಾಟಗಳು ಶುರುವಾಗುತ್ತವೆ. ತೆನೆಯು ಹಾಲು ಗಾಳಿನಿಂದ ತುಂಬುತ್ತಿದ್ದಂತೆ, ಗುಬ್ಬಿ, ಪಿಟ್ರುಗುಬ್ಬಿ, ಗಿಳಿ, ಗೊರವಂಕ ಕಬ್ಬಕ್ಕಿ ಮೊದಲಾದ ಹಕ್ಕಿಗಳು ತೆನೆಯನ್ನು ಬರಿದು ಮಾಡತೊಡಗುತ್ತವೆ. ಆಗ ಕವಣೆ ಹಿಡಿದು, ಅವುಗಳನ್ನು ಓಡಿಸುವ ಕೆಲಸಕ್ಕೆ ಒಬ್ಬ ವ್ಯಕ್ತಿ ಇರಬೇಕಾಗುತ್ತದೆ. ಕವಣೆಯಿಂದ ಕಲ್ಲುಬೀಸಿ, ಗುಲ್ಲೆಬ್ಬಿಸಿ ಅವುಗಳನ್ನು ಓಡಿಸುವುದೇ, ಅವನ ಕೆಲಸ. ಹೆಚ್ಚು ಸದ್ದು ಬರದಂತೆ ಖಾಲಿ ಡಬ್ಬಗಳನ್ನು ಬಡಿಯುವುದೂ ಉಂಟು, ಆದರೂ ಹಕ್ಕಿಗಳನ್ನು ಪೂರ್ತಿಯಾಗಿ ನಿವಾರಿಸುವುದು

ಅಸಾಧ್ಯ. "ಅದಕ್ಕಾಗಿಯೇ, ತಾವು ಬೆಳೆದ ಫಸಲನ್ನು ಮೂರು ಭಾಗ ಮಾಡಿ 'ಒಂದು ಭಾಗ ಹಕ್ಕಿಗೆ', ಒಂದು ಭಾಗ ದಾನಧರ್ಮಕ್ಕೆ, ಉಳಿದ ಇನ್ನೊಂದು ಭಾಗ ತಮಗೆ", ಎಂದು ಸಮಾಧಾನ ಪಟ್ಟುಕೊಳ್ಳುತ್ತಾರೆ. ಹೀಗಾಗದಿದ್ದರೆ, ಹಕ್ಕಿಪಕ್ಷಿಗಳು ಬದುಕುವುದಾದರು ಹೇಗೆ ಎಂದು ಪ್ರಶ್ನಿಸುತ್ತಾರೆ. ಜನಪದ ಗೀತೆಯೊಂದು ಹೀಗಿದೆ :

"ಕಡೆಯ ಬಲಕಿನ ಕಾಳು ಎಡೆಯಾಯ್ತು ಅರಸಗೆ
ಎಡಗಡೆಯ ಕಾಳು ಪಶುಪಕ್ಷಿ ಜೀವನಕೆ
ನಡುವಿನ ಕಾಳು ರೈತನಿಗೆ"

ಇತರ ಕಡೆಗಳಲ್ಲಿಯೂ ರೈತಾಪಿ ಜನರ ಬಾಯಲ್ಲಿ ಮನದಲ್ಲಿ ಈ ಅಭಿಪ್ರಾಯ ವಿರುವುದನ್ನು ಕಾಣಬಹುದು. ಅದರೆ ಅದರ ಸ್ವರೂಪ ಸ್ವಲ್ಪ ಭಿನ್ನವಾಗಿರಬಹುದಷ್ಟೆ. ಬೆಂಗಳೂರು ಜಿಲ್ಲೆ ಮಾಗಡಿಯ ಸುತ್ತಮುತ್ತಲೂ ಸಹ ರೈತರು ಹೀಗೆಯೇ ಪ್ರಶ್ನಿಸುತ್ತಾರೆ. ಇರುವೆಂಬತ್ತು ಕೋಟಿ ಜೀವರಾಶಿಗೆ ರೈತ ತನ್ನ ಬೆಳೆಯಲ್ಲಿ ಪಾಲು ಕೊಡುತ್ತಾನೆ. ನಾಗರೀಕರಾದ ನಿಮ್ಮನ್ನು ಸಲುಹುತ್ತಾನೆ. ಅವನಿಗೆ ನೀವೇನು ಕೊಡಬಲ್ಲಿರಿ. ಅಹುದು ರೈತನ ಕಾಯಕವೇ ಅಂತಹುದು.

ಹಕ್ಕಿಯ ಬಗ್ಗೆ ಕೆಲವು ನಂಬಿಕೆಗಳು ಹೀಗಿವೆ :

(1) ಕೋಳಿ ಹುಂಜ ಮಧ್ಯಾಹ್ನದ ಹೊತ್ತು ಬೆಳಗಿನ ಜಾವ ಕೂಗಿದಂತೆ ಕೂಗಿದರೆ ಮಳೆ ಬರುತ್ತದೆ.

(2) ಹದ್ದುಗಳು ಸೆಖೆ ತಡೆಯಲಾರದೆ ಗಗನದಲ್ಲಿ ಹಾರಾಡುತ್ತಾ, ಒಂದು ಕಡೆ ನಿಂತಂತೆ, ನಿಧಾನವಾಗಿ ಚಲಿಸುತ್ತಿದ್ದರೆ ಮಳೆ ಬರುತ್ತದೆ.

(3) ಹಿರಿಯಕ್ಕಿ ಎಂಬುದೊಂದು ಹಕ್ಕಿ. ಹಣ್ಣಾದ ಅಡಿಕೆ ಗೊನೆಯ ಸಿಪ್ಪೆಯನ್ನು ಅದರೊಳಗಿನ ಸಿಹಿಗಾಗಿ ಹೀರುತ್ತದೆ. ಸಿಹಿಯನ್ನು ಹೀರಿದ ನಂತರ, ಆ ಗೋಟುಕಾಯಿ ಕೆಳಗೆ ಬೀಳುತ್ತದೆ.

ಅಂದರೆ, ಹಿರಿಯಕ್ಕಿ ಸೀಪಿದ ಗೋಟುಕಾಯಿ ಬಿದ್ದಿರುವ ಗೊನೆಯ ಬೀಜ ಶ್ರೇಷ್ಠವಾದುದು ಎಂದು ತೋಟಗಾರ ನಿರ್ಧರಿಸುತ್ತಾನೆ. ಅಂತಹ ಗೊನೆಯ ಹಣ್ಣು ಕಾಯಿಗಳನ್ನೆಲ್ಲ ಕೆಳಗಿಳಿಸಿಕೊಂಡು ೧೦-೧೫ ದಿನ ನೆರಳಲ್ಲಿ ಒಣಗಿಸುತ್ತಾನೆ.

ಕೆಲವು ಕಡೆ ಮರಗಳ ಬೀಜವನ್ನು ಆರಿಸುವುದರಲ್ಲಿಯೂ ಸಹ ಈ ಪದ್ಧತಿಯನ್ನು ಅನುಸರಿಸುತ್ತಾರೆ. ಹಿಪ್ಪೆ ಮುಂತಾದ ಮರಗಳ ಬೀಜವನ್ನು ನೆಡಲು ಬಾವಲಿ ಹಣ್ಣು ತಿಂದು ಉಗುಳಿದ ಬೀಜ ಉತ್ಕೃಷ್ಟವಾದುದು ಎಂಬ ನಂಬಿಕೆಯಿದೆ.

ಹಕ್ಕಿಗಳು ಬೀಜ ಪ್ರಸಾರದಲ್ಲಿ ಗಣನೀಯ ಪಾತ್ರವಹಿಸಿವೆ ಎಂಬುದು ಸತ್ಯ. ಬಯಲು ಸೀಮೆಯ ಬಹಳಷ್ಟು ಮರಗಳ ಬೀಜ ಪ್ರಸಾರ ಇವುಗಳಿಂದಲೇ ಆಗುತ್ತದೆ. ಬಹಳಷ್ಟು ಹಣ್ಣುಗಳ ಬೀಜಪ್ರಸಾರ ಇವುಗಳಿಂದಲೇ ಆಗುತ್ತದೆ. ಅಲ್ಲದೆ ಹೂವಿನ ಹಕ್ಕಿಗಳು, ಹೂವಿಂದ ಹೂವಿಗೆ ಹಾರಿ ಪರಾಗಸ್ಪರ್ಶ ಕ್ರಿಯೆಗೆ ಸಹಕಾರಿಯಾಗಿವೆ. ಇನ್ನು ತಾನು ತಿಂದ ಹಣ್ಣಿನ ಬೀಜ

ಜೀರ್ಣವಾಗದೆ, ಅದು ಹಿಕ್ಕೆ ಹಾಕುವ ಕಡೆಯಲ್ಲೆಲ್ಲಾ ಬೀಜ ಪ್ರಸಾರ ಕಾರ್ಯವನ್ನು ನಿರ್ವಹಿಸುತ್ತದೆ. ಮರದ ಟೊಂಗೆಗಳಲ್ಲಿ ಮತ್ತೊಂದು ಜಾತಿಯ ಗಿಡಗಳು ಹುಟ್ಟುವುದು ಇವುಗಳ ಕೊಡುಗೆಯೇ. ಹಳೆಯ ಕಟ್ಟಡಗಳ ಬಿರುಕಿನಲ್ಲಿ, ಗೂಡು ಕಟ್ಟಿದ ಹಕ್ಕಿಗಳು, ಅಲ್ಲಿ ಬಿಟ್ಟ ಆಲ, ಅರಳಿ ಬೀಜಗಳಿಂದ ಆಲ, ಅರಳಿ ಗಿಡ ಬೆಳೆದಿರುವುದನ್ನು ಕಾಣಬಹುದು.

ಕೆಲವು ಹಕ್ಕಿಗಳಿಗೆ ವಿಶಿಷ್ಟವಾದ ಗುಣಗಳಿವೆ ಎಂಬ ನಂಬಿಕೆಯಿದೆ. ಉದಾಹರಣೆಗೆ ಹಂಸಪಕ್ಷಿಯು ಹಾಲಿನಲ್ಲಿ ಬೆರೆತ ನೀರನ್ನು ಬಿಟ್ಟು ಹಾಲನ್ನು ಮಾತ್ರ ಕುಡಿಯುತ್ತದೆ. ಇದನ್ನು ಹಂಸಕ್ಷೀರ ನ್ಯಾಯವೆಂದು ಕರೆಯುತ್ತಾರೆ. ಇಂದಿಗೂ ಹಳ್ಳಿಗಳಲ್ಲಿ ನಾಟಕ ಪ್ರಾರಂಭವಾಗುವ ಮುನ್ನ ನಾಟಕದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ ಸೂತ್ರದಾರ, ನಾಟಕದಲ್ಲಿ ಕಂಡುಬರುವ ಲೋಪದೋಷಗಳನ್ನು ಹಂಸಕ್ಷೀರ ನ್ಯಾಯದಂತೆ ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತಾನೆ. ಹೀಗೆ ಇದರ ಗುಣ ನ್ಯಾಯ ದೇವತೆಯಾಗಿ ಇಂದಿಗೂ ಜನರ ಮನದಲ್ಲಿ ಉಳಿದಿದೆ.

**ನೆಲಗುಮ್ಮ** : ಇದು ಗೂಡೆಯಂತಿರುವ ಪಕ್ಷಿ, ಹಾರುವುದಿಲ್ಲ, ನೆಲದ ಮೇಲೆಯೇ ಓಡಾಡುತ್ತದೆ.

ಗೋರೆ ಹಕ್ಕಿಗಳು ತಮ್ಮ ಅಯುಷ್ಯದ ಕೊನೆತನಕ ಒಂದನ್ನೊಂದು ಬಿಡುವುದಿಲ್ಲ. ಒಮ್ಮೆ ಜೋಡಿಯಾದ ಗೋರೆ ಹಕ್ಕಿಗಳು ಎಂದೂ ಜೊತೆಯಾಗಿಯೇ ಇರುತ್ತವೆ. ಒಂದು ವೇಳೆ ಒಂದು ಹಕ್ಕಿ ದುರ್ಮರಣಕ್ಕೀಡಾದರೆ, ಬೇಟೆಗಾರನಿಗೆ ತುತ್ತಾದರೆ, ಮತ್ತೊಂದು ಹಕ್ಕಿ ತನ್ನ ಜೀವನ ಪರ್ಯಂತ ಒಂಟಿಯಾಗಿಯೇ ಇದ್ದು, ಕೊನೆಯುಸಿರೆಳೆಯುತ್ತದೆ. ಏನೇ ಆದರೂ, ಇದು ಮತ್ತೊಂದು ಹಕ್ಕಿಯ ಜೊತೆ ಸೇರುವುದಿಲ್ಲ. ಈ ಗುಣ ಮತ್ತೊಂದು ಹಕ್ಕಿಗೆ ಬರಲಾರದು.

**ನಂಬಿಕೆಗಳು**

I. ಮಕ್ಕಳು ಸಣ್ಣಗಾಗುತ್ತಾ, ಸವೆಯುತ್ತಾ ಹೋಗುವ ಕಾಯಿಲೆಯನ್ನು ಹಕ್ಕೆಳವು-ಹಕ್ಕಿಎಳೆವು, ಹಕ್ಕಿಯ ಕಾಯಿಲೆ ಎಂದು ಕರೆಯುತ್ತಾರೆ. ಸಂಜೆಯ ಹೊತ್ತಿನಲ್ಲಿ ಹಕ್ಕಿ ಗೂಡು ಸೇರಲು ಮರಳಿ ಗೂಡಿಗೆ ಹಾರಿಹೋಗುವ ಸಮಯದಲ್ಲಿ, ಮಕ್ಕಳ ಮೇಲೆ ಅವುಗಳ ನೆರಳು ಬೀಳಬಾರದು. ಅಂತೆಯೇ, ಮಕ್ಕಳ ಬಟ್ಟೆಯನ್ನು ಸಂಜೆ ಒಣಗಲು ಹಾಕಬಾರದು. ಸಂಜೆಯ ಸಮಯದಲ್ಲಿನ ಹಕ್ಕಿಯ ನೆರಳು ಬಟ್ಟೆಯ ಮೇಲೆ ಬೀಳಬಾರದು. ಬಿದ್ದರೆ ಮಕ್ಕಳಿಗೆ ಹಕ್ಕಿಯ ಕಾಯಿಲೆ ಬರುತ್ತದೆ ಎಂಬ ನಂಬಿಕೆಯಿದೆ.

II. ಗೂಬೆಯು ಮನೆಯ ಮೇಲೆ ಕೂತು, ಮನೆಯ ಬಳಿ ಗೂ ಗೂ ಎಂದು ಕೂಗಬಾರದು. ಹಾಗೆ ಕೂಗಿದರೆ ಆ ಮನೆಯಲ್ಲಿ ಸಾವಾಗುತ್ತದೆ ಎಂಬ ನಂಬಿಕೆಯಿದೆ. ರಾತ್ರಿಯ ಹೊತ್ತಿನಲ್ಲಿ ಊರ ಮುಂದೆ ಕುಳಿತು ಗೂ ಗೂ ಎಂದು ಕೂಗಿದರೆ, ಊರ ಪ್ರಮುಖರ ಸಾವಾಗುತ್ತದೆ ಎಂಬ ನಂಬಿಕೆ. ಅಂತೆಯೇ, ಮನೆಯ ಬಳಿ ಕುಳಿತು ಅಳುವಳಾಯಿ ಎಂದು ಕೂಗುತ್ತದೆ. ಹಾಗೆ ಕೂಗಿದರೆ ಆ ಮನೆಯಲ್ಲಿ ತೊಟ್ಟಿಲು ಕಟ್ಟುತ್ತಾರೆ ಎಂಬ ನಂಬಿಕೆಯಿದೆ.

# ಕೊಡಗಿನಲ್ಲಿ ಹಕ್ಕಿಬೇಟೆ

◆ *ಐನಂಡ ಎಂ. ಧನು*

ಮೊದಲನೆಯದಾಗಿ ಕೊಡಗಿನಲ್ಲಿ ಯಾವ್ಯಾವ ಜಾತಿಯ ಹಕ್ಕಿಗಳು ಕಾಣಸಿಗುತ್ತವೆ - ಎಂದು ನೋಡೋಣ.

ಸಾಧಾರಣವಾಗಿ ಹಳ್ಳಿ, ಪಟ್ಟಣ ಪ್ರದೇಶಗಳಲ್ಲಿ ಕಾಗೆ, ಕೋಗಿಲೆ, ಗಿಳಿ, ಕೆಂಬೂತ, ಪಾರಿವಾಳ, ಗುಬ್ಬಿ, ಟಿಟ್ಟಿಭ, ಗೊರವಂಕ, ಕೊಕ್ಕರೆ, ಹದ್ದು, ಮೋರಂಗೋಳಿ (ಗದ್ದೆ ಕೋಳಿ) ಇತ್ಯಾದಿ.

ಕಾಡು ಮೇಡುಗಳಲ್ಲಿ ನವಿಲು, ಕಾಡುಕೋಳಿ, ಕರ್ಂ ಕೋಳಿ, ಕೆದಕೋಳಿ, ಕಾಡುಬಾತು, ಗೂಬೆ, ಕುಟ್ಟುಮ (ಸಣ್ಣ ಜಾತಿಯ ಗೂಬೆ), ಕರಿಕರ್ಂಗೊಟ್ಟ (ಗಿಡುಗ), ಕಿರ್ಕಟ (ಹದ್ದು), ಪೆರ್ ಕಿರ್ಕಟ (ಗರುಡ), ಆಡೆಪದ್ದ್ (ರಣಹದ್ದು), ಕರ್ತ ಪೋಳೆ (ಕಪ್ಪು ಕೊಕ್ಕರೆ), ಮಂಜಪೋಳೆ (ಹಳದಿ ಕೊಕ್ಕರೆ), ಪುಂಡಕೋಳಿ (ಬಿದಿರುಕಾಡಿನ ಕೋಳಿ), ಕೆಂಗೊಳಕ, ಉಪ್ಪು ತೀತಿಪಕ್ಷಿ, ಮಳೆಪಕ್ಷಿ (ಚಾತಕ ಪಕ್ಷಿ), ಮೀಂಗೊತ್ತಿ (ಮೀನ್ಮುಳ್ಳಿ), ನೀರ್‌ಕಾಗೆ (ನೀರುಕಾಗೆ), ನೀರ್ಕೋಳಿ (ಕೆರೆ ಬಾತು) ಹೆಬ್ಬಾತ್ (ಹೆಬ್ಬಾತು), ಮಣಿತೋರೆ (ಸೋರೆ ಹಕ್ಕಿ), ಪೈಂದೋರೆ, ಓಣಿ ಕುಯಿಕ, ಚಿಟ್ಟೆ ಪಕ್ಷಿ, ನೊಜೆ ಪಕ್ಷಿ, ಕುರುಡ ಪಕ್ಷಿ, ಭೀಮರಾಜ ಪಕ್ಷಿ, ಮಡಿವಾಳ ಪಕ್ಷಿ, ಬಾಲಾಟಿ ಚೆಂಬೆ, ಮರಕೊಟ್ಟಿ (ಮರಕುಟ್ಟಿಗ), ಕೊಟ್ಟ್‌ಮುಡಿಚ (ಟಿಟ್ಟಿಭ), ಕೋಂಬಕ್ಕಿ (ಕಾಡು ಪಾರಿವಾಳ), ಕಿತ್ತೋಳಪಕ್ಷಿ (ಕೆಂಪು ಹಕ್ಕಿ), ಮಂಜಕೊಟ್ಟ, ಕುಡಕ್‌ಪಕ್ಷಿ, ಕುಟ್ರುಪಕ್ಷಿ, ಜಡ್ಡ್ ಕುರುಳಿ (ಸತ್ತ ಪ್ರಾಣಿಗಳನ್ನು ಕಾಗೆ ಹದ್ದುಗಳ ಜೊತೆಗೂಡಿ ತಿನ್ನುವ ಹಕ್ಕಿ), ತೊಂಬಕೆ ಪಕ್ಷಿ, ಕಾನ (ಕಾಳಿಂಗ ಹಕ್ಕಿ), ಪಡ್‌ಚಿ ತೋರೆ (ಕಾಡುಸೋರೆ ಹಕ್ಕಿ), ಗೀಜಗನಹಕ್ಕಿ, ಮಲೇರಪ್ಪ ಹಕ್ಕಿ, ತಿತ್ತ್‌ಕಂಡ ಪಕ್ಷಿ, ಬೊತ್ತ್‌ಲಳ್‌ಪ ಪಕ್ಷಿ, ತೊಟ್ಟಿಲು ಗೂಬೆ, ತನ್ನರಿಕೊಟ್ಟ, ಮೊಟ್ಟೆಕಣ್‌ಪಕ್ಷಿ, ಕಲಾಯಿಕಾರ ಹಕ್ಕಿ - ಇತ್ಯಾದಿ ಹಕ್ಕಿಗಳಿವೆ.

ಪಕ್ಷಿಗಳನ್ನು ಸಾಧಾರಣವಾಗಿ ಬೇಟೆಯಾಡುವವರು ದನ ಮೇಯಿಸುವ ಹುಡುಗರು. ಕಾಗೆ, ಕೋಗಿಲೆ, ರಣಹದ್ದುಗಳನ್ನು ಹೊರತುಪಡಿಸಿ ಕಣ್ಣಿಗೆ ಕಾಣುವ ಎಲ್ಲಾ ವಿಧದ ಹಕ್ಕಿಗಳನ್ನು ರಬ್ಬರ್ ಬಿಲ್ಲಿನಿಂದ (Catapult) ಹೊಡೆದು ಬೀಳಿಸುತ್ತಾರೆ. ಕೆಳಗೆ ಸತ್ತು ಬಿದ್ದ ಹಕ್ಕಿಯ ರೆಕ್ಕೆ, ಬಾಲ, ತುಪ್ಪಳಗಳನ್ನು ಕಿತ್ತು ಸುಲಿದು, ಕಾಲುಗುರು, ಕೊಕ್ಕು, ಕರುಳುಗಳನ್ನು ಚೂರಿಯಿಂದ

ಕತ್ತರಿಸಿ ಕೆರೆದು, ಮೇಲೆ ಗಾಡ್ಡದ ಒಂದು ಕೋಲಿಗೆ ಹಕ್ಕಿಯನ್ನು ಹೆಣೆಯುತ್ತಾರೆ. ಅನಂತರ ಕಡ್ಡಿ ಕಸ, ಒಣಗಿದ ಎಲೆಗಳನ್ನು ರಾಶಿ ಹಾಕಿ ಬೆಂಕಿ ಕೊಟ್ಟು ಸುಟ್ಟು ತಿನ್ನುತ್ತಾರೆ.

ದನ ಕಾಯುವ ಹುಡುಗರು ಈ ರೀತಿ ಹಕ್ಕಿಗಳನ್ನು ರಬ್ಬರ್ ಬಿಲ್ಲಿನಿಂದ ಅಥವಾ ಒಡಿಗಾತ್ರದ ಕಲ್ಲಿನಿಂದ ಗುರಿ ಇಟ್ಟು ಹೊಡೆದು ಹಕ್ಕಿಗಳನ್ನು ಕೊಂದು ತಿಂದರೆ, ಕಾಡಿನಲ್ಲಿ ಸೊಪ್ಪು ಸದೆ, ಗೆಡ್ಡೆ ಗೆಣಸು, ಜೇನುತುಪ್ಪವನ್ನು ಹುಡುಕುತ್ತಾ ಹೊರಡುವ ಕುರುಬರು, ಎರವರು, ಪಣಿಯರು - ಮುಂತಾದವರೂ ಪಕ್ಷಿ ಬೇಟೆಯಾಡುತ್ತಾರೆ.

ಇವರು ಗುಡ್ಡಗಾಡು ಜನರು. ಕಾಡಿನ ಕಂದಮೂಲಗಳ ಜೊತೆಗೆ ನಾರುಬೇರು, ಸಣ್ಣಪುಟ್ಟ ಪ್ರಾಣಿಗಳು, ಹಕ್ಕಿಗಳನ್ನು ಇವರು ಬೇಟೆಯಾಡುತ್ತಾರೆ. ಕೊಡಗಿನಲ್ಲಿ ಹಕ್ಕಿ ಬೇಟೆಯನ್ನೇ ವೃತ್ತಿಯಾಗಿಸಿಕೊಂಡು ಜೀವನ ನಡೆಸುವವರು ಯಾರೂ ಇಲ್ಲ. ಹೊಟ್ಟೆ ತುಂಬಿಸಿಕೊಳ್ಳಲು ಇವರು ಯಾರೂ ಹಕ್ಕಿ ಬೇಟೆಗೆ ಹೋಗುವುದಿಲ್ಲ.

ಹವ್ಯಾಸಕ್ಕಾಗಿ, ಕೆಲವೊಮ್ಮೆ ಮೋಜಿಗಾಗಿ, ಕೆಲವೊಮ್ಮೆ ಕಣ್ಣಿಗೆ ಕಂಡ ಹಕ್ಕಿಯ ಮೇಲಿನ ಆಸೆಗಾಗಿ ಹೊಡೆದು ಬೀಳಿಸಿ ಸುಟ್ಟು ತಿಂದು ಆನಂದಿಸುತ್ತಾರೆ. ಹಕ್ಕಿಪಿಕ್ಕಿ ಜನಾಂಗದವರು ಹಸಿರು ಗಿಳಿ, ನೀಲಿ ಗಿಳಿಗಳನ್ನು, ಗೊರವಂಕಗಳನ್ನು, ನವಿಲುಗಳನ್ನು, ಗಿಣಿಶಾಸ್ತ್ರ ಹೇಳಲು, ನವಿಲಿನ ತುಪ್ಪವನ್ನು ಮಾರಲು ಹಿಡಿದು ಕೊಲ್ಲುತ್ತಾರೆ, ಇಲ್ಲವೇ ಸಾಕಿ ಪಳಗಿಸುತ್ತಾರೆ. ಇದು ಅವರ ಜೀವನ ನಿರ್ವಹಣೆಗೋಸ್ಕರ ಮಾತ್ರ. ಕಾಗೆಗಳಲ್ಲಿ ೨ ವಿಧ. ಅತಿ ಕಪ್ಪಗಿರುವ "ಕಾಡು ಕಾಗೆ" ಮತ್ತು ಕೊರಳಲ್ಲಿ ಉಂಗುರದಂತಿದ್ದು ನಸುಬೂದುಬಣ್ಣದ "ಪೇಟೆ ಕಾಗೆ".

ಕೆಲವರು ಹಕ್ಕಿಗಳಲ್ಲಿ ಯಾವುದೋ ಔಷಧಿಯಿದೆ, ಪೋಷಕಾಂಶಗಳಿವೆ - ಎಂಬ ನಂಬಿಕೆಯಿಂದ ಕೊಂದು ತಿನ್ನುತ್ತಾರೆ. ಉದಾಹರಣೆಗೆ ಗೂಬೆಯ ಮಾಂಸ ಹಾಗೂ ಅದರ ತುಪ್ಪವನ್ನು ತಿನ್ನುವುದರಿಂದ "ಇರುಳು ಗುರುಡು" (Night Blindness) ಹೋಗುತ್ತದೆ, ಕೆಂಬೂತ (ಚೊಂಬುಕ) ತಿನ್ನುವುದರಿಂದ ಪಿತ್ತಜನಕಾಂಗದ ಕಾಯಿಲೆ ವಾಸಿಯಾಗುತ್ತದೆ - ಎಂಬ ನಂಬಿಕೆಯನ್ನು ನಾಟಿವೈದ್ಯರು ಹೇಳಿರುತ್ತಾರೆ. ಇದರಿಂದ ಈ ಹಕ್ಕಿಗಳ ಕೊಲೆಯಾಗುತ್ತದೆ. ಹಾಗೆಯೇ ಡೊಂಬಕಾಗೆ ಮತ್ತು ನೀರುಕಾಗೆಗಳ ರಕ್ತವನ್ನು ಕುರುಬರು ಮಂತ್ರ-ತಂತ್ರಗಳಿಗೆ ಬಳಸುತ್ತಾರೆ.

ನವಿಲುಗರಿ ಮನೆಯಲ್ಲಿದ್ದರೆ ದೇವರ ಕೃಪೆ ಇರುತ್ತದೆ, ಭೂತ ಪಿಶಾಚಿಗಳ ಬಾಧೆ ಇರುವುದಿಲ್ಲ, ಅದರ ತುಪ್ಪ, ಮೂಳೆ ರೋಗಕ್ಕೆ ದಿವ್ಯ ಔಷಧಿ - ಎಂದು ತಿಳಿಯುತ್ತಾರೆ. ಇದರಿಂದ ನವಿಲುಗಳು ಸಹ ಕೊಲ್ಲಲ್ಪಡುತ್ತವೆ.

ಕೊಡಗಿನಲ್ಲಿ ಪ್ರಾಣಿ ಬೇಟೆಗೆ ಇರುವಷ್ಟು ಆಸಕ್ತಿ ಪಕ್ಷಿ ಬೇಟೆಯಲ್ಲಿ ಯಾರಿಗೂ ಇಲ್ಲವೆಂದೇ ಹೇಳಬಹುದು. ಆದರೂ ಕೆಲವರು ಕೆಲವೊಮ್ಮೆ ಟಾರ್ಚ್ ದೀಪಗಳನ್ನು ಹಿಡಿದು, ಇಲ್ಲವೇ ಪಂಜನ್ನು ಹೊತ್ತಿಸಿಕೊಂಡು ರಾತ್ರಿ ಹಕ್ಕಿ ಬೇಟೆಗೆ ಹೋಗುತ್ತಾರೆ. ಕೆಲವರು ಬಂದೂಕವನ್ನು

(12 Bore Gun) ಅಥವಾ ರೈಫಲನ್ನು (.22) ಎತ್ತಿಕೊಂಡು ದೀಪದ ಬೆಳಕಲ್ಲಿ ಹಕ್ಕಿಯ ಮಿಣುಗುವ ಕಣ್ಣನ್ನು ಕಂಡು ಹಿಡಿದು ಗುಂಡು ಹೊಡೆಯುತ್ತಾರೆ.

ಗುಡ್ಡಗಾಡು ಜನರು ಬಿದಿರಿನ ಬಿಲ್ಲು ಬಾಣಗಳನ್ನೆತ್ತಿಕೊಂಡು ಪಂಜನ್ನು ಉರಿಸಿ ಹಕ್ಕಿಗಳು ವಿಶ್ರಮಿಸಿಕೊಂಡಿರುವ ಮರಗಳನ್ನು ಮೊದಲೇ ಗುರುತಿಸಿಟ್ಟುಕೊಂಡು ಬೇಟೆಗೆ ಹೋಗುತ್ತಾರೆ. ಇದಕ್ಕೆ ಅಮಾವಾಸ್ಯೆ ಸೂಕ್ತ ಕಾಲವೆಂದು ನಂಬುತ್ತಾರೆ. ಕೆಲವು ಹಕ್ಕಿಗಳಿಗೆ ರಾತ್ರಿ ಕಣ್ಣು ಕಾಣಿಸುತ್ತವೆ. ಉದಾಹರಣೆಗೆ, ಗೂಬೆ, ಬಾವಲಿ, ಉಪ್ಪುತೀತಿ ಪಕ್ಷಿ (ಬೆಳ್ದಿಂಗಳಲ್ಲಿ ಹಾರಾಡುವ ಹಕ್ಕಿ)ಗಳು ಲೈಟು-ಪಂಜನ್ನು ಕಂಡಕೂಡಲೇ ಹಾರಿ ಹೋಗಿಬಿಡುತ್ತವೆ. ಉಳಿದ ಯಾವುದೇ ಪಕ್ಷಿಗಳು ದೂರ ಹಾರಲಾರವು. ರಾತ್ರಿ ಕಾಲದಲ್ಲಿ ಅಪಾಯ ಒದಗುವ ಸೂಚನೆ ಕಂಡಾಗ ಕೊಂಬೆಯಿಂದ ಕೊಂಬೆಗೆ ಜಿಗಿದು ಅಡಗಿ ಕೊಳ್ಳುತ್ತವೆ.

ರಾತ್ರಿ ಕಾಲದಲ್ಲಿ ಹಕ್ಕಿ ಬೇಟೆಗೆ ಹೋಗುವುದು ಕೂಡ ಅಪರೂಪ. ಇದು ಶ್ರಮದ ಕೆಲಸ. ಆದ್ದರಿಂದ ಹಕ್ಕಿಗಳು ಹಿಕ್ಕೆ ಹಾಕಿರುವ ಜಾಗಗಳನ್ನು ಮೊದಲೇ ಗುರ್ತಿಸಿಕೊಂಡು ಅಲ್ಲಿ ಬಲೆ ಬೀಸಿ, ಕಾಳು ಹಾಕಿ ಹಿಡಿಯುತ್ತಾರೆ.

ಕುರುಬರಲ್ಲಿ ಮೂರು ವಿಧ : ೧) ಜೇನು ಕುರುಬರು, ೨) ಬುಟ್ಟಿ ಕುರುಬರು, ೩) ಬೆಟ್ಟ ಕುರುಬರು. ಇವರ್ಯಾರು ಕುರಿಕಾಯುವ ಕೆಲಸವನ್ನು ಮಾಡುವವರಲ್ಲ.

ಜೇನು ಕುರುಬರು ದೊಡ್ಡ ದೊಡ್ಡ ಮರಗಳಲ್ಲಿ ನೇತಾಡುತ್ತಿರುವ ಹೆಜ್ಜೇನು ಗೂಡಿಗೆ ಸಲೀಸಾಗಿ ಕೈ ಹಾಕಿ ಹೊಗೆ ಹೊತ್ತಿಸಿ ಜೇನಿನ ಎರಿಗಳನ್ನು (Bee Comb) ಕಿತ್ತು ಕೆಳಗಿಳಿಸಿ ಜೇನನ್ನು ಹಿಂಡಿ, ಸೋಸಿ, ಪಾತ್ರೆಗಳಲ್ಲಿ ತುಂಬಿ ಹಳ್ಳಿಗಳಿಗೆ ತಂದು ಮಾರುತ್ತಾರೆ.

ಇವರು ಹಣಕ್ಕೋಸ್ಕರ ಜೇನು ಮಾರುವುದಿಲ್ಲ. ಅಕ್ಕಿ, ಬಟ್ಟೆ, ಅನ್ನ, ರೊಟ್ಟಿ ಕೊಟ್ಟರೆ ಸಾಕು. ಹಣ ಕೇಳಿದರೆ ಆತನಿಗೆ "ನಾಡು ಸಾರಾಯಿ" (Country arrack) ಕುಡಿಯುವ ಆಸೆಯಾಗಿದೆ - ಎಂದರ್ಥ!

ಜೇನು ನೊಣ ಕಚ್ಚದಂತೆ ಮೈಗೆಲ್ಲಾ ಯಾವುದೋ ಹಸಿರು ಸೊಪ್ಪಿನ ಮದ್ದನ್ನು ಲೇಪಿಸಿಕೊಳ್ಳುತ್ತಾರೆ. ದಟ್ಟವಾದ ಹೊಗೆ ಹಾಕುತ್ತಾ ಮರದ ತುತ್ತ ತುದಿಯಲ್ಲಿರುವ ಜೇನು ಹುಟ್ಟಿನಲ್ಲಿರುವ ನೊಣಗಳನ್ನು ಬೇರೆ ಕೊಂಬೆಗೆ ವರ್ಗಾಯಿಸಿ ಜೇನು ತುಪ್ಪ ತೆಗೆಯುತ್ತಾರೆ. ಇನ್ನೂ ಕೆಲವರು ಚಾಣಾಕ್ಷರು ಉಪಾಯದಿಂದ ಹೆಜ್ಜೇನು ಗೂಡಿನೊಳಗೆ ಕೈಹಾಕಿ, ರಾಣಿ ಜೇನನ್ನು ಪ್ರತ್ಯೇಕಿಸಿ ದೂರವಿರಿಸುತ್ತಾರೆ. ರಾಣಿ ಜೇನು ದೂರವಾದೊಡನೆ ಆ ಹೆಜ್ಜೇನು, ಅದರ ಸುಳಿವನ್ನರಸುತ್ತಾ ಹಾರಾಡುತ್ತಿರುತ್ತವೆ. ಆಗಲೇ ಜೇನು ತುಪ್ಪವನ್ನು ಸರಾಗವಾಗಿ ತೆಗೆಯುತ್ತಾರೆ.

ಇದೇ ರೀತಿ ಹುತ್ತದ ಬಿಲದಲ್ಲಿರುವ ಹಾಗೂ ಮರದ ಪೊಟರೆಗಳಲ್ಲಿರುವ ಜೇನನ್ನೂ ಈ ಕುರುಬರು ಸರಾಗವಾಗಿ ತೆಗೆಯುತ್ತಾರೆ. ಇಂಥಾ ಸಂದರ್ಭದಲ್ಲಿ ಹತ್ತಿರುವ ಮರದ ಪೊಟರೆಗಳಲ್ಲಿ

ಮರಕುಟ್ಟಿಗ ಹಕ್ಕಿ ಅಥವಾ ಬೇರೆ ಯಾವುದೇ ಹಕ್ಕಿಗಳು, ಅವುಗಳ ಮೊಟ್ಟೆಗಳು ಕಂಡುಬಂದರೆ ಅವುಗಳನ್ನು ಹಿಡಿದು ತರುತ್ತಾರೆ.

ಬುಟ್ಟಿ ಕುರುಬರು ಮುಳ್ಳು ಬಿದಿರು, ಸೀಮೆ ಬಿದಿರು, ವಾಟೆ, ಬೆತ್ತಗಳಿರುವ ಕಾಡುಗಳಿಗೆ ಇಲ್ಲವೇ ನದೀ ತೀರಕ್ಕೆ ಹೋಗಿ ಅವುಗಳನ್ನು ಕಡಿದು ತಂದು ಕುಕ್ಕೆ, ಬುಟ್ಟಿ, ಚಾಪೆ ತುಳಿಯ (ಭತ್ತ ತುಂಬಿಡುವ ಬಿದಿರಿನ ದೊಡ್ಡ ಕಣಜ), ಬಲುಂಜಿ (ಕೋಳಿ ಪಂಜರ), ಕೊಮ್ಮೆ (ಮುಚ್ಚಳವಿರುವ ಆಳೆತ್ತರದ ಬುಟ್ಟಿ), ಪೊಡ (ಮೀನು ಹಿಡಿಯುವ ಬಿದಿರಿನ ಅಗಲ ಬಾಯಿ ಇರುವ ಬುಟ್ಟಿ) - ಇವುಗಳನ್ನು ನೇಯ್ದು ಹಳ್ಳಿಗಳಲ್ಲಿ ಮಾರಾಟ ಮಾಡುತ್ತಾರೆ.

ಇಂಥಾ ಸಂದರ್ಭಗಳಲ್ಲಿ ಇವರಿಗೂ ಬಿದಿರು ಮೆಳೆಗಳಲ್ಲಿ, ನದೀ ತಟಾಕದ ಬಿಲಗಳಲ್ಲಿ, ಮರದ ಪೊಟರೆಗಳಲ್ಲಿ ಹಕ್ಕಿಗಳು ಕಾಣಸಿಕ್ಕರೆ ಅವುಗಳನ್ನು ಹಿಡಿದು ತಿನ್ನುತ್ತಾರೆ. ಸಾಮಾನ್ಯವಾಗಿ ಹಕ್ಕಿಗಳನ್ನು ಸಾರು ಮಾಡಿ (Curry) ತಿನ್ನುವುದು ಕಡಿಮೆ. ಸುಟ್ಟು ತಿನ್ನುವುದೇ ಜಾಸ್ತಿ. ಹುರಿದು, ಬೇಯಿಸಿ, ಉಪ್ಪು ಮಸಾಲೆ ಹಾಕಿ ತಿನ್ನುವ ಕ್ರಮವೂ ಇವರಲ್ಲಿದೆ. ಕಾಡುಕುರುಬರು ಯಾ ಬೆಟ್ಟಕುರುಬರು ಸಹ ಮಲೆಕುಡಿಯರಂತೆ (ಮಲೆ=ಬೆಟ್ಟ) ಬೆಟ್ಟದ ಸುತ್ತಮುತ್ತಲಲ್ಲಿ ಗುಡಿಸಲು ಕಟ್ಟಿಕೊಂಡು ವಾಸ ಮಾಡುತ್ತಾರೆ. ಇವರು ಕಾಡು ಬೇಟೆಯಾಡುವುದರೊಂದಿಗೆ ಗೆಡ್ಡೆ, ಗೆಣಸು, ಸೊಪ್ಪು, ತರಕಾರಿಗಳನ್ನು ಬೆಳೆಸಿ ಹಳ್ಳಿಗಳಲ್ಲಿ ಮಾರುತ್ತಾರೆ. ಕೆಲವರು ದನಕಾಯುವ ಕೆಲಸ, ಇನ್ನು ಕೆಲವರು ತೋಟಗಳಲ್ಲಿ ಕೂಲಿ ಕೆಲಸ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಾರೆ.

ಈ ರೀತಿ ತೋಟಗಳಲ್ಲಿ ದೊಡ್ಡದಾಗಿ ಬೆಳೆದಿರುವ ಮರದ ಕೊಂಬೆ ಕಡಿದು ಸೌದೆ ಮಾಡುವುದು, ಗದ್ದೆಗಳಲ್ಲಿ ಬೇಸಾಯ ಮಾಡುವುದು, ಕೆಲವೊಂದು ರೋಗರುಜಿನಗಳಿಗೆ ನಾಟಿ ಔಷಧಿ ಮಾಡುವುದು - ಇವರ ಕಾಯಕ. ವಿರಾಮದ ವೇಳೆಯಲ್ಲಿ ಇವರು ಹಕ್ಕಿ-ಪಕ್ಷಿಗಳನ್ನೂ, ಸಣ್ಣಪುಟ್ಟ ಕಾಡು ಮೃಗಗಳನ್ನು ಹೊಡೆದು ತಿನ್ನುತ್ತಾರೆ.

ಯಾವುದೇ ಪಕ್ಷಿಗಳನ್ನು ಹೊಡೆದು ಕೊಂದರೂ ಅವುಗಳ ಮಾಂಸ ಕನಿಷ್ಠಪಕ್ಷ ಅರ್ಧ ಕಿಲೋ ಆದರೂ ಇರಬೇಕು. ಇಂಥಾ ಹಕ್ಕಿಗಳೆಂದರೆ, ಕೊಳಕ, ಕೆಂಗೊಳಕ, ಕರ್‌ಕೋಳಿ, ಕಾನಂಪಕ್ಕಿ, ಕೆದಕೋಳಿ, ಕಾಡುಕೋಳಿ - ಇತ್ಯಾದಿ. ಇವುಗಳ ಮಾಂಸ ರುಚಿ ಹಾಗೂ ಹೆಚ್ಚು ತೂಕವಿರುತ್ತದೆ. ಒಂದು ಮುಷ್ಟಿಗಿಂತ ಕಡಿಮೆ ಗಾತ್ರದ ಹಕ್ಕಿಯನ್ನು ಕೊಲ್ಲುವುದು ಅಪರೂಪ. (ಈ ಹಕ್ಕಿಗಳ ಕನ್ನಡ ಹೆಸರು ತಿಳಿಯದು).

ಹೊರ ಪ್ರಾಂತ್ಯಗಳಿಂದ ಕೊಡಗಿಗೆ ಬರುವ ಹಕ್ಕಿಪಿಕ್ಕಿಗಳು ಬಲೆ ಬೀಸಿ ಪಕ್ಷಿಗಳನ್ನು ಹಿಡಿಯುತ್ತಾರೆ. ಗುಡ್ಡಗಾಡು ವಾಸಿಗಳಾದ ಕೊಡಗಿನ ಕುರುಬರು, ಎರವರು, ಕುಡಿಯರು ನೆಲದ ಮೇಲೆ "ಬಿಲ್ಲು ಕಟ್ಟಿ" (ಬಿದಿರಿನ ಬೋನು) ಹಕ್ಕಿಗಳನ್ನು ಹಿಡಿಯುತ್ತಾರೆ. ದನಕಾಯುವ ಹುಡುಗರು, ಶಾಲೆಗೆ ರಜೆ ಇದ್ದಾಗ ಎಲ್ಲಾ ಜಾತಿಯ ಹುಡುಗರು (ಬ್ರಾಹ್ಮಣರನ್ನು ಬಿಟ್ಟು) ಕ್ಯಾಟರ್‌ಪಲ್ಟ್, ಕವಣೆ ಬಿಲ್ಲು, ಬಿದಿರಿನ ಬಾಣದ ಬಿಲ್ಲು, ಪಾಯಿಂಟ್ ಟೂಟೂ (.22) ಬಂದೂಕು, ಇಲ್ಲವೇ ತೋಟಾ (Cartridge) ಬಂದೂಕಿನಿಂದ ಹಕ್ಕಿಗಳನ್ನು ಬೇಟೆಯಾಡುತ್ತಾರೆ.

ಕೆಲವು ಪಕ್ಷಿಗಳು ಗುಂಪುಗುಂಪಾಗಿ ಮೇವನ್ನರಿಸಿಕೊಂಡು ಕಾಡಿನಿಂದ ಊರೊಳಗೆ ಬರುತ್ತವೆ. ಉದಾಹರಣೆಗೆ "ಕಾನಂಪಕ್ಷಿ"ಗಳು. ಇವುಗಳನ್ನು ಬಲೆ ಬೀಸಿ ಹಿಡಿಯುತ್ತಾರೆ. ಒಂದೊಂದಾಗಿ, ಜತೆ ಜತೆಯಾಗಿ (Couple) ಬರುವ ಪಕ್ಷಿಗಳೆಂದರೆ "ಕೋಂಬಕ್ಷಿ" ಎಂಬ ಪಾರಿವಾಳಗಳು. ಇವನ್ನು ಬಿಲ್ಲು ಕಟ್ಟಿ, ಇಲ್ಲವೇ ಬಿಲ್ಲಿನಿಂದ ಹೊಡೆದು ತರುತ್ತಾರೆ. ಕೆಲವು ಪಕ್ಷಿಗಳು ಬೇಸಿಗೆಯಲ್ಲಿ ಕಾಣಬಂದರೆ, ಇನ್ನು ಕೆಲವು ಮಳೆಗಾಲದಲ್ಲಿ, ಇನ್ನೂ ಕೆಲವು ಚಳಿಗಾಲದಲ್ಲಿ ಕಾಣಸಿಗುತ್ತವೆ.

ಗದ್ದೆ, ತೋಟಗಳೊಳಗೆ ಕೆಲವು ಹಕ್ಕಿಗಳು ಬೆಳೆ, ತರಕಾರಿಗಳ ಹೂವು ಕಾಯಿಗಳನ್ನು ತಿಂದು ನಾಶಪಡಿಸುತ್ತವೆ. ಇವುಗಳನ್ನು ಹಿಡಿಯಲು ಒಂದಾಳು ಎತ್ತರದ ಒಂದು ಹಿಡಿ ದಪ್ಪವಿರುವ ಉರುಟಾದ ಬಿದಿರನ್ನು ತೆಗೆದುಕೊಳ್ಳುತ್ತಾರೆ. ಇದರ ಮಧ್ಯಭಾಗವನ್ನು ಸೀಳಿ ಎರಡು ಕವಲಾಗುವಂತೆ ಮಾಡಿ ಉಳಿದರ್ಧ ಭಾಗವನ್ನು ನೆಲದಲ್ಲಿ ಗಟ್ಟಿಯಾಗಿ ಹೂಳುತ್ತಾರೆ. ಸೀಳಿದ ಎರಡೂ ತುದಿಗಳಿಗೆ ಅಡ್ಡಲಾಗಿ ಒಂದು ಕೋಲನ್ನು ಸಿಕ್ಕಿಸುತ್ತಾರೆ. ಈ ಕೋಲಿನ ಮೇಲೆ ಹಕ್ಕಿಯೊಂದು ಕುಳಿತ ತಕ್ಷಣ ಅದು ಕೆಳಕ್ಕೆ ಜಾರುತ್ತದೆ. ಕ್ಷಣ ಮಾತ್ರದಲ್ಲಿ ಸೀಳಿದ ಬಿದಿರಿನ ಎರಡೂ ತುದಿಗಳ ನಡುವಿನಲ್ಲಿ ಹಕ್ಕಿ ಸಿಕ್ಕಿ ಬೀಳುತ್ತದೆ. ಒಟ್ಟಿನಲ್ಲಿ ಇದು ಇಕ್ಕಳದ ಆಕಾರದಲ್ಲಿದ್ದು ಅಡ್ಡವಿರುವ ಕೋಲು ಕೆಳಗೆ ಜಾರಿದಾಗ ರಪ್ಪನೆ ಎರಡೂ ಕವಲುಗಳು ಮುಚ್ಚಿಕೊಳ್ಳುತ್ತವೆ. ಹಕ್ಕಿ ಅದರಲ್ಲಿ ಸಿಕ್ಕಿ ಸಾಯುತ್ತದೆ.

ನೆಲದ ಮೇಲೆ ಓಡಾಡುವ ಯಾವುದೇ ಹಕ್ಕಿಗಳೂ ಈ ಕವಲುಬಿಲ್ಲಿಗೆ ಸಿಕ್ಕಿಕೊಳ್ಳುವುದಿಲ್ಲ. ಇನ್ನು ಕೆಲವರು ಮರದ ಮೇಲೆ "ಅಟ್ಟಣೆಗೆ" ಹಾಕಿಕೊಂಡು ಕೈಯ್ಯಲ್ಲಿ ಬಿಲ್ಲು ಇಲ್ಲವೇ ಬಂದೂಕು ಹಿಡಿದು ಕೂರುತ್ತಾರೆ. ದೊಡ್ಡ ದೊಡ್ಡ ಹಕ್ಕಿಗಳು ಬಂದಾಗ ಇವುಗಳಿಗೆ ಗುರಿ ಇಟ್ಟು ಹೊಡೆಯುತ್ತಾರೆ. ಈಗ ಒಂದು "ಕಾಡುತೂಸಿ"ನ (Cartridge) ಬೆಲೆ ೨೫ ರೂಪಾಯಿಗಳು. ಒಂದು ಹಕ್ಕಿಯನ್ನು ಬಂದೂಕದಿಂದ ಕೊಂದರೆ, ಸತ್ತ ಹಕ್ಕಿಯ ಮಾಂಸ ಕನಿಷ್ಠ ಒಂದು ಕಿಲೋಗಿಂತ ಜಾಸ್ತಿ ಇದ್ದರೆ ಸರಿ; ಕಮ್ಮಿಯಾದರೆ "ತೋಟಾ"ದ ಕ್ರಯ ಕೂಡ ಸಿಗುವುದಿಲ್ಲ.

ನೀರಿನೊಳಗಿರುವ ಬಕಪಕ್ಷಿ, ಇತರ ನೀರು ಹಕ್ಕಿಗಳನ್ನು ಹಿಡಿಯಲು ಒಂದು ಉದ್ದನೆಯ ಕೋಲಿನ ತುದಿಗೆ ಕೋಲಿನ ಅರ್ಧದಷ್ಟು ಉದ್ದದ ಗಟ್ಟಿ ದಾರವನ್ನು ಬಿಗಿದು ಅದರ ತುದಿಗೆ ಒಂದು ಗಾಳವನ್ನು ಸಿಕ್ಕಿಸುತ್ತಾರೆ. ಗಾಳದ ಮೊನೆಗೆ ಒಂದು ಜೀವಂತ ಕಪ್ಪೆಯನ್ನು (ಬೆನ್ನ ಚರ್ಮಕ್ಕೆ) ಸಿಕ್ಕಿಸುತ್ತಾರೆ. ಗಾಳಕ್ಕೆ ಚುಚ್ಚಿಕೊಂಡ ಕಪ್ಪೆಯು ಗಾಳಿಯಲ್ಲಿ ನೇತಾಡುವಂತೆ ಕೋಲನ್ನು ಬೇರೊಂದು ಮರಕ್ಕೆ ಕಟ್ಟಿರುತ್ತಾರೆ. ಕಪ್ಪೆ ಒದ್ದಾಡುತ್ತಿರುವಾಗ ಕೊಕ್ಕರೆ ಮತ್ತಿತರ ನೀರು ಹಕ್ಕಿಗಳು ಅದನ್ನು ನುಂಗಲು ಬಂದಾಗ ಗಂಟಲೊಳಗೆ ಕಪ್ಪೆ ಸಿಕ್ಕಿಹಾಕಿಕೊಂಡು ತಾನೂ ಗಾಳದೊಡನೆ ನೇತಾಡುತ್ತಿರುತ್ತದೆ. ಬೇಟೆಗಾರನು ಅದನ್ನು ಹಿಡಿದು ಕೊಲ್ಲುತ್ತಾನೆ.

ಬಿದಿರಿನ ಬಿಲ್ಲು ಮಾಡಿ ಅದರ ಹಗ್ಗಕ್ಕೆ ಚರ್ಮದ ಪಟ್ಟಿಯನ್ನು ಬಿಗಿದು, ಅದರೊಳಗೆ ಕಲ್ಲನ್ನಿಟ್ಟು ಬಾಣದಂತೆ ಬಿಟ್ಟು ಹಕ್ಕಿಯನ್ನು ಹೊಡೆಯುತ್ತಾರೆ. ಇದಕ್ಕೆ "ತಟ್ಟೆಬಿಲ್ಲ್" ಅಥವಾ "ಪೊಣಬಿಲ್ಲ್" (ಬಿದಿರಿನ ಬಿಲ್ಲು) ಎನ್ನುತ್ತಾರೆ. ಚರ್ಮದ ಪಟ್ಟಿಗೆ ಕಬ್ಬಿಣದ ಮೊನೆ ಇರುವ ಬಾಣವನ್ನು ಪಯೋಗಿಸಿಯೂ ಹೊಡೆಯಬಹುದು.

ಅತ್ತಿಹಣ್ಣು, ಗೋಳಿಹಣ್ಣು ಇತ್ಯಾದಿ ಮರಕ್ಕೆ ಪಕ್ಷಿಗಳು ಧಾಳಿ ಇಡುತ್ತವೆ. ಇಂಥಾ ಮರಗಳ ಕೊಂಬೆಯಲ್ಲಿ ಹಲಸಿನ ಹಣ್ಣಿನ ಮೇಣವನ್ನು ಒಂದು ಕೋಲಿನ ತುಂಬಾ ಸವರಿ ಕಟ್ಟಿಡುತ್ತಾರೆ. ಒಂದು ವೇಳೆ, ಯಾವುದಾದರೂ ಹಕ್ಕಿ ಮೇಣ ಹಚ್ಚಿದ ಕೋಲಿನ ಮೇಲೆ ಕುಳಿತಾಗ ಕಾಲುಗಳು ಮೇಣಕ್ಕೆ ಅಂಟಿಕೊಂಡಾಗ ಹಕ್ಕಿಯನ್ನು ಹಿಡಿದು ಕೊಲ್ಲುತ್ತಾರೆ.

ಟಾರ್ಚ್ ಲೈಟ್ ಇಲ್ಲವೇ ಪಂಜಿನ ಬೆಳಕನ್ನು ಸಣ್ಣಪುಟ್ಟ ಪೊದೆಗಳತ್ತ ಹರಡಿದಾಗ ಭಯದಿಂದ ಕೆಲವು ಹಕ್ಕಿಗಳು ಪಿಳಿಪಿಳಿ ಹೊಳೆಯುವ ಕಣ್ಣನ್ನು ತೋರಿಸುತ್ತಾ ಅಡಗಿಕೊಳ್ಳಲು ಪ್ರಯತ್ನಿಸುತ್ತವೆ. ಆಗ ಕೈಯ್ಯಲ್ಲಿರುವ ಲಾಟಿ, ಬಡಿಗೆಯಿಂದ ಬೀಸಿ ಹೊಡೆದು ಕೊಲ್ಲುವ ಕ್ರಮವೂ ಉಂಟು.

ಬಾವಲಿಗಳು ನೇತಾಡುವ ಮರದ ಕೊಂಬೆಗಳಿಗೆ "ಕೊಕ್ಕರ್ಚಿ ಮುಳ್ಳ್" ಎಂಬ ಮೈ ತುಂಬಾ ಮುಳ್ಳು ಬಿಡುವ ಮರದ ಕೊಂಬೆಯನ್ನು ಕಟ್ಟಿರುತ್ತಾರೆ. ಬಾವಲಿಗಳು ರೆಕ್ಕೆ ಬಿಡಿಸಿಕೊಂಡು ಹಾರುವಾಗ ಅಕಸ್ಮಾತ್ ಈ ಮುಳ್ಳಿನ ಕೊಂಬೆಗೆ ತಗುಲಿಬಿಟ್ಟರೆ ಅಲ್ಲೇ ಸಿಕ್ಕಿಹಾಕಿಕೊಳ್ಳುತ್ತವೆ. ಈ ರೀತಿ ಬಾವಲಿಗಳನ್ನು ಹಿಡಿಯುವ ಕ್ರಮಕ್ಕೆ "ಕೊಕ್ಕರ್ಚಿ ಮುಳ್ಳ್‌ಕೆಣಿ" ಎನ್ನುತ್ತಾರೆ. ಎಲ್ಲೆಲ್ಲಿ ಬಾವಲಿಗಳು ನೇತಾಡುತ್ತಿರುತ್ತೋ (ಪಾಳು ಬಿದ್ದ ಗುಡಿ, ಮರದ ದೊಡ್ಡ ಪೊಟರೆ, ಕೆಲವು ಮರದ ಕೊಂಬೆಗಳು) ಅಲ್ಲಿ ಈ ರೀತಿಯ ಮುಳ್ಳು ಬೋನು ಕಟ್ಟುತ್ತಾರೆ.

ಇನ್ನು ಕೆಲವರು ಹಕ್ಕಿಗಳು ಸಿಳ್ಳು ಹಾಕುವುದನ್ನು ಅನುಕರಣೆ ಮಾಡಿ, ಅವುಗಳು ತಮ್ಮ ಅಡಗುದಾಣಗಳಿಂದ ಹೊರಬಂದಾಗ ಕಲ್ಲು, ಬಿಲ್ಲು ಹೊಡೆದು ಕೊಲ್ಲುತ್ತಾರೆ. ಒಂದು ವಿಷಯ : ಯಾವುದೇ ಹಕ್ಕಿಯೂ ವಿಷಮಿಶ್ರಿತ ಕಾಳು ಹಾಕಿದರೆ ತಿನ್ನುವುದಿಲ್ಲ. ಕಾಡು ಪ್ರಾಣಿಗಳಿಗೆ ವಿಷಮಿಶ್ರಿತ ಆಹಾರ ಚೆಲ್ಲಿ ಕೊಲ್ಲಬಹುದು, ಆದರೆ ಹಕ್ಕಿಗಳನ್ನು ಹೀಗೆ ಹಿಡಿಯಲಾಗುವುದಿಲ್ಲ.

ಕಾಗೆ ಕರ್ಕಶವಾಗಿ ಕಾಕಾಕರ್‌ಕರ್..... ಎಂದು ಮನೆಯ ಸಮೀಪ ಅರಚಿದರೆ ಕೆಟ್ಟದೊಂದು ವಾರ್ತೆ ಬರಲಿದೆ - ಎಂದು ನಂಬಿಕೆ ಇದೆ. ಒಂದು ವೇಳೆ ಸುಸ್ವರದಲ್ಲಿ "ಕರ್ರ್....ಕರ್ರ್......ಕರ್ರ್....ಕಾ" ಎಂದು ಕೂಗಿದರೆ ಯಾರೋ ಹೊಸ ಅತಿಥಿಗಳು ಬರಲಿದ್ದಾರೆ - ಎಂದು ನಂಬುತ್ತಾರೆ. ಇದಕ್ಕೆ ಕಾಗೆ "ಅನ್ನ ಬಸಿಯುವುದು" (ಕಾಕೆ ಕೂಳ್‌ಬಾಕುವೊ) ಎನ್ನುತ್ತಾರೆ.

ಗೂಬೆಯು ರಾತ್ರಿ ಕಾಲದಲ್ಲಿ ವಾಸವಿರುವ ಮನೆಯ ಮೇಲ್ಭಾಗದಲ್ಲಿ, ಮನೆ ಎದುರಿನ ಮರದಲ್ಲಿ "ಕುತ್ತಿ ಚುಡ್.... ಕುತ್ತಿ ಚುಡ್....." (ನಾಶವಾಗಲಿ) ಎಂದು ಗೂಂಕರಿಸಿದರೆ ಆ ಮನೆಯವರಲ್ಲಿ ಯಾರಾದರೊಬ್ಬರು ಶೀಘ್ರದಲ್ಲೇ ಮೃತರಾಗುತ್ತಾರೆ - ಎಂಬ ನಂಬಿಕೆ ಇದೆ.

ನಡುರಾತ್ರಿಯಲ್ಲಿ, ಮನೆಯಲ್ಲಿ ಸಾಕಿದ ಹುಂಜ "ಕೊಕ್ಕರೇ ಕೋ" ಎಂದು ಕೂಗಲಾರಂಭಿಸಿದರೆ ಕೆಲ ದಿನಗಳಲ್ಲಿ ಆ ಮನೆಯವರಲ್ಲಿ ಒಬ್ಬರು ದುರ್ಮರಣಕ್ಕೆ ಒಳಗಾಗುತ್ತಾರೆಂದು ನಂಬುತ್ತಾರೆ. ಅಕಸ್ಮಾತ್ ಹೇಂಟೆ, ಹುಂಜದಂತೆ ಕೂಗಿದರಂತೆ ಊರಿಗೆ ಕೇಡು - ಎಂದು ಭಾವಿಸುತ್ತಾರೆ.

ಗೂಬೆಯು ಎಂದಾದರೂ ಮನೆ ಎದುರು, ಮನೆಯ ಅಂಗಳದಲ್ಲಿ ಕುಳಿತು ಮನೆಯನ್ನೇ

ಕ್ರೂರ ಕಣ್ಣುಗಳಿಂದ ನೋಡುತ್ತಿದ್ದರೆ, ಮುಂದಕ್ಕೆ ಏನೋ ಅಪಾಯ ಕಾದಿದೆ - ಎಂದು ತಿಳಿಯುತ್ತಾರೆ.

ಕಾಗೆ - ಎಂಬುದು ಸತ್ತವರ ಪ್ರೇತಾತ್ಮದ ಸಂಕೇತ. ಸತ್ತವರ ಹೆಸರಿನಲ್ಲಿ "ಎಡೆ ಇಡುವಾಗ" (ತರ್ಪಣ ಕೊಡವಾಗ) ಕಾಗೆಗಳನ್ನು ಕರೆದು ಅನ್ನ ಇಡುತ್ತಾರೆ. ಹಾಗೇನಾದರೂ ಕಾಗೆ ಬರದೇ ಹೋದಾಗ ಸತ್ತವರ ಆತ್ಮಕ್ಕೆ ಮೃತ ಸಂಬಂಧಿಕರು ನಡೆಸಿದ ಉತ್ತರ ಕ್ರಿಯಾಕ್ರಮಗಳು ಸರಿ ಬರಲಿಲ್ಲವೆಂದು ತಿಳಿಯುತ್ತಾರೆ.

ಕಾಗೆ, ಗೂಬೆ, ಹದ್ದು, ಕೆಂಬೂತಗಳು ಮನೆಯೊಳಗೆ ಅಕಸ್ಮಾತ್ ಪ್ರವೇಶಿಸಿದರೆ ಅದು ದುಃಶಕುನ. ಗಿಣಿ, ಟಿಟ್ಟಿಭ, ಭೀಮರಾಜಪಕ್ಷಿ, ಗುಬ್ಬಿಗಳು ಮನೆಯೊಳಗೆ ಬಂದರೆ ಶ್ರೇಯಸ್ಕರ. ಭೀಮರಾಜ ಪಕ್ಷಿಯನ್ನು ಕಣ್ಣಾರೆ ಕಾಣುವುದು ಕಷ್ಟ. ಅದರ ಧ್ವನಿ ಕೇಳಲು ಇಂಪು. ಅದು ಮನೆಯ ಪಕ್ಕದಲ್ಲೇನಾದರೂ ಗೂಡು ಕಟ್ಟಿದರೆ ದೇವರ ಕೃಪೆಯಾದಂತೆಯೇ ಸರಿ. ಈ ಹಕ್ಕಿಯ ಬಾಲ ಕವಲಾಗಿ ಒಡೆದಿರುತ್ತದೆ. ಈ ಹಕ್ಕಿಯು ಸಾಮಾನ್ಯವಾಗಿ ಇತರ ಯಾವುದೇ ಹಕ್ಕಿಯ ಹಾಡಿನ ಧ್ವನಿಯನ್ನು ಅನುಕರಿಸಬಲ್ಲದು. ಬೆಳಗಿನ ಜಾವದಲ್ಲಿ ಈ ಹಕ್ಕಿ ಹೀಗೆ ಹಾಡುತ್ತದೆ :

"ಗೆಟಪ್ ಬೇಬಿ....
ಪ್ಲೀಸ್ ಗೆಟಪ್.....!"

ಇದೇ ರೀತಿ ಇನ್ನೊಂದು ಹಾಡುಗಾರ ಹಕ್ಕಿ ಎಂದರೆ "ಮಡಿವಾಳ ಹಕ್ಕಿ". ಇದು ಹಲವು ವಿಧದಲ್ಲಿ ಸಿಳ್ಳೆ ಹಾಕುತ್ತದೆ. ಇದರ ಮೈ ಎಲ್ಲಾ ಕಪ್ಪು; ಆದರೆ ಎದೆ ಹೊಟ್ಟೆ ಮಾತ್ರ ಬಿಳಿಯದಾಗಿರುತ್ತದೆ.

ಕೊಡಗಿನ ಜಾನಪದ ಹಾಡಿನಲ್ಲಿ ಒಂದು ರಮ್ಯ ಕವಿತೆ ಇದೆ. ಕಾಡಿನ ಒಡೆಯ ಅಯ್ಯಪ್ಪ ದೇವರು ವನದೇವತೆಯನ್ನು ಮದುವೆಯಾದನಂತೆ. ಆಗ ಈ ಹಕ್ಕಿಗಳು ಈ ರೀತಿ ವಾದ್ಯಗೋಷ್ಠಿ ನಡೆಸಿತಂತೆ.

"ಮರಕೊಟ್ಟಪಕ್ಷಿ ಚಂಡೆ ಕೊಟ್ಟ್‌ಚಿ,
ಕಾನ ಪಕ್ಷಿ ಚೀನಿ ಉರ್‌ಪ್‌ಚಿ,
ಕೊಟ್ಟ್ ಮುಡ್‌ಚ ತಡಂಬು ಎಡ್‌ತತ್,
ಬಾಲಾಟ ಚೆಂಬೆಕ್ ತಿರೋಳ ಬಾತ್
ದೇವತೆಯಡ ಮಂಗಲ ಗೌಜಿಲಾಚಿ!"

ಅಂದರೆ "ಮರಕುಟ್ಟಿಗ ಹಕ್ಕಿ ಚಂಡೆಮದ್ದಲೆ ಬಾರಿಸಿತು, ಕಾನಹಕ್ಕಿಯು ನಾಗಸ್ವರ ನುಡಿಸಿತು, ಟಿಟ್ಟಿಭವು ದೇವರ ಮೂರ್ತಿಯನ್ನು ಹೊತ್ತುಕೊಂಡಿತು, ಸದಾ ಕಾಲ ಬಾಲಾಡಿಸುತ್ತಲೇ ಇರುವ ಚೆಂಬೆಯು (ವಯ್ಯಾರಿ) ಮೈಮೇಲೆ ಆವೇಶ ಬಂದಂತೆ ಕುಣಿದಾಡಿತು. ಒಟ್ಟಿನಲ್ಲಿ ಹಬ್ಬದ ರೀತಿಯಲ್ಲಿ . ದೇವತೆಗಳ ಮದುವೆ ನಡೆಯಿತು.....!"

ಪಕ್ಷಿಗಳ ಬೇಟೆಗೆ ಹೆಂಗಸರು ಹೋಗುವುದಿಲ್ಲ. ಗಂಡಸರು ಅಥವಾ ಮಕ್ಕಳು ಬಲೆ ಬೀಸಿದ್ದರೆ, ಬಿಲ್ಲು ಕಟ್ಟಿದ್ದರೆ, ಅದಕ್ಕೆ ಹಕ್ಕಿ ಪಕ್ಷಿಗಳು ಸಿಕ್ಕಿ ಹಾಕಿಕೊಂಡಿದ್ದರೆ ಹೆಂಗಸರು ಹೋಗಿ ಹಿಡಿದು ತರುತ್ತಾರೆ.

ಎಲ್ಲಿ ಹಕ್ಕಿಗಳಿಗೆ ಭಯ-ಭೀತಿ ಇಲ್ಲವೋ ಅಲ್ಲೆಲ್ಲಾ ವಿಧವಿಧದ ಹಕ್ಕಿಗಳು ಗೂಡುಕಟ್ಟುತ್ತವೆ. ಮೊಟ್ಟೆ ಇಕ್ಕಿ ಮರಿ ಮಾಡುತ್ತವೆ. ನಮ್ಮ ಮನೆಯ ಸುತ್ತಲಿನ ತೋಟದಲ್ಲಿ, ಕಾಡುಗಳಲ್ಲಿ ಅದೆಷ್ಟೋ ವಿಧದ ಹಕ್ಕಿಗಳ ಇಂಚರ ದಿನಾ ಕೇಳುತ್ತಿರುತ್ತದೆ. ಮನೆಯಂಗಳದ ಹೂಗಿಡಗಳಲ್ಲಿ ಗೂಡು ಕಟ್ಟುತ್ತವೆ - ಪ್ರತೀ ವರ್ಷವೂ, ಆದರೆ, ನಮಗೆ ಯಾರಿಗೂ ಇದರ ಬಗ್ಗೆ ಕುತೂಹಲವಿಲ್ಲ. ಅವು ನಿರ್ಭಯವಾಗಿ ಸ್ವಚ್ಛಂದವಾಗಿ ಮನೆಯ ಸುತ್ತಮುತ್ತಲೂ ಹಾಡುತ್ತಾ ಅರಚುತ್ತಾ ತೊಂದರೆ ಇಲ್ಲವೆಂದು! ನಮಗೂ ಅವುಗಳಿಗೂ ಯಾವುದೇ ಬೆಸುಗೆ ಇಲ್ಲವಾದರೂ ನಮ್ಮೊಂದಿಗೆ ಹುಟ್ಟಿ ಬೆಳೆದು ಕಣ್ಮರೆಯಾಗುತ್ತಾ ಇರುತ್ತವೆ - ಅನೇಕ ವರ್ಷಗಳಿಂದ.....

**ಕೊಡಗಿನಲ್ಲಿ ಮನುಷ್ಯರು ತಿನ್ನುವ ಹಕ್ಕಿಗಳು**

೧) ನವಿಲು, ೨) ಕಾಡುಕೋಳಿ, ೩) ಕರ್‌ಕೋಳಿ, ೪) ಕೆದಕೋಳಿ, ೫) ಕಾಡುಬಾತು, ೬) ಕಿರ್ಕಟ, ೭) ಬಕಪಕ್ಷಿ, ೮) ಬಿಳಿಕೊಕ್ಕರೆ, ೯) ಬಿದಿರುಮೆಳೆ ಕೋಳಿ, ೧೦) ಕೆಂಗೊಳಕ, ೧೧) ಉಪ್ಪುತೀತಿ, ೧೨) ಮೀನ್ನುಳ್ಳಿ, ೧೩), ನೀರು ಕೋಳಿ, ೧೪) ಹೆಬ್ಬಾತು, ೧೫) ಬಾತುಕೋಳಿ, ೧೬) ಮೋರಂಗೋಳಿ, ೧೭) ಸಾಕಿದ ಕೋಳಿ, ೧೮) ಮಣಿತೋರೆ, ೧೯) ಪೈಂದೋರೆ, ೨೦) ಪಡ್‌ಚಿತೋರೆ, ೨೧) ಓಣಿಕುಯಿಕ, ೨೨) ಮರಕುಟ್ಟಿಗ, ೨೩) ಕಾಡು ಪಾರಿವಾಳ, ೨೪) ಕಿತ್ತೋಳ, ೨೫) ನಾಯಿ ಗಿಳಿ, ೨೬) ಮಂಜಕೊಟ್ಟಿ, ೨೭) ಕೊಟ್ಟ್‌ಮುಡ್‌ಚ, ೨೮) ಕುಡಕ್ ಪಕ್ಷಿ, ೨೯) ಬಾವಲಿ, ೩೦) ಕಾಳಿಂಗಹಕ್ಕಿ, ೩೧) ಬಾಲಾಟಿ ಚೆಂಬೆ, ೩೨) ಗೂಬೆ, ೩೩) ಕರಿಕೆಂಬೂತ, ೩೪) ಕಲಾಯಿಕಾರ ಹಕ್ಕಿ, ೩೫) ಮಲೇರಪ್ಪ, ೩೬) ಮೊಟ್ಟೆ ಕಣ್‌ಪಕ್ಷಿ.

**ತಿನ್ನಲಾಗದ ಹಕ್ಕಿಗಳು**

೧) ಗುಬ್ಬಿ, ೨) ಮಡಿವಾಳ ಪಕ್ಷಿ, ೩) ಚಿಟ್ಟೆಪಕ್ಷಿ, ೪) ನೊಜೆಪಕ್ಷಿ, ೫) ಕುರುಡ ಪಕ್ಷಿ, ೬) ಕುರುಳಿ, ೭) ಕಾಗೆ, ೮) ಕೋಗಿಲೆ, ೯) ಭೀಮರಾಜ, ೧೦) ಗಿಳಿ, ೧೧) ಹದ್ದು, ೧೨) ಗಿಡುಗ, ೧೩) ಗರುಡ, ೧೪) ಸ್ಮಶಾನ ಗೂಬೆ, ೧೫) ಕುಟುರು ಪಕ್ಷಿ, ೧೬) ಗೀಜಗ, ೧೭) ಕೆಂಬೂತ, ೧೮) ಗೊರವಂಕ, ೧೯) ಟಿಟ್ಟಿಭ, ೨೦) ನೆತ್ತರು ಬಾವಲಿ, ೨೧) ತೊಟ್ಟಿಲು ಗೂಬೆ, ೨೨) ಬೊತ್ತ್‌ಲಳ್‌ಪ ಪಕ್ಷಿ, ೨೩) ತನ್ನರಿಕೊಟ್ಟಿ, ೨೪) ತಿತ್ತ್‌ಕಂಡ ಪಕ್ಷಿ.

ಇಲ್ಲಿ ನಮ್ಮ ಭಾಷೆಯಲ್ಲಿ ಪ್ರಚಲಿತವಿರುವ ಹೆಸರುಗಳನ್ನು ಬಳಸಿದ್ದೇನೆ. ಇವುಗಳಲ್ಲಿ ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರಿದೆ. ಸಾಧ್ಯವಾದಷ್ಟೂ ತಿಳಿದ ಕನ್ನಡ ಹೆಸರನ್ನು ನಮೂದಿಸಿರುತ್ತೇನೆ.

ಪಡ್‌ಚಿ ತೋರೆ - ಎಂಬ ಹಕ್ಕಿಯು ಬಹಳ ಇಂಪಾಗಿ ಸಿಳ್ಳೆ ಹಾಕುತ್ತದೆ. ಇದು ಎಲೆ ಹಸಿರು ಬಣ್ಣದ ಹಕ್ಕಿ. ಇದು ಗುಂಪು ಗುಂಪಾಗಿ ಹಾರಾಡುತ್ತವೆ. ಇದರ ಮಾಂಸ ತುಂಬ ರುಚಿ. ಮರದ ಮೇಲೆ ಸಿಳ್ಳು ಹಾಕುತ್ತಿರುವಾಗ ಬಂದೂಕಿನಿಂದ ಗುಂಡು ಹಾರಿಸಿ ಕೊಲ್ಲಬಹುದೇ ಹೊರ್ತು ಬೇರೆ ಯಾವುದೇ ರೀತಿಯಿಂದಲೂ ಕೊಲ್ಲಲು ಸಾಧ್ಯವಿಲ್ಲ.

ಪಕ್ಷಿಗಳ ಪೈಕಿ ಎಲ್ಲಕ್ಕಿಂತ ಮೊದಲು ಎಚ್ಚೆತ್ತು ಸಿಳ್ಳು ಹಾಕುತ್ತಾ ಹಾಡುವ ಹಕ್ಕಿಗಳೆಂದರೆ "ಓಣಕುಯಿಕ" ಎಂಬ ಹಕ್ಕಿ. ಇದರ ಮೈ ಹಸುರು, ಎದೆ ಭಾಗ ಕೆಂಪಗಿರುತ್ತದೆ. ಇದು ಕೇರಳದಿಂದ ಕೊಡಗಿಗೆ ಸೆಪ್ಟೆಂಬರ್ ತಿಂಗಳ "ಓಣಂ" ಹಬ್ಬ ಕಳೆದ ಮೇಲೆ ಬರುತ್ತದೆ. ಈ ಹಕ್ಕಿಯನ್ನು ಕೊಡಗಿನಲ್ಲಿ ವೃಶ್ಚಿಕ ಮಾಸದಿಂದ ಕುಂಭ ಮಾಸದವರೆಗೆ ಮಾತ್ರ ಕಾಣಬಹುದು.

ಇದೇ ಕಾಲದಲ್ಲಿ ಅಂದರೆ ಭತ್ತದ ಪೈರು ಹಾಲು ತುಂಬುವ ಕಾಲದಲ್ಲಿ ಅಂದರೆ ತುಲಾ ಮಾಸದಲ್ಲಿ ವಲಸೆ ಬರುವ ಹಕ್ಕಿಗಳೆಂದರೆ "ಬೊತ್ತ್‌ಲಳ್‌ಪ ಪಕ್ಷಿ". ಇದು ಬೆಳೆಗಳಿಗೆ ಬೀಳುವ ಕ್ರಿಮಿಕೀಟ, ಹುಳ-ಹುಪ್ಪಟೆಗಳನ್ನು ತಿಂದು ಬೆಳೆಗಳಿಗೆ ಹುಳ ಬೀಳದಂತೆ ರಕ್ಷಿಸುತ್ತದೆ. ಸಾಧಾರಣವಾಗಿ ತಿನ್ನುವ ಹಕ್ಕಿಗಳು "ಮಿಶ್ರಾಹಾರಿ"ಗಳು. ನಾವು ತಿನ್ನಲಾರದ ಕಾಗೆ, ಕುರುಳಿ, ಹದ್ದು, ಗಿಡುಗಗಳು ಮಾಂಸಾಹಾರಿಗಳಾಗಿರುತ್ತವೆ.

ಟಿಟ್ಟಿಭ (ಕೊಟ್ಟಮುಡ್‌ಚ, ಚೆಟ್ಟ್‌ಕುರುಳಿ) ನೋಡಲು ಸುಂದರವಾಗಿದ್ದರೂ ಮನೆಯಂಗಳದಲ್ಲಿ ಕಾಯಿಪಲ್ಲೆಗಳನ್ನು ನಾವು ಬೆಳೆಸಿದ್ದರೆ ಅವುಗಳ ಹೂವನ್ನು ಕಿತ್ತು ತಿಂದು ನಷ್ಟ ಮಾಡುವುದರಲ್ಲೂ ನಿಸ್ಸೀಮ ಹಕ್ಕಿ. ಆದ್ದರಿಂದ ಇದು ಕೃಷಿಕರ ಬಿಲ್ಲೇಟಿಗೆ ಸಿಕ್ಕಿ ಪ್ರಾಣ ಕಳೆದುಕೊಳ್ಳುತ್ತದೆ. ಇದನ್ನು ಕೊಂದ ಬಳಿಕ ತಿಂದೂಬಿಡುತ್ತಾನೆ - ಮನುಷ್ಯ!

ಬೂದು ಬಣ್ಣದ ಮೈ, ಕಣ್ಣಿನ ಸುತ್ತ ಕಾಡಿಗೆ ಹಚ್ಚಿದಂತಿರುವ, "ಮೊಟ್ಟೆಕಣ್ಣಪಕ್ಷಿ" ನೋಡಲು ಸುಂದರ; ಆದರೆ ಇದರ ಧ್ವನಿ ಕರ್ಕಶ.

ಮೈ ಎಲ್ಲಾ ಕಪ್ಪಗಿದ್ದು, ಎದೆ ಭಾಗ ಹಳದಿ (ಕಿತ್ತಳೆ ರಂಗಿನ ಪಕ್ಷಿಗೆ "ಮಂಜ ಕೊಟ್ಟಪಕ್ಷಿ" ಎನ್ನುತ್ತಾರೆ.

ಮಾತನ್ನು ಅನುಕರಿಸುವ ಗಿಳಿಗೆ "ರಾಮಗಿಣಿ" ಎನ್ನುತ್ತಾರೆ. ಜ್ಯೋತಿಷ್ಯರು ಇದನ್ನು ಹಿಡಿದು ಸಾಕಿ ಹೊಟ್ಟೆ ಹೊರೆದುಕೊಳ್ಳುತ್ತಾರೆ. ಇದು ಹಸಿರು ಮೈಯ, ಚೂಪಾದ ಕೊಕ್ಕಿರುವ ಬುದ್ಧಿವಂತ ಹಕ್ಕಿ. ಮೈ ಎಲ್ಲಾ ಹಸುರಾಗಿದ್ದು, ಸಣ್ಣ ಗಾತ್ರದ ಮೊಂಡು ಕೊಕ್ಕು ಇರುವ ಗಿಳಿಗೆ "ಚುಂಡೆ ಗಿಣಿ" ಎನ್ನುತ್ತಾರೆ. ಹಾಗೆಯೇ ನೀಲಿಗಿಣಿಗೆ "ನಾಯಿಗಿಣಿ" ಎನ್ನುತ್ತಾರೆ. ಗಿಣಿಗಳು ಗುಂಪು ಗುಂಪಾಗಿ ಹಾರಿ ಬಂದು ಕಲರವ ಮಾಡುತ್ತಿದ್ದರೆ ಕೆಲವೊಮ್ಮೆ ತಲೆ ಚಿಟ್ಟು ಹಿಡಿದು ಬಿಡುತ್ತದೆ. ಮಳೆಗಾಲ ಕಳೆದೊಡನೆ ಇವು ಕೊಡಗಿಗೆ ವಲಸೆ ಬರುತ್ತವೆ.

ಗೀಜಗನ ಹಕ್ಕಿಯ ಗೂಡು ತಲೆಕೆಳಗಾಗಿ ಹಾವಿನ ಪುಂಗಿಯಂತೆ ಇದ್ದು ಮರದ ಕೊಂಬೆಗಳಲ್ಲಿ ನೇತಾಡುತ್ತಿರುತ್ತದೆ. ಇವು ಬೆಳೆದ ಭತ್ತದ ತೆನೆಗಳನ್ನು ತಿಂದು ನಷ್ಟ ಮಾಡುತ್ತವೆ. ಇವನ್ನು

ಶಿಕ್ಷಿಸಲು ಬಿಲ್ಲಿನಿಂದ ಕೊಂದರೂ ತಿನ್ನಲು ಒಂದು ಹಿಡಿ ಮಾಂಸವೂ ದಕ್ಕುವುದಿಲ್ಲ. ಆದ್ದರಿಂದ ಮುಷ್ಟಿ ಗಾತ್ರಕ್ಕಿಂತ ಕಡಿಮೆ ಇರುವ ಹಕ್ಕಿಗಳನ್ನು ಯಾರೂ ತಿನ್ನುವುದಿಲ್ಲ.

ಹಕ್ಕಿಗಳು ರಾತ್ರಿ ಕಾಲದಲ್ಲಿ ತಮ್ಮ ರೆಕ್ಕೆಗಳೊಳಗೆ ತಲೆಯನ್ನು ಹುದುಗಿಸಿಕೊಂಡು ನಿದ್ದೆ ಮಾಡುವುದರಿಂದ ಹಕ್ಕಿ ಬೇಟೆಗಾರರ ರಾತ್ರಿ ಸಂಚಾರದ ಅರಿವು ಇವುಗಳಿಗಿರುವುದಿಲ್ಲ. ರಾತ್ರಿ ಕಾಲದಲ್ಲಿ ಹಾರಿ ಬಚಾವಾಗಲೂ ಹಕ್ಕಿಗಳಿಗೆ ಸಾಧ್ಯವಿಲ್ಲ.

ಚಾತಕ ಪಕ್ಷಿ ಅಥವಾ "ಮಳೆ ಪಕ್ಷಿ"ಗೆ ಕಾಲುಗಳೇ ಇರುವುದಿಲ್ಲ. ಇವು ಒಂದು ಸೆಕೆಂಡು ಕೂಡ ವಿಶ್ರಮಿಸದೆ ಹಾರಾಡುತ್ತಲೇ ಇರುತ್ತವೆ. ಇವುಗಳ ಬಣ್ಣ ಪೂರ್ತಿ ಕಪ್ಪು. ರಾತ್ರಿ ಕಾಲದಲ್ಲಿ ಮರದ ಪೊಟರೆಗಳಲ್ಲಿ ನಾಯಿಮರಿಗಳಂತೆ ಒಂದರ ಮೇಲೊಂದರಂತೆ ಮಲಗಿ ವಿಶ್ರಮಿಸುತ್ತವೆ. ಇವು ನೆಲಕ್ಕೆ ಇಳಿಯುವುದೇ ಇಲ್ಲ. ಮುಷ್ಟಿಗಾತ್ರದ ಈ ಹಕ್ಕಿಗಳು ಗುಂಪಾಗಿ ಹಾರಾಡುತ್ತಿರುತ್ತವೆ. ಮಳೆ, ಮೋಡ ಇದ್ದಾಗ ಮಾತ್ರ ಇವುಗಳ ಹಾರಾಟ ನಡೆದಿರುತ್ತದೆ. ಮಳೆಯಲ್ಲಾಗಲೀ, ಬಿಸಿಲಲ್ಲಾಗಲೀ ಇವು ಹಾರಾಡುವುದು ಕಮ್ಮಿ. ವಿಶ್ರಮಿಸುವಾಗ ತಮ್ಮ ನಸು ಬಿಳಿದಾದ ಹೊಟ್ಟೆಯನ್ನೇ ಆಧಾರವಾಗಿಟ್ಟು ಒರಗಿಕೊಳ್ಳುತ್ತವೆ.

"ಉಪ್ಪುತೀತಿ" ಎಂಬ ಬೆಳ್ದಿಂಗಳ ಹಕ್ಕಿಯು ಕಲ್ಲಿನ ಪೊಟರೆಗಳಲ್ಲಿ ವಾಸಿಸುತ್ತದೆ. ಇದು ರಾತ್ರಿ ಸಂಚಾರಿ ಹಕ್ಕಿ. "ಉಪ್ಪುತೀತಿ ಉಪ್ಪುತೀತಿ" ಎನ್ನುತ್ತಾ ಹಾರಾಡುತ್ತಿರುತ್ತವೆ. ತಪ್ಪಿಸಿಕೊಂಡ ಹಕ್ಕಿ ಮಾತ್ರ ಹಗಲಿನಲ್ಲಿ ಅರಚುತ್ತಾ ಹಾರಿ ತನ್ನ ಸಂಗಾತಿಗಳನ್ನು ಹುಡುಕಿ ಸೇರಿಕೊಳ್ಳುತ್ತದೆ. ಅಮಾವಾಸ್ಯೆಯ ರಾತ್ರಿಗಳಲ್ಲಿ ಇವುಗಳ ಹಾರಾಟ ಕಮ್ಮಿ. ತೊಟ್ಟಿಲು ಗೂಬೆ, ರಾತ್ರಿ ಇಡೀ ಗೂಂಕರಿಸುತ್ತಾ ಮಗುವನ್ನು ನಿದ್ದೆ ಮಾಡಿಸುವಂತೆ 'ಅನುಭವ' ವಾಗುತ್ತದೆ.

ಮೀನ್ಮುಳ್ಳಿ ಹಕ್ಕಿಯು ನದಿ, ಕೆರೆಗಳ ಸಮೀಪ ಬಿಲವನ್ನು ಕೊರೆದು ಅಲ್ಲಿ ವಾಸ ಮಾಡುತ್ತದೆ. ಗಿಳಿಗಳು ಗೂಡು ಕಟ್ಟುವುದಿಲ್ಲ, ಬದಲು ಹಳೆಯ ಪೊಟರೆಗಳಲ್ಲಿ ಮೊಟ್ಟೆ ಇಡುತ್ತವೆ. ಉಳಿದ ಹಕ್ಕಿಗಳು ಮರದ ಪೊಟ್ಟರೆಯ ಸುತ್ತಲಿನ ಕೊಂಬೆಗಳಲ್ಲಿ ಅಡಗಿ ವಿಶ್ರಮಿಸುತ್ತವೆ.

ಭತ್ತದ ಬೆಳೆಯನ್ನು ಕುಯ್ದು ಒಣಗಲು ಬಿಟ್ಟಾಗ ಅದರೊಳಗೆ ಮೊಟ್ಟೆ ಇಟ್ಟು ಮೂರೇ ದಿನಕ್ಕೆ ಮರಿ ಮಾಡಿ ಹಾರಿ ಹೋಗುವ ಪುಟ್ಟಹಕ್ಕಿಯೇ "ತನ್ನರಿಕೊಟ್ಟ" ಹಕ್ಕಿ. ಇದು ಭತ್ತ ಒಣಗಲು ಬಿಟ್ಟಿರುವ ಹುಲ್ಲಿನಲ್ಲಿರುವ ಕ್ರಿಮಿಕೀಟ ಹುಳಗಳನ್ನು ಹೆಕ್ಕಿ ತಿನ್ನುತ್ತವೆ. ಕುಯ್ಲು ಕೆಲಸ ಮುಗಿದು ಗದ್ದೆ ಖಾಲಿಯಾದೊಡನೇ ಇವು ನಾಪತ್ತೆಯಾಗಿ ಬಿಡುತ್ತವೆ.

ಮೈಯೆಲ್ಲಾ ಪೂರ್ತಿ ಕೆಂಪಗಿದ್ದು ಕೊಕ್ಕು, ಕಣ್ಣು, ಕಾಲುಗಳು ಮಾತ್ರ ಕಪ್ಪಗಿರುವ ಹಕ್ಕಿಯೇ "ತಿತ್‌ಕಂಡ ಪಕ್ಷಿ" (ಬೆಂಕಿಕೆಂಡ ಪಕ್ಷಿ), ಯಾವುದೇ ಹಕ್ಕಿಯೂ ನೆಲದಲ್ಲಿ ವಿಶ್ರಾಂತಿ ಪಡೆಯುವುದಿಲ್ಲ, ಹಕ್ಕಿಗಳನ್ನು ಹಿಡಿಯಲು ಅಮಾವಾಸ್ಯೆ ಕಾಲವೇ ಸೂಕ್ತವೆಂದು ಕುರುಬ, ಎರವ, ಕುಡಿಯ ಜನಾಂಗದವರ ನಂಬಿಕೆ.

ನವಿಲು ಶ್ರೀ ಸುಬ್ರಹ್ಮಣ್ಯನಿಗೆ, ಹಂಸ ಶ್ರೀ ಸರಸ್ವತಿಗೆ, ಕಾಗೆ ಶ್ರೀ ಶನೀಶ್ವರನಿಗೆ, ಗರುಡ ಶ್ರೀಮನ್ನಾರಾಯಣನಿಗೆ, ಬಿಳಿ ಪಾರಿವಾಳ ವಿನಾಯಕನಿಗೆ, ಗಿಳಿಯು ಶ್ರೀರಾಮನಿಗೆ ಪ್ರಿಯವಾದ ಹಕ್ಕಿ ಎಂದು ಹಕ್ಕಿ ಬೇಟೆಯಾಡುವವರು ಹೇಳುತ್ತಾರೆ.

ಹಕ್ಕಿಗಳ ಬೇಟೆಯಾಡಿ ಅವುಗಳನ್ನು ನಿರ್ನಾಮಗೊಳಿಸುವುದಕ್ಕಿಂತ ಅವುಗಳ ಅಧ್ಯಯನ ನಡೆಸಿದರೆ ಅತ್ಯುತ್ತಮ ಮನರಂಜನೆ ದೊರಕುತ್ತದೆ - ಎಂದು ನನ್ನ ಅಭಿಪ್ರಾಯ.

# ಅನುಬಂಧ

**ಕಡುಗೆಂಪು ಎದೆಯ ತಾಮ್ರಕಾರ ಹಕ್ಕಿ (Coppersmith) ಕಲಾಯಿಕಾರ**

ಹಸಿರು ದೇಹದ, ಕಡುಗೆಂಪು ಎದೆ ಮತ್ತು ಹಣೆಯ, ಗಡಸು ಕೊಕ್ಕಿನ ಗುಬ್ಬಚ್ಚಿ ಗಾತ್ರದ ವೃಕ್ಷವಾಸಿ ಫಲ ಭಕ್ಷಕ ಪಕ್ಷಿ. ಹಣ್ಣುಗಿಡಿದ ಆಲ, ಹತ್ತಿ ಮರಗಳಲ್ಲಿ ಗುಂಪಾಗಿರುತ್ತವೆ. ತಾಮ್ರಕಾರನು ಪಾತ್ರೆಯನ್ನು ಕುಟ್ಟುವಂತೆ ಏಕತಾನದ ಸದ್ದು ಮಾಡುತ್ತದೆ.

**ಬಿಳಿ ಉಂಗುರ ಕಣ್ಣಿನ ಹಕ್ಕಿ (White Eye) ಮೊಟ್ಟೆ ಕಣ್ಣ್ ಪಕ್ಷಿ**

ಹಸಿರು ಮಿಶ್ರಿತ ಮತ್ತು ಹೊಳೆವ ಹಳದಿ ಬಣ್ಣದ, ಚೌಕಾಕಾರ ಬಾಲದ ಗುಬ್ಬಚ್ಚಿ ಗಾತ್ರದ ಪುಟಾಣಿ ಹಕ್ಕಿ. ಅದರ ಕಣ್ಣಿನ ಸುತ್ತಲೂ ಎದ್ದು ಕಾಣುವ ಬಿಳಿಯುಂಗುರವಿದೆ. ಮರಗಳ ಮೇಲೆ ಗುಂಪಾಗಿ ಗಿಜಗಿಜ ಸದ್ದು ಮಾಡುತ್ತವೆ.

**ಕಪ್ಪು ತಲೆಯ ಕೋಗಿಲೆ ಕಳಿಂಗ (Black Headed Cuckoo Shrike) ಓಣಿ ಕುಯಿಕ ಪಕ್ಷಿ**

ಬಯಲು ಇಲ್ಲವೆ ವಿರಳ ಮರದ ಕಾಡಿನಲ್ಲಿ ಜೋಡಿಯಾಗಿ ಕಾಣುವ ಕಳಿಂಗ ಪಕ್ಷಿ. ಗಂಡಿನ ದೇಹ ತಿಳಿ ಬೂದುಬಣ್ಣ, ತಲೆ ಕಪ್ಪು, ಹೆಣ್ಣಿಗೆ ಬೂದುಗಪ್ಪು ತಲೆ. ಹೊಟ್ಟೆಯ ಭಾಗದಲ್ಲಿ ಕಪ್ಪು-ಬಿಳಿ ಪಟ್ಟಿಗಳು. ಇವು ಹಲವು ಬಾರಿ ಹಳ್ಳಿಯ ಪಕ್ಕದಲ್ಲಿ ಬೆಳೆವ ಮಾವು, ಬೇವು, ಹುಣಸೆ ಹಾಗೂ ಇತರೆ ಎಲೆಮರಗಳಲ್ಲಿ ಕೂರುತ್ತವೆ.

**ಹಳದಿ ಕೊರಳ ಗುಬ್ಬಚ್ಚಿ (Yellow Throated Sparrow) ಮನೆ ಪಕ್ಷಿ**

ಕಂದು-ಮಣ್ಣು ಬಣ್ಣದ ಗುಬ್ಬಚ್ಚಿ. ಕೊರಳ ಬಳಿ ನಿಂಬೆ ಹಳದಿಯ ಮುದ್ರೆ ಇದೆ. ವಿರಳ ಮರದ ಕಾಡಿನಲ್ಲಿ ಜೋಡಿಯಾಗಿ ಇಲ್ಲವೇ ಗುಂಪಿನಲ್ಲಿ ಕಂಡುಬರುತ್ತದೆ. ಕೊಯ್ದ ಹೊಲಗಳಲ್ಲಿ ಅಥವಾ ಗಾಡಿ ಜಾಡುಗಳಲ್ಲಿ ಬತ್ತ ಇಲ್ಲವೇ ಹುಲ್ಲಿನ ಬೀಜಗಳನ್ನು ಹೆಕ್ಕಲು ಬರುತ್ತದೆ.

**ಹೊಂಬೆನ್ನಿನ ಸಣ್ಣ ಮರಕುಟುಕ (Lesser Golden Backed Woodpecker), ಕಿರ್‌ಮರಕೊಟ್ಟಿ**

ಎಲ್ಲಾ ಬಗೆಯ ಅರಣ್ಯದಲ್ಲಿ ಕಂಡುಬರುತ್ತದೆ. ಹೊಂಬಣ್ಣ ಮತ್ತು ಕಪ್ಪಿನ ಮೇಲುಭಾಗದ ಗರಿಗಳು; ಶಿಖೆ ಕಡುಗೆಂಪು ಜೋಡಿಯಾಗಿ ಇಲ್ಲವೇ ಗುಂಪಾಗಿ, ಕೀಟಭಕ್ಷಕ ಇತರೆ ಕೀಟಭಕ್ಷಕ ಹಕ್ಕಿಗಳ ಜೊತೆಯಲ್ಲಿ ಬೇಟೆಯಾಡುತ್ತವೆ.

**ಹೊಂಬೆನ್ನಿನ ದೊಡ್ಡ ಮರಕುಟುಕ (Larger Golden Backed Woodpecker) ಪೆರೆಂಗೊಟ್ಟಿ ಪಕ್ಷಿ**

ಮರಕುಟುಕಗಳಲ್ಲೇ ಸಾಮಾನ್ಯವಾಗಿ ಹೆಚ್ಚು ಕಾಣುವ ಪಕ್ಷಿ. ನಿಬಿಡ ಮರಗಳ, ತೇವಾಂಶ ಪರ್ಣಪಾತಿ ಮತ್ತು ಅರೆ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಹೆಚ್ಚು ಕಂಡುಬರುತ್ತದೆ. ಮರದಿಂದ ಮರಕ್ಕೆ ಲವಲವಿಕೆಯಿಂದ ಹಾರುತ್ತಾ ವಿಶಿಷ್ಟವಾಗಿ ಏರಿಳಿಯುತ್ತದೆ. ಮನುಷ್ಯನ ನೋಟ ತಪ್ಪಿಸಲು ಚಾಕಚಕ್ಯತೆಯಿಂದ ಕಾಂಡದ ಹಿಂಭಾಗಕ್ಕೆ ಮರೆಯಾಗುತ್ತದೆ.

**ಕುಬ್ಜ ಮರಕುಟುಕ (Pigmy Woodpecker) ಮರಕೊಟ್ಟ ಪಕ್ಷಿ**

ಪರ್ಣಪಾತಿ ಮರಗಳ ಬಯಲಿನಲ್ಲಿ ಹೆಚ್ಚು ಕಂಡುಬರುವ ಪುಟಾಣಿ ಮರಕುಟುಕ. ಬೇಟೆಯಾಡುವ ಸಣ್ಣ ಹಕ್ಕಿಗಳ ಗುಂಪಿನಲ್ಲಿ ಕಂಡುಬರುತ್ತದೆ. ಭೂಮಿಗೆ ಹತ್ತಿರದ ಸಸಿಗಳು ಹಾಗೂ ಎತ್ತರದ ಮರಗಳ ಎಳೆ ಕೊಂಬೆಗಳ ಬಳಿ ಆಹಾರ ಹೆಕ್ಕುತ್ತವೆ.

**ಹಳದಿ ಮುಂಭಾಗದ ಕಪ್ಪು-ಬಿಳಿ ಮರಕುಟುಕ (Yellow Fronted Pied Woodpecker) ಮಂಜಮರಕೊಟ್ಟ**

ಉದ್ದನೆಯ, ಬಾಗಿದ, ಗಡಸು ಮೊನೆಯ ಕೊಕ್ಕು ಮತ್ತು ಬೆಣೆಯಾಕಾರದ ಬಾಲವಿರುವ ಮರಕುಟುಕ. ಮೇಲ್ಭಾಗದಲ್ಲಿ ಅಲ್ಲಲ್ಲೇ ಇರುವ ಕಪ್ಪು-ಬಿಳಿ ಚುಕ್ಕೆ. ಜೋಡಿಯಾಗಿ ಇಲ್ಲವೇ ಗುಂಪಾಗಿ ಬದುಕುವ ಇವು ವಿರಳ ಮರಗಳ ಎಲ್ಲಾ ಕಾಡುಗಳಲ್ಲಿ ಕಂಡುಬರುತ್ತದೆ. ನಿತ್ಯಹರಿದ್ವರ್ಣ ಕಾಡು ಇದಕ್ಕೆ ಒಗ್ಗುವುದಿಲ್ಲ.

**ಪರೆ ಹೊಟ್ಟೆಯ ಸಣ್ಣ ಹಸಿರು ಮರಕುಟುಕ (Little Scaly Bellied Green Woodpecker) ಪಚ್ಚೆ ಮರಕೊಟ್ಟ ಪಕ್ಷಿ**

ಸಾಮಾನ್ಯವಾಗಿ ಬಿದಿರು ಮಿಶ್ರಿತ ಮತ್ತು ಪರ್ಣಪಾತಿ ಅರಣ್ಯ ಹಾಗೂ ಬಯಲಾದ ಅರಣ್ಯಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುವ ಮರಕುಟುಕ. ಇತರೆ ಮರಕುಟಿಗ ಗಳಿಗಿಂತ ಇದು ನೆಲದಲ್ಲಿರುವ ಇರುವೆ, ಗೆದ್ದಲುಗಳನ್ನು ಹೆಕ್ಕುತ್ತದೆ. ಸೆಗಣಿಯನ್ನು ಕೆದಕಿ ಹುಳುಗಳನ್ನು ಹಿಡಿಯುತ್ತದೆ.

**Indian Robin : ಮಡಿವಾಳ ಪಕ್ಷಿ**

ಹೊಳೆವ ಕಪ್ಪು ಬಣ್ಣದ ಗುಬ್ಬಚ್ಚಿ ಗಾತ್ರದ ಹಕ್ಕಿ. ಹಾರಾಡುವಾಗ ರೆಕ್ಕೆಯಲ್ಲಿ ಬಿಳಿಮಚ್ಚೆ ಎದ್ದು ಕಾಣುತ್ತದೆ. ಬಾಲದ ಬುಡ ಕೆಂಬಣ್ಣ, ಮೊರಡಿ ಗುಡ್ಡಗಳಿರುವ ಹಳ್ಳಿ ಪಟ್ಟಣಗಳ ಬಳಿ ಸಾಮಾನ್ಯವಾಗಿ ಕಾಣುವ ಹಕ್ಕಿ.

**ಕರಿ ಬಿಳಿ ಬುಷ್‌ಚಾಟ್ (Pied Bushchat) ನೊಜೆ ಪಕ್ಷಿ**

ಹಳ್ಳಿಯ ಪಕ್ಕದಲ್ಲಿರುವ ಹೊಲ ಗದ್ದೆಗಳ ಬಳಿ ಸಾಮಾನ್ಯವಾಗಿ ಕಂಡುಬರುವ ಗುಬ್ಬಚ್ಚಿ ಗಾತ್ರದ ಹಕ್ಕಿ. ಪೊದೆಯ ಶಿಖರದಲ್ಲಿ ಒಂಟಿಯಾಗಿ ಸ್ಥಿರವಾಗಿ ಕೂರುತ್ತದೆ. ಗಂಡು ಕಪ್ಪಾಗಿದ್ದು ಪೃಷ್ಠದ ಮೇಲೆ ಬಿಳಿ ಮಚ್ಚೆ ಇರುತ್ತದೆ. ಹೆಣ್ಣು ಮಣ್ಣಿನ ಬಣ್ಣವಿದ್ದು ಪೃಷ್ಠದ ಚುಕ್ಕೆ ಮಾಸಲು ಬಣ್ಣದ್ದಾಗಿರುತ್ತದೆ.

**ಕಪ್ಪು ತಲೆಯ ಮುನಿಯ (Black Headed Munia) ತನ್ನರಿಕೊಟ್ಟ ಪಕ್ಷಿ**

ಜೌಗು ಪ್ರದೇಶದಲ್ಲಿ ಬೆಳೆದ ಹುಲ್ಲು ಪ್ರದೇಶ ಇಲ್ಲವೇ ಬತ್ತದ ಗದ್ದೆಯ ಬಳಿ ಕಾಣಸಿಗುವ ಕೆಂಗಂದು ಮತ್ತು ಕಪ್ಪು - ಬಿಳಿ ಬಣ್ಣದ ಗುಬ್ಬಚ್ಚಿಗಿಂತಲೂ ಕಡಿಮೆ ಗಾತ್ರದ ಸಣ್ಣ ಹಕ್ಕಿ. ತಲೆ, ಕುತ್ತಿಗೆ, ಎದೆ, ತೊಡೆಗಳು, ಕಪ್ಪಾಗಿದ್ದು, ಹೊಟ್ಟೆ ಬೆಳ್ಳಗಿರುತ್ತದೆ. ಗಡುಸಾದ, ಶಂಕು ಆಕಾರದ ಕೊಕ್ಕಿದೆ. ಇವು ಗುಂಪುವಾಸಿಗಳು.

**ಕೆಂಪು ಮುನಿಯ (Red Munia or Wax Bill) ತಿತ್ತ್‌ಕಂಡ ಪಕ್ಷಿ**

ಗುಬ್ಬಚ್ಚಿಗಿಂತಲೂ ಸಣ್ಣದು, ಮಂದೆಯಾಗಿ ಬದುಕುವ ಈ ಮೇಣ ಕೊಕ್ಕಿನ ಹಕ್ಕಿಗಳು ಜೌಗು ಹುಲ್ಲುಗಾವಲಿನ ಜೊಂಡು ಬೆಳೆವ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಸಂತಾನೋತ್ಪತ್ತಿ ಮಾಡದ ಕಾಲದಲ್ಲಿ ಗಂಡು-ಹೆಣ್ಣಿಗೆ ಕಂದು ಬಣ್ಣ. ಅಲ್ಲಲ್ಲಿ ಗೀಚಿದಂತಹ ಬಿಳಿ ಪಟ್ಟೆ, ಕೆಂಪು ಕೊಕ್ಕು ಮತ್ತು ಕಡುಗೆಂಪು ಪೃಷ್ಠವಿರುತ್ತದೆ. ಸಂಘವಾಸಿ ಹಕ್ಕಿ. ಮಾರುಕಟ್ಟೆಯಲ್ಲಿ ಹೆಚ್ಚು ಕಾಣುವ ಇದು ಪಂಜರದಲ್ಲಿ ಸಾಕುವ ಮುದ್ದಿನ ಹಕ್ಕಿ.

**ಕಪ್ಪು ಭಾರದ್ವಾಜ ಅಥವಾ ಭುಜಂಗ (Black Drongo) ಕುರುಳಿ ಪಕ್ಷಿ**

ಬಯಲು ಪ್ರದೇಶದ ತಂತಿ ಕಂಬಗಳ ಕಂಬಿಗಳ ಮೇಲೆ ಅಥವಾ ಜಾನುವಾರುಗಳ ಬೆನ್ನಿನ ಮೇಲೆ ಕೂರುವ ಲವಲವಿಕೆಯ ಹೊಳೆವ ಕಪ್ಪು ಬಣ್ಣದ ಪಿಕಳಾರ ಗಾತ್ರದ ಹಕ್ಕಿ. ಕವಲೊಡೆದ ಬಾಲ. ಹಸುಗಳ ಉಣ್ಣೆಯನ್ನು ಭಕ್ಷಿಸುವುದರ ಜೊತೆಗೆ ಬೇಸಾಯಕ್ಕೆ ಹಾನಿ ತರುವ ಅನೇಕ ಕೀಟಗಳನ್ನು ಹಿಡಿದು ತಿನ್ನುತ್ತದೆ.

**ಕಾಜಾಣ (Greater Racket Tailed Drango) ಭೀಮರಾಜ ಪಕ್ಷಿ**

ಹೊಳೆವ ಕಪ್ಪು ಬಣ್ಣದ, ಕುಚ್ಚಿರುವ ಹಣೆಯ ಹಾಗೂ ಎರಡು ಉದ್ದನೆಯ ಕಂಬಿಯಂಥ ಗರಿಗಳು ಅಂತ್ಯದಲ್ಲಿ ಅಲಗಿನಂತಿರುವ ಬಾಲದ ಹಕ್ಕಿ. ತೇಗ ಮತ್ತು ಬಿದಿರು ಮಿಶ್ರಿತ ಅರಣ್ಯಗಳಲ್ಲಿರುತ್ತವೆ. ತುಂಬಾ ಧೈರ್ಯಶಾಲಿ, ಆಕ್ರಮಣಕಾರಿ ಹಾಗೂ ಅನೇಕ ಹಕ್ಕಿಗಳ ಕೂಗನ್ನು ಅನುಕರಿಸಬಲ್ಲ ಜಾಣ ಹಕ್ಕಿ.

**ಮರ ಕಳಿಂಗ (Common Wood Shrike) ಕಾಳಿಂಗ ಪಕ್ಷಿ**

ಜೋಡಿಯಾಗಿ ಇಲ್ಲವೇ ಗುಂಪಾಗಿ ಕಾಣುವ ಸಾಧು ಹಕ್ಕಿ. ಮರ, ಪೊದೆಯ ಅಡಿಯಲ್ಲೂ ಉದುರಿದ ಎಲೆ, ಟೊಂಗೆಯ ನಡುವೆ ಬೇಟೆಯಾಡುತ್ತದೆ. ಬೂದು ಬಣ್ಣದ, ಕಣ್ಣಿನ ಕೆಳಗೆ ಕಪ್ಪು ಪಟ್ಟಿ ಮತ್ತು ಕಣ್ಣ ಮೇಲ್ಭಾಗ ಬಿಳಿ ಬಣ್ಣವಿರುತ್ತದೆ. ಕೊಕ್ಕೆ ತುದಿಯ ಕೊಕ್ಕು, ಮೊಟುಕಾದ ಬಾಲ, ಬಟ್ಟಲಾಕಾರದಲ್ಲಿ ಗೂಡು ಕಟ್ಟುವ ಇದು ಕೀಟ, ಕಂಬಳಿ ಹುಳು ಬೇಟೆಯಾಡುತ್ತದೆ.

**ಹಳದಿ ಕಾಲಿನ ಹಸಿರು ಪಾರಿವಾಳ (Yellow Legged Green Pigeon) ಪಚ್ಚೆ ಪಡ್‌ಚಿ ತೋರೆ**

ಕಳಿತ ಹಣ್ಣುಗಳ ಮರಗಳಿಗೆ ದಾಳಿಯಿಡುವ ವೃಕ್ಷವಾಸಿ ಪಾರಿವಾಳ. ಭುಜದ ಮೇಲೆ ಊದಾ ಬಣ್ಣದ ಮಚ್ಚೆ. ರೆಕ್ಕೆಗಳ ಕಪ್ಪು ಭಾಗದ ಮೇಲೆ ಹಳದಿ ಪಟ್ಟೆಗಳು. ಹಳದಿ ಕಾಲುಗಳು ಈ ಸಂಕುಲದ ವಿಶಿಷ್ಟ ಗುಣ. ಒಣ ಮತ್ತು ತೇವಾಂಶಭರಿತ ಪರ್ಣಪಾತಿ ಕಾಡುಗಳಲ್ಲಿ ಕಂಡುಬರುತ್ತವೆ.


**ಸಣ್ಣ ಕಂದು ಪಾರಿವಾಳ (Little Brown Dove) ಕೋಂಬಕ್ಕಿ**

ಮೈನಾ ಹಕ್ಕಿಗಿಂತ ಸ್ವಲ್ಪ ದೊಡ್ಡದು. ಮೇಲ್ಭಾಗ ಕೆಂಗಂದು ಮತ್ತು ಮಣ್ಣಿನ ಬಣ್ಣ ಹಾಗೂ ಪಾಟಲ ಕಂದು ಮತ್ತು ಬಿಳಿ ಕೆಳ ಭಾಗವಿರುವ ಪಾರಿವಾಳ. ಕುತ್ತಿಗೆಯ ಅಕ್ಕಪಕ್ಕ ನಸೆಗೆಂಪು

ಹಾಗೂ ಕಪ್ಪು ಬಣ್ಣವಿರುವ 'ಚದುರಂಗ' ಹಾಸಿದೆ. ಒಣ ಮೊರಡಿ ಇಲ್ಲವೇ ಬಯಲಿನಲ್ಲಿ ಕಂಡು ಬರುತ್ತವೆ.

**ಚುಕ್ಕೆ ಪಾರಿವಾಳ (Spotted Dove) ಮಣಿತೋರೆ ಪಕ್ಷಿ**

ಮೈನಾ - ಪಾರಿವಾಳ ನಡುವಿನ ಗಾತ್ರದ ಹಕ್ಕಿ. ಬಿಳಿ ಚುಕ್ಕೆ ಇರುವ ಪಾಟಲವರ್ಣದ ಮೇಲ್ಭಾಗ. ಕುತ್ತಿಗೆಯ ಹಿಂಭಾಗ ಕಪ್ಪು - ಬಿಳಿ ಬಣ್ಣದ 'ಚದುರಂಗದ ಹಾಸು'. ಜೋಡಿಯಾಗಿ ಇಲ್ಲವೇ ಗುಂಪಾಗಿ ಬಯಲಿನಲ್ಲಿ ಅಥವಾ ಗಾಡಿ ಜಾಡುಗಳಲ್ಲಿ ಕೂಳೆ ಹೊಲಗಳಲ್ಲಿ ಧಾನ್ಯ ಹೆಕ್ಕುತ್ತವೆ.



# ಉತ್ತರ ಕನ್ನಡ ಜೇನು ಬೇಟೆ - ಜೇನು ಸಾಕಣೆ

◆ ಪಿ. ಬಿ. ನಾಯಕ್

ನಮ್ಮ ಭೂಮಿಯ ಮೇಲೆ ಸಾವಿರಾರು ಕ್ರಿಮಿ-ಕೀಟಗಳಿವೆ. ಅಂತಹ ಕ್ರಿಮಿ-ಕೀಟಗಳಲ್ಲಿ ಸಮಾಜ ಜೀವನವನ್ನು ನಡೆಸಿಕೊಂಡು ಹೂವಿನ ಮಕರಂದವನ್ನು ಶೇಖರಿಸುವ ವರ್ಗವು ಇದೆ. ಹೀಗೆ ಶೇಖರಿಸಿಟ್ಟು ಮನುಷ್ಯನಿಗೆ ಉಪಕಾರ ಮಾಡತಕ್ಕ ಕೀಟಗಳಲ್ಲಿ ಜೇನುನೊಣವು ಒಂದು.

ಮಾನವ ತನ್ನ ಸುಖಜೀವನಕ್ಕೆ ಅನೇಕ ತರಹದ ಪ್ರಾಣಿಗಳನ್ನು ಬಳಸಿಕೊಂಡಿದ್ದಾನೆ. ಪುರಾಣ ಕಾಲದಿಂದಲೂ ಮಾನವನು ಸಿಹಿಯಾದ ಜೇನನ್ನು ಹೊಂದಲು ಜೇನುನೊಣದ ಪರಿಚಯವನ್ನು ಕೂಡಾ ಮಾಡಿಕೊಂಡಿದ್ದಾನೆ. ಆದಿಕಾಲದಲ್ಲಿ ಜೇನುಸಾಕಾಣಿಕೆಗೆ ಯಾವುದೇ ನೇಮ ನಿರ್ಭಂದಗಳಿರಲಿಲ್ಲ. ಆದರೆ ೧೯ನೇ ಶತಮಾನದ ಮಧ್ಯ ಭಾಗದಿಂದ ಈಚೆ, ಜೇನು ಸಾಕಾಣಿಕೆಯಲ್ಲಿ ಹಲವಾರು ಸುಧಾರಣೆಗಳು ನಡೆದುದ್ದುಂಟು.

ಭಾರತದಲ್ಲಿ ಜೇನು ಸಾಕಾಣಿಕೆ ಪ್ರಾರಂಭವಾದದ್ದು ೧೮೮೨ರಲ್ಲಿ. ಭಾರತದಲ್ಲಿ ಬಂಗಾಳವೇ ಈ ಕಾಯಕದಲ್ಲಿ ಯಶಸ್ವಿಯನ್ನು ಕಂಡಿತು. ತದನಂತರ ಪಂಜಾಬಿನಲ್ಲಿ ಈ ಜೇನು ಸಾಕಾಣಿಕಾ ಕಾಯಕವು ೧೮೮೪ರಲ್ಲಿ ಪ್ರಾರಂಭವಾಯಿತು. ಆಮೇಲೆ ಉಳಿದ ರಾಜ್ಯಗಳಿಗೆ ಜೇನು ಸಾಕಾಣಿಕೆಯು ಒಂದು ಉದ್ದಿಮೆಯಾಗಿ ಪಸರಿಸಿತು.

ಸಾಂಘಿಕ ಜೀವನ, ಪರಿಶ್ರಮ, ಉಳಿತಾಯ, ಸಹಬಾಳ್ವೆ ಇವು ಜೇನಿನಲ್ಲಿ ಮಾತ್ರ ಕಾಣಲು ಸಾಧ್ಯ.

ಭಾರತ ಗ್ರಾಮಗಳ ನಾಡು, ಇಲ್ಲಿಯ ಗ್ರಾಮೀಣ ಜನರು ಇತ್ತಿತ್ತಲಾಗಿ ಜೇನು ಕೃಷಿಯತ್ತ ಒಲವು ತೋರಿ ವೈಜ್ಞಾನಿಕ ತಳಹದಿಯ ಮೇಲೆ ಜೇನು ಕೃಷಿ ಪ್ರಾರಂಭಿಸಿ ಆರ್ಥಿಕವಾಗಿ ಅಭಿವೃದ್ಧಿಯ ಪಥವನ್ನು ತಲುಪುತ್ತಿದ್ದಾರೆ.

ನಮ್ಮ ದೇಶದ ಬಡತನವನ್ನು ಹೋಗಲಾಡಿಸಲು ಒಂದು ಉತ್ತಮ ಗುಡಿಕೈಗಾರಿಕೆ ಯಾಗಿದೆ. ಅಲ್ಲದೇ ಸಾಕಷ್ಟು ಕೆಲಸದ ಸೌಲಭ್ಯವನ್ನು ಒದಗಿಸಿ ಕೊಡುತ್ತದೆ.

ಅಮೃತ ಪ್ರಾಯವಾದ ಜೇನುತುಪ್ಪ ದೇವರ ಪಂಚಾಮೃತದಿಂದ ವೈದ್ಯರಿಗೆ, ಲೇಹ ಕೊಡುವವರಿಗೆ ಅನೇಕ ದೈನಂದಿನ ಮನೆ ಬಳಕೆಯಲ್ಲಿ ಜೇನುತುಪ್ಪವು ಮಾತ್ರ ಪ್ರಮುಖವಾಗಿದೆ.

**ಜೇನು ಬೇಟೆ ಪ್ರಧಾನ ವೃತ್ತಿಯಾಗಿಸುವಂಥ ಜನಾಂಗಗಳ ಪರಿಚಯ**

ನಮ್ಮ ರಾಷ್ಟ್ರದ ಹೆಚ್ಚಿನ ಪ್ರಾಂತಗಳಲ್ಲಿ ಮುಖ್ಯವಾಗಿ ಪಂಜಾಬ, ಕಾಶ್ಮೀರ, ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಇವುಗಳಲ್ಲಿ ಆಧುನಿಕ ರೀತಿಯ ಜೇನು ವ್ಯಾಪಾರ ಪ್ರಾರಂಭವಾಗಿ ಬಹಳ ವರ್ಷಗಳಾದವು.

ಆದರೆ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಜೇನು ಬೇಟೆ ಹಾಗೂ ಜೇನು ಸಾಕಾಣಿಕೆಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿಲ್ಲ. ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ತಮ್ಮ ಮೂಲವೃತ್ತಿಯ ಜೊತೆಗೆ ಜೇನು ಬೇಟೆ ಹಾಗೂ ಜೇನು ಸಾಕಾಣಿಕೆಯನ್ನು ಉಪವೃತ್ತಿಯನ್ನಾಗಿ ಮಾಡಿಕೊಂಡಿರುತ್ತಾರೆ.

*ಉದಾ: ನಾವು ಸಂದರ್ಶಿಸಿದ ಜೇನು ಸಾಕಾಣಿಕೆ/ಜೇನುಬೇಟೆ ಉಪವೃತ್ತಿಯನ್ನಾಗಿ ಸ್ವೀಕರಿಸಿದ ಕೆಲವು ವ್ಯಕ್ತಿಗಳನ್ನು ಸಂದರ್ಶಿಸಿದಾಗ ಜೇನು ಸಾಕಾಣಿಕೆ/ಜೇನು ಬೇಟೆಯನ್ನು ಪ್ರಧಾನ ವೃತ್ತಿಯನ್ನಾಗಿಸಿಕೊಂಡ ವ್ಯಕ್ತಿಗಳು ತಮ್ಮ ಗಮನಕ್ಕೆ ಇದುವರೆಗೂ ಬಂದಿಲ್ಲವೆಂಬ ಅಂಶ ತಿಳಿದುಬಂತು. ಉತ್ತರಕನ್ನಡ ಜಿಲ್ಲೆಯ ಪ್ರದೇಶಗಳಾದ ಅಂಕೋಲಾ, ಹಿಲ್ಲೂರು, ಯಲ್ಲಾಪುರ, ಅಣಸಿ, ಸೂಪಾಜೋಯಿಡಾ, ಶಿರ್ಶಿ, ಸಿದ್ದಾಪುರ, ಆನಗೋಡು, ದೇಹಳ್ಳಿ, ಬನ್ನೊಡು, ಮಂಚಿಕೇರಿ, ಕಣ್ಣಗೇರಿ, ಕಿರುವತ್ತಿ, ಕುಂದರಗಿ, ಹಿತ್ತಳ್ಳಿ, ವಜ್ರಳ್ಳಿ, ಇಡುಗುಂಜಿ, ಮಾವಿನಮನೆ, ಬಾರೆ, ಹುತ್ಕಂಡ, ಬಿಳಪಿ ಮುಂತಾದ ಪ್ರದೇಶಗಳಲ್ಲಿ ಉಪವೃತ್ತಿಯನ್ನಾಗಿ ಸ್ವೀಕರಿಸಿದ ಜನಾಂಗಗಳು ಎಂದರೆ ಬ್ರಾಹ್ಮಣ ಜನಾಂಗದವರು, ನಾಯಕ ಜನಾಂಗದವರು, ಹಾಲಕ್ಕಿ ಒಕ್ಕಲಿಗರು, ಗಾಮ ಒಕ್ಕಲಿಗರು, ಸಿದ್ದಿಗಳು, ಮರಾಠರು, ಮುಸ್ಲಿಂರು, ಕುಂಬಾರಿಕೆ ಮಾಡುವವರು, ಕುರಿ ಸಾಕಾಣಿಕೆ ಮಾಡುವವರು, ತೋಟಗಾರಿಕೆ ಮಾಡುವವರು. ಈ ಉಪವೃತ್ತಿಯನ್ನು ಮಾಡುತ್ತಿದ್ದಾರೆ. ಇವರೆಲ್ಲರ ಮೂಲವೃತ್ತಿ ಕೃಷಿಗಾರಿಕೆ, ತೋಟಗಾರಿಕೆ, ಕುಂಬಾರಿಕೆ ಅವರ ಪ್ರಧಾನ ವೃತ್ತಿಗಳಾಗಿರುತ್ತವೆ. ಈ ಉಪವೃತ್ತಿಯನ್ನು ಕೈಗೊಂಡ ಜೇನು ಮಾರಾಟಗಾರರು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿ ಉತ್ತಮ ಜೀವನ ನಿರ್ವಹಿಸುತ್ತಿರುತ್ತಾರೆ. ಒಂದಿಲ್ಲ ಒಂದು ದಿನ ಈ ಉಪವೃತ್ತಿಯಾಗಿರತಕ್ಕಂತಹ ಜೇನು ಬೇಟೆ/ಜೇನು ಸಾಕಾಣಿಕೆ ಪ್ರಧಾನ ವೃತ್ತಿಯಾಗಿ ಮಾರ್ಪಟ್ಟರೆ ಆಶ್ಚರ್ಯ ಪಡಬೇಕಾಗಿಲ್ಲ.*

**ಜೇನು ಬೇಟೆಗಳಿಗೆ ಸೂಕ್ತವಾದ ಕಾಲಮಾನಗಳು ಈ ಕಾಲಮಾನ ಜನ ಗುರುತಿಸುವ ಬಗೆ :**

ವಸಂತ ಋತುವಿನ ಆಗಮನವಾಯಿತೆಂದರೆ ಜೇನು ಕೀಟಕ್ಕೆ ಎಲ್ಲಿಲ್ಲದ ಸಂತೋಷ, ಸಂಭ್ರಮ. ಅದರಲ್ಲಿಯೂ ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳು ಜೇನು ಕೀಟಕ್ಕೆ ಜೇನು ಸಂಗ್ರಹಿಸಲು ಸೂಕ್ತವಾದ ಕಾಲವಾಗಿರುತ್ತದೆ. ಗಿಡಮರಗಳು ತಮ್ಮ ಪುಷ್ಪಗಳ ಅಂದವಾದ ಬಣ್ಣಗಳಿಂದಲೂ, ಸುವಾಸನೆಯಿಂದಲೂ ಜೇನು ನೊಣಗಳನ್ನು ತಮ್ಮ ಕಡೆಗೆ ಆಕರ್ಷಿಸುತ್ತವೆ. ಇದು ಸೃಷ್ಟಿಯ

ವೈಚಿತ್ರ್ಯ. ಜೇನು ಲಭ್ಯತೆ ಆಯಾ ವರ್ಷದ ಹೂ ಬಿಡುವಿಕೆಯ ವಾತಾವರಣವನ್ನು ಅವಲಂಬಿಸಿರುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಟವಾಳ ಮಾವು, ಸಾಗಡಿ, ನುಗ್ಗೆ ಗಿಡಗಳು ಬಿಡುವಂತಹ ಹೂಗಳು ಹಾಗೂ ವಿವಿಧ ರೀತಿಯ ಪುಷ್ಪಗಳು ಜೇನು ಕೀಟಕ್ಕೆ ಮಕರಂದವನ್ನು ಪೂರೈಸುವ ಮಹತ್ವಪೂರ್ಣವಾದ ವನಸ್ಪತಿಗಳಾಗಿರುತ್ತವೆ. ಬಹುತೇಕವಾಗಿ ಬೇಸಿಗೆ ಕಾಲದಲ್ಲಿ ಜೇನು ಹೇರಳವಾಗಿ, ಜೇನನ್ನು ಸಂಗ್ರಹಿಸುತ್ತದೆ. ನವಂಬರ್ ಡಿಸೆಂಬರ್ ಅವಧಿಯ ಕೊರೆವ ಚಳಿಯಲ್ಲಿ ಹೂವುಗಳು ಕಡಿಮೆ. ಆದರೆ ಅಂಟುವಾಳ ಮರವು ಈ ಅವಧಿಯಲ್ಲಿ ಸಮೃದ್ಧವಾಗಿ ಹೂ ಬಿಡುವುದರಿಂದ ಎಲ್ಲೆಲ್ಲಿಂದಲೋ ನೂರಾರು ಜೇನು ಪಡೆಗಳು ಈ ಮರದ ಹೂ ಗೊಂಚಲುಗಳನ್ನು ಮುತ್ತುತ್ತವೆ. ಈ ಜೇನು ಬಹಳ ರುಚಿ. ಜೇನು ಸಾಕಾಣಿಕೆ ಮಾಡುವವರು ಜೇನುಗಳಿಗೆ ಆಹಾರ ಲಭ್ಯತೆಯ ದೃಷ್ಟಿಯಿಂದ ಅಂಟುವಾಳದ ಮರಗಳು ಹೆಚ್ಚಿರುವಲ್ಲಿ ಜೇನು ಪೆಟ್ಟಿಗೆಯನ್ನು ತಂದಿರಿಸುತ್ತಾರೆ. ಅಂಟುವಾಳ ಹೂಗಳ ಅವಧಿ ಮುಗಿದ ನಂತರ ಸಾಗಡೆ, ಕಾಸಗ, ಬರಣಿಗೆ, ಕುಂಟುನೇರಳೆ, ಹೊಳೆಮತ್ತಿ, ಗೊಂಬಳೆ, ಗುರಗೆ ಮೊದಲಾದ ಗಿಡಮರಗಳ ಹೂವಿನ ಸುಗ್ಗಿ ಆರಂಭ. ಆಗ ಜೇನುಗಳು ಅತ್ತಕಡೆ ವಲಸೆ ಹೋಗುತ್ತವೆ.

ಮಳೆಗಾಲ ಬಂತೆಂದರೆ ಬಹುತೇಕ ಹೆಜ್ಜೇನು ತನಗೆ ಜೇನು ಸಂಗ್ರಹಿಸುವ ಸಲುವಾಗಿ ಮಳೆ ವಿರಳವಿರುವ ಪ್ರದೇಶಗಳಿಗೆ ವಲಸೆ ಹೋಗುತ್ತವೆ. ಪ್ರತಿವರ್ಷ ಏಪ್ರಿಲ್ ಜೂನ್ ಅವಧಿಯಲ್ಲಿ ಬೇಡ್ತಿಕೊಳ್ಳಕ್ಕೆ ಜೇನುಗಳು ವಲಸೆ ಬರುತ್ತವೆ. ನಿರ್ದಿಷ್ಟ ಮರಗಳ ಹೂವುಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಈ ನದಿಯ ಪರಿಸರದಲ್ಲಿರುವ ಮರಗಳು ಅವುಗಳು ಹೂ ಬಿಡುವ ಅವಧಿ ಆ ಸಮಯದಲ್ಲಿ ಜೇನುಗಳು ಇಲ್ಲಿ ಧಾಳಿ ಇಟ್ಟು ಗೂಡು ಕಟ್ಟುವ ಕ್ರಮ ಇವುಗಳೆಲ್ಲ ಇಲ್ಲಿನ ಜನರಿಗೆ ಚಿರಪರಿಚಿತ.

ಜೇನು ನೊಣಗಳಿಗೆ ಬೇಸಿಗೆಯ ಎಲ್ಲ ದಿನಗಳಲ್ಲಿಯೂ ಒಂದೇ ರೀತಿಯಾಗಿ ಪುಷ್ಪರಸ ಮತ್ತು ಪರಾಗ ದೊರೆಯುವದಿಲ್ಲ. ಏಕೆಂದರೆ ವಿವಿಧ ಜಾತಿಯ ಮರಗಳು ಬೇರೆಬೇರೆ ಮಾಸಗಳಲ್ಲಿ ಹೂ ಬಿಡುವುದೇ ಇದಕ್ಕೆ ಮುಖ್ಯ ಕಾರಣ. ಬೆತ್ತುಮರ, ರಬ್ಬರ್‌ಹೂ, ಜೋಳ, ಸೂರ್ಯಕಾಂತಿ, ಹುಚ್ಚೆಳ್ಳು, ಸಂಪಿಗೆ ಗಿಡ ಮೊದಲಾದ ಗಿಡಗಳಲ್ಲಿ ಹೂ ಅರಳುವ ಸಮಯ ನೊಣಗಳಿಗೆ ಹೆಚ್ಚು ಆಹಾರ ದೊರಕುತ್ತದೆ.

ಈ ಜೇನು ಬೇಟೆ/ಜೇನು ಕೃಷಿಯಲ್ಲಿ ಆಸಕ್ತಿ ಉಳ್ಳ ಕೃಷಿಕ ಜೇನು ಬೇಟೆ/ಜೇನು ಕೃಷಿಯ ಸೂಕ್ತ ಕಾಲಮಾನಗಳನ್ನು ಗುರುತಿಸುವ ಬಗೆ :

೧. ವಸಂತಋತುವಿನ ಆಗಮನ
೨. ಪುಷ್ಪಗಳ ಅರಳುವಿಕೆ
೩. ನಿಸರ್ಗದಲ್ಲಿಯ ಬದಲಾವಣೆ
೪. ಜೇನು ನೊಣಗಳ ಸ್ವರ ಬದಲಾವಣೆ

೫. ಜೇನಿನ ಪ್ರತ್ಯಕ್ಷ ವೀಕ್ಷಣೆ
೬. ಹೂವಿಂದ ಹೂವಿಗೆ ಹಾರುವ ನೊಣದ ವೀಕ್ಷಣೆ
೭. ಜೇನು ನೊಣಗಳ ಸ್ವರೂಪ ಮತ್ತು ಆಕಾರದಲ್ಲಿ ಆಗುವ ಬದಲಾವಣೆ
೮. ಸೂರ್ಯಾಸ್ತ ಸಮಯದಲ್ಲಿ (ಜೇನು ಹುಳಗಳ ಹಾರಾಡುವಿಕೆ)
೯. ಜೇನಿನ ಹಿಕ್ಕೆಯಿಂದ ಜೇನು ವಾಸ್ತವ್ಯ ಮಾಡಿದ ಪ್ರದೇಶವನ್ನು ಗುರುತಿಸ ಬಹುದು.

ಬೇಟೆಯ ಸಿದ್ಧತೆ : ಜೇನು ಬೇಟೆಯನ್ನು ಎರಡು ಪ್ರಕಾರವಾಗಿ ವಿಂಗಡಿಸಬಹುದು.

೧. ಹೆಜ್ಜೇನು, ಕೋಲ್‌ಜೇನು ಮತ್ತು ಮುಂಟಿ (ನಸರಿ) ಬೇಟೆ.
೨. ತುಡುವೆ ಜೇನುಬೇಟೆ

**1) ಹೆಜ್ಜೇನು, ಕೋಲ್‌ಜೇನು ಮತ್ತು ಮುಂಟಿ (ನಸರಿ) ಬೇಟೆ ಸಿದ್ಧತೆ.**

ಹೆಜ್ಜೇನು ಬೇಟೆ ತುಂಬಾ ಕಷ್ಟದಾಯಕವಾದುದ್ದಾದರೆ ಉಳಿದ ಕೋಲ್‌ಜೇನು ಮತ್ತು ಮುಂಟಿ (ನಸರಿ) ಬೇಟೆ. ಅಷ್ಟೊಂದು ತೊಂದರೆದಾಯಕವಾದ ಕೆಲಸವಲ್ಲ.

**ಹೆಜ್ಜೇನು ಬೇಟೆಯ ಸಿದ್ಧತೆ**

೧) ೨ ರಿಂದ ೬ ಜನರು
೨) ಹಗ್ಗ (ಉದ್ದವಾದದ್ದು)
೩) ಹೊಗೆ ಮುಂಡಿಗೆ (ಜೇನುನೊಣಗಳನ್ನು ಚದುರಿಸಲು ತೆಂಗಿನ ನಾರಿನಿಂದ ಮಾಡಿದ ಸಾಧನ)
೪) ಟಿನ್ ಡಬ್ಬಿ (ಜೇನು ಸಂಗ್ರಹಿಸಲು)
೫) ಬಕೇಟು (ಜೇನು ಎರೆ ಕೆಳಗಿಳಿಸಲು)
೬) ಚೂರಿ, ಕತ್ತಿ
೭) ಬೆಂಕಿಪೊಟ್ಟಣ
೮) ಬೆಳ್ಳುಳ್ಳಿ ಮತ್ತು ಈರುಳ್ಳಿ (ಕಚ್ಚಿದಾಗ ಶಮನಗೊಳಿಸಲು)
೯) ಮುಖ ಪರದೆ ಮತ್ತು ಕೈಚೀಲ (ಕಚ್ಚದಂತೆ ತಡೆಯಲು)ಕೋಲ್ ಜೇನು ಮತ್ತು ಮುಜಂಟ (ನಸರಿ) ಇವುಗಳ ಬೇಟೆಯ ಸಿದ್ಧತೆ ಅಷ್ಟೊಂದು ತೊಂದರೆದಾಯಕವಾದುದಲ್ಲ. ಇವುಗಳನ್ನು ಸಾಮಾನ್ಯ ವ್ಯಕ್ತಿಗಳೂ ಕೂಡಾ ತೆಗೆಯಬಹುದು.

**ತುಡುವೆ ಜೇನಿವ ಬೇಟೆಯ ಸಿದ್ಧತೆ**

೧) ಎರಡು ಜನ
೨) ಹೊಗೆ ಹಾಕುವ ತಿದಿ
೩) ಹಗ್ಗ
೪) ಹಿಡಿಯುವ ಪೆಟ್ಟಿಗೆ

೫) ಜೇನು ತೆಗೆಯುವಯಂತ್ರ
೬) ಚೂರಿ
೭) ಮುಖ ಪರದೆ
೮) ಉಳಿ
೯) ಮಯಣದ ಹಾಳೆ
೧೦) ಚಿಕ್ಕದಾದ ಕೊಡಲಿ
೧೧) ಬಲೆ (ಹಿಡಿಯಲು ಉಪಯೋಗಿಸುವ ಸಾಧನ)
೧೨) ಬಾಳೆ ನಾರಿನ ತುಂಡುಗಳು (ಎರೆಯನ್ನು ಚೌಕಟ್ಟಿಗೆ ಕಟ್ಟುವಾಗ ಉಪಯೋಗಿಸುತ್ತಾರೆ.)
೧೩) ಬೆಂಕಿಪೊಟ್ಟಣ

**ಪಾಲ್ಗೊಳ್ಳುವವರು ಮತ್ತು ಕೆಲಸದ ಹಂಚಿಕೆ**

ಜೇನು ಬಿಡಿಸಲು ತರಬೇತಿ ಹೊಂದಿದ ವ್ಯಕ್ತಿ ಹಾಗೂ ಅವನಿಗೆ ಸಹಾಯಕರಾಗಿ ಕೆಲಸ ಮಾಡುವ ಕೆಲವು ವ್ಯಕ್ತಿಗಳು ತರಬೇತಿದಾರನು ತನ್ನ ಕೆಲಸಕ್ಕೆ ತಕ್ಕಂತೆ ಉಳಿದ ತನ್ನ ಸಹಾಯಕ ಕೆಲಸಗಾರರಿಗೆ ಈ ಕೆಳಗಿನಂತೆ ಕೆಲಸವನ್ನು ಹಂಚಿ ಕೊಡುತ್ತಾನೆ.

೧) ಮರ ಅಥವಾ ಕಟ್ಟಡ ಏರುವ ಕೆಲಸ.
೨) ಹಗ್ಗವನ್ನು ವಿವಿಧ ರೀತಿಯಿಂದ ಉಪಯೋಗಿಸುವ ಕೆಲಸ (ಮರದಿಂದ ಮರಕ್ಕೆ ಕಟ್ಟಡದಿಂದ ಕಟ್ಟಡಕ್ಕೆ)
೩) ಹೊಗೆ ಮುಂಡಿಗೆ ಹಿಡಿಯುವ ಕೆಲಸ.
೪) ಜೇನು ತೆಗೆಯುವ ಕೆಲಸ.
೫) ಜೇನು ಸಂಗ್ರಹಿಸುವ ಕೆಲಸ.

**೪) ಜೇನು ಬೇಟೆ/ ಜೇನು ಸಾಕಾಣಿಕೆಗೆ ಬೇಕಾಗುವ ಸಾಮಾನು ಸರಂಜಾಮು ಸಾಧನ ಸಲಕರಣೆ ಮೊದಲಾದವುಗಳ ಪರಿಚಯ**

೧) **೨ ರಿಂದ ೬ ಜನರು** : ಸಾಮಾನ್ಯವಾಗಿ ಹೆಜ್ಜೇನು ಜನರಿಗೆ ಹೋಗಲು ಕಷ್ಟವಾದ ಎತ್ತರ ಕಟ್ಟಡಗಳಿಗೆ, ದೊಡ್ಡದೊಡ್ಡ ಮರದ ರೆಂಬೆಗಳಿಗೆ, ಕೆಲವೊಮ್ಮೆ ಎತ್ತರವಾಗಿ ಕಟ್ಟಿದ ಸೇತುವೆಯ ಅಡಿಯಲ್ಲಿ ಜೇನುಗೂಡನ್ನು ಕಟ್ಟಲ್ಪಟ್ಟಿರುವುದರಿಂದ ಒಬ್ಬ ಅಥವಾ ಇಬ್ಬರಿಗೆ ಜೇನು ಬಿಡಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಹೆಜ್ಜೇನನ್ನು ಬಿಡಿಸಲು ಸುಮಾರು ೨ ರಿಂದ ೬ ಜನರು ಅವಶ್ಯಕ.

೨) **ಹಗ್ಗ** : ಕಟ್ಟಡಗಳಿಗೆ, ಎತ್ತರವಾದ ಮರದ ಕೊಂಬೆಗಳಿಗೆ ಸೇತುವೆಗಳಿಗೆ, ಜೇನುಗೂಡು ಇರುವುದರಿಂದ ಅವುಗಳನ್ನು ತೆಗೆಯಲು ಜೇನು ತರಬೇತುದಾರ ಮೇಲಕ್ಕೆ ಏರಲು ಹಾಗೂ

ಇಳಿಯಲು ಉಪಯೋಗವಾಗುವಂತಹ ಹಗ್ಗದ ಅವಶ್ಯಕತೆ ಇದೆ. ಅದು ಸುಮಾರು ಕಟ್ಟಡ, ಕೊಂಬೆ ರೆಂಬೆಗಳ ಅಂತರಕ್ಕೆ ಸರಿಸಮಾನವಾಗಿರಬೇಕು. ಅದೇ ಅಳತೆಯ ಸಾಮಾನ್ಯ ಗಾತ್ರದ ಮತ್ತೊಂದು ಹಗ್ಗ ಜೇನುಗೂಡು ಇಳಿಸಲು ಬೇಕಾಗುತ್ತದೆ.

೩) **ಹೊಗೆ ಮುಂಡಿಗೆ** : ಇದನ್ನು ತೆಂಗಿನ ನಾರಿನಿಂದ ಮಾಡಲ್ಪಟ್ಟಿರುತ್ತದೆ. ಇದನ್ನು ಜೇನುಹುಳಗಳನ್ನು ಗೂಡಿನಿಂದ ಚದುರಿಸಲು ಉಪಯೋಗಿಸುತ್ತಾರೆ. ಈ ಹೊಗೆ ಮುಂಡಿಗೆಗೆ ಬೆಂಕಿ ಹಚ್ಚಿದಾಗ ಕೇವಲ ಹೊಗೆ ಮಾತ್ರ ಬರುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಈ ಜೇನಿನ ಬೇಟೆ ರಾತ್ರಿ ಸಮಯದಲ್ಲಾಗುವುದರಿಂದ ಈ ಸಾಧನದಿಂದ ಜೇನಿನ ಎರೆಯ ಮೇಲೆ ಇರುವ ನೊಣಗಳನ್ನು ಹಗುರವಾಗಿ ಕೆಳಗಡೆ ತೀಡುವದರಿಂದ ಕಿಡಿಗಳು ಕೆಳಗೆ ಬೀಳುತ್ತವೆ. ಆಗ ಹುಳಗಳು ಈ ಕಿಡಿಗಳನ್ನೇ ತಮ್ಮ ಶತ್ರುಗಳೆಂದು ತಿಳಿದು ಅವುಗಳನ್ನು ಕಚ್ಚಲು ಮುಂದಾಗುತ್ತವೆ. ಹಾಗೂ ಈ ಸಾಧನದಿಂದ ಹುಳಗಳು ಸಾಯಲಾರವು. ಮತ್ತೆ ಹುಳಗಳು ಅಲ್ಲಿಂದ ವಲಸೆಹೋಗಿ ಬೇರೊಂದು ಕಡೆ ಗೂಡನ್ನು ಕಟ್ಟಲು ಸಹಾಯವಾಗುತ್ತದೆ.

೪) **ಟಿನ್ ಡಬ್ಬಿ** : ಈ ಡಬ್ಬಿಗಳನ್ನು ಜೇನು ಸಂಗ್ರಹಕ್ಕೆ ಉಪಯೋಗಿಸುತ್ತಾರೆ.

೫) **ಬಕೇಟು** : ಎತ್ತರದ ಕಟ್ಟಡಗಳಿಗೆ ಮತ್ತು ಮರದ ಕೊಂಬೆ ರೆಂಬೆಗಳಲ್ಲಿ ಕಟ್ಟಲ್ಪಟ್ಟ ಹೆಜ್ಜೇನಿನ ಎರಿಯನ್ನು ಹಾಳಾಗದಂತೆ ಕೆಳಗಿಳಿಸಲು ಉಪಯೋಗಿಸುತ್ತಾರೆ.

೬) **ಚೂರಿ, ಕತ್ತಿ** : ಜೇನು ತುಂಬಿದ ಎರಿಗಳನ್ನು ಕತ್ತರಿಸಲು ಹರಿತವಾದ ಚೂರಿ ಅವಶ್ಯಕ. ಅದೇ ರೀತಿ ಚಿಕ್ಕಚಿಕ್ಕ ಟೊಂಗೆಗಳನ್ನು ಕತ್ತರಿಸಲು ಕತ್ತಿಯನ್ನು ಉಪಯೋಗಿಸುವರು.

೭) **ಬೆಳ್ಳುಳಿ ಮತ್ತು ಈರುಳ್ಳಿ** : ಜೇನುನೊಣ ಕಚ್ಚಿದಾಗ ಅದರ ನೋವನ್ನು ಶಮನಗೊಳಿಸಲು ಕಚ್ಚಿದ ಗಾಯಕ್ಕೆ ಹಚ್ಚಲು ಇದನ್ನೇ ಉಪಯೋಗಿಸುತ್ತಾರೆ.

೮) **ಮುಖಪರದೆ ಮತ್ತು ಕೈಚೀಲ** : ಈ ಜೇನು ಕಚ್ಚದಂತೆ ಮುಖ ಹಾಗೂ ಕೈಗಳಿಗೆ ರಕ್ಷಣೆ ಒದಗಿಸಲು ಉಪಯೋಗಿಸುತ್ತಾರೆ.

೯) ಒಂದು ಜೇನು ಕುಟುಂಬವನ್ನು ಬಿಲದಿಂದ ಅಥವಾ ಮರದ ಪೊಟರೆಯಿಂದ ಹಿಡಿದು ಗೂಡಿಗೆ ವರ್ಗಾಯಿಸುವ ಸಮಯ ಮತ್ತು ಗೂಡಿನ ಮುಚ್ಚಳ ತೆಗೆದು ಸಂಸಾರ ಕೋಣೆಯ ಎರಿಗಳಿರುವ ಚೌಕಟ್ಟುಗಳನ್ನು ಮೇಲಕ್ಕೆತ್ತಿ ನೋಡುವ ಸಂದರ್ಭಗಳಲ್ಲಿ ನೊಣಗಳು ಗಾಬರಿಗೊಂಡು ಚುಚ್ಚಲು ಪ್ರಾರಂಭಿಸಬಹುದು. ಅಂತಹ ವೇಳೆಯಲ್ಲಿ ಹೊಗೆ ಹಾಕುವ ತಿದಿಯಿಂದ ನೊಣಗಳಿಗೆ ಸ್ವಲ್ಪ ಹೊಗೆ ಹಾಕಿದರೆ ಅವು ದೂರ ಸರಿದು ಚುಚ್ಚಲು ಬರುವದಿಲ್ಲ.

ಹೊಗೆ ಹಾಕುವ ತಿದಿ ಬೇಕಾದ ಸ್ಥಳಕ್ಕೆ ಸುಲಭವಾಗಿ ಕೈಯಲ್ಲಿ ಕೊಂಡು ಹೋಗಬಹುದಾದ ಒಂದು ಸಣ್ಣ ಉಪಕರಣ. ಇದರಲ್ಲಿರುವ ತಗಡಿನ ಕೊಳವೆಯೊಳಗೆ ಉರಿಯುವ

ವಸ್ತುವಾದ ತೆಂಗಿನಕಾಯಿ ಸಿಪ್ಪೆ, ಅಡಿಕೆ ಸಿಪ್ಪೆ ಇತ್ಯಾದಿ ವಸ್ತುಗಳನ್ನು ತುಂಬಿಸಿ ಬೆಂಕಿ ಹೊತ್ತಿಸಿ, ಅದರ ಮುಚ್ಚಳ ಹಾಕಿ ತಿದಿಯನ್ನು ಒತ್ತಿದಾಗ ಕೊಳವೆಯ ತುದಿಯ ಮೂಲೆಯಿಂದ ಹೊಗೆ ಬರುತ್ತದೆ. ಅಗತ್ಯದ ಸಂದರ್ಭದಲ್ಲಿ ಮಾತ್ರ ಕಡಿಮೆ ಪ್ರಮಾಣದಲ್ಲಿ ಹೊಗೆಯನ್ನು ಹಾಕಬೇಕು. ಹೆಚ್ಚು ಹಾಕಿದರೆ ನೊಣಗಳಿಗೆ ಅಪಾಯವಾಗಬಹುದು.

೧೦) **ಹಿಡಿಯುವ ಪೆಟ್ಟಿಗೆ**: ಇದೊಂದು ಚಿಕ್ಕಪೆಟ್ಟಿಗೆ, ಟೊಳ್ಳಾದ ಮರದ ಪೊಟರೆಗಳಲ್ಲಿ ಅಥವಾ ನೆಲದ ಬಿರುಕುಗಳಲ್ಲಿ ಇವು ಗೂಡು ಕಟ್ಟುತ್ತವೆ. ಇವುಗಳನ್ನು ಮೂಲಪೆಟ್ಟಿಗೆಗೆ ಸೇರಿಸುವದಕ್ಕಿಂತ ಮೊದಲು ಈ ಚಿಕ್ಕದಾದ ಹಿಡಿಯುವ ಪೆಟ್ಟಿಗೆಯಲ್ಲಿ ಹಿಡಿದು. ಸುಧಾರಿತ ಮರದ ಗೂಡುಗಳಲ್ಲಿ ಸಾಕಲು ಅವಕಾಶ ಮಾಡಿಕೊಳ್ಳುತ್ತಾರೆ.

೧೧) **ಉಳಿ, ಕೊಡಲಿ** : ಚಿಕ್ಕದಾದ ಮರದ ಪೊಟರೆಗಳಲ್ಲಿ ಗೂಡುಕಟ್ಟಿದ ಜೇನು ಗೂಡುಗಳನ್ನು ಹೊರತೆಗೆಯಲು ಅನುಕೂಲವಾಗುವಂತೆ ರಂಧ್ರಗಳನ್ನು ದೊಡ್ಡದಾಗಿ ಕೊರೆಯಲು ಈ ಉಪಕರಣಗಳನ್ನು ಉಪಯೋಗಿಸುತ್ತಾರೆ.

೧೨) **ಜೇನು ತೆಗೆಯುವ ಯಂತ್ರ** : ಕೈ ಸ್ಪರ್ಶವಿಲ್ಲದೆ ಎರಿಗಳನ್ನು ನಾಶಮಾಡದೆ ಎರಿಗಳ ಕಣಗಳಲ್ಲಿ ತುಂಬಿದ ಜೇನನ್ನು ಸಂಗ್ರಹಿಸಲು ಬೇಕಾದ ಮುಖ್ಯ ಉಪಕರಣವೇ ಜೇನು ತೆಗೆಯುವ ಯಂತ್ರ.

೧೩) **ಬಲೆ** : ಒಮ್ಮೊಮ್ಮೆ ಬಿಲದಲ್ಲಿದ್ದ ಜೇನು ನೊಣಗಳು ರಾಣಿ ಹುಳವನ್ನು ಕಾಣದೇ ಗಾಬರಿಗೊಂಡು ಸಮೀಪದಲ್ಲಿಯೇ ಕೊಂಬೆರೆಂಬೆಗಳ ಮೇಲೆ ಕುಳಿತು ಸಂಗ್ರಹ ಗೊಳ್ಳುತ್ತವೆ. ಇಂಥ ಸಂದರ್ಭದಲ್ಲಿ ಅವುಗಳನ್ನು ರಾಣಿಯ ಜೊತೆ ಇರುವಂತೆ ಮಾಡಲು ಉಪಯೋಗಿಸಲು ಸಲಕರಣೆಯೇ ಬಲೆ.

೧೪) **ಬಾಳೆ ನಾರಿನ ತುಂಡುಗಳು** : ಮರದ ಪೊಟರೆಯಿಂದಾಗಲಿ, ಮಣ್ಣಿನ ಬಿಲದಿಂದಾಗಲಿ ಜೇನು ಕುಟುಂಬವನ್ನು ಗೂಡಿಗೆ ವರ್ಗಾಯಿಸುವ ಸಮಯ ಎರಿಗಳನ್ನು ಚೌಕಟ್ಟುಗಳೊಳಗೆ ಇಡಲು ಬಾಳೆ ನಾರಿನ ತುಂಡುಗಳಿದ್ದರೆ ಬಹಳ ಪ್ರಯೋಜನ. ನೊಣಗಳು ಇವುಗಳನ್ನು ಸುಲಭವಾಗಿ ತುಂಡರಿಸಲು ಸಾಧ್ಯ.

೧೫) **ಬೇಟೆಯಲ್ಲಿ ಪಾಲ್ಗೊಂಡ ವ್ಯಕ್ತಿಗಳ ಚಲನವಲನ ನಡುವಳಿಕೆ ಸಂಬಂಧವಾಗಿ ಇರುವಂಥ ನಿಯಮ** :

**ಜೇನು ಬೇಟೆಯಲ್ಲಿ ಪಾಲ್ಗೊಂಡ ವ್ಯಕ್ತಿಗಳು ಬಹಳ ಜಾಗರೂಕರಾಗಿರಬೇಕು.**

೧) ಜೇನು ನೊಣಗಳು ಕಚ್ಚದಂತೆ ಎಚ್ಚರಿಕೆ ವಹಿಸಬೇಕು.

೨) ಜೇನು ಹುಳಗಳು ಸಾವಿಗೀಡಾಗದಂತೆ ಕ್ರಮ ಕೈಕೊಳ್ಳಬೇಕು.

೩) ಜೇನು ನೊಣ ಕಚ್ಚಿದರೆ, ಅದನ್ನು ಸಹಿಸುವ ತಾಳ್ಮೆ ಹೊಂದಿರಬೇಕು. ಮತ್ತು ಕೂಡಲೇ ನೋವು ಶಮನಗೊಳಿಸಲು ಯೋಗ್ಯಕ್ರಮ ಕೈಗೊಳ್ಳಬೇಕು.

೪) ಜೇನು ಬೇಟೆಗಾರ ತಾಳ್ಮೆಯನ್ನು ಹೊಂದಿರಬೇಕು. ಏಕೆಂದರೆ ಒಂದು ನೊಣ ಕಚ್ಚಿದರೆ, ಅದನ್ನು ನಾವು ಸಿಟ್ಟಿನಿಂದ ಕೊಲ್ಲಬಾರದು. ಒಂದಾನು ವೇಳೆ ಅವುಗಳಲ್ಲೊಂದನ್ನು ನಾವು ಕೊಂದರೆ ಮತ್ತಷ್ಟು ನೊಣಗಳು ಕಚ್ಚುವ ಸಂಭವನೀಯತೆ ಇರುತ್ತದೆ.

೫) ಜೇನು ಗೂಡುಗಳನ್ನು ಕೆಳಗಿಳಿಸುವಾಗ ಅವುಗಳನ್ನು ಕೆಡದಂತೆ ಲಕ್ಷ್ಯ ವಹಿಸಬೇಕು.

೬) ಡಬ್ಬಿಗಳಲ್ಲಿ ಸರಿಯಾಗಿ ಸಂಗ್ರಹಿಸುವದು.

೭) ರಕ್ಷಣೆಗಾಗಿ ಕೆಲವು ಕ್ರಮಗಳನ್ನು ಕೈಕೊಳ್ಳುವದು. ಮುಖಪರದೆ-ಕೈಚೀಲ ಬಳಸಿಕೊಳ್ಳುವದು.

೮) ಜೇನು ಹುಳಗಳ ಧ್ವನಿಯ ಸಹಾಯದಿಂದ ಜೇನಿನ ನಿರ್ದಿಷ್ಟ ಪ್ರದೇಶವನ್ನು ಕಂಡುಹಿಡಿಯುವುದು.

೯) ಜೇನು ಬೇಟೆಗಾರ ರಾತ್ರಿ ವೇಳೆ ಬಹುತೇಕ ಜೇನು ಬೇಟೆ ಆಡುವದರಿಂದ ಆ ಸ್ಥಳದ ಸಂಪೂರ್ಣ ಪರಿಚಯವಿರಬೇಕು. ಕತ್ತಲಲ್ಲಿಯೇ ಜೇನುಹುಳುಗಳ ಹಾರಾಟ ಗಮನಿಸುತ್ತಾ ಮರಗಳ ಪೊಟರೆಗಳ ಕಡೆ ಕಣ್ಣು ಹಾಯಿಸುತ್ತ ಜೇನು ಹುಡುಕಬೇಕು.

೧೦) ಹೆಜ್ಜೇನು ಕುಟುಂಬಗಳಿಂದ ಜೇನು ಬೇಟೆ ಮಾಡುವುದು ಅಮವಾಸ್ಯೆ ದಿನಗಳು ಸೂಕ್ತ ಸಮಯ. ಏಕೆಂದರೆ ಆ ದಿನಗಳಲ್ಲಿ ಹೆಚ್ಚಾಗಿ ಜೇನು ಹುಳಗಳು ಜೇನು ತುಪ್ಪವನ್ನು ಸಂಗ್ರಹಿಸುತ್ತವೆ.

೧೧) ತುಡುವೆ ಜೇನನ್ನು ನಾವು ಸಾಯಂಕಾಲ ತೆಗೆಯಬೇಕು. ಏಕೆಂದರೆ ಜೇನು ನೊಣಗಳು ಗೂಡಿಂದ ಹಾರಿದರೂ ಬಹುದೂರ ಹೋಗಲಾರವು.

೧೨) ಹೆಜ್ಜೇನು ಬೇಟೆಗಾರನು ಸಾಹಸ ಮತ್ತು ಧೈರ್ಯ ಹೊಂದಿದವನು ಆಗಿರಬೇಕು. ಆತನು ಬಲಿಷ್ಠ ಮರಗಳನ್ನು ಮತ್ತು ಕಟ್ಟಡಗಳನ್ನು ಏರುವಾಗ, ಇಕ್ಕಟ್ಟಿನ ಪ್ರಸಂಗವನ್ನು ಎದುರಿಸಬೇಕಾಗುತ್ತದೆ. ಹಾಗೂ ಕೋಪಗೊಂಡ ಜೇನು ನೊಣಗಳು ಆತನನ್ನು ಎಡಬಿಡದೇ ಕಚ್ಚುವ ಸಂಭವವಿರುತ್ತದೆ. ಕೊಂಬೆ ಅಥವಾ ಕಟ್ಟಡ ಏರಿದುದರಿಂದ ಅಪಾಯಗಳು ಆತನನ್ನೇ ಕಾಡುತ್ತಲೇ ಇರುತ್ತವೆ.

೧೩) ಜೇನುಗೂಡುಗಳಿಗೆ ತಂಪಿನ ವಾತಾವರಣವಿರಬೇಕು. ಕೃತಕ ಜೇನು ಕೃಷಿಯ ಸಂದರ್ಭದಲ್ಲಿ ಜೇನುಗೂಡುಗಳಿಗೆ ಕಟ್ಟಿರುವೆ, ಕಣಜ (ಕಡಜೀರಿಗೆ) ಓತಿಕ್ಯಾತಗಳ ಕಾಟ ಜಾಸ್ತಿ. ಮೋಡ ಕವಿದ ವಾತಾವರಣದಲ್ಲಿ ಜೇನುಹುಳುಗಳು ಹೆಚ್ಚು ಚಟುವಟಿಕೆಯಿಂದಿರುವುದಿಲ್ಲ.

**6) ವಿಧಿ ನಿಷೇಧಗಳು, ನಂಬಿಕೆ, ಸಂಪ್ರದಾಯ, ಆಚರಣೆಗಳು ವಿಶೇಷವಾಗಿ ಪೂಜಿಸುವ ದೈವಗಳು :**

ಹೆಜ್ಜೇನು ಕುಟುಂಬದಿಂದ ಜೇನು ಸಂಗ್ರಹಿಸುವಾಗ ಜೇನು ಬೇಟೆಗಾರ ಹಲವಾರು ನಂಬಿಕೆಗಳಿಗೆ, ಸಂಪ್ರದಾಯಗಳಿಗೆ, ಆಚರಣೆಗಳಿಗೆ ಒಳಗಾಗಿ ಹಲವಾರು ದೈವಗಳನ್ನು ಪೂಜಿಸುವದುಂಟು. ಆಯಾ ಪ್ರದೇಶಗಳಿಗೆ ಅನುಗುಣವಾಗಿ ವಿವಿಧ ಸಂಪ್ರದಾಯಗಳನ್ನು ಮಾಡುವದುಂಟು. ಜೇನು ಕುಟುಂಬ ಕುಳಿತಿರುವ ಮರಕ್ಕೆ, ತೆಂಗು, ಊದಬತ್ತಿ, ಹೂಗಳ ಮೂಲಕ

ಪೂಜೆಯನ್ನು ಸಲ್ಲಿಸಿ ಮರವೇರುವ ಅಥವಾ ಜೇನು ಕುಟುಂಬದ ಕಟ್ಟಡವೇರುವ ಸಂಪ್ರದಾಯ ಉಂಟು.

ಜೇನು ಗೂಡಿರುವ ಮರಗಳನ್ನೇರುವಾಗ ಕಬ್ಬಿಣದ ಯಾವುದೇ ಆಯುಧವನ್ನು ಜೇನು ತೆಗೆಯುವವರೆಗೂ, ಮರಕ್ಕೆ ಚುಚ್ಚಿ ಇಡುವ ಪದ್ಧತಿ ಇದೆ. ಏಕೆಂದರೆ ಗಿಡದಲ್ಲಿ ಯಾವುದಾದರೂ ದೈವಿಶಕ್ತಿ ಅಥವಾ ಭೂತ ಪಿಶಾಚಿಗಳಿದ್ದರೆ ಅವು ಮರದಿಂದ ದೂರ ಸರಿದು ನಿಲ್ಲುತ್ತವೆ ಎಂಬ ನಂಬಿಕೆ ಇದೆ.

ಕೆಲವು ಕಡೆ ಜೇನು ಕುಟುಂಬ ಸಂಗ್ರಹಿಸಿದ ಮರ ಅಥವಾ ಕಟ್ಟಡದಲ್ಲಿ ಜೇನು ಸಂಗ್ರಹಿಸುವುದಕ್ಕಿಂತಲೂ ಮೊದಲು ತಮ್ಮ ಕುಲದೇವರನ್ನು ನೆನೆದು ಕಡ್ಡಿ, ಕರ್ಪೂರ ತೆಂಗಿನಕಾಯಿಯನ್ನು ಹರಕೆಯಾಗಿಟ್ಟು, ಮರವನ್ನು ಏರಿ, ಜೇನು ಸಂಗ್ರಹಿಸಿದ ನಂತರ ತೆಂಗನ್ನು ಮರಕ್ಕೆ, ಕಟ್ಟಡಕ್ಕೆ ಹರಕೆಯಾಗಿ ಒಪ್ಪಿಸಿ, ಸಂಗ್ರಹಿಸಿದ ಸ್ವಲ್ಪ ಜೇನನ್ನು ಬಾಳೆಯ ಎಲೆಯಲ್ಲಿ ಆ ಮರಕ್ಕೆ, ಕಟ್ಟಡಕ್ಕೆ ನೈವೇದ್ಯವಾಗಿ ಇಡುವುದುಂಟು.

ಒಂದು ವೇಳೆ ಹೆಜ್ಜೇನು ಮನೆಯಲ್ಲಿ ಗೂಡು ಕಟ್ಟಿದ್ದರೆ ಆ ಮನೆಗೆ ದರಿದ್ರ ಪ್ರಾಪ್ತವಾಗಿದೆ ಎಂಬ ನಂಬಿಕೆ ಇದೆ.

ಕೆಲವು ಪ್ರದೇಶಗಳಲ್ಲಿ, ಜೇನು ಬಿಡಿಸುವುದಕ್ಕಿಂತ ಪೂರ್ವದಲ್ಲಿ ಜೇನು ಕಟ್ಟಿದ ಮರವನ್ನು ಆ ಪ್ರದೇಶದ ಮಿರಾಶಿಯಿಂದ (ಊರ ಮುಖಂಡ) ಪೂಜಿಸಿ ಜೇನು ತೆಗೆಯುವುದುಂಟು. ಕೆಲವು ಕಡೆ ಜೇನು ಬಿಡಿಸುವುದಕ್ಕಿಂತ ಪೂರ್ವದಲ್ಲಿ ಗ್ರಾಮ ದೇವರನ್ನು, ಬ್ರಹ್ಮ ದೇವನನ್ನು, ಸೀಮೆ ದೇವರನ್ನು, ನಾಶ ಎನ್ನುವ ದೇವರನ್ನು ಪೂಜಿಸಿ ಜೇನು ಸಂಗ್ರಹಿಸುವರು.

ಜೇನಿನ ಮರವೇರುವ ಪೂರ್ವದಲ್ಲಿ ವಿಧಿ ನಿಯಮಗಳನ್ನು ನೆರವೇರಿಸದೇ ಆ ಮರವೇರಿದಲ್ಲಿ ಆ ಜೇನು ಹುಳಗಳು ತಂಡೋಪತಂಡವಾಗಿ ಸಿಟ್ಟಿಗೆದ್ದು ಮರವೇರಲು ಕೊಡಲಾರವು ಎಂಬ ನಂಬಿಕೆ ಇದೆ.

ಜೇನು ಮರವನ್ನು ಪೂಜಿಸದೇ ಜೇನು ಸಂಗ್ರಹಿಸಲು ಮರವೇರಿದ್ದಲ್ಲಿ ಮರವೇರಿದವನು ಕೆಳಗೆ ಬಿಳಬಹುದೆಂಬ ನಂಬಿಕೆ ಇದೆ. ಕಾಕತಾಳೀಯವೆನ್ನುವಂತಹ ಘಟನೆಗಳು ಸಂಭವಿಸಿದ ದಾಖಲೆಗಳಿವೆ.

ಜೇನು ಮರದಿಂದ ಜೇನು ಹುಟ್ಟನ್ನು ಕೆಳಕ್ಕೆ ಹಗ್ಗದ ಸಹಾಯದಿಂದ ಕೆಳಕ್ಕಿಳಿಸುವಾಗ ಇಳಿಸುವ ಪಾತ್ರೆಯಲ್ಲಿ ಕಬ್ಬಿಣದ ವಸ್ತುವನ್ನು ಇಟ್ಟು ಇಳಿಸುವ ಸಂಪ್ರದಾಯವಿದೆ. ಒಂದಾನು ವೇಳೆ ಕಬ್ಬಿಣದ ತುಂಡನ್ನು ಆ ಪಾತ್ರೆಯಲ್ಲಿ ಇಡದೇ ಹೋದರೆ, ಜೇನುತುಪ್ಪ ನೆಲಕ್ಕೆ ಚೆಲ್ಲಿ ಸ್ವಲ್ಪವೂ ದೊರೆಯಲಾರದೆಂಬ ನಂಬಿಕೆ ಇದೆ.

ಕೆಲವು ಕಡೆ ಹೆಜ್ಜೇನು ಕುಟುಂಬದಿಂದ ಜೇನು ಇಳಿಸಿ ಸಂಗ್ರಹಿಸುವವರೆಗೆ ಕೋಳಿಯನ್ನು ಕೂಗಿಸುತ್ತಾ ಇದ್ದರೆ, ಜೇನು ಸುರಕ್ಷಿತವಾಗಿ ಲಭ್ಯವಾಗುವದು ಎಂಬ ನಂಬಿಕೆ ಇದೆ.

ಕೆಲವು ಕಡೆ ಜೇನು ಬಿಡಿಸುವಾಗ ಕೋಳಿ ಕುರಿಗಳನ್ನು ಬಲಿಕೊಟ್ಟು ಜೇನು ಬಿಡಿಸುತ್ತಾರೆ. ಸಂಗ್ರಹಿಸುತ್ತಾರೆ.

ಕೆಲವು ಕಡೆ ಹಸುವಿನ ಹಾಲನ್ನು ಒಂದು ಪಾತ್ರೆಯಲ್ಲಿಟ್ಟು, ಜೇನು ತೆಗೆದಾದ ನಂತರ ಹಾಲನ್ನು ನೋಡಲಾಗಿ ಹಾಲು ಇರುವುದಿಲ್ಲ ಹಾಲನ್ನೆಲ್ಲ ದೈವ ಪಿಶಾಚಿಗಳು ಕುಡಿದು ಸಂತೃಪ್ತರಾಗಿ ಜೇನು ಸಂಗ್ರಹಿಸಲು ಅಡ್ಡಿ ಆತಂಕಗಳು ಬಾರದಂತೆ ಮಾಡುತ್ತವೆ ಎಂಬ ನಂಬಿಕೆ ಇದೆ.

ಹೆಜ್ಜೇನನ್ನು ಸೋಮವಾರದಂದು ತೆಗೆಯುವದಿಲ್ಲ. ಏಕೆಂದರೆ ಅಂದು ಜೇನು ಹುಟ್ಟಿದ ದಿನವೆಂಬ ನಂಬಿಕೆ ಇದೆ.

ಜೇನು ತೆಗೆದಾದ ಮೇಲೆ ಜೇನು ಕಟ್ಟಿದ ಗಿಡಗಳನ್ನು, ಕಟ್ಟಡಗಳನ್ನು ತೆಂಗು, ಊದಬತ್ತಿ, ಜೇನುತುಪ್ಪವಿಟ್ಟು ಪೂಜಿಸುವುದರಿಂದ ಪುನಃ ಜೇನು ಕುಟುಂಬಗಳು ಮರುವರ್ಷವೂ ಅದೇ ಸ್ಥಳಕ್ಕೆ ಬಂದು ಜೇನುತುಪ್ಪ ಸಂಗ್ರಹಿಸಿ ಮಾನವನಿಗೆ ಉಪಕಾರಿಯಾಗುತ್ತದೆ. ಎಂಬ ನಂಬಿಕೆ ಇದೆ.

**ಸಾಂಪ್ರದಾಯಿಕ ಸಾಕಾಣಿಕೆ**

ಜೇನುಹುಳುಗಳನ್ನಾಕರ್ಷಿಸಲು ಕಾಡಿನಿಂದ ಟೊಳ್ಳು ಕುಂಟೆ ತಂದು ಜೇನು ಮೇಣ ಮೆತ್ತಿಸುತ್ತಾರೆ. ಮೇಣದ ವಾಸನೆ ಗ್ರಹಿಸಿ ಕಾಡಿನ ಜೇನುಗಳು ಈ ಕುಂಟೆಗೆ ಬರುತ್ತವೆ. ಹೀಗೆ ಮನೆಯ ಪರಿಸರದಲ್ಲಿಯೇ ನಾಲ್ಕಾರು ಕುಂಟೆಗಳಲ್ಲಿ ಜೇನು ಗೂಡುಗಳನ್ನು ಸಾಕಿಬಿಡಬಹುದು. ಜೇನನ್ನು ಸಾಂಪ್ರದಾಯಿಕವಾಗಿ ಸಾಕಿ ಜೇನು ತುಪ್ಪ ಮೇಣ ಮಾರಾಟ ಮಾಡಿ ಜೀವನ ನಡೆಸುವವರಿದ್ದಾರೆ. ಜೇನುಗೂಡನ್ನೇ ಹಿಡಿದು ಪೆಟ್ಟಿಗೆಯಲ್ಲಿ ಸಾಕುವವರಿಗೆ ಮಾರುತ್ತಾರೆ. ಮರದ ಪೊಟರೆಗಳೂ ಸಹ ಜೇನಿಗೆ ವಾಸಸ್ಥಾನ. ಪ್ರತಿ ವರ್ಷವೂ ಕೆಲವು ನಿರ್ದಿಷ್ಟ ಮರಗಳ ಪೊಟರೆಗಳಲ್ಲಿ ಜೇನು ಗೂಡುಕಟ್ಟುತ್ತವೆ. ಜೇನು ತೆಗೆಯುವಾಗ ಆ ಪೊಟರೆಗಳನ್ನು ಸಿಕ್ಕಾಪಟ್ಟೆ ಕಡಿದು ಅದರ ವಾಸಸ್ಥಾನ ಹಾಳಾಗದಂತೆ ಎಚ್ಚರವಹಿಸಿದರೆ ಪ್ರತಿವರ್ಷ ತಪ್ಪದೇ ಆ ಮರಕ್ಕೆ ಜೇನು ಬರುತ್ತದೆ. ಅಂತಹ ಪೊಟರೆಗಳನ್ನು ಕಾಡಿನ ಜನ ಸಂರಕ್ಷಿಸಿಕೊಂಡು ಬರುವುದೂ ಇದೆ. ಕಡಿದ ಜಾಗದಲ್ಲಿ ಪೊಟರೆಗೆ ಪುಟ್ಟ ಕಲ್ಲುಗಳನ್ನು ಹಾಕಿಟ್ಟು ಪೊಟರೆಯನ್ನು ಕಾಪಾಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ತಪ್ಪದೆ ಆ ಮರಕ್ಕೆ ಜೇನು ಬರುತ್ತದೆ.

**7) ಜೇನುನೊಣಗಳ ವರ್ಗೀಕರಣ, ಸಂಗ್ರಹಿಸಿದ ಜೇನಿನ ವರ್ಗೀಕರಣ, ಉಪ ಉತ್ಪನ್ನಗಳು ಅವುಗಳ ಉಪಯೋಗ ಜೇನು ನೊಣಗಳ ವರ್ಗೀಕರಣ :**

ನಮ್ಮ ದೇಶದಲ್ಲಿ ಜೇನು ಸಂಗ್ರಹಿಸುವ ನಾಲ್ಕು ಜಾತಿಯ ಜೇನು ಕುಟುಂಬಗಳಿವೆ. ಅವು ಈ ಕೆಳಗಿನಂತಿವೆ.

೧) ಹೆಜ್ಜೇನು
೨) ತೊಡುವೆ
೩) ಕೋಲ್ಜೇನು
೪) ಮುಜಂಟಿ

೧) **ಹೆಜ್ಜೇನು** : ಜೇನು ನೊಣಗಳಲ್ಲೆಲ್ಲ ಹೆಜ್ಜೇನು ನೊಣಗಳು ದೊಡ್ಡವು. ಸಾಮಾನ್ಯವಾಗಿ ಹೆಜ್ಜೇನುಗಳು ಎತ್ತರವಾದ ಮರದ ಕೊಂಬೆ, ಬಂಡೆ ಮತ್ತು ಎತ್ತರವಾದ ಕಟ್ಟಡಗಳ ತೊಲೆಗಳಿಗೆ ಜೇನು ಗೂಡನ್ನು ಕಟ್ಟುತ್ತವೆ. ಇದರ ಅಗಲ ಸುಮಾರು ೨.೫ (ಮೀಟರ್) ೧.೦ (ಮೀಟರ್) ಎತ್ತರವಿರುತ್ತದೆ. ಎರಿಯ ಮಧ್ಯದ ಮತ್ತು ಕೆಳಭಾಗವನ್ನು ಮೊಟ್ಟೆಗಳನ್ನಿಟ್ಟು ಮರಿಗಳನ್ನು ಮಾಡಲು ಪರಾಗವನ್ನು ಸಂಗ್ರಹಿಸಲು ಉಪಯೋಗಿಸುತ್ತವೆ.

ಹೆಜ್ಜೇನು ನೊಣಗಳು ತುಂಬಾ ಮುಂಗೋಪದ ಸ್ವಭಾವದವುಗಳಾಗಿರುತ್ತವೆ. ಮನುಷ್ಯರಿಂದಾಗಲಿ, ಪಕ್ಷಿಗಳಿಂದಾಗಲಿ ತೊಂದರೆಯುಂಟಾದಾಗ ಅವುಗಳನ್ನು ಬಹುದೂರದ ತನಕ ಓಡಿಸಿ ಕಚ್ಚುತ್ತವೆ. ಕಡಿತವು ಬಹಳ ತೀಕ್ಷ್ಣತರವಾದದ್ದು.

ಕೆಲವು ಸಾಹಸಿ ಜನರು ರಾತ್ರಿಕಾಲದಲ್ಲಿ ಹೆಜ್ಜೇನು ಕುಟುಂಬಗಳಿರುವ ಮರವನ್ನೇರಿ, ನೊಣಗಳಿಗೆ ಹೊಗೆ ಹಾಕಿ ಹೆಚ್ಚಿನ ನೊಣಗಳನ್ನು ಓಡಿಸಿ, ಎರಿಗಳನ್ನು ಕತ್ತರಿಸಿ ಪಾತ್ರೆಯಲ್ಲಿ ತುಂಬಿ ಹಗ್ಗದ ಸಹಾಯದಿಂದ ಕೆಳಗಿಳಿಸಿ ಜೇನು ತುಂಬಿದ ಭಾಗವನ್ನು ಕತ್ತರಿಸಿ ಬೇರ್ಪಡಿಸಿ, ಅದನ್ನು ಕೈಯಿಂದ ಹಿಂಡಿ, ಬಟ್ಟೆಯಿಂದ ಶೋಧಿಸಿ ಜೇನನ್ನು ಸಂಗ್ರಹಿಸುತ್ತಾರೆ.

ಮಲೆನಾಡು ಪ್ರದೇಶದಲ್ಲಿ ವಾಸಿಸುವ ಬೆಟ್ಟ ಕುರುಬರು ಮತ್ತು ಜೇನು ಕುರುಬರು ಹೆಜ್ಜೇನು ಸಂಗ್ರಹಿಸುವಲ್ಲಿ ನಿಪುಣರು. ಅವರು ಜೇನುತುಪ್ಪವನ್ನು ಬಾಟ್ಲಿಗಳಲ್ಲಿ ಹಾಕಿ ಸಂತೆಗಳಲ್ಲಿ ಮಾರುತ್ತಾರೆ. ಇದು ಸ್ವಲ್ಪ ಹುಳಿ ಹಾಗೂ ತೆಳ್ಳಗಿರುತ್ತದೆ.

ಕೆಲವೊಮ್ಮೆ ಹೆಜ್ಜೇನು ಕುಟುಂಬವು ಕಾಡಿನಲ್ಲಿ ನೆಲದಿಂದ ಹತ್ತು ಮೀಟರ್ ಎತ್ತರದೊಳಗಿರುವ ಗಿಡಬಳ್ಳಿಗಳಿಂದ ಮರೆಯಾದ ನೆರಳಿರುವ ಜಾಗದಲ್ಲಿ ಮರದ ತೆಗ್ಗಿನ ಕೊಂಬೆಯಲ್ಲಿ ನೆಲೆಸುವುದು ಇದೆ. ಅಂಥ ಜೇನು ಕುಟುಂಬವನ್ನು ಹಳ್ಳಿಯವರು ಕುಡ್ಡೋಳು ಜೇನು ಕುಟುಂಬ ಎಂದು ಹೇಳುತ್ತಾರೆ. ಈ ಕುಟುಂಬದಿಂದ ಜೇನು ತೆಗೆಯಲು ಸುಲಭವಾಗುತ್ತದೆ.

ಹೆಜ್ಜೇನು ತಯಾರಿಸುವ ಎರಿಯು ಹಳತಾದಾಗ ಮತ್ತು ನೊಣಗಳಿಗೆ ಸಾಕಷ್ಟು ದೊರೆಯದ ಮಳೆಗಾಲದಲ್ಲಿ ಮಳೆ ನೀರಿನ ಹೊಡೆತವನ್ನು ತಾಳಲಾರದೇ ಅವು ತಾವು ಇದ್ದ ಸ್ಥಳವನ್ನು ಬಿಟ್ಟು ಮಳೆ ಕಡಿಮೆ ಇರುವ ಪ್ರದೇಶಗಳಿಗೆ ವಲಸೆ ಹೋಗುತ್ತದೆ. ಅವುಗಳನ್ನು ಹಿಡಿದು ಸಾಕಲು ಮಾಡಿದ ಈವರೆಗಿನ ಪ್ರಯತ್ನಗಳು ಫಲಕಾರಿಯಾಗಿಲ್ಲ.

ಈ ಜಾತಿಯ ನೊಣಗಳು ಹವಾಮಾನಕ್ಕೆ ಅನುಗುಣವಾಗಿ ಹೂಬಿಡುವ ಸಮಯವನ್ನು ಅರಿತು, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುತ್ತಾ ಇರುತ್ತವೆ. ಒಂದೇ ಎರಿಯನ್ನೂ ಕಟ್ಟುವದರಿಂದಲೂ ಬೆಳಕನ್ನು ಅಪೇಕ್ಷಿಸುವದರಿಂದಲೂ ವಲಸೆ ಹೋಗುವ ಸ್ವಭಾವ ಇರುವುದರಿಂದಲೂ ಇವನ್ನು ಸಾಕಲು ಸಾಧ್ಯವಿಲ್ಲ.

೨) **ತೊಡುವೆ :** ತೊಡುವೆ ಜೇನನ್ನು ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಸಾಕುಜೇನು, ಮಡಕೆಜೇನು, ಹುತ್ತಜೇನು, ಈ ಜೇನುಗಳು ಹೆಜ್ಜೇನು ನೊಣಗಳಿಗಿಂತ ಚಿಕ್ಕವು. ಇವು ಕಾಡು

ಗುಡ್ಡಗಳಲ್ಲಿರುವ ಮರದ ಪೊಟರೆಗಳಲ್ಲಿಯೂ, ಬರಿದಾದ ಗೆದ್ದಲು, ಹುತ್ತಗಳೊಳಗೂ, ಕಲ್ಲು ಕಟ್ಟಡಗಳ ಸಂದುಗಳಲ್ಲಿಯೂ, ಅಪರೂಪವಾಗಿ ಮನೆ ಮಾಡಿನೊಳಗೂ ವಾಸಿಸುತ್ತವೆ. ಇವು ಹಲವಾರು ಎರಿಗಳನ್ನು ತಯಾರಿಸುತ್ತವೆ. ಸುಧಾರಿತ ಮರದ ಗೂಡುಗಳಲ್ಲಿ ಸಾಕಲನುಕೂಲವಾದ ಕುಟುಂಬವೇ ತೊಡುವೆ ಜೇನು ಕುಟುಂಬ. ಇದರಿಂದ ಸಂಗ್ರಹಿಸಿದ ಜೇನು ಬಹಳ ಉಪಯುಕ್ತವಾದದ್ದು.

ಸಾಮಾನ್ಯವಾಗಿ ನಮ್ಮ ದೇಶದಲ್ಲಿ ದೊರೆಯುವ ತೊಡುವೆ ಜೇನು ನೊಣಗಳು ಒಂದೇ ಆಕಾರದವುಗಳಾಗಿರುತ್ತವೆ. ಕಾಶ್ಮೀರ, ಪಂಜಾಬ ಮತ್ತು ಉತ್ತರ ಪ್ರದೇಶ ಮೊದಲಾದ ಹಿಮಾಲಯ ಪರ್ವತ ಶ್ರೇಣಿಯ ತಪ್ಪಲಿನ ಸ್ಥಳಗಳಲ್ಲಿರುವ ಜೇನು ಕುಟುಂಬಗಳು ದೊಡ್ಡವು. ಅವು ಶೇಖರಿಸುವ ಜೇನಿನ ಪ್ರಮಾಣವು ಸ್ವಲ್ಪ ಹೆಚ್ಚು.

ಕರ್ನಾಟಕದಲ್ಲಿರುವ ಜೇನುಗೂಡಿನಲ್ಲಿರುವ ಸಂಸಾರ ಕೋಣೆ ಮತ್ತು ಜೇನು ಕೋಣೆಗಳಲ್ಲಿ ಎಂಟೆಂಟು ಚೌಕಟ್ಟುಗಳ ಬದಲು ಹತ್ತು ಚೌಕಟ್ಟುಗಳಿವೆ, ನಮ್ಮಲ್ಲಿ ಈಗ ಸಾಕುವ ತೊಡುವೆ ಜೇನುನೊಣಗಳಿಗಿಂತ ಮೈಬಣ್ಣದಲ್ಲಿ ಸ್ವಲ್ಪ ವ್ಯತ್ಯಾಸವೆಂದರೆ ಸ್ವಲ್ಪ ಹಳದಿಬಣ್ಣದ ಮತ್ತು ಸಾಧು ಸ್ವಭಾವದ ತೊಡುವೆ ಜೇನು ಕುಟುಂಬಗಳು ಈ ಪ್ರಾಂತದ ಕೆಲವೆಡೆಗಳಲ್ಲಿ ಎಂದರೆ ಕುಶಾಲನಗರ, ಹುಣಸೂರು, ಮೈಸೂರು, ಉತ್ತರ ಕನ್ನಡದ ಕೆಲವು ಸ್ಥಳಗಳಲ್ಲಿ ಕಾಣಸಿಗುತ್ತವೆ.

ಈ ತರಹದ ಜೇನು ಕುಟುಂಬಗಳನ್ನೇ ವೈಜ್ಞಾನಿಕ ರೀತಿಯಲ್ಲಿ ಸಾಕಿದರೆ ತುಂಬಾ ಲಾಭದಾಯಕ. ಇವುಗಳಿಗೆ ವಲಸೆ ಹೋಗುವ ಸ್ವಭಾವ ಕಡಿಮೆ ಇರುತ್ತದೆ. ಒಂದೇ ಗೂಡಿನಲ್ಲಿ ಹೆಚ್ಚುಕಾಲ ಇರುವವು. ಇವು ಒಂದು ಗೂಡಿನಲ್ಲಿ ೫ ರಿಂದ ೧೦ ಕೆ.ಜಿ. ಜೇನನ್ನು ಕೊಡುವವು.

೩) **ಕೋಲ್ಜೇನು** : ಈ ಜೇನು ಗಾತ್ರದಲ್ಲಿ ಚಿಕ್ಕದು. ಮರಗಿಡಗಳ ಪೊದರುಗಳಲ್ಲಿ ರೆಂಬೆಗಳಿಂದ ನೇತಾಡುವ ಒಂದೆ ಒಂದು ಎರಿಯನ್ನು ಕಟ್ಟುತ್ತದೆ. ಎರಿ ಸುಮಾರು ೮ ರಿಂದ ೧೦ ಸೆಂ.ಮೀ. ಅಗಲವೂ ೧೨ ರಿಂದ ೧೫ ಸೆಂ.ಮೀ. ಎತ್ತರವಿರುತ್ತದೆ. ಜೇನುತುಪ್ಪದ ಸಂಗ್ರಹಣೆ ಎರಿಯ ಮೇಲ್ಭಾಗದಲ್ಲಿಯೂ ಮರಿಗಳ ಸಾಕಾಣಿಕೆ ಕೆಳಭಾಗದಲ್ಲಿಯೂ ಆಗುತ್ತದೆ. ಒಂದು ಎರಿಯಲ್ಲಿ ಸುಮಾರು ಅರ್ಧ ಕೆ.ಜಿ ಜೇನುತುಪ್ಪವಿರಬಹುದು. ಈ ಜೇನು ಸ್ವಭಾವತಃ ಹೆಚ್ಚು ವಲಸೆ ಹೋಗುವ ಜಾತಿ. ಇದನ್ನು ಸಹ ಹೆಜ್ಜೇನಿನಂತೆ ಸಾಕಲು ಬಾರದು. ಕೋಲ್ಜೇನಿನ ದೊಡ್ಡ ಕುಟುಂಬವು ಮರದ ಅಗಲವಾದ ಪೊಟರೆಯೊಳಗೆ ನೆಲೆಸಿರುವುದು ಇದೆ. ಇದನ್ನು ದಂಟಿ ಕೋಲ್ಜೇನು ಎಂದು ಹಳ್ಳಿಯವರು ಹೇಳುವದಿದೆ. ಜೇನನ್ನು ತೆಗೆದರೂ ಕುಟುಂಬವು ಸ್ಥಾನಬಿಟ್ಟು ಹೋಗದೇ ಪುನಃ ಜೇನನ್ನು ಶೇಖರಿಸುತ್ತದೆ. ಇವು ಕೂಡಾ ಹೆಜ್ಜೇನಿನಂತೆ ಮಳೆಗಾಲದಲ್ಲಿ ಕಡಿಮೆ ಮಳೆ ಬೀಳುವ ಪ್ರದೇಶಕ್ಕೆ ವಲಸೆ ಹೋಗುತ್ತವೆ. ಕೋಲ್ಜೇನು ನೊಣಗಳು ಶೇಖರಿಸುವ ಜೇನು ಬಹಳ ರುಚಿ. ಈ ನೊಣದ ಚುಚ್ಚುವಿಕೆ ಬಹಳ ಸೂಕ್ಷ್ಮ ತೀಕ್ಷ್ಣ.

೪) **ಮುಜಂಟಿ ಕುಟುಂಬ (ನಸರಿ)** : ಇದು ಎಲ್ಲಾ ಜೇನುನೊಣಗಳಿಗಿಂತ ಚಿಕ್ಕದಾಗಿರುತ್ತವೆ.

ಇವು ಏರಿ ಕಟ್ಟುವದಿಲ್ಲ. ಚುಚ್ಚುವ ಮುಳ್ಳುಗಳಿರುವದಿಲ್ಲ. ಇವುಗಳ ಗೂಡನ್ನು ತೆರೆದು ನೋಡಿದಾಗ ನೊಣಗಳು ಗಾಬರಿಯಾಗಿ, ಹಾರಿ ಮೈಮೇಲೆ, ತಲೆಕೂದಲುಗಳ ಮೇಲೆ ಬಂದು ಅಂಟಿಕೊಂಡು ಜಿಗುಪ್ಸೆ (ಕಿರಿಕಿರಿ) ಮಾಡುವವು. ದ್ರಾಕ್ಷಾಗೊಂಚಲಿನಂತೆ ಇವುಗಳು ಮಣ್ಣು ಮತ್ತು ಅಂಟಿನಿಂದ ಗೂಡನ್ನು ಕಟ್ಟುವವು. ಈ ಗೂಡುಗಳ ಮೇಲ್ಭಾಗದಲ್ಲಿ, ಜೇನುತುಪ್ಪವನ್ನು ಮಧ್ಯದ ಗೂಡುಗಳಲ್ಲಿ ಪರಾಗವನ್ನು ಇವು ಅತಿ ಚಿಕ್ಕದಾದ ಹೂಗಳಿಂದ ಮತ್ತು ಕೊಳವೆ ಯಾಕಾರದ ಹೂವುಗಳಿಂದಲೂ ಪುಷ್ಪರಸವನ್ನು ತಂದು ಜೇನುತುಪ್ಪವನ್ನು ತಯಾರಿಸುತ್ತವೆ.

ಮುಜಂಟಿ ಜೇನು ಕುಟುಂಬಗಳು ಮಣ್ಣಿನ ಹಳೆಯ ಗೋಡೆಗಳ ಸಂದುಗಳಲ್ಲಿಯೂ, ಮರದ ಸಣ್ಣ ಪೊಟರೆಗಳಲ್ಲಿಯೂ ಖಾಯಂ ವಾಸಿಸುತ್ತವೆ. ಇವು ತಮ್ಮ ವಾಸ ಸ್ಥಾನವನ್ನು ಎಂದೂ ಬಿಟ್ಟು ಹೋಗುವದಿಲ್ಲ. ಮುಜಂಟಿ ಜೇನ್ನೊಣಗಳು ಎರಿಗಳ ಬದಲಾಗಿ ಮಯಣದ ಚಿಕ್ಕಚಿಕ್ಕ ದುಂಡಗಿನ ಚೀಲಗಳನ್ನು ತಯಾರಿಸಿ ಗುಂಪು ಗುಂಪಾಗಿ ಸೇರಿಸಿ ಅವುಗಳಲ್ಲಿ ಜೇನನ್ನು ಶೇಖರಿಸುತ್ತವೆ.

ಮೊಟ್ಟೆಗಳನ್ನಿಟ್ಟು ಮರಿಗಳನ್ನು ಬೆಳೆಸುವ ಚೀಲಗಳು ಪ್ರತ್ಯೇಕ ಇರುತ್ತವೆ. ಇವುಗಳ ಗೂಡಿನ ಬಾಯಿಯು ಸಣ್ಣ ಕೊಳವೆಯ ತುದಿಯಂತೆ ತೋರುತ್ತದೆ. ಇವು ಶೇಖರಿಸುವ ಜೇನು ಬಹಳ ಕಡಿಮೆ ಮತ್ತು ಅದು ಸ್ವಲ್ಪ ಹುಳಿ-ಸಿಹಿ ರುಚಿಯದ್ದಾಗಿದೆ. ಇವು ಸಂಗ್ರಹಿಸಿದ ಜೇನುತುಪ್ಪವು ಇತರ ಎಲ್ಲಾ ಜೇನುತುಪ್ಪಕ್ಕಿಂತಲೂ ಉತ್ತಮ ಮತ್ತು ಉತ್ತಮ ಔಷಧಿ ಗುಣಗಳಿಂದ ಕೂಡಿರುತ್ತದೆ. ಇವುಗಳನ್ನು ದಪ್ಪದಾದ ಬಿದಿರಿನ ಅಂಡೆಗಳಲ್ಲಿ ಸಾಕಬಹುದು. ಆರ್ಥಿಕವಾಗಿ ಲಾಭವಲ್ಲದಿದ್ದರೂ ಸಹ ಪರಕೀಯ ಪರಾಗಸ್ಪರ್ಶಕ್ಕೆ ತುಂಬಾ ನೆರವಾಗುವ ಕೀಟಗಳಾದುದರಿಂದ ಇವುಗಳ ಸಂರಕ್ಷಣೆಗೆ ಹೆಚ್ಚು ಗಮನ ಕೊಡಬೇಕು.

**ಜೇನು ಕುಟುಂಬದ ಸದಸ್ಯರು**

ಹೆಜ್ಜೇನು, ತೊಡುವೆ ಜೇನು, ಕೋಲ್ಜೇನು ಮತ್ತು ಮುಜಂಟಿ ಜೇನು ಈ ನಾಲ್ಕು ಜಾತಿಯ ಜೇನು ಕುಟುಂಬಗಳಲ್ಲಿಯೂ ರಾಣಿನೊಣ,ಕೆಲಸಗಾರ ನೊಣಗಳು, ಗಂಡು ನೊಣಗಳು ಎಂಬ ಮೂರು ತರಹದ ಸದಸ್ಯರಿದ್ದಾರೆ.

ಒಂದು ತೊಡುವೆ ಜೇನು ಕುಟುಂಬದಲ್ಲಿ ಹತ್ತು ಸಾವಿರದಿಂದ ಐವತ್ತು ಸಾವಿರದವರೆಗೂ ಜೇನುನೊಣಗಳಿರುತ್ತದೆ. ಕುಟುಂಬವು ಬಹಳ ದೊಡ್ಡದಿದ್ದರೆ ನೊಣಗಳ ಸಂಖ್ಯೆ ಇನ್ನೂ ಹೆಚ್ಚು ಇರಬಹುದು. ಒಂದು ರಾಣಿನೊಣ ಮತ್ತು ಕೆಲವು ಸಾವಿರ ಕೆಲಸಗಾರ ನೊಣಗಳು ಕುಂಟುಬದಲ್ಲಿ ಯಾವಾಗಲೂ ಇರುತ್ತವೆ. ಆದರೆ ಗಂಡುನೊಣಗಳು ಎಲ್ಲ ಕಾಲದಲ್ಲಿಯೂ ಗೂಡಿನಲ್ಲಿರುವುದಿಲ್ಲ. ಧಾರಾಳವಾಗಿ ಪುಷ್ಪರಸ ಮತ್ತು ಪರಾಗ ದೊರೆಯುವ ಸಮಯ, ಕುಟುಂಬದಲ್ಲಿ ಪಾರಾಗುವ ಸಂದರ್ಭ ಬಂದಾಗ (ಹೊಸರಾಣಿ ನೊಣವು ಜನನಕ್ಕೆ ಬರುವ ಸಮಯ) ಗಂಡುನೊಣಗಳನ್ನು ಗೂಡಿನಲ್ಲಿ ಕಾಣಬಹುದು. ರಾಣಿನೊಣ, ಕೆಲಸಗಾರ ನೊಣ ಮತ್ತು ಗಂಡುನೊಣ ಇವುಗಳ ಜೀವನಚರಿತ್ರೆ ಅವುಗಳ ಕರ್ತವ್ಯ ಮತ್ತ ಅವುಗಳೊಳಗಿನ ಸಹಕಾರ ಜೀವನದ ಕುರಿತು ತಿಳಿಯೋಣ.

## 1) ರಾಣಿ ನೊಣ (Queen Beu)

ರಾಣಿ ನೊಣವನ್ನು ಕೆಲವರು ತಾಯಿ ನೊಣ ಎಂದು ಹೇಳುವುದಿದೆ. ಒಂದು ಜೇನು ಕುಟುಂಬದಲ್ಲಿ ಒಂದೇ ರಾಣಿ ನೊಣವಿರುವದು. ಆದರೆ ಅಪರೂಪವಾಗಿ ಮುದಿಯಾದ ತಾಯಿ ಮತ್ತು ಚುರುಕಾದ ಎಳೆ ರಾಣಿಯೂ ಇರುವುದೂ ಇದೆ. ಸಾಮಾನ್ಯವಾಗಿ ಇದು ಸಂಸಾರ ಕೋಣೆಯಲ್ಲೇ ಇದ್ದು ಎರಿಯಿಂದ ಎರಿಗೆ ನಿಧಾನವಾಗಿ ಚಲಿಸುತ್ತ ಎರಿಯ ಖಾಲಿ ಕಣಗಳಲ್ಲಿ ಒಂದೊಂದಾಗಿ ಮೊಟ್ಟೆಗಳನ್ನಿಡುತ್ತಿರುತ್ತದೆ.

ಕೆಲಸಗಾರ ನೊಣಗಳಿಗಿಂತ ರಾಣಿ ನೊಣವು ಸ್ವಲ್ಪ ದಪ್ಪವಾಗಿದ್ದು, ಹೊಳೆಯುವ ಕಪ್ಪುಬಣ್ಣದಿಂದ ಇರುವದು. ಅದು ಸಂಸಾರ ಕೋಣೆಯಲ್ಲಿ ಚಲಿಸುವಾಗ ಅದರ ಸುತ್ತಲೂ ವರ್ತುಲಾಕಾರದಲ್ಲಿ ಕೆಲಸಗಾರ ನೊಣಗಳು ಅದರ ರಕ್ಷಕರಂತೆಯೂ, ಸೇವಕರಂತೆಯೂ ಸುತ್ತುತ್ತಿರುವುದರಿಂದ ಅದನ್ನು ಸುಲಭವಾಗಿ ಗುರುತಿಸಬಹುದು. ಇದು ಅಧಿಕಾರ ಮಾಡುವ ರಾಣಿಯಲ್ಲ. ಇದು ಕುಟುಂಬದ ಎಲ್ಲ ಕೆಲಸಗಾರ ನೊಣಗಳ ಪ್ರೀತಿಗೆ ಪಾತ್ರವಾಗಿ ಅವುಗಳಿಂದ ಸೇವೆ ಮಾಡಿಸಿಕೊಳ್ಳುವ ರಾಣಿಯಾಗಿದೆ.

**ರಾಣಿ ನೊಣದ ಕರ್ತವ್ಯ :**

ರಾಣಿ ನೊಣದ ಒಂದೇ ಒಂದು ಕರ್ತವ್ಯ ಎರಿಯ ಕಣಗಳಲ್ಲಿ ಮೊಟ್ಟೆಗಳನ್ನಿಡು ವುದಾಗಿದೆ. ಇದು ಮೊಟ್ಟೆಗಳನ್ನಿಡಬಲ್ಲುದೇ ಹೊರತು ಮೊಟ್ಟೆಗಳಿಂದ ಹೊರಬರುವ ಎಳೆ ಮರಿಗಳನ್ನು ಸಾಕಿ ಸಲಹಲಾರದು, ಆ ಕೆಲಸ ಕೆಲಸಗಾರ ನೊಣಗಳಿಂದಲೇ ಆಗಬೇಕಾಗಿದೆ. ಸಾಮಾನ್ಯವಾಗಿ ಒಂದು ದಿನದಲ್ಲಿ ರಾಣಿನೊಣ ೩೦೦ ರಿಂದ ೨೦೦೦ ದವರೆಗೂ ಮೊಟ್ಟೆಗಳನ್ನಿಡಬಲ್ಲುದು. ಆದರೆ ನೊಣಗಳಿಗೆ ಆಹಾರ ದೊರೆಯುವುದು ಕಡಿಮೆಯಾದಾಗ ರಾಣಿ ಮೊಟ್ಟೆಗಳನ್ನಿಡುವುದನ್ನು ನಿಲ್ಲಿಸಲೂಬಹುದು. ಯಾವ ಯಾವ ಕಾಲದಲ್ಲಿ ಎಷ್ಟೆಷ್ಟು ಆಹಾರ ದೊರೆತು ಕೆಲಸಗಾರ ನೊಣಗಳು ಮರಿಗಳನ್ನು ಸಾಕಬಲ್ಲವು ಎಂಬ ಪರಿಜ್ಞಾನವು ರಾಣಿಗೆ ಚೆನ್ನಾಗಿ ತಿಳಿದಿರುತ್ತದೆ.

ರಾಣಿನೊಣ ಹೆಣ್ಣು ಮತ್ತು ಗಂಡು ಎಂಬ ಎರಡು ತರಹದ ಮೊಟ್ಟೆಗಳನ್ನಿಡುತ್ತದೆ.

ಹೆಣ್ಣು ಮೊಟ್ಟೆಗಳನ್ನು ಎರಿಯ ಸಣ್ಣ ಕಣಗಳಲ್ಲಿಯೂ, ಗಂಡು ಮೊಟ್ಟೆಗಳನ್ನು ಎರಿಯ ದೊಡ್ಡ ಕಣಗಳಲ್ಲಿಯೂ ಇಡುತ್ತದೆ. ಯಾವ್ಯಾವ ಸಮಯ ಯಾವ್ಯಾವ ತರಹದ ಮೊಟ್ಟೆಗಳನ್ನಿಡಬೇಕೆನ್ನುವ ನಿರ್ಣಯ ಮತ್ತು ಸಾಮರ್ಥ್ಯ ರಾಣಿ ನೊಣಕ್ಕಿದೆ. ತನ್ನಿಷ್ಟದಂತೆ ಗಂಡು ಮತ್ತು ಹೆಣ್ಣು ಮೊಟ್ಟೆಗಳನ್ನಿಡುವ ವಿಶೇಷ ಜ್ಞಾನ ಮತ್ತು ಶಕ್ತಿಯೂ ಅದಕ್ಕಿದೆ.

**ರಾಣಿ ನೊಣದ ಬೆಳವಣಿಗೆ-ಜೀವನ**

ಜೇನು ಕುಟುಂಬವು ಪಾಲಾಗಬೇಕೆಂದು ನಿರ್ಣಯಿಸಿದಾಗ ಕೆಲಸಗಾರ ನೊಣಗಳು ಸಂಸಾರ ಕೋಣೆಯ ಎರಿಗಳ ಕೆಳಭಾಗದಲ್ಲಿ ನೆಲಗಡಲೆಕಾಯಿ ಗಾತ್ರದ ಕೆಲವು ಕಣಗಳನ್ನು ಕೆಳಮುಖವಾಗಿ ತಯಾರಿಸುತ್ತದೆ. ಈ ಕಣಗಳಿಗೆ ರಾಣಿಕಣಗಳೆಂದು ಹೆಸರು. (Queen cells) ಗೂಡಿನಲ್ಲಿರುವ

ರಾಣಿ ನೊಣವು ಈ ರಾಣಿ ಕಣಗಳಲ್ಲಿ ಹೆಣ್ಣು ಮೊಟ್ಟೆ ಗಳನ್ನಿಡುತ್ತದೆ. ಈ ಮೊಟ್ಟೆಗಳಿಂದ ಹೊರಬರುವ ಮರಿಗಳು ವಿಶೇಷವಾದ ಆಹಾರವನ್ನು ಸೇವಿಸುತ್ತಾ ಬೆಳೆದು ಮೊಟ್ಟೆಯಿಡಲ್ಪಟ್ಟ ೧೬ನೇ ದಿನ ಸಂಪೂರ್ಣ ಬೆಳೆದ ರಾಣಿ ನೊಣ ತಾನು ಬೆಳೆದು ಕೋಶದ ಮುಚ್ಚಳವನ್ನು ಭೇದಿಸಿ ಹೊರಬರುತ್ತದೆ.

ಜೇನು ಕುಟುಂಬಕ್ಕೆ ಪಾಲಾಗುವ ಇಚ್ಛೆ ಇದ್ದಲ್ಲಿ ರಾಣಿಕಣದಿಂದ ಹೊಸ ರಾಣಿಯ ಜನನವಾಗುವ ಒಂದೆರಡು ದಿನಗಳ ಮೊದಲು ಗೂಡಿನ ಅರ್ಧಾಂಶ ಕೆಲಸಗಾರ ನೊಣಗಳು ತಮ್ಮ ರಾಣಿಯೊಂದಿಗೆ ಗೂಡನ್ನು ಬಿಟ್ಟು ಹೊರಹೋಗುತ್ತದೆ. ಅನಂತರ ರಾಣಿ ಕಣಗಳಿಂದ ಪ್ರಥಮವಾಗಿ ಹೊರಡುವ ರಾಣಿನೊಣ ಮತ್ತು ಕೆಲಸಗಾರ ನೊಣಗಳು, ಇತರ ರಾಣಿಕಣಗಳನ್ನು ಕಚ್ಚಿ ಚೂರುಚೂರು ಮಾಡಿ ಅವುಗಳೊಳಗಿರಬಹುದಾದ ಮರಿ ರಾಣಿನೊಣಗಳನ್ನು ನಾಶಮಾಡುತ್ತದೆ. ಕೆಲವೊಮ್ಮೆ ಹೊಸ ರಾಣಿ ನೊಣಗಳು ಜನನ ವಾದೊಡನೆ ಕುಟುಂಬದಲ್ಲಿ ಉಳಿದ ಕೆಲಸಗಾರ ನೊಣಗಳ ಅರ್ಧಾಂಶದಷ್ಟು ನೊಣಗಳು ಹೊಸ ರಾಣಿಯೊಂದಿಗೆ ಪುನಃ ಪಾಲಾಗಿ ಹೋಗವದಿದೆ. ಒಂದು ಕುಟುಂಬದಲ್ಲಿ ಒಂದರಿಂದ ಹೆಚ್ಚು ಪಾಲುಗಳಾದರೆ ಕೊನೆಗೆ ಗೂಡಿನಲ್ಲಿ ಉಳಿಯುವ ಕುಟುಂಬವು ಬಹಳ ಚಿಕ್ಕದಾಗಿ ಅಳಿದುಹೋಗುವುದು ಇದೆ.

ಮೊದಲಿನ ಪಾಲಿನಲ್ಲಿ ಹಳೆ ರಾಣಿಯು ಹೋಗುವುದರಿಂದ ಅನಂತರ ಜನಿಸುವ ಹೊರ ರಾಣಿಯು ಐದು ಯಾ ಆರು ದಿವಸಗಳ ತನಕ ಗೂಡಿನೊಳಗೆ ವಿಹರಿಸುತ್ತಿದ್ದು, ಅನಂತರ ವಾತಾವರಣವು ಚೆನ್ನಾಗಿದ್ದಾಗ ಗೂಡಿನಿಂದ ಹೊರಬಂದು ತನ್ನ ವರನನ್ನಾರಿಸುವ ದಿಬ್ಬಣ ಹೊರಡುತ್ತದೆ. ರಾಣಿನೊಣವು ಗೂಡಿನಿಂದ ಹೊರಬಂದು ಹಾರಿದೊಡನೆ ನೂರಾರು ಗಂಡುನೊಣಗಳು ಅದನ್ನು ಹಿಂಬಾಲಿಸುತ್ತವೆ. ಯಾವ ಗಂಡುನೊಣವು ಹಾರಾಟದಲ್ಲಿ ರಾಣಿನೊಣವನ್ನು ಸೋಲಿಸಿ ಹಿಡಿಯುವುದೋ ಅದರೊಡನೆ ರಾಣಿನೊಣವು ಗರ್ಭವತಿಯಾಗುತ್ತದೆ. ಜೋಡಿಯಾದ ನಂತರ ಅದು ಹಿಂತಿರುಗಿ ಬಂದು ಗೂಡಿನ ತನ್ನ ಕುಟುಂಬವನ್ನು ಸೇರಿ ಒಂದೆರಡು ದಿವಸಗಳ ವಿಶ್ರಾಂತಿ ಪಡೆದು ತರುವಾಯ ಎರಿಯ ಕಣಗಳಲ್ಲಿ ಮೊಟ್ಟೆಗಳನ್ನಿಡುವ ಕೆಲಸವನ್ನು ಪ್ರಾರಂಭಿಸುತ್ತದೆ. ಸಾಮಾನ್ಯವಾಗಿ ರಾಣಿನೊಣವು ಗಂಡುನೊಣದೊಡನೆ ಒಮ್ಮೆ ಮಾತ್ರ ಜೋಡಿಯಾಗಿ ನಂತರ ಅದು ಸದಾ ಗರ್ಭಿಣಿಯಾಗಿಯೇ ಇರುತ್ತದೆ. ರಾಣಿನೊಣದೊಂದಿಗೆ ಜೋಡಿಯಾದ ಗಂಡುನೊಣವು ಕೂಡಲೇ ಸಾಯುತ್ತದೆ. ರಾಣಿ ಜತೆಯಲ್ಲಿ ಹಾರಿದ ಇತರ ಗಂಡುನೊಣಗಳು ಗೂಡಿಗೆ ಹಿಂತಿರುಗುತ್ತದೆ.

ಒಂದು ರಾಣಿನೊಣವು ಎರಡು ಮೂರು ವರ್ಷದವರೆಗೂ ಜೀವಿಸುವುದಿದೆ. ಮೊದಲನೆಯ ವರ್ಷ ಅದು ಕೆಲವು ಲಕ್ಷ ಮೊಟ್ಟೆಗಳನ್ನಿಡಬಲ್ಲದು. ನಂತರ ಅದರ ಶಕ್ತಿ ಕಡಿಮೆಯಾಗುತ್ತಾ ಬಂದು, ಅದಕ್ಕೆ ಮೊಟ್ಟೆಗಳನ್ನಿಡಲು ಅಸಾಧ್ಯವಾಗುತ್ತದೆ. ಆದುದರಿಂದ ಜೇನು ಕುಟುಂಬದ ಅಭಿವೃದ್ಧಿಯು ಕಡಿಮೆಯಾದಂತೆ ಪ್ರತಿ ವರ್ಷ ಹಳೆ ರಾಣಿಯನ್ನು ತೆಗೆದು ಹೊಸ ರಾಣಿಯನ್ನು ಕುಟುಂಬಕ್ಕೆ ಕೊಡುವುದು ಉತ್ತಮ ಮತ್ತು ಲಾಭದಾಯಕವಾದ ಕೆಲಸ.

**ಕೆಲಸಗಾರ ನೊಣ**

ರಾಣಿನೊಣ ಮತ್ತು ಗಂಡುನೊಣಗಳ ಹೊರತು ಜೇನು ಕುಟುಂಬದಲ್ಲಿರುವ ಎಲ್ಲ ನೊಣಗಳೂ ಕೆಲಸಗಾರ ನೊಣಗಳಾಗಿವೆ. ಇವು ಸಂಪೂರ್ಣವಾಗಿ ಬೆಳೆಯದ ಹೆಣ್ಣು ನೊಣಗಳು. ಇವು ರಾಣಿ ಮತ್ತು ಗಂಡುಗಳಿಗಿಂತ ಚಿಕ್ಕವು ಒಂದು ಜೇನುಗೂಡಿನಲ್ಲಿ ಇವುಗಳ ಸಂಖ್ಯೆಯೇ ಅಧಿಕವಾಗಿರುವುವು. ಇವುಗಳಿಗೆ ತಮ್ಮ ಶರೀರದ ಹಿಂಬದಿಯ ಕೊನೆಯ ಭಾಗದಲ್ಲಿ ಚುಚ್ಚುವ ಕೊಂಡಿಯಿದೆ. ಜೇನು ಮತ್ತು ಪರಾಗ ಸಂಗ್ರಹ ಮುಂತಾದ ಎರಿಗಳನ್ನು ತಯಾರಿಸುವುದು. ಎಳೆ ಮರಿಗಳಿಗೆ ಆಗಾಗ ಆಹಾರ ತಿನ್ನಿಸಿ ಸಾಕುವುದು. ವೈರಿಗಳಿಂದ ಕುಟುಂಬವನ್ನು ರಕ್ಷಿಸುವುದು ಇವೇ ಮೊದಲಾದ ಕುಟುಂಬದ ಹೆಚ್ಚಿನ ಎಲ್ಲಾ ಕೆಲಸಗಳನ್ನು ಇವು ನಿರ್ವಹಿಸುತ್ತವೆ.

ಕೆಲಸಗಾರ ನೊಣವು ರಾಣಿಯಿಡುವ ಹೆಣ್ಣು ಮೊಟ್ಟೆಯಿಂದಲೇ ಜನಿಸುವುದಾದರೂ ಅದು ಬೆಳೆಯುವ ಎರಿಯ ಕಣವು ಚಿಕ್ಕದಾಗಿದ್ದು ಮತ್ತು ಸೇವಿಸುವ ಆಹಾರವೂ ಸಾಮಾನ್ಯ ಥರದ್ದಾಗಿರುವ ಕಾರಣ. ಅದು ಸಂಪೂರ್ಣ ಬೆಳೆಯದ ಹೆಣ್ಣು ನೊಣವೇ ಆಗಿರುತ್ತದೆ. ಮೊಟ್ಟೆಯಿಡಲ್ಪಟ್ಟ ಇಪ್ಪತ್ತೊಂದನೇ ದಿನ ಕೆಲಸಗಾರ ನೊಣ ತನ್ನ ಕೋಶಾವಸ್ಥೆಯನ್ನು ಬಿಟ್ಟು ಎರಿಯ ಕಣದ ಮುಚ್ಚಳವನ್ನು ಭೇದಿಸಿ ಸಂಪೂರ್ಣ ಬೆಳೆದ ಕೆಲಸಗಾರ ನೊಣವಾಗಿ ಹೊರಬರುತ್ತದೆ. ಕಣದಿಂದ ಹೊರಬಂದ ಒಂದು ವಾರದ ತನಕ ಅದು ಗೂಡಿನೊಳಗೆ ಇದ್ದು, ಎಳೆಮರಿಗಳಿಗೆ ಆಹಾರ ಕೊಡುವುದು ಎರಿಗಳನ್ನು ತಯಾರಿಸುವುದು, ಗೂಡನ್ನು ನಿರ್ಮಲವಾಗಿ ಇಡುವುದು ಇವೇ ಮೊದಲಾದ ಕೆಲಸಗಳನ್ನು ಮಾಡುತ್ತಿರುತ್ತದೆ. ಅನಂತರ ಅದು ಗೂಡಿನಿಂದ ಹೊರಬಂದು ಹಾರಲು ಪ್ರಾರಂಭಿಸುತ್ತದೆ. ಗೂಡಿನಿಂದ ದೂರ ಹಾರಿ ಹೋಗುವ ಮೊದಲು ಗೂಡಿರುವ ಸ್ಥಳವನ್ನು ಪರಿಚಯಿಸಿಕೊಳ್ಳಲು ಒಂದೆರಡು ಸಲ ಗೂಡಿನ ಸುತ್ತ ಹಾರಿ ನಂತರ ಪುಷ್ಪರಸ ಮತ್ತು ಪರಾಗ ಸಂಗ್ರಹಕ್ಕಾಗಿ ಹೋಗುತ್ತದೆ.

**ಎರಿಗಳ ತಯಾರಿ :**

ಕೆಲಸಗಾರ ನೊಣಗಳು ತಮ್ಮ ಶರೀರದ ಅಡಿ ಭಾಗದ ಪದರುಗಳೆಡೆಯಿಂದ ಒಸರುತ್ತಿರುವ ಜೇನು ಮಯಣವನ್ನು ತಮ್ಮ ಕಾಲುಗಳ ಸಹಾಯದಿಂದ ಕೆರೆದು ತೆಗೆದು ಎರಿಗಳನ್ನು ತಯಾರಿಸುತ್ತವೆ. ಒಂದು ಬರಿದಾದ ಹೊಸ ಎರಿಯನ್ನು ಬೆಳಕಿನ ಎದುರಾಗಿ ಹಿಡಿದು ಸೂಕ್ಷ್ಮವಾಗಿ ನೋಡಿದರೆ ಎರಿಯ ಎರಡೂ ಬದಿಗಳಲ್ಲಿಯೂ ಜೇನನ್ನು, ಪರಾಗವನ್ನು ಶೇಖರಿಸಿಡಲು ಮತ್ತು ಮೊಟ್ಟೆಗಳನ್ನಿಡಲು ಅನುಕೂಲವಾದ ಆರು ಬದಿಗಳಿರುವ ಮತ್ತು ಕಣಗಳ ತಳದಲ್ಲಿ ಮಯಣ ತೆಳುವಾದ ತಳಹದಿಯಿರುವ ಶಾಸ್ತ್ರೀಯ ರೀತಿಯ ರಚನಾ ಕೌಶಲ್ಯವು ಕಂಡುಬರುತ್ತದೆ. ಅದೇ ಕಡಿಮೆ ಮಯಣವನ್ನು ಉಪಯೋಗಿಸಿ ಕಡಿಮೆ ಸ್ಥಳದಲ್ಲಿ ಪ್ರತೀ ಹೆಚ್ಚು ಜೇನನ್ನು ಶೇಖರಿಸಿಡುವ ಎಲ್ಲ ಸಾಧನೆಯೂ ಎರಿಯಲ್ಲಿ ತೋರುತ್ತದೆ.

**ಆಹಾರ ಸಂಗ್ರಹ**

ಜೇನು ನೊಣಗಳು ಪುಷ್ಪರಸ ಮತ್ತು ಪರಾಗವನ್ನು ಬೇಸಿಗೆ ದಿನಗಳಲ್ಲಿ ಶ್ರಮಪಟ್ಟು ಸಂಗ್ರಹಿಸಿ,

ಎರಿಗಳ ಕಣಗಳಲ್ಲಿ ಶೇಖರಿಸಿಕೊಳ್ಳುತ್ತವೆ. ಕೆಲಸಗಾರ ನೊಣದ ಹಿಂದಿನ ಎರಡು ಕಾಲುಗಳ ಸಂದುಗಳಲ್ಲಿ ಪರಾಗಕೋಶ ಎಂಬ ಎರಡು ಭಾಗಗಳಿರುತ್ತವೆ. ಹೊಟ್ಟೆಭಾಗದಲ್ಲಿ ರಸಕೋಶವೆಂಬ ಚೀಲ ಇರುತ್ತದೆ. ನೊಣ ಪುಷ್ಪವನ್ನು ಸಂದರ್ಶಿಸಿ ದೊಡನೆ ಆ ಪುಷ್ಪದಲ್ಲಿರುವ ಪರಾಗಾಣಗಳನ್ನು ತನ್ನ ಮುಂದಿನ ಕಾಲುಗಳ ಸಹಾಯದಿಂದ ಹಿಂದಿನ ಕಾಲುಗಳ ಮಧ್ಯದಲ್ಲಿರುವ ಪರಾಗಕೋಶಗಳಲ್ಲಿ ಸಾಧ್ಯವಾದಷ್ಟು ಒತ್ತಿ ತುಂಬಿಕೊಳ್ಳುತ್ತದೆ. ಮತ್ತು ಪುಷ್ಪದ ತಳದಲ್ಲಿರುವ ಪುಷ್ಪರಸ (ಮಕರಂದ) ವನ್ನು ತನ್ನ ಉದ್ದವಾದ ನಾಲಿಗೆಯಿಂದ ಹೀರಿ ರಸಕೋಶದೊಳಗೆ ಸಂಗ್ರಹಿಸಿಕೊಳ್ಳುತ್ತದೆ. ತನಗೆ ಕೊಂಡುಹೋಗಲು ಸಾಧ್ಯವಾದಷ್ಟು ಪರಾಗ ಮತ್ತು ಪುಷ್ಪರಸ ಸಂಗ್ರಹವಾದ ನಂತರ ಅದು ಹಾರಿ ಗೂಡನ್ನು ಸೇರಿ ಗೂಡಿನಲ್ಲಿರುವ ಇತರ ನೊಣಗಳ ಸಹಾಯದಿಂದ ಎರಿಯ ಕಣದಲ್ಲಿ ತುಂಬಿಸುತ್ತದೆ. ಜೇನುನೊಣವು ಪುಷ್ಪದಿಂದ ಗೂಡಿಗೆ ಹಾರಿಬರುವ ಪ್ರಯಾಣದ ಸಮಯ ಅದರ ಮೈಶಾಖದಿಂದ ರಸಕೋಶದಲ್ಲಿರುವ ಪುಷ್ಪರಸವು ರಾಸಾಯನಿಕ ಕ್ರಿಯೆಯಿಂದ ಜೇನಾಗಿ ಪರಿವರ್ತನೆಯಾಗುತ್ತದೆ.

**ಕುಟುಂಬ ರಕ್ಷಣೆ**

ಕುಟುಂಬವನ್ನು ಆಕ್ರಮಿಸಿ ಬರುವ ವೈರಿಗಳನ್ನು ತಮ್ಮ ಶರೀರದ ಕೊನೆಯ ಭಾಗದಲ್ಲಿರುವ ಮುಳ್ಳಿನಿಂದ ಚುಚ್ಚುತ್ತವೆ. ಕಾಡಿನಿಂದ ತರುವಾಗ ಸಂಸಾರ ಕೋಣೆಗೆ ಸಾಗಿಸುವಾಗ ತುಡುವೆ ಜೇಸು ಚುಚ್ಚಬಹುದು. ಚುಚ್ಚಿದ ಕೂಡಲೇ ನೊಣದ ಶರೀರದಿಂದ ವಿಷಚೀಲವಿರುವ ಮುಳ್ಳಿನ ಜಾಗವು ಕಳಚಿ ಹೊರಬರುವುದರಿಂದ ಆ ನೊಣವು ಅನಂತರ ಜೀವಿಸಲಾರದು. ಜೇನುನೊಣ ಚುಚ್ಚಿದ ವೈರಿಯ ಶರೀರವು ಅತಿಯಾಗಿ ನೋವು ಉಂಟಾಗಿ ಆ ಭಾಗವು ಊದಲಾರಂಭಿಸುವುದು.

**ವಿಷವೂ ಒಂದು ಔಷಧ :**

ಜೇನುನೊಣದ ಮುಳ್ಳಿನ ವಿಷವು ವಾತರೋಗಕ್ಕೆ ಉಪಯುಕ್ತವೆಂದು ಅದನ್ನು ಸಂಗ್ರಹಿಸಿ ಉಪಯೋಗಿಸುತ್ತಾರೆ. ಇನ್ನು ಕೆಲವರು ಜೇನುನೊಣಗಳಿಂದ ಚುಚ್ಚಿಸಿಯೇ ಔಷಧಿಯನ್ನು ಪಡೆಯುತ್ತಾರೆ.

**ಗೂಡಿನ ಸ್ವಚ್ಛತೆ :**

ಮಣ್ಣಿನ ಬಿಲದಿಂದ ಅಥವಾ ಮರದ ಪೊಟರೆಯಿಂದ ಜೇನು ಕುಟುಂಬವನ್ನು ಹಿಡಿದು, ಗೂಡಿಗೆ ವರ್ಗಾಯಿಸಿದ ಒಂದೆರಡು ದಿನಗಳಲ್ಲಿ ಎರಿಗಳನ್ನು ಚೌಕಟ್ಟುಗಳಿಗೆ ಕಟ್ಟಲು ಉಪಯೋಗಿಸಿದ ಬಾಳೆ ನಾರನ್ನು ನಾಲ್ಕಾರು ನೊಣಗಳು ಕೂಡಿ ಕತ್ತರಿಸಿ ಹೊರ ಎಸೆಯುತ್ತವೆ. ಅಲ್ಲದೇ ಗೂಡಿನಲ್ಲಿ ಸತ್ತು ಬಿದ್ದ ಅನೇಕ ಮರಿಗಳನ್ನು ಹೊರಚೆಲ್ಲುತ್ತವೆ. ಗೂಡನ್ನು ಸದಾ ಸ್ವಚ್ಛವಾಗಿರಿಸುತ್ತವೆ.

**ಹವಾ ನಿಯಂತ್ರಣ :**

ಬೇಸಿಗೆ ಕಾಲದಲ್ಲಿ ಗೂಡಿನಲ್ಲಿ ಉಷ್ಣತೆ ಹೆಚ್ಚಾಗಿರುವದರಿಂದ ಗೂಡಿನ ಬಾಗಿಲಿನ ಹೊರಗೆ ಅನೇಕ ಜೇನುನೊಣಗಳು ಕುಳಿತುಕೊಂಡು ತಮ್ಮ ರೆಕ್ಕೆಗಳಿಂದ ತಂಪಾದ ಗಾಳಿಯನ್ನು ಗೂಡಿನೊಳಗೆ

ಪ್ರವೇಶಿಸುವಂತೆ ಮಾಡುತ್ತದೆ. ಇದರಿಂದ ಗೂಡಿನೊಳಗೆ ಉಷ್ಣತೆಯು ಒಂದೇ ರೀತಿಯಾಗಿ ಇರುತ್ತದೆ.

**ಶೋಧನಾ ನೃತ್ಯ :**

ಜೇನುನೊಣವು ವಿಪುಲವಾಗಿ ಮಧು(ಮಕರಂದ) ಎಲ್ಲಿದೆ ಎಂಬುದು ಶೋಧಿಸಿ ಹಿಂತಿರುಗಿದಾಗ ಅವು ಎರಿಗಳ ಮೇಲೆ ವಿವಿಧ ಭಂಗಿಯಲ್ಲಿ ನೃತ್ಯ ಮಾಡುತ್ತಾ ಚಲಿಸುತ್ತವೆ. ಈ ನೃತ್ಯದಿಂದ ಇನ್ನುಳಿದ ಜೇನುಗಳು ಮಕರಂದ ಎಲ್ಲಿದೆ ಎಂಬುದನ್ನು ತಿಳಿದು ಕೊಳ್ಳುತ್ತವೆ.

**ದೀರ್ಘ ಜೀವಿಗಳಲ್ಲ :**

ಕೆಲಸಗಾರ ನ್ನೊಣದ ವಯಸ್ಸು ಕೇವಲ ೩-೪ ತಿಂಗಳು. ಏಕೆಂದರೆ ಇವು ಆಹಾರ ಸಂಗ್ರಹಣೆಗೆ ಹೆಚ್ಚು ಶ್ರಮವಹಿಸಿ, ಕೆಲಸ ಮಾಡುವುದರಿಂದ ಇವುಗಳ ಆಯುಷ್ಯ ಕಡಿಮೆ. ಈ ಜೇನುನೊಣಗಳು ಎಂದೂ ಸೋಮಾರಿಗಳಾಗಿ ಬದುಕಲಾರವು.

**ಗಂಡುನೊಣ**

ಗಂಡುನೊಣಗಳು ದುಂಡಾಗಿದ್ದು, ತುಂಬಾ ಕಪ್ಪಾಗಿರುತ್ತವೆ. ರಾಣಿನೊಣಕ್ಕಿಂತ ಸ್ವಲ್ಪ ಚಿಕ್ಕವಾಗಿದ್ದು, ಕೆಲಸಗಾರ ನೊಣಕ್ಕಿಂತ ದೊಡ್ಡವು ಇದರ ಹಿಂಭಾಗವು ಸ್ವಲ್ಪ ಉರುಟಾಗಿದ್ದು, ರೆಕ್ಕೆಗಳು ಶರೀರದ ಮುಕ್ಕಾಲು ಭಾಗವನ್ನು ಮುಚ್ಚಿರುತ್ತದೆ. ಇದಕ್ಕೆ ಮಧುಕೋಶವಾಗಲಿ ಪರಾಗವನ್ನು ತರುವ ಅಂಗಾಂಗಗಳು ಇರುವದಿಲ್ಲ. ಇವುಗಳಿಗೆ ಶರೀರದಲ್ಲಿ ಚುಚ್ಚುವ ಕೊಂಡಿಗಳಿರುವದಿಲ್ಲ. ಇವು ಗೂಡಿನಲ್ಲಿ ಸಂಗ್ರಹಿಸಿಟ್ಟ ಜೇನನ್ನು ತಿಂದು ಸುಖವಾಗಿರುತ್ತವೆ. ಇವುಗಳ ಕೆಲಸವೆಂದರೆ ಹೊಸ ರಾಣಿಯ ಜನನದ ನಂತರ ಅದರೊಡನೆ ಜೋಡಿಯಾಗುವ ಕೆಲಸ. ಗಂಡುನೊಣಕ್ಕೆ ಯಾವ ಗೂಡಿಗೆ ಹೋದರೂ ಸ್ಥಳವಿದೆ. ಅದರ ಆಯುಷ್ಯವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಇವುಗಳ ಅಗತ್ಯವು ಗೂಡಿಗೆ ಇಲ್ಲದಾಗ ಮತ್ತು ಆಹಾರದ ಅಭಾವ ತಲೆದೋರುವ ಸ್ಥಿತಿ ಉಂಟಾದಾಗ ಕೆಲಸಗಾರ ನೊಣಗಳು ಅವುಗಳನ್ನು ಕೊಂದುಹಾಕುತ್ತವೆ. ಗಂಡುನೊಣವು ರಾಣಿಯೊಡನೆ ಜೋಡಿಯಾಗಿ ಸ್ವಲ್ಪವೇ ಸಮಯದಲ್ಲಿ ಸತ್ತು ಹೋಗುವುದು. ಇದಕ್ಕೆ "ರಾಣಿಯ ದಿಬ್ಬಣ ಹಾರಾಟ ಗಂಡಿನ ಸ್ಮಶಾನ ಯಾತ್ರೆ" ಎಂದು ಕರೆಯುತ್ತಾರೆ. ರಾಣಿಯು ಮೊಟ್ಟೆ ಇಟ್ಟು ೨೩ ರಿಂದ ೨೪ ದಿವಸಗಳಲ್ಲಿ ಕಣದಿಂದ ನೊಣವಾಗಿ ಹೊರಬರುತ್ತವೆ. ತದನಂತರ ಎರಡು ಮೂರು ವಾರದವರೆಗೆ ಬೆಳೆದು ರಾಣಿಯನ್ನು ಸಂಪರ್ಕಿಸುವ ಪ್ರಾಯದ ಮಟ್ಟಕ್ಕೆ ಬರುತ್ತದೆ.

**ಸಂಗ್ರಹಿಸಿದ ಜೇನಿನ ವರ್ಗೀಕರಣ**

೧) ಹೆಜ್ಜೇನು ಸಂಗ್ರಹಿಸಿದ ತುಪ್ಪವು ಸಿಹಿ-ಹುಳಿ ಮಿಶ್ರಣವಾಗಿರುತ್ತದೆ. ಇದು ಗಟ್ಟಿ ತುಪ್ಪವಾಗಿರದೇ ಬಹುತೇಕ ತೆಳ್ಳಗಾಗಿರುತ್ತದೆ. ಸಂತೆಯಲ್ಲಿ ಇದರ ಬೆಲೆ ಬಾಟಲಿಯೊಂದಕ್ಕೆ ೪೦ ರೂಪಾಯಿಯಿಂದ ೫೦ ರೂಪಾಯಿಗಳಿಗೆ ಮಾರಾಟ ಮಾರುತ್ತಾರೆ. ಈ ಜೇನನ್ನು ಬಹುಕಾಲದವರೆಗೆ ಇಡಲಾಗದು ಇಟ್ಟರೂ ಅದು ಹುಳಿಯಾಗುವ ಸಂಭವವಿರುತ್ತದೆ.

೨) ತೊಡುವೆ ಜೇನು ಕುಟುಂಬ ಸಂಗ್ರಹಿಸುವ ಜೇನು ಆಹಾರಕ್ಕೂ, ಔಷಧಕ್ಕೂ ಬಹು ಉಪಯುಕ್ತ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಟವಾಳದಿಂದ ತಯಾರಿಸಲ್ಪಟ್ಟ ಜೇನುತುಪ್ಪವು ಬಹಳ ಬೇಡಿಕೆ ಇರುವಂತಹದಾಗಿದೆ. ಈ ಜೇನು ಬಹುತೇಕ ಸಿಹಿಯಾಗಿಯೇ ಇರುತ್ತದೆ. ಸಂತೆಯಲ್ಲಿ ಇದರ ಬೆಲೆ ಬಾಟಲಿಯೊಂದಕ್ಕೆ ಸುಮರು ೩೫೦ ರಿಂದ ೪೦೦ ರೂಪಾಯಿಗಳವರೆಗೆ ಮಾರಲ್ಪಡುತ್ತದೆ. ಇದನ್ನು ಬಿಸಿಲಿನಲ್ಲಿ ಸಂಸ್ಕರಿಸಿ ಇಟ್ಟಲ್ಲಿ ೧೦ ವರ್ಷದವರೆಗೂ ಕೆಡದೆ ಉಳಿಯುತ್ತದೆ.

೩) ಕೋಲ್‌ಜೇನು ಸಂಗ್ರಹಿಸುವ ಜೇನು ಬಹಳ ರುಚಿಯಾಗಿರುತ್ತದೆ. ಇದು ಲಾಭದಾಯಕ ವೃತ್ತಿಯಾಗದೇ ಇರುವುದಕ್ಕೆ ಇವು ಸಂಗ್ರಹಿಸುವ ಜೇನಿನ ಪ್ರಮಾಣವೇ ಕಡಿಮೆಯಾಗಿರುತ್ತದೆ.

೪) ಮುಜಂಟಿ ಜೇನು ಕೂಡಾ ಸ್ವಲ್ಪ ಹುಳಿ ಸಿಹಿ ರುಚಿಯಾಗಿರುತ್ತದೆ. ಇವು ಸಂಗ್ರಹಿಸುವ ಜೇನು ಕಡಿಮೆ ಪ್ರಮಾಣದಿರುತ್ತದೆ. ಅಲ್ಪಪ್ರಮಾಣದಲ್ಲಿ ದೊರೆಯುವ ಈ ಜೇನನ್ನು ಬಹುತೇಕ ಔಷಧಕ್ಕೆ ಉಪಯೋಗಿಸುತ್ತಾರೆ.

**ಉಪ ಉತ್ಪನ್ನಗಳು : ಉಪಯೋಗಗಳು**

**ಜೇನುಮೇಣ :** ಜೇನು ನೊಣ ಎರಿಗಳನ್ನು ರಚಿಸುವಾಗ ಬಳಸುವ ವಸ್ತುವೇ ಮೇಣ, ಇದು ಜೇನು ಉಪ ಉತ್ಪನ್ನವಾಗಿದೆ. ಜೇನುಮೇಣವನ್ನು ವಿವಿಧ ಕೈಗಾರಿಕೆಗಳಲ್ಲಿ ಉಪಯೋಗಿಸುತ್ತಾರೆ. ಅದರ ಉಪಯೋಗಗಳು ಕೆಳಗಿನಂತಿವೆ :

೧) ಇದರ ಮುಖ್ಯ ಉಪಯೋಗ, ಮುಖಕ್ಕೆ ಹಚ್ಚುವ ಸ್ನೋ ಮತ್ತು ಕ್ರೀಮ್, ಮುಲಾಮ್, ತುಟಿಯ ಬಣ್ಣ ಮೊದಲಾದವುಗಳನ್ನು ತಯಾರು ಮಾಡಲು ಉಪಯೋಗಿಸುತ್ತಾರೆ.

೨) ಚರ್ಚುಗಳಲ್ಲಿ ಹೊತ್ತಿಸುವ ಮೇಣದ ಬತ್ತಿಗಳ ತಯಾರಿಕೆಗೆ ಉಪಯೋಗಿಸುವರು.

೩) ಜೇನು ಮೇಣ ಕರಗುವ ಉಷ್ಣತೆ ಬೇರೆ ಮೇಣಗಳಿಗಿಂತ ಅಧಿಕವಾಗಿರುವುದರಿಂದ ಈ ಮೇಣದ ಬತ್ತಿಯನ್ನು ಹತ್ತಿಸಿದಾಗ ಅವು ಬಗ್ಗುವುದಿಲ್ಲ.

೪) ಹಳ್ಳಿಗಳಲ್ಲಿ ದೋಸೆ ಮಾಡುವಾಗ ಎಣ್ಣೆಯಂತೆ ಜೇನು ಮೇಣವನ್ನು ಉಪಯೋಗಿಸುತ್ತಾರೆ.

೫) ಜೇನು ಮೇಣದಿಂದ ಮಾಡಿದ ಮೇಣ ಬತ್ತಿಗಳಿಗೆ ಹೊಗೆ ಬರುವದು ಕಡಿಮೆ.

೬) ಜೇನು ಸಾಕಾಣಿಕೆಯಲ್ಲಿ ಉಪಯೋಗಿಸುವ ಮೇಣದ ಹಾಳೆಗಳನ್ನು ಜೇನು ಮೇಣಗಳಿಂದ ತಯಾರಿಸುತ್ತಾರೆ.

೭) ಮರದ ಸಾಮಾನು ಮತ್ತು ಗೋಡೆಗಳಿಗೆ ಬಳಿಯುವ ಬಣ್ಣ, ವಾರ್‌ನಿಷ್ ತಯಾರಿಕೆಯಲ್ಲಿ ಇದರ ಉಪಯೋಗ ಬಹಳವಿದೆ.

೮) ಪಾದರಕ್ಷೆಗೆ ಬಳಿಯುವ ಬಣ್ಣ, ಅಚ್ಚು ತಯಾರಿಕೆ, ಪ್ರತಿಮೆಗಳನ್ನು ಮಾಡುವದು. ಮುಂತಾದ ಉದ್ದಿಮೆಗಳಲ್ಲಿ ಮೇಣದ ಬಳಕೆಯಿದೆ.

೯) ದಂತ ಚಿಕಿತ್ಸೆಯಲ್ಲಿ ಬೇಕಾಗುವ ಹಲವು ವಸ್ತುಗಳ ತಯಾರಿಕೆಯಲ್ಲೂ, ಜೇನು ಮೇಣದ ಬಳಕೆ ಇದೆ.

೧೦) ಚರ್ಮ ಹದ ಮಾಡಲು ಜೇನಿನ ಮೇಣ ಉಪಯೋಗಿಸುತ್ತಾರೆ.

೧೧) ಪಾತ್ರೆ ಕಲಾಯಿ ಮಾಡುವಾಗ ಹಾಗೂ ಪಾತ್ರೆಗಳು ತೂತು ಬಿದ್ದಾಗ, ಅದನ್ನು ಸರಿಪಡಿಸಲು ಈ ಜೇನಿನ ಮೇಣವನ್ನು ಉಪಯೋಗಿಸುತ್ತಾರೆ.

೧೨) ಬಂಗಾರದ ತಯಾರಿಕೆಯಲ್ಲಿ ಜೇನಿನ ಮೇಣ ಬಹು ಉಪಯೋಗ.

**ಸಂಗ್ರಹಿಸಿದ ವಸ್ತುಗಳ ಹಂಚಿಕೆ ಮತ್ತು ವಿಲೇವಾರಿ**

ಜೇನು ಸಂಗ್ರಹಿಸಿದ ವ್ಯಕ್ತಿಗಳು, ತಾವು ಸಂಗ್ರಹ ಮಾಡಿದ ಜೇನನ್ನು ಸಂತೆಗಳಲ್ಲಿ ಮಾರಾಟ ಮಾಡುತ್ತಾರೆ. ಜೇನು ಸಂಗ್ರಹಿಸುವ ಎಲ್ಲ ವ್ಯಕ್ತಿಗಳಿಗೂ ಜೇನನ್ನು ವ್ಯವಸ್ಥಿತವಾಗಿ ಸಂಗ್ರಹಿಸಲು ಬರುತ್ತದೆ ಎಂದು ಹೇಳಲಿಕ್ಕೆ ಆಗದು. ಬಹುತೇಕ ಸಿದ್ದಿ ಜನಾಂಗದವರು. ಅವಸರ-ಅವಸರವಾಗಿ ಕಾಡಿನಲ್ಲಿ ಹೆಜ್ಜೇನನ್ನು ಸಂಗ್ರಹಿಸಿ, ಯೋಗ್ಯ ಬೆಲೆ ಪಡೆಯದೇ ಮಾರಾಟ ಮಾಡುತ್ತಾರೆ. ಇವರು ಪಟ್ಟಶ್ರಮಕ್ಕೆ ಯೋಗ್ಯವಾದಂತಹ ಬೆಲೆ ಸಿಗುವುದಿಲ್ಲ. ಇವರಿಂದ ಕನಿಷ್ಠ ಬೆಲೆಗೆ ಸ್ವೀಕರಿಸಿದ ಮಧ್ಯವರ್ತಿಗಳು ಇದರ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುತ್ತಾರೆ.

ಕೆಲವೊಮ್ಮೆ ಆಯಾ ಪ್ರದೇಶದಲ್ಲಿರುವ ಜೇನು ವ್ಯವಸಾಯಗಾರರು ಸಹಕಾರಿ ಸಂಘಗಳಿಗೆ ಸಂಗ್ರಹಿಸಿದ ಜೇನನ್ನು ಮಾರಾಟ ಮಾಡುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವಾರು ಜೇನು ವ್ಯವಸಾಯಗಾರರ ಸಹಕಾರಿ ಸಂಘಗಳಿವೆ. ಅವುಗಳೆಂದರೆ :

| | | | | | |
|---|---|---|---|---|---|
| ೧) | ಜೇನು ವ್ಯವಸಾಯಗಾರರ ಸಹಕಾರಿ ಸಂಘ | | | | ಕುಮಟಾ |
| ೨) | ಜೇನು ವ್ಯವಸಾಯಗಾರರ ಸಹಕಾರಿ ಸಂಘ | | | | ಹೊನ್ನಾವರ |
| ೩) | ” | ” | ” | ” | ಶಿರ್ಶಿ |
| ೪) | ” | ” | ” | ” | ಸಿದ್ದಾಪುರ |
| ೫) | ” | ” | ” | ” | ಅಂಕೋಲಾ |
| ೬) | ” | ” | ” | ” | ಶಿರಾಲಿ |
| ೭) | ” | ” | ” | ” | ಕಾರವಾರ |

**ಸಂಗ್ರಹಿಸಿದ ಜೇನನ್ನು ಸಂರಕ್ಷಿಸುವ ವಿಧಾನ**

ಜೇನು ಹಾಳಾಗದಂತೆ ಶೇಖರಿಸುವದು ಅತಿ ಅಗತ್ಯ. ಗೂಡಿನ ಎರಿಗಳಲ್ಲಿ ಸರಿಯಾಗಿ ಪಕ್ವವಾದ ಜೇನನ್ನು ಸಂಗ್ರಹಿಸಿದಾಗ ಅದರಲ್ಲಿ ಇರಬಹುದಾದ ಹೆಚ್ಚಿನ ನೀರಿನ ಅಂಶವನ್ನು ಬಿಸಿಮಾಡಿ ತೆಗೆಯಬೇಕು. ಜೇನಿರುವ ಪಾತ್ರೆಯನ್ನು ಸೀದಾ ಒಲೆಯ ಮೇಲೆ ಇಟ್ಟು ಕಾಯಿಸಿದರೆ ಜೇನಿನಲ್ಲಿರುವ ವಿಶೇಷ ಆಹಾರ ಗುಣಗಳು, ಜೇನಿನ ಸುವಾಸನೆಯೂ ಹೋಗಬಹುದು. ಆದ್ದರಿಂದ ಜೇನನ್ನು ಈ ಮುಂದೆ ವಿವರಿಸುವ ರೀತಿಯಲ್ಲಿ ಕಾಯಿಸುವದು ಅಗತ್ಯ.

ಮೊದಲು ಜೇನನ್ನು ಬಿಸಿಮಾಡಲಿರುವ ಪಾತ್ರೆಗಿಂತ ಸ್ವಲ್ಪ ದೊಡ್ಡ ಪಾತ್ರೆಯನ್ನು ಒಲೆಯ ಮೇಲೆ ಇಟ್ಟು, ನೀರು ಕುದಿಸಿ, ಅದರ ಒಳತಳದಲ್ಲಿ ಕೆಲವು ಸಣ್ಣ ಇಟ್ಟಿಗೆ ತುಂಡುಗಳನ್ನಾಗಲಿ

ಸಣ್ಣಕಲ್ಲುಗಳನ್ನಾಗಲಿ ಇಟ್ಟು ಅವುಗಳ ಮೇಲೆ ಸರಿಯಾಗಿ ನಿಲ್ಲುವಂತೆ ಜೇನಿರುವ ಪಾತ್ರೆಯನ್ನಿಡಬೇಕು. ದೊಡ್ಡಪಾತ್ರೆಯೊಳಗೆ ನೀರು ಸಣ್ಣ ಪಾತ್ರೆಯೊಳಗಿನ ಜೇನಿನ ಮಟ್ಟಕ್ಕೆ ಸರಿಯಾಗಿರಬೇಕು. ಪಾತ್ರೆಯಲ್ಲಿ ಹಿಡಿಯುವಷ್ಟು ಜೇನನ್ನು ತುಂಬಿಸಬಾರದು. ಅನಂತರ ನೀರನ್ನು $145^{0}$ (ಡಿಗ್ರಿ) ಫ್ಯಾರನ್‌ಹೀಟ್ (ಉಷ್ಣ)ದಲ್ಲಿ ಅರ್ಧ ಗಂಟೆಯಷ್ಟು ಸಮಯ ಕಾಯಿಸಬೇಕು. ಹೀಗೆ ನೀರು ಕಾಯಿಸುವಾಗ ಜೇನನ್ನು ಸೌಟಿನಿಂದ ಆಗಾಗ ಕಲಕುತ್ತಿರಬೇಕು. ಹೀಗೆ ಕಲಕುತ್ತಿದ್ದರೆ ಜೇನು ಒಂದೇ ರೀತಿಯಾಗಿ ಬಿಸಿಯಾಗುತ್ತದೆ. ಮತ್ತು ಜೇನಿನಲ್ಲಿರಬಹುದಾದ ಮೇಣದ ತುಂಡುಗಳು ಮೇಲೆ ಬಂದು ತೇಲುತ್ತವೆ. ಅರ್ಧ ಗಂಟೆಯ ನಂತರ ಕಾಯಿಸಿ ಆರಿಸಿದ ಜೇನುತುಪ್ಪವನ್ನು ಬಿಳಿ ಬಟ್ಟೆಯಿಂದ ಶೋಧಿಸಿ ಬಾಟ್ಲಿಗಳಲ್ಲಾಗಲಿ, ಭರಣಿ ಅಥವಾ ಡಬ್ಬಿಗಳಲ್ಲಿ ತುಂಬಿಸಿ ಗಾಳಿ ಪ್ರವೇಶಿಸದಂತೆ ಮುಚ್ಚಳ ಹಾಕಬೇಕು. ಇಂಥ ಜೇನು ಹೆಚ್ಚು ಸಮಯ ಬಾಳಿಕೆ ಬರುತ್ತದೆ.

ಕೆಲವು ಕಡೆಯಲ್ಲಿ ಸಂಗ್ರಹಿಸಿದ ಜೇನನ್ನು ಏಳೆಂಟು ದಿನ ಪ್ರಖರವಾದ ಬಿಸಿಲಿನಲ್ಲಿ ಜೇನು ಸಂಗ್ರಹಿಸಿದ ಪಾತ್ರೆಯ ಬಾಯಿಗೆ ತೆಳುವಾದ ಬಟ್ಟೆಯನ್ನು ಕಟ್ಟಿ ಇಡಬೇಕು. ಹೀಗೆ ಮಾಡುವುದರಿಂದ ಜೇನಿನಲ್ಲಿರುವ ಕಲ್ಮಶಗಳು ಮೇಲಕ್ಕೆ ಬರುತ್ತವೆ. ಇದನ್ನು ಶೋಧಿಸಿ ಬಾಟ್ಲಿ ಅಥವಾ ಡಬ್ಬಿಗಳಲ್ಲಿ ಸಂಗ್ರಹಿಸಿ ಸಂರಕ್ಷಿಸಬಹುದು. ಈ ವಿಧಾನ ಅನುಸರಿಸುವದರಿಂದ ಜೇನು ಬಹಳ ಕಾಲ ಬಾಳಿಕೆ ಬರುತ್ತದೆ.

**ಜೇನುಗಳ ಸ್ವರೂಪ ಸ್ವಭಾವದ ಬಗ್ಗೆ ಜನಪದದ ತಿಳುವಳಿಕೆ**

ಜೇನುನೊಣಗಳ ಸಮಾಜದಲ್ಲಿ ಜಾತಿಭೇದಗಳಿದ್ದು ಗಂಡು, ಕೆಲಸಗಾರ ಮತ್ತು ರಾಣಿಗಳೆಂಬ ಮೂರು ಬಗೆಯ ನೊಣಗಳು ಇರುತ್ತವೆ.

**ಗಂಡುಹುಳ :** ಗಂಡುನೊಣ ಕೆಲಸಗಾರ ನೊಣಕ್ಕಿಂತ ದೊಡ್ಡದು. ಇದಕ್ಕೆ ಚುಚ್ಚು ಮುಳ್ಳಾಗಲಿ ಪರಾಗ ಅಥವಾ ಮಧುವನ್ನು ಸಂಗ್ರಹಿಸುವ ಸಾಮರ್ಥ್ಯವಿಲ್ಲ. ಇದರ ಕುಡಿಮೀಸೆಗಳಲ್ಲಿ ೧೨ ಖಂಡಗಳಿರುತ್ತವೆ. ಇದು ದುಂಡಾಗಿ ಮತ್ತು ಕಪ್ಪಾಗಿರುತ್ತದೆ. ಇದರ ಆಯುಷ್ಯ ನಿರ್ದಿಷ್ಟವಾಗಿ ಹೇಳಲು ಬರುವದಿಲ್ಲ. ಇವುಗಳಿಗೆ ದೊಡ್ಡದಾದ ಕಣ್ಣಿರುತ್ತವೆ. ಇದು ಸೋಮಾರಿ ಹುಳ. ಇದು ಮಧ್ಯಾಹ್ನ ಬಿಸಿಲು ಇರುವಾಗ ಮಾತ್ರ ಹೊರಬರುತ್ತದೆ. ಇದು ವಂಶಾಭಿವೃದ್ಧಿಗೆ ಸಹಾಯಕಕಾರಿಯಾಗಿದೆ.

**ರಾಣಿಹುಳ :** ಇದು ಗೂಡಿನ ತಾಯಿ, ದೊಡ್ಡಗಾತ್ರ ಮೈಬಣ್ಣ ಹೊಳೆಯುವ ಕಪ್ಪು, ಕಾಲುಗಳು ಅರಿಶಿನ ಬಣ್ಣದಿದೆ. ಮೈಮೇಲೆ ಅತೀ ಸೂಕ್ಷ್ಮ ರೋಮಗಳಿವೆ. ದೇಹದ ಅರ್ಧಭಾಗ ಮುಚ್ಚಿರುತ್ತದೆ. ಹೊಟ್ಟೆ ಉದ್ದವಾಗಿದೆ, ದೇಹದ ಕೊನೆಯಲ್ಲಿ ಮೊಟ್ಟೆಗಳನ್ನಿಡುವ ಮೊನಚಾದ ಕೊಳುವೆಯೊಂದಿದೆ. ಇದು ೨ ರಿಂದ ೫ ವರ್ಷತನಕ ಬದುಕಬಹುದು. ತನ್ನ ಜೀವನವನ್ನೆಲ್ಲಾ ವಂಶಾಭಿವೃದ್ಧಿಗೆ ತೊಡಗಿಸುವದು. ಇತರ ತಲೆ ಗುಂಡಾಗಿದೆ ಇದರ ಮೀಸೆಗಳಲ್ಲಿ ೧೩ ಖಂಡಗಳಿವೆ ಕಣ್ಣುಗಳು ಬಹಳ ಅಗಲವಿದೆ. ಇದು ಸುಮಾರು ಒಂದು ದಿನಕ್ಕೆ ೧೦೦೦ದಿಂದ ೩೦೦೦ದ ವರೆಗೆ ಮೊಟ್ಟೆ ಇಡುತ್ತವೆ.

**ಕೆಲಸಗಾರ ನೊಣ** : ಇದು ಎಲ್ಲಾ ಜೇನು ನೊಣಕ್ಕಿಂತಲೂ ಚಿಕ್ಕದು. ಜೇನು ನೊಣದ ಸಮಾಜದಲ್ಲಿ ಇವುಗಳ ಸಂಖ್ಯೆ ಹೆಚ್ಚು. ಇವೆಲ್ಲವೂ ಹೆಣ್ಣು ನೊಣಗಳು ಆದರೆ ಬಂಜೆಗಳು ಇವುಗಳ ಅಂಡಾಶಯ ಕ್ಷೀಣಿಸಿರುವದರಿಂದ ಇದಕ್ಕೆ ಸಂತಾನ ಅಭಿವೃದ್ಧಿ ಸಾಮರ್ಥ್ಯವಿಲ್ಲ. ಗಾತ್ರದಲ್ಲಿ ಚಿಕ್ಕವಾದರೂ ಸಮಾಜದ ಸಮಸ್ತ ಚಟುವಟಿಕೆಯನ್ನೆಲ್ಲಾ ಅವೇ ನಿರ್ವಹಿಸುವವು, ಬಹಳ ಚಟುವಟಿಕೆಯಿಂದ ಎಡಬಿಡದೇ ಕೆಲಸ ಮಾಡುತ್ತವೆ. ಇವುಗಳಿಗೆ ವಿಷದ ಮುಳ್ಳುಗಳಿವೆ.

**ಜನಪದರ ತಿಳುಳಿಕೆ**

ಜೇನುನೊಣಗಳನ್ನು ಕೆಣಕಿದರೆ ಅವು ರೊಚ್ಚಿಗೆದ್ದು, ಮನುಷ್ಯ, ಪ್ರಾಣಿ-ಪಕ್ಷಿಗಳೆನ್ನದೇ ಕಡಿಯುತ್ತವೆ. ಹಾಗೂ ಅವುಗಳಿಂದ ತಪ್ಪಿಸಿಕೊಳ್ಳಬೇಕಾದರೆ ತಲೆಯ ಮೇಲೊಂದು ಬಟ್ಟೆಯನ್ನು ಅಥವಾ ಕಂಬಳಿಯನ್ನು ಇಟ್ಟುಕೊಂಡು, ನೀರು ಹರಿಯುವ ಕಡೆಗೆ ಹೋಗಿ ನೀರಿನಲ್ಲಿ ಮುಳುಗಿ ಆ ಬಟ್ಟೆಯನ್ನು ತೇಲಿಬಿಡಬೇಕು. ಇಲ್ಲದಿದ್ದರೆ ಅವು ನಮ್ಮನ್ನು ಬಹುದೂರದವರೆಗೆ ಕಚ್ಚುತ್ತಾ ಅಟ್ಟಿಸಿಕೊಂಡು ಹೋಗುವವು.

ಜೇನು ಕುಟುಂಬಗಳಿಂದ ಕಚ್ಚಿಸಿಕೊಂಡರೆ ಕಚ್ಚಿದ ಭಾಗ ಊತಗೊಂಡು, ವಿಪರೀತ ನೋವು ಉಂಟಾಗುವದು.

ಜೇನು ಸಿಹಿಯಾಗಿರುವುದರಿಂದ, ಜನರು ಇದನ್ನು ತಮ್ಮ ದಿನನಿತ್ಯದ ತಿನ್ನುವ ಪದಾರ್ಥದಲ್ಲಿ ಉಪಯೋಗಿಸುವರು. ಅಲ್ಲದೇ ಹಲವಾರು ಕಾಯಿಲೆಗಳಾದ ಕೆಮ್ಮು, ನೆಗಡಿ, ದಮ್ಮು, ಶೀತ, ಕ್ಯಾನ್ಸರ್ ಮತ್ತು ಚರ್ಮರೋಗಕ್ಕೆ ಈ ಜೇನನ್ನು ಉಪಯೋಗಿ ಸುತ್ತಾರೆ. ಜೇನು ಸಾಕುವದು ಒಂದು ಮನೋಲ್ಲಾಸದ ಉದ್ಯೋಗ. ಜೇನುನೊಣಗಳು ಕ್ರಮಬದ್ಧ ಜೀವನ, ಪರಿಶ್ರಮದ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೂ ಅದನ್ನು ನೋಡಿದರೆ ಅದರಿಂದ ಉತ್ಸಾಹಿತನಾಗಿ ಮಾನವನು ತನ್ನ ಜೀವನದಲ್ಲಿ ಅದರಂತೆ ವ್ಯವಸ್ಥಿತವಾದ ಜೀವನ ಅಳವಡಿಸಿಕೊಳ್ಳಲು ಪ್ರಯತ್ನಪಟ್ಟು, ಸಾರ್ಥಕತೆಯನ್ನು ಪಡೆಯಲು ಸಾಧ್ಯವಾಗುವದು ಎಂಬುದು ಜನಪದರ ನಂಬಿಕೆ.

ಕೃಷಿಕನು ಜೇನು ಕುಟುಂಬಗಳನ್ನು ಬಾಡಿಗೆ ಪಡೆದು, ತನ್ನ ಹೊಲದಲ್ಲಿ ಇಟ್ಟುಕೊಂಡರೆ, ಬೆಳೆಗಳಲ್ಲಿ ಹೆಚ್ಚು ಉತ್ಪತ್ತಿಯು ಬರುತ್ತದೆ ಎಂಬುದನ್ನು ತಿಳಿದುಕೊಂಡಿದ್ದಾನೆ. ಜೇನುನೊಣಗಳ ಚುಚ್ಚುವ ಮುಳ್ಳಿನಲ್ಲಿರುವ ವಿಷವು ಔಷಧಿ ಗುಣಗಳಿಂದ ಕೂಡಿದೆ. ಇದು ವಾತರೋಗ, ನರಗಳ ದೌರ್ಬಲ್ಯತೆ, ಕೀಲುಗಳ ನೋವು ಕಾನ್ಸರ್‌ಗಳಿಗೆ ಚುಚ್ಚುಮದ್ದಿನಂತೆ ಉಪಯೋಗವಾಗುವದು.

ಜೇನುತುಪ್ಪವನ್ನು ದೇವರ ಕಾರ್ಯಗಳಿಂದ ಹಿಡಿದು ನಾನಾ ತರಹದ ಔಷಧಿಗಳ ತಯಾರಿಕೆಯಲ್ಲಿ ಬಳಸುವರು. ಇದನ್ನು ನಿಂಬೆಹಣ್ಣಿನ ಜೊತೆಯಲ್ಲಿ ಉಪಯೋಗಿಸಿದರೆ, ಬೊಜ್ಜನ್ನು ಕರಗಿಸಬಹುದು. ಇದರ ಉಪಯೋಗದಿಂದ ತೇಜಸ್ಸು ಬೆಳೆಯುತ್ತದೆ. ಶರೀರದ ಉಷ್ಣತೆಯನ್ನು ಹೆಚ್ಚಿಸಿ, ಚಳಿಯಿಂದ ದೂರ ಮಾಡುತ್ತದೆ. ಸುಟ್ಟಗಾಯಗಳಿಗೆ ಇದು ಶುದ್ಧ ಔಷಧಿ.

ಇದರಲ್ಲಿ ಕರಗಿದ ಸಕ್ಕರೆ ಇರುವುದರಿಂದ ಬಹುಮೂತ್ರ ಮತ್ತು ಸಿಹಿಮೂತ್ರ ಕಾಯಿಲೆಯವರಿಗೆ ಒಳ್ಳೆಯ ಔಷಧಿಯಾಗಿದೆ. ಹೃದಯ ಹಾಗೂ ಪಿತ್ತ ಸಂಬಂಧ ಕಾಯಿಲೆಗಳಿಂದ ಕೂಡಿದವರಿಗೆ

ಜೇನುತುಪ್ಪ ಒಳ್ಳೆಯದು. ಇದು ಗ್ಯಾಸ್ಟ್ರಿಕ್ ಕಾಯಿಲೆಗೂ ಉತ್ತಮ. ರಕ್ತದ ಒತ್ತಡದ ಕಾಯಿಲೆಯವರಿಗೆ, ನಿರ್ಬಲ ಹೃದಯದವರಿಗೆ ಇದು ಒಳ್ಳೆಯದು. ಕ್ಷಯರೋಗ, ವಿಷಮಶೀತ, ರೋಗಕ್ಕೆ ಜೇನುತುಪ್ಪ ಒಳ್ಳೆಯದು. ಚಿಕ್ಕಮಕ್ಕಳಿಗೆ ಮತ್ತು ಮುದುಕರಿಗೆ ಇದು ಒಳ್ಳೆಯ ಔಷಧಿಯಾಗಿದೆ ಎಂಬ ನಂಬಿಕೆ.

ಆಧುನಿಕ ಕಾಲದಲ್ಲಿ ವೈಜ್ಞಾನಿಕ ದೃಷ್ಟಿಯಲ್ಲಿ ಅವಲೋಕಿಸಿದಾಗ ಜೇನುನೊಣಗಳು ಸಸ್ಯವರ್ಗದಲ್ಲಿ ಪರಕೀಯ ಪರಾಗಸ್ಪರ್ಶ ಕಾರ್ಯ ನೇರವಾಗಿ ನೆರವೇರಿಸುವ ಹಣ್ಣು ಧಾನ್ಯ ಮತ್ತು ಬೀಜಗಳ ಉತ್ಪತ್ತಿಯನ್ನು ಹೆಚ್ಚಿಸುವದು. ಅಡಿಕೆ, ತೆಂಗುಗಳ ಹೂ ಪರಾಗಸ್ಪರ್ಶಕ್ಕೆ ಜೇನುಹುಳುಗಳು ಅಗತ್ಯ. ಆದ್ದರಿಂದ ಅಡಿಕೆ, ತೆಂಗುಗಳ ತೋಟದಲ್ಲಿ ಜೇನುಸಾಕಣೆ ಮಾಡುವ ರೂಢಿ. ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಂಡುಬರುತ್ತದೆ. ಜೇನುನೊಣಗಳು ಒಂದು ಬಗೆಯ ಉಪಯುಕ್ತ ಜೀವಿಗಳು. ಕಷ್ಟಪಟ್ಟು ಶ್ರದ್ಧೆಯಿಂದ ದುಡಿಯುತ್ತವೆ. ಇವುಗಳನ್ನು ಸಾಕುವದರಿಂದ ಹಾಗೂ ಇವಿರುವದರಿಂದ ಮನುಷ್ಯನಿಗೂ, ನಿಸರ್ಗಕ್ಕೂ ಅನೇಕ ಪ್ರಯೋಜನೆಗಳಿವೆ ನಮ್ಮ ದೇಶದ ಬಡತನವನ್ನು ಹೋಗಲಾಡಿಸಲು ಇದು ಒಂದು ಉತ್ತಮ ಗುಡಿಕೈಗಾರಿಕೆಯಾಗಿದೆ. ಅಲ್ಲದೇ ಸಾಕಷ್ಟು ಕೆಲಸದ ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ.

**ಪರ್ಯಾಯ ಅರ್ಥಗಳು :**

೧) ನಾಶ = ಗ್ರಾಮೀಣ ಪ್ರದೇಶಗಳಲ್ಲಿ ಪೂಜಿಸುವ ದೇವರು.

೨) ಮಿರಾಶಿ = ಊರ ಮುಖಂಡ ಎನ್ನುವ ಅರ್ಥದಲ್ಲಿ.

೩) ಎರಿ = ಜೇನುನೊಣಗಳು ಜೇನನ್ನು ಸಂಗ್ರಹಿಸಲು ಮೇಣದಿಂದ ಮಾಡಿಕೊಂಡ ಪೊರೆ.

***ಈ ಲೇಖನವನ್ನು ತಯಾರಿಸುವುದರಲ್ಲಿ ಸಹಕರಿಸಿದವರು :***

1) ಪದ್ಮನಾಭ ಶಾನಭಾಗ, ಜೇನು ಕೃಷಿಕರು, ಯಲ್ಲಾಪುರ.
2) ಆರ್. ಎನ್. ಭಟ್ಟ, ಜೇನು ಕೃಷಿಕರು, ಯಲ್ಲಾಪುರ.
3) ಅಶೋಕ ಕೃಷ್ಣ ಶೆಟ್ಟಿ, ಜೇನು ಸಹಕಾರಿ ಸಂಘ, ಯಲ್ಲಾಪುರ.
4) ಗೋಕುಲದಾಸ ನಾಯ್ಕ, ಕಾರ್ಯದರ್ಶಿ, ಜೇನು ಸಹಕಾರಿ ಸಂಘ, ಕಾರವಾರ.
5) ಆರ್. ಜಿ. ಶೆಟ್ಟಿ, ಜೇನು ಕೃಷಿಕ, ಅಂಕೋಲಾ.
6) ಪಿ. ಆರ್. ಹೆಗಡೆ, ಜೇನು ಕೃಷಿಕ, ಹೊನ್ನಾವರ.
7) ಎಮ್. ಎಸ್. ಶಿವಮೂರ್ತಿ, ಕಾರ್ಯದರ್ಶಿ, ಸಿದ್ದಾಪುರ.
8) ರಘುವಿಠ್ಠಲ, ಜೇನು ಸಾಕಾಣಿಕಾ ಕೇಂದ್ರ, ಬಿಳಗಿ, ಸಿದ್ದಾಪುರ.
9) ಸುಮಂಗಲಾ ಹೆಗಡೆ, ಜೇನು ಸಹಕಾರಿ ಸಂಘ, ಸಿದ್ದಾಪುರ.
10) ಗಣಪತಿ ಗಾಂವಕರ, ಜೇನು ಕೃಷಿಕ, ಅಂಕೋಲಾ.
11) ಗಣಪತಿ ಗುನಗಾ, ಜೇನು ಕೃಷಿಕ, ಕುಮಟಾ.
12) ದೇವಪ್ಪ ಹೆಗಡೆ, ಹೆಚ್ಚೇನು ಸಂಗ್ರಹಗಾರ, ಕುಂಟಕಣಿ, ಅಂಕೋಲಾ.

# ಕೊಡಗಿನಲ್ಲಿ ಜೇನು ಬೇಟೆ - ಜೇನು ಸಾಕಣೆ

◆ *ಕೆ. ಎಸ್. ಶೋಭ*

'ಜೇನು' ಎಂಬ ಮಧುರ ಸಿಹಿಯ ರುಚಿಯನ್ನು ಆಸ್ವಾದಿಸದವರಾರು. ಸೃಷ್ಟಿ ನೀಡಿದ ವಿಶಿಷ್ಟತೆಯೊಂದಿಗೆ ದಿನಚರಿ ನಡೆಸಿ, ತನ್ನೆಲ್ಲ ದುಡಿಮೆಯನ್ನು ಸೃಷ್ಟಿಯ ಮತ್ತೊಂದು ಪ್ರಾಣಿಗೆ ಆಹಾರವಾಗಿಸುವ ಈ ಜೇನುನೊಣಗಳ ಜೀವನ ಮಾತ್ರ ಸಿಹಿಗೆ ವಿರುದ್ಧವಾದುದು.

ಜೇನುಗಳಲ್ಲಿ ಅನೇಕ ವಿಧಗಳಿವೆ. ಮುಖ್ಯವಾಗಿ ತೊಡವೆ, ಹೆಜ್ಜೇನು, ಕೋಲುಜೇನು, ದಂಬೆಕೋಲು ಜೇನು, ಮಿಸರಿ ಅಥವಾ ಮುಜಂಟಿ, ಕಸ್ತೂರಿ ಇತ್ಯಾದಿ. ಸಾಮಾನ್ಯವಾಗಿ ತೊಡವೆಜೇನು ಹುತ್ತದಲ್ಲಿ, ಹೆಜ್ಜೇನುಗಳು ದೊಡ್ಡ ದೊಡ್ಡ ಮರಗಳಲ್ಲಿ, ಕೋಲುಜೇನು, ದಂಬೆಕೋಲು ಜೇನು ಮರದ ಪೊಟರೆಗಳಲ್ಲಿ ಇರುತ್ತದೆ. ಇವುಗಳ ಗೂಡು ಅರ್ಧಚಂದ್ರಾಕಾರವಾಗಿರುತ್ತದೆ. ಅಡಿಕೆ ಕೋಲುಜೇನು ಇವುಗಳು ಗಾತ್ರದಲ್ಲಿ ಚಿಕ್ಕವು, ಬಣ್ಣ ಬೂದು, ಕುಡಿಕೆಯಾಕಾರದ ಗೂಡುಗಳನ್ನು ಕಟ್ಟುತ್ತದೆ. ಆದರೆ ಕಸ್ತೂರಿ, ಮುಜಂಟಿ ಅಥವಾ ಮಿಸರಿ ಜೇನುನೊಣಗಳು ಗಾತ್ರದಲ್ಲಿ ಅತೀ ಸೂಕ್ಷ್ಮವಾಗಿದ್ದು, ಮೈಗೆ ತಾಗಿದರೆ ಅಂಟಿನ ಅನುಭವವಾಗುತ್ತದೆ. ಇವುಗಳು ತಯಾರಿಸುವ ಜೇನು ಮತ್ತು ಮೇಣದ ಬಣ್ಣ ಕಪ್ಪು. ಕಸ್ತೂರಿ ಜೇನು ಕಸ್ತೂರಿಯನ್ನು ಸಂಗ್ರಹಿಸುತ್ತದೆ ಎಂದು ನಂಬಿಕೆ. ಹೆಜ್ಜೇನು ಗಾತ್ರದಲ್ಲಿ ದೊಡ್ಡದು ಕಚ್ಚಿದರೆ ನೋವು ಜಾಸ್ತಿ.

ಜೇನುನೊಣಕ್ಕೆ ಒಟ್ಟು ಆರು ಕಾಲುಗಳಿರುತ್ತದೆ. ನಾಲ್ಕು ಕಾಲುಗಳು ಮುಖ್ಯವಾಗಿ ಮಕರಂದ ಶೇಖರಣೆಗೆ ಹಿಂಬದಿಯಲ್ಲಿ ಒಂದು ಬಾಣ (ಮುಳ್ಳು) ಇರುತ್ತದೆ. ಇದು ಕುಟುಂಬದ ರಕ್ಷಣೆಗೆ. ಈ ಮುಳ್ಳಿನಿಂದ ಚುಚ್ಚಿದ ಕೂಡಲೆ ಅದರ ಕರುಳು ಕಿತ್ತುಬಂದು ನೊಣ ಸತ್ತುಹೋಗುತ್ತದೆ. ವಿಚಿತ್ರ ಸೃಷ್ಟಿಕುಟುಂಬದ ರಕ್ಷಣೆಗೆ ತಾನು ಬಲಿದಾನಿ ಯಾಗುತ್ತದೆ.

ಜೇನಿನ ಕುಟುಂಬದಲ್ಲಿ ಪೂರ್ತಿ ಹೆಣ್ಣಿನ ಮೇಲ್ವಿಚಾರಣೆ. ಮುಖ್ಯಸ್ಥೆ 'ರಾಣಿ' ಗಾತ್ರದಲ್ಲಿ ಸ್ವಲ್ಪ ದೊಡ್ಡದಿರುತ್ತದೆ. ಇವುಗಳಿಗೆ ಚುಚ್ಚುವ ಮುಳ್ಳುಗಳಿರುವುದಿಲ್ಲ. ಅಂತೆಯೇ ಗೂಡಿನಲ್ಲಿ ರಾಣಿಯ ಸಂಖ್ಯೆ ಹೆಚ್ಚಾಗಬಾರದು. ಒಂದಕ್ಕಿಂತ ಅಧಿಕ ಸಂಖ್ಯೆಯಲ್ಲಿ ರಾಣಿ ನೊಣಗಳು ಇದ್ದಲ್ಲಿ ಅವುಗಳ ನಡುವೆ ಘರ್ಷಣೆ ನಡೆದು ನೊಣಗಳೆಲ್ಲ ವಿಂಗಡನೆಗೊಂಡು ಅವುಗಳು ತಮ್ಮದೆ ಆದ ಕುಟುಂಬವನ್ನು ರಚಿಸಿಕೊಳ್ಳುತ್ತದೆ. ಇದಕ್ಕೆ 'ಕುಡಿ ಹೋಗುವುದು' ಎಂದು ಹೆಸರು. ರಾಣಿಗೆ ಸರಾಸರಿ

ಆಯುಸ್ಸು ಎರಡು ವರ್ಷ. ಆಕಸ್ಮಾತ್ ರಾಣಿ ಸತ್ತುಹೋದಲ್ಲಿ ಉಳಿದವರೆಲ್ಲ ತಬ್ಬಲಿ. ಬೇರೆ ಕುಟುಂಬದವರೊಂದಿಗೆ ಸೇರುವ ಪ್ರಶ್ನೆಯೇ ಇಲ್ಲ. ಇನ್ನು ಕೆಲಸಗಾರ್ತಿಯರು ಇವುಗಳಲ್ಲಿ ಎರಡು ವಿಧ, ಮಕರಂದವನ್ನು ತರುವ ಪಂಗಡ ಮತ್ತು ಕಾಯುವ ಪಂಗಡ. ಇವುಗಳಿಗೆಲ್ಲ ಚುಚ್ಚಲು ಮುಳ್ಳುಗಳಿರುತ್ತದೆ. ನಂತರ ಗಂಡುನೊಣಗಳು ಇವುಗಳೆಲ್ಲ ಉದ್ಯೋಗವಿಲ್ಲದ ನಿರುದ್ಯೋಗಿಗಳು, ಜಾಸ್ತಿ ಪ್ರಮಾಣದ ಜೇನನ್ನು ಇವುಗಳೇ ಕಬಳಿಸುತ್ತವೆ. ಇವುಗಳಿಗೆ ಮುಳ್ಳುಗಳಿರುವುದಿಲ್ಲ.

ಜೇನು ಗೂಡಿನಿಂದ ಜೇನನ್ನು ಬೇರ್ಪಡಿಸಲು ಅನುಭವಸ್ಥರೇ ಬೇಕಾಗುತ್ತದೆ. ಒಂದು ರೀತಿಯಲ್ಲಿ ಇದನ್ನು 'ಬೇಟೆ'ಯೆಂದೆ ಹೇಳಬಹುದು. ಈ ಜೇನು ಬೇಟೆಯನ್ನು ಮಲೆಕುಡಿಯರು, ಜೇನು ಕುರುಬರು ಹೆಚ್ಚಾಗಿ ಮಾಡುತ್ತಾರೆ. ಜೇನು ಕುರುಬರು ಸಾಮಾನ್ಯವಾಗಿ ದಕ್ಷಿಣ ಕೊಡಗಿನಲ್ಲಿ, ನಾಗರಹೊಳೆಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರು ಹಳೆ ಮೈಸೂರು ಪ್ರಾಂತ್ಯಕ್ಕೆ ಸೇರಿದವರು. ಇನ್ನು ಮಲೆಕುಡಿಯರು ಉತ್ತರ ಕೊಡಗಿನ ಮಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ಆದರೆ ಜೇನು ಬೇಟೆ ನಿರ್ದಿಷ್ಟ ಜನಾಂಗದವರಿಗೆ ಮೀಸಲಾಗಿಲ್ಲ. ಸಾಮಾನ್ಯವಾಗಿ ಗಂಡಸರೇ ಇದರಲ್ಲಿ ಪಾಲ್ಗೊಳ್ಳುತ್ತಾರೆ.

ಜೇನು ಬೇಟೆಗೆ ಸೂಕ್ತವಾದ ಸಮಯವೆಂದರೆ ರಾತ್ರಿ ಹಾಗೂ ಮೇ ತಿಂಗಳು, ಫೆಬ್ರವರಿ, ಮಾರ್ಚ್‌ನಲ್ಲಿ ಚೆನ್ನಾಗಿ ಮಳೆ ಬಂದಲ್ಲಿ ಹೂಗಳು ಅರಳಿ, ಮಕರಂದ ಹೆಚ್ಚಾಗಿ ದೊರೆತು ಚಟುವಟಿಕೆ ಹೆಚ್ಚಾಗಿರುತ್ತದೆ. ಹಾಗಾಗಿ ಉತ್ತಮ ಬೇಟೆ ಮುಂಗಾರು ಮಳೆಯನ್ನು ಅವಲಂಬಿಸಿದೆ.

ಜೇನು ಬೇಟೆಗೆ ಮುಂಚಿತವಾಗಿ ಮುಖ್ಯವಾಗಿ ಜೇನುಗೂಡುಗಳ ಇರುವಿಕೆಯನ್ನು ಗುರುತಿಸಬೇಕಾಗುತ್ತದೆ. ಇದಕ್ಕೆ ಅನುಭವವಂತೂ ಖಂಡಿತ ಬೇಕಾಗುತ್ತದೆ. ಇದಕ್ಕಾಗಿ ಹಗಲಿನಲ್ಲಿ ದೊಡ್ಡದೊಡ್ಡ ಮರಗಳನ್ನು ವೀಕ್ಷಿಸುತ್ತಾರೆ. ಗೂಡುಗಳು ಇದ್ದಲ್ಲಿ ಹತ್ತಲು ಅನುಕೂಲವಾಗುವಂತೆ ಏಣಿಗಳನ್ನು ಕಟ್ಟುತ್ತಾರೆ. ದೊಡ್ಡ ದೊಡ್ಡ ಮರಗಳಿದ್ದಲ್ಲಿ ಮೆಟ್ಟಿಲು ಗಳನ್ನು ಮಾಡುತ್ತಾರೆ. ಆದರೆ ಬೇಟೆಯಲ್ಲಿ ಮರ ಹತ್ತುವ ವ್ಯಕ್ತಿ ಹಗಲಿನಲ್ಲಿ ಮರ ನೋಡುವಂತಿಲ್ಲ ಮತ್ತು ರಾತ್ರಿ ಮರ ಹತ್ತಿದಾಗ ನೆಲದಲ್ಲಿ ಬೆಳಕು ತೋರಿಸಬಾರದು. ಕಾರಣ ಇಷ್ಟೆ ಮರ ಮತ್ತು ನೆಲದ ಅಂತರವನ್ನು ಕಂಡಲ್ಲಿ ಹೆದರಿಕೆಯಾಗುವ ಸಾಧ್ಯತೆಗಳಿರುತ್ತದೆ. ಸಾಮಾನ್ಯವಾಗಿ ಮುಂಜಾನೆ ಅಂದರೆ ಸೂರ್ಯನ ಎಳೆಯ ಕಿರಣಗಳು ಬೀಳುವ ಹೊತ್ತು ಮೂಡು (ಪೂರ್ವ) ದಿಕ್ಕಿನಿಂದ ನೊಣಗಳ ಹಾರಾಟವಿರುತ್ತದೆ. ಮತ್ತು ಗಾಳಿಗೆ ನೇರವಾಗಿ ಹಾರುತ್ತವೆ. ನಂತರ ಮಧ್ಯಾಹ್ನ ಕೆಲವೊಮ್ಮೆ 'ಕಳೆ ಏಳುವುದು' ನಡೆಯುತ್ತದೆ. ಅಂದರೆ ರಾಣಿಯನ್ನು ಸುತ್ತುವರಿದು ಎಲ್ಲಾ ನೊಣಗಳು ಸ್ವಲ್ಪ ಹೊತ್ತು ಹಾರಾಡುವುದು. ಬಹುಶಃ ರಾಣಿಯೊಂದಿಗೆ ವ್ಯಾಯಾಮ ಇದ್ದರೂ ಇರಬಹುದು. ಈ ರೀತಿಯ ಹಾರಾಟ ಕುಡಿಹೋಗುವಾಗಲೂ ನಡೆಯತ್ತದೆ. ಒಟ್ಟಿನಲ್ಲಿ ಮೇಲಿನ ಸಂದರ್ಭಗಳು ಮರದ ಪೊಟರೆಗಳಲ್ಲಿ, ಹುತ್ತಗಳಲ್ಲಿ ಇರುವ ಜೇನು ಗೂಡುಗಳನ್ನು ಕಂಡುಹಿಡಿಯಲು ಸಹಾಯವಾಗುತ್ತದೆ.

ಜೇನು ಬೇಟೆಯಲ್ಲಿ ಶುದ್ಧಾಚಾರ ಬಹಳ ಮುಖ್ಯ. ಬೆವರಿನ ವಾಸನೆ, ಹೊಲಸುಗಳಿಗೆ

ಜೇನುನೊಣಗಳು ಹೆಚ್ಚಾಗಿ ಕಚ್ಚಲು ಬರುತ್ತದೆ. ಮಲೆಗಳಲ್ಲಿ ಅದಿದೇವತೆ 'ಮಲೆತಮ್ಮಚ್ಚ' ಬೇಟೆಗೆ ಹೊರಡುವ ಮುನ್ನ ಆತನಿಗೆ ನಮನ ಮತ್ತು ಮನೆದೇವರಿಗೆ, ಸ್ಥಳದೇವರಿಗೆ ಅಂದರೆ ಹತ್ತಿರದ ದೇವರಗುಡಿಯಲ್ಲಿ ಪೂಜೆ ಸಲ್ಲಿಸಿ ಬೇಟೆಗೆ ಹೊರಡುತ್ತಾರೆ.

ಜೇನು ಬೇಟೆಗೆ ಮುಖ್ಯವಾಗಿ ಬೇಕಾಗುವ ಸಾಮಾನುಗಳೆಂದರೆ ಹಗ್ಗ, ಏಣಿ, ದೀಪ, ಬೈಹುಲ್ಲು (ಒಣಗಿದ ಹುಲ್ಲು), ಕಾವಂಗ (ಎರಡು ಹಿಡಿಯಿರುವ ದೊಡ್ಡಪಾತ್ರೆ) ಇತ್ಯಾದಿ. ಬೇಟೆಯ ಮೊದಲ ಹಂತದಲ್ಲಿ ಕೋಲಿನ ತುದಿಗೆ ಬೈಹುಲ್ಲನ್ನು ಸುತ್ತಿ ಬೆಂಕಿ ಕೊಡುತ್ತಾರೆ. ಇದಕ್ಕೆ 'ದಂದಿ' ಎಂದು ಹೆಸರು. ದಂದಿಯಲ್ಲಿ ಬೆಂಕಿ ದಗದಗಿಸಬಾರದು, ಹೊಗೆಯಾಡುತ್ತಿರಬೇಕು. ಆಗ ಅದನ್ನು ಜೇನುಗೂಡಿನ ಬಳಿ ಹಿಡಿಯುತ್ತಾರೆ. ಹೊಗೆಯ ಘಾಟಿಗೆ ನೊಣಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಓಡುತ್ತವೆ. ಆಗ ಗೂಡನ್ನು ಕತ್ತರಿಸಿ ಪಾತ್ರೆಯಲ್ಲಿ ಇಟ್ಟು ಹಗ್ಗದ ಸಹಾಯದಿಂದ ಕೆಳಗೆ ಇಳಿಸಲಾಗುತ್ತದೆ. ಆ ಕೂಡಲೇ ನೊಣಗಳೆಲ್ಲ ದೂರ ಹಾರಿಹೋಗುವುದಿಲ್ಲ. ಸಿಟ್ಟಿನಿಂದ ಚುಚ್ಚಲು ಬರುತ್ತವೆ. ಕೆಲವು ತಮ್ಮ ರಾಣಿಯನ್ನು ಸುತ್ತುವರಿದು ರಕ್ಷಿಸುತ್ತಾ ಗುಂಪಾಗಿ ಒಂದೆಡೆ ಕುಳಿತುಕೊಳ್ಳುತ್ತವೆ. ತಮ್ಮ ಕುಟುಂಬದವರನ್ನು ಕಳೆದುಕೊಂಡು ದುಃಖಿಸುತ್ತಾ ಮುಂದಿನ ಉತ್ತಮ ನೆಲೆಗಾಗಿ ಹುಡುಕುತ್ತ ಮಾರನೆಯ ದಿನ ಪಯಣ ನಡೆಸುತ್ತವೆ.

ಪ್ರತಿಯೊಂದು ವಿಧದ ಜೇನಿನ ರುಚಿಯು ವಿಧವಿಧವಾಗಿರುತ್ತದೆ. ತೊಡವೆ ರುಚಿಯಲ್ಲಿ ಉತ್ಕೃಷ್ಟವಾಗಿರುತ್ತದೆ. ಹೆಜ್ಜೇನು ಅಷ್ಟೇನೂ ಉತ್ತಮ ದರ್ಜೆಯದಲ್ಲ. ಏಕೆಂದರೆ ಹೆಜ್ಜೇನು ಗಾತ್ರದಲ್ಲಿ ದೊಡ್ಡದಿರುವುದರಿಂದ ಚಿಕ್ಕದಾದ ಹೂಗಳ ಮೇಲೆ ಕುಳಿತುಕೊಳ್ಳಲು ಸಾಧ್ಯವಾಗುವುದಿಲ್ಲ. ಅವು ದೊಡ್ಡದೊಡ್ಡ ಪುಷ್ಪಗಳ ಮಕರಂದವನ್ನು ಮಾತ್ರ ಹೀರಲು ಸಾಧ್ಯವಾಗುತ್ತದೆ.

ಜೇನು ಬೇಟೆಯಲ್ಲಿ ಶ್ರಮ ಜಾಸ್ತಿಯಿದ್ದವನಿಗೆ ಜೇನು ಜಾಸ್ತಿ ಮತ್ತು ಮೇಣವೆಲ್ಲ ಮರ ಹತ್ತಿದವನಿಗೆ. ಮೇಣ ಜೇನಿನ ಮುಖ್ಯ ಉಪ ಉತ್ಪನ್ನ. ಇತರ ಉಪಯೋಗವೆಂದರೆ, ಹೆಂಗಸರು ಕುಂಕುಮವನ್ನು ಇಟ್ಟುಕೊಳ್ಳುವಾಗ ಅಂಟಿನ ಬದಲಾಗಿ ಈ ಮೇಣವನ್ನು ಹಣೆಗೆ ತಗಲಿಸಿ ಕುಂಕುಮವನ್ನು ಇಟ್ಟುಕೊಳ್ಳುತ್ತಾರೆ. ಪಾದಗಳು, ಹಿಮ್ಮಡಿಗಳು ಒಡೆದರೆ ಮೇಣವನ್ನು ಬಿಸಿಮಾಡಿ ಹಚ್ಚುವುದರಿಂದ ಉಪಶಮನವಿದೆ. ಆದರೆ ಆಧುನಿಕ ಯುಗದಲ್ಲಿ ಇದರ ಹತ್ತು ಹಲವು ಉಪಯೋಗಗಳನ್ನು ಕಂಡುಕೊಂಡಿದ್ದಾರೆ.

ಜೇನನ್ನು ಬಿದಿರಿನ ದೊಡ್ಡದೊಡ್ಡ ಓಟೆಗಳಲ್ಲಿ ಮಣ್ಣಿನ ಮಡಿಕೆಗಳಲ್ಲಿ ಸಂಗ್ರಹಿಸಿಡುತ್ತಿದ್ದರು. ಹೀಗೆ ಸಂಗ್ರಹಿಸಿದ ಜೇನು ಹಳೆಯದಾದಂತೆ ಸಕ್ಕರೆಯಂತೆ ಹರಳುಗಟ್ಟುತ್ತಾ ಬರುತ್ತದೆ. ಹೀಗೆ ಆಗದಿರಲು ಬಿದಿರಿನ ಕಡ್ಡಿಗಳನ್ನು ಜೇನಿನ ಪಾತ್ರೆಯಲ್ಲಿ ಹಾಕಿ ಇಡುತ್ತಾರೆ.

ಪೆಟ್ಟಿಗೆಯಲ್ಲಿ ಜೇನು ಸಾಕುವುದು ಆಧುನಿಕ ಯುಗದಲ್ಲಾದರೆ ಅಂದಿನವರು ಮಣ್ಣಿನ ಮಡಿಕೆಗಳಲ್ಲಿ ಜೇನನ್ನು ಸಾಕುತ್ತಿದ್ದರು.

**ಮಣ್ಣಿನ ಮಡಿಕೆ**

ಇಜನಿ ಎಂಬ ಮರದ ಸೊಪ್ಪನ್ನು ಬಿಸಿಯಾದ ಜೇನು ಮೇಣಕ್ಕೆ ಅದ್ದಿ ಮಡಿಕೆಗೆ ಸವರಿ ಅದನ್ನು ಸೊಪ್ಪಿನ ಗೊಂಚಲಿನೊಂದಿಗೆ ಯಾವ ಅಡೆತಡೆ ಇಲ್ಲದ ಜಾಗದಲ್ಲಿ ಮರದ ಕೆಳಗೆ ಇಡಲಾಗುತ್ತದೆ. ಸಾಮಾನ್ಯವಾಗಿ ಸುಬ್ರಮಣ್ಯ ಷಷ್ಠಿಯ ಸಮಯದಲ್ಲಿ ಇದನ್ನು ಇಡುತ್ತಾರೆ. ಜೇನುನೊಣಗಳು ಮಡಿಕೆಯನ್ನು ಸೇರಿ ಕೆಲಸವನ್ನು ಆರಂಭಿಸುತ್ತವೆ. ಜೇನು ತೆಗೆಯುವ ಸಂದರ್ಭದಲ್ಲಿ ಮಡಿಕೆಯ ಹತ್ತಿರ ಹೊಗೆ ಹಾಕಲಾಗುತ್ತದೆ. ನೊಣಗಳೆಲ್ಲ ಹೊರಟು ಹೋಗುತ್ತವೆ. ದುಡಿಮೆಯೆಲ್ಲ ಮಾನವನ ಪಾಲಾಗುತ್ತದೆ. ಪುನಃ ಗೂಡನ್ನು ಶುದ್ಧೀಕರಿಸಿ ಇಟ್ಟಲ್ಲಿ ನಂತರದ ಋತುವಿಗೆ ಬೇರೆ ಜೇನು ಹಿಂಡುಗಳು ಮಡಿಕೆಯನ್ನು ಸೇರುತ್ತವೆ.

ಒಟ್ಟಿನಲ್ಲಿ ಕಹಿಯುಂಡು ಸಿಹಿಯುಣಿಸುವ ಜೇನುಗಳ ಜೀವನವಂತೂ ಆದರ್ಶ ಮಯವಾದುದು.

**ಜೇನು ಬೇಟೆ -ಹೆಚ್ಚಿನ ವಿವರಗಳು :**

೧) ಮಳೆಗಾಲವನ್ನು ಬಿಟ್ಟು ಉಳಿದೆಲ್ಲ ಕಾಲದಲ್ಲೂ ಜೇನು ಲಭ್ಯ. ಸಾಮಾನ್ಯವಾಗಿ ಮಳೆಗಾಲಕ್ಕೆ ಮೊದಲು ಜೇನು ಬೇಟೆಯನ್ನು ಮಾಡುತ್ತಾರೆ. ಏಕೆಂದರೆ ಜೇನುನೊಣಗಳು ಮಳೆಗಾಲದಲ್ಲಿ ಹೊರಗೆ ಹೋಗುವುದಿಲ್ಲ. ಹಾರಾಡಲು, ಮಕರಂದವನ್ನು ಸಂಗ್ರಹಿಸಲು ಅವುಗಳಿಗೆ ಕಷ್ಟ, ಹಾಗಾಗಿ ಆ ಕಾಲದಲ್ಲಿ ಅವುಗಳು ಜೇನನ್ನು ಕುಡಿದುಬಿಡುತ್ತವೆ. ಕೆಲವೊಮ್ಮೆ ಕೆಲಸವೆಲ್ಲ ಮುಗಿದ ಕೂಡಲೇ ಅಂದರೆ ಜೇನು ಉತ್ಪಾದಿಸಿ ಆದಕೂಡಲೇ ಕುಡಿದುಬಿಡುವ ಸಾಧ್ಯತೆಗಳು ಉಂಟು. ಮಳೆಗಾಲಕ್ಕಾಗಿ ಕಾಯುವುದಿಲ್ಲ.

೨) ಉತ್ಪಾದಿಸಿದ ಜೇನನ್ನು ಅವುಗಳೆ ಕುಡಿದುಬಿಡುವ ಸಮಯವನ್ನು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಯಾವುದೇ ವಿಧದ ಜೇನಾಗಲಿ ಕೆಲವು ಕುಟುಂಬದವುಗಳು ವರ್ಷಪೂರ್ತಿ ನಿರಂತರವಾಗಿ ಕೆಲಸದಲ್ಲಿ ತೊಡಗಿದ್ದು ಮಳೆಗಾಲದಲ್ಲಿ ಮಾತ್ರ ಜೇನನ್ನು ಕುಡಿಯುತ್ತವೆ. ಕೆಲವು ಕುಟುಂಬದವುಗಳು ಸ್ವಲ್ಪ ಉತ್ಪಾದಿಸುವುದು ನಂತರ ಕುಡಿಯುವುದು ಅಲ್ಲಿಂದ ಪಲಾಯನ ಮಾಡುವುದು ಹೀಗೆ ಅಲೆಮಾರಿಗಳಂತೆಯೂ ಇರುತ್ತದೆ.

೩) ಹೆಜ್ಜೇನು, ಮಿಸರಿ/ಮುಜಂಟಿ ಇತ್ಯಾದಿ ಜೇನು ಸಾಮಾನ್ಯವಾಗಿ ವರ್ಷಕ್ಕೆ ಒಂದೇ ಸಲ ತೆಗೆಯಲು ಸಾಧ್ಯ. ಏಕೆಂದರೆ ಇವುಗಳ ಕೆಲಸ ನಿಧಾನ. ತೊಡವೆ ಜೇನು ವರ್ಷಕ್ಕೆ ೩-೪ ಸಲ ಕೆಲವೊಮ್ಮೆ ಅದಕ್ಕಿಂತ ಹೆಚ್ಚು ಬಾರಿ ದೊರೆಯುವ ಸಾಧ್ಯತೆಗಳಿವೆ. ಇವುಗಳು ಬಹಳ ಚಟುವಟಿಕೆಯನ್ನು ಹೊಂದಿರುವ ಮತ್ತು ಸಾಕಣಿಕೆಗೆ ಯೋಗ್ಯವಾದುದಾಗಿದೆ. ಯಾವುದೇ ಜೇನಾಗಲಿ ದೊರೆಯುವ ಪ್ರಮಾಣವು ಗೂಡಿನಲ್ಲಿರುವ ನೊಣಗಳ ಸಂಖ್ಯೆ, ಅವುಗಳ ಕೆಲಸದ ಗುಣಮಟ್ಟ (ಸೋಮಾರಿಗಳ ಸಂಖ್ಯೆ ಹೆಚ್ಚಿರಬಾರದು), ಮಕರಂದದ ದೊರೆಯುವಿಕೆಯನ್ನು ಅವಲಂಬಿಸಿದೆ.

೪) ಬೇಟೆಗೆ ಹೋಗುವಾಗ ಮುಖ್ಯವಾಗಿ ಬೇಕಾದುದು ಶುದ್ಧತೆ. ಹೆಂಡ, ಬೀಡಿಗಳ ಅಥವಾ ಇತರೆ ಕೆಟ್ಟವಾಸನೆಗಳಿದ್ದಲ್ಲಿ ಅವುಗಳು ಮೈಮೇಲೆ ಹೆಚ್ಚಾಗಿ ಎರಗುತ್ತವೆ. ಜೇನು ತೆಗೆಯುವ ಸಂದರ್ಭದಲ್ಲಿ ಹಾಕಿಕೊಳ್ಳಲು ಈಗ ಬಲೆಯಂತಹ ಚೀಲ ದೊರೆಯುತ್ತದೆ. ಹಿಂದಿನವರು ಬಟ್ಟೆಯನ್ನು ಮುಂಡಾಸಿನಂತೆ ಕಿವಿ, ತಲೆಗಳಿಗೆ ಮುಚ್ಚಿಕೊಳ್ಳುತ್ತಿದ್ದರು. ಅಥವಾ ಮುಟ್ಟಾಳೆ (ಅಡಿಕೆ ಹಾಳೆಯ ಟೊಪ್ಪಿ)ಯನ್ನು ಉಪಯೋಗಿಸುತ್ತಿದ್ದರು. ಮತ್ತು ಕೆಲವರ ಹೇಳಿಕೆಯಂತೆ ಚಳ್ಳೆ ಎಂಬ ಸೊಪ್ಪಿನ ರಸವನ್ನು ಹಚ್ಚಿಕೊಂಡರೆ ಕಚ್ಚುವುದಿಲ್ಲವಂತೆ. ಈ ಕ್ರಮವನ್ನು ಕೂಡ ಅನುಸರಿಸುತ್ತಿದ್ದರು.

೫) ಜೇನಿನ ಮುಳ್ಳು ಚರ್ಮದಲ್ಲಿ ನಾಟಿದರೆ ಉಗುರಿನ ಸಹಾಯದಿಂದ ಕೀಳಬಹುದು. ಚರ್ಮದ ಆಳಕ್ಕೆ ಮುಳ್ಳು ಇಳಿಯುವುದಿಲ್ಲ. ಕೆಲವರಿಗೆ ಮುಳ್ಳುನಾಟಿದೊಡನೆ ಆ ಭಾಗ ಊದಿಕೊಳ್ಳುತ್ತದೆ. ಈರುಳ್ಳಿ ರಸವನ್ನು ಉಜ್ಜಿದರೆ ಬಾವು ಮತ್ತು ನೋವು ಕಡಿಮೆಯಾಗುತ್ತದೆ.

೬) ಅಟ್ಟಿಸಿಕೊಂಡು ಬರುವ ಜೇನಿನಿಂದ ಪಾರಾಗಲು ಒಂದೇ ಉಪಾಯ ನೀರಿನಲ್ಲಿ ಮುಳುಗಬೇಕು ಮತ್ತು ಯಾವುದಾದರೊಂದು ವಸ್ತುವನ್ನು ನೀರಿನಲ್ಲೆ ತೇಲಲು ಬಿಟ್ಟು ಇನ್ನೊಂದೆಡೆ ಏಳಬೇಕು. ಅದಕ್ಕಿಂತಲೂ ಅಟ್ಟಿಸಿಕೊಂಡು ಬರದಂತೆ ಜಾಗ್ರತೆ ವಹಿಸುವುದು ಸುಲಭ.

೭) ಮಲೆ ತಮ್ಮಚ್ಚ ಬೇಟೆಯ ದೇವರು. ಈತನಿಗೆ ನಿರ್ದಿಷ್ಟ ಆಕಾರವಿಲ್ಲ. ಮರದ ಬುಡದಲ್ಲಿ ಕಲ್ಲು, ಪಕ್ಕದಲ್ಲಿ ಬಿಲ್ಲುಬಾಣ ಮಾಂಸದ ನೈವೇದ್ಯ ಇಷ್ಟೇ ಆತನ ಸ್ವರೂಪ. ವಿಶೇಷ ಪೂಜೆಗಳೇನೂ ಇಲ್ಲ. ಬೇಟೆಯಲ್ಲಿ ಆತನಿಗೂ ಪಾಲು ಕೊಡಬೇಕು. ಕೆಲವು ಕಡೆ ವರ್ಷಕ್ಕೊಮ್ಮೆ ಹಂದಿ/ಕೋಳಿ ಬಲಿಯನ್ನು ಕೊಡುವುದರ ಮೂಲಕ ಆತನಿಗೆ ಪೂಜೆ ಸಲ್ಲಿಸುತ್ತಾರೆ. 'ಮಲೆತಮ್ಮಚ್ಚನಿಗೆ ಕೊಡುವುದು' ಎಂದು ಹೇಳುತ್ತಾರೆ.

೮) ಸಾಧಾರಣವಾಗಿ ಎಲ್ಲಾ ಮರದಲ್ಲೂ ಜೇನು ಕಟ್ಟುತ್ತದೆ. ಮುಖ್ಯವಾಗಿ ಅವುಗಳಿಗೆ ಹಾರಲು ಮತ್ತು ಗೂಡುಕಟ್ಟಲು ಸ್ಥಳ ಯೋಗ್ಯವಾಗಿರಬೇಕು.

೯) ಜೇನು ಅಳೆಯುವ ಮಾನ ಕುಡಿತೆ.

೧೦) ಮನೆಯ ಗೋಡೆಗೆ ಜೇನುಗೂಡು ಕಟ್ಟಬಾರದು. ಕಟ್ಟಿದಲ್ಲಿ ಆ ಮನೆಯ ಅವನತಿ ಎಂಬ ನಂಬಿಕೆ ಇದೆ.

೧೧) ಕೊಡಗಿನಲ್ಲಿ ಹೆಚ್ಚಾಗಿ ಜೇನನ್ನು ಉಪಯೋಗಿಸುತ್ತಾರೆ. ಇದು ಬಹಳ ಉಷ್ಣ, ಆದ್ದರಿಂದ ಬೇಸಿಗೆಯಲ್ಲಿ ಜಾಸ್ತಿ ತಿನ್ನಬಾರದು. ಕೆಲವರ ಮೈಗೆ ಇದು ಒಗ್ಗುವುದಿಲ್ಲ. ಮಳೆಗಾಲದಲ್ಲಿ ಬೆಳಗ್ಗಿನ ತಿಂಡಿಯೊಂದಿಗೆ ಚಟ್ನಿಯ ಬದಲಾಗಿ ಜೇನನ್ನು ತಿನ್ನಬೇಕು. ನಿಜಕ್ಕೂ ಅನುಭವಿಸಿಯೇ ನೋಡಬೇಕು ಅದರ ರುಚಿ.

೧೨) ಜೇನಿನ ಉಪಯೋಗ ಹಲವಾರು ಪಂಚಾಮೃತಗಳಲ್ಲಿ ಜೇನು ಒಂದು. ಕೊಡಗಿನ 'ಹುತ್ತರಿ'

(ಹೊಸ ಅಕ್ಕಿಯನ್ನು ಅಂದರೆ ಪ್ರಥಮ ಬೆಳೆಯ ಕದಿರನ್ನು ತರುವುದು) ಯಂದು ಕದಿರಿನ ಬುಡಕ್ಕೆ ಹಾಲು ಮತ್ತು ಜೇನನ್ನು ಸುರಿದು ತೆಂಗಿನಕಾಯಿ ಒಡೆದು ನಂತರವೇ ಕದಿರು ಕೊಯ್ಯಲಾಗುತ್ತದೆ. ಹೀಗೆ ಕೊಡಗಿನ ಹುತ್ತರಿಯಂದು ಜೇನಿಗೂ ಮುಖ್ಯ ಪೂಜ್ಯಸ್ಥಾನ ಮತ್ತು ಆ ದಿನ ಮಾಡುವ 'ತಂಬಿಟ್ಟು' - ಅಕ್ಕಿಹಿಟ್ಟು, ಬಾಳೆಹಣ್ಣು, ತುಪ್ಪ ಇತ್ಯಾದಿ ಸೇರಿಸಿ ಮಾಡುವ ತಿಂಡಿಯೊಂದಿಗೆ ಜೇನನ್ನು ಸೇರಿಸಿ ಸವಿಯಲಾಗುತ್ತದೆ.

೧೩) ಶೀತ, ಕೆಮ್ಮು ಇದ್ದಲ್ಲಿ ಜೇನನ್ನು ಕರಿಮೆಣಸಿನ ಹುಡಿಯೊಂದಿಗೆ, ಕಫ ಕಟ್ಟಿದ್ದರೆ ದೊಡ್ಡಪತ್ರೆ ಸೊಪ್ಪಿನ ರಸದೊಂದಿಗೆ ಸೇರಿಸಿ ತಿಂದರೆ ಉಪಶಮನ ಉಂಟು. ಅಷ್ಟೇ ಅಲ್ಲದೇ ಶುಂಠಿ, ಆಡುಸೋಗೆ ಸೊಪ್ಪಿನ ರಸದೊಂದಿಗೆ ಜೇನನ್ನು ತಿಂದಲ್ಲಿ ಕೆಮ್ಮಿಗೆ ಒಳ್ಳೆಯದು.

೧೪) ಜೇನು ಮೇಣವನ್ನು ಮರದ ಆಚಾರಿಗಳು ಹೆಚ್ಚಾಗಿ ಉಪಯೋಗಿಸುತ್ತಾರೆ. ಅವರಿಗೆ ಮರದ ಮೊಳೆಗಳನ್ನು ಸರಿಯಾಗಿ ಕೂರಿಸುವಲ್ಲಿ ಇದರ ಉಪಯೋಗ ಬಹಳ ಇದೆ. ಮತ್ತು ಚಿನಿವಾರರು ಇವರ ಅನೇಕ ಸೂಕ್ಷ್ಮ ಕೆಲಸಗಳಿಗೆ ಇದರ ಉಪಯೋಗ ಇದೆ. ಮತ್ತು ಚಿನ್ನದ ಬಳೆಗಳನ್ನು ಮಾಡುವಾಗ ದಪ್ಪವಾದ ಬಳೆಗಳಲ್ಲಿ ಆದರ ನಡುವಿನ ಅವಕಾಶವನ್ನು ತುಂಬಲು ಇದನ್ನು ಉಪಯೋಗಿಸುತ್ತಾರೆ.

●

# ಬಯಲುಸೀಮೆಯಲ್ಲಿ ಮೀನು ಬೇಟೆ

*ಎಂ. ಎಸ್. ಪ್ರಕಾಶ್*

ಪುರಾಣ ಕಾಲದಿಂದಲೂ ಮೀನು ಮಾನವನಿಗೆ ಪರಿಚಿತ ಜಲಚರ. ಶ್ರೀಮನ್ ನಾರಾಯಣ ಮತ್ಸ್ಯಾವತಾರ ಎತ್ತಿದ ಉಲ್ಲೇಖವಿದೆ. ಮತ್ಸ್ಯ ಕನ್ಯೆಯರ ದಂತಕತೆಯುಂಟು. ಪ್ರಪಂಚದ ಉದ್ದಗಲಕ್ಕೆ ಮೀನಿನ ಇರುವಿಕೆಯನ್ನೆ ಕಾಣಬಹುದು. ಕೆರೆ, ಕುಂಟೆ, ಬಾವಿ, ನದಿ, ಸಮುದ್ರಗಳೆಲ್ಲೆಡೆ ಮೀನುಗಳನ್ನು ಕಾಣಬಹುದು. ಮೀನಿನಷ್ಟು ಸಣ್ಣ ಪ್ರಾಣಿ ಹಾಗೂ ದೊಡ್ಡ ಪ್ರಾಣಿ ಮತ್ತೊಂದು ಇಲ್ಲ ಎಂದು ಹೇಳುವ ವಾಡಿಕೆ ಇದೆ.

ಬಯಲು ಸೀಮೆಗಳಾದ ಬೆಂಗಳೂರು, ತುಮಕೂರು, ಚಿತ್ರದುರ್ಗ, ಮೈಸೂರು, ಮಂಡ್ಯ, ಕೋಲಾರ ಮುಂತಾದ ಪ್ರದೇಶಗಳ ಕೆರೆ, ಕುಂಟೆ, ಬಾವಿಗಳಲ್ಲಿ ಕುಚ್ಚು ಮೀನು, ಕೊರವ, ಸಸಲು, ಚೇಳು ಮೀನು, ಗಿರಲು, ಮಳ್ಳೆ ಮೀನು/ಹುಣ್ಣೆ ಮೀನು, ಸೀಗಡಿ, ಗೆಂಡೆ ಮೀನು, ನಂಜೆ ಮೀನುಗಳು ಕಂಡುಬರುತ್ತವೆ. ದೊಡ್ಡ ಕೆರೆಗಳಲ್ಲಿ ಈ ಮೀನುಗಳ ಜೊತೆಗೆ ಬಾಳೆ ಮೀನು, ಹಾವ್ ಮೀನು, ಬಾಚಣಿಕೆ ಮೀನುಗಳು ಕಂಡುಬರುತ್ತವೆ.

ಕುಚ್ಚು, ಬಾಳೆ ಮೀನು, ಹಾವ್ ಮೀನುಗಳು ಅರ್ಧ ಕೆಜಿಯಿಂದ ಹೆಚ್ಚೆಂದರೆ ಒಂದೂವರೆ, ಎರಡು ಕೆಜಿ ತೂಕವಿರುತ್ತವೆ. ಸುಮಾರು ಒಂದು ಒಂದೂವರೆ ಅಡಿ ಉದ್ದವಿರುತ್ತವೆ. ದೊಡ್ಡಕೆರೆ ಹಾಗೂ ನದಿಗಳಲ್ಲಿ ಸ್ವಲ್ಪ ಹೆಚ್ಚು ತೂಕ, ಗಾತ್ರದವು ಇರಬಹುದು. ಕೊರವ, ಗಿರಲು, ಚೇಳು ಮೀನುಗಳು ಹೆಚ್ಚೆಂದರೆ ಮೂರು ಬೆರಳು ಗಾತ್ರವಿರಬಹುದು. ಆದರೆ ರುಚಿ ಹೆಚ್ಚು. ಮಳ್ಳೆ ಮೀನು, ಸೀಗಡಿ, ಕೆರೆ ಮೀನುಗಳು ಸಣ್ಣ ಗಾತ್ರದವು.

ಬಾಳೆ ಮೀನು, ಹಾವ್ ಮೀನು, ಕರಮೀನು, ಸೀಗಡಿಗಳನ್ನು ಒಣಗಿಸಿ ಬೇಕಾದಾಗ ಉಪಯೋಗಿಸುತ್ತಾರೆ. ನೆಗಡಿ ಬಂದಾಗ ಅವರೆ ಕಾಳು ಇಲ್ಲವೆ ಕಡಲೆಕಾಳು ಜೊತೆ ಸಾರು ಮಾಡಿ ತಿನ್ನುತ್ತಾರೆ. ಇದರಿಂದ ನೆಗಡಿ ವಾಸಿಯಾಗುತ್ತದೆ ಎಂಬ ನಂಬಿಕೆ. ವಾಸಿಯಾಗುವುದೂ ಉಂಟು. ಇವುಗಳನ್ನು ಒಣಗಿಸುವ ಮೊದಲು ಶುಚಿಗೊಳಿಸಬೇಕು. ಮೀನಿನ ಮೇಲಿನ ಎಕ್ಕೆಗಳನ್ನು ತೆಗೆಯಬೇಕು. ಬಹಳಷ್ಟು ನುಣುಪಾದ ಮಣ್ಣು ಮೆತ್ತಿಕೊಂಡಿರುತ್ತದೆ. ಸಣ್ಣ ಗಾತ್ರದ ಕಲ್ಲುಗಳು ಇರುತ್ತವೆ. ಆದ್ದರಿಂದ ಮೀನು ಒಣಗಿಸಲು ಹಾಕುವ ಮುನ್ನ ನೀರಿನಲ್ಲಿ ಜಾಲಾಡಿಸುತ್ತಾರೆ. ಇದರಿಂದ ಕಲ್ಲು ಮಣ್ಣು ಹೋಗಿ ಶುಚಿಯಾಗುತ್ತದೆ. ಆಗ ಮಾತ್ರ ಒಣಗಿಸಲು ಯೋಗ್ಯ

ವಾಗಿರುತ್ತದೆ. ಒಣ ಮೀನು ರುಚಿ ಜಾಸ್ತಿ, ಅಂತೆಯೇ ತಿನ್ನಬೇಕೆನಿಸಿದಾಗ ಸಿದ್ಧವಾಗಿ ಸಿಗುವಂತಹುದು.

ಬೆಸ್ತರು ವೃತ್ತಿ ಪರವಾಗಿ ಬೇಟೆಯಾಡುತ್ತಾರೆ. ಮಾಂಸಾಹಾರಿಗಳಾದ ಎಲ್ಲ ಜನಾಂಗಗಳೂ ಮೀನು ಬೇಟೆಯಾಡುತ್ತಾರೆ. ಅವಕಾಶವಿರುವೆಡೆಯಲ್ಲೆಲ್ಲಾ ಮೀನು ಬೇಟೆ ಜನಾಂಗದ ಇತಿಮಿತಿಯಿಲ್ಲದೆ ನಡೆಯುವ ಬೇಟೆ ಇದೊಂದೆ ಎಂದರೆ ತಪ್ಪಾಗಲಾರದು. ರೈತಾಪಿ ಜನರು ಬಿಡುವಿನ ವೇಳೆಯಲ್ಲಿ, ಮುಂಗಾರು ಮಳೆ, ಕೆಲವು ತತವುಗಳಲ್ಲಿ ಮೀನು ಹಿಡಿಯುತ್ತಾರೆ. ತತವು ಎಂದರೆ, ಮೀನು ಹಿಡಿಯಲು ಯೋಗ್ಯವಾದ ಸಮಯ-ಕಾಲ ಎಂದರ್ಥ. ಸಮುದ್ರ ತೀರದ ಪ್ರದೇಶಗಳಲ್ಲಿ ಎಣ್ಣೆ ಮತ್ತು ಮಾಂಸಕ್ಕಾಗಿ, ವ್ಯವಸ್ಥಿತವಾಗಿ ಮೀನು ಹಿಡಿಯುವ ಮತ್ಸ್ಯೋದ್ಯಮವೇ ಇದೆ. ಆದರೆ ಬಯಲು ಪ್ರದೇಶದಲ್ಲಿ ಶೇ. ೮೦ರಷ್ಟು ಜನರು ಸ್ವಂತಕ್ಕಾಗಿ, ಅಂದರೆ ತಮ್ಮ ಮನೆಯ ಮಾಂಸಾಹಾರಕ್ಕಾಗಿ ಮೀನು ಹಿಡಿಯುತ್ತಾರೆ. ಇತ್ತೀಚೆಗೆ ಸರ್ಕಾರವೇ ಹರಾಜು ಮೂಲಕ ಮೀನು ಹಿಡಿಯುವುದಕ್ಕೆ ಕೆರೆಗಳನ್ನು ಗುತ್ತಿಗೆ ನೀಡುತ್ತಿರುವುದರಿಂದ, ಬೆಸ್ತರು ತಮ್ಮ ಜೀವನೋಪಾಯ ವೃತ್ತಿ ಉಳಿಸಿಕೊಳ್ಳಲು ಹೆಣಗಲೇ ಬೇಕಾಗಿದೆ. ಆದರೆ, ತನ್ನ ಕುಟುಂಬಕ್ಕಾಗಿ ಬೇಟೆಯಾಡುವ - ಮೀನು ಹಿಡಿಯುವ ಕಾಯಕ ನಿಂತಿಲ್ಲ.

ಮೀನು ಬೇಟೆಯನ್ನು ಕೆಲವು ಪ್ರಮುಖ ವಿಧಾನಗಳಾಗಿ ಹೆಸರಿಸಬಹುದು. ಬಯಲು ಸೀಮೆಯ ಉದ್ದಗಲಕ್ಕೂ, ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯ ವಿಧಾನಗಳನ್ನು ಅನುಸರಿಸುತ್ತಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಕೆರೆ ಬೇಟೆ, ಬಲೆ ಬೇಟೆ, ಬೀಸುಬಲೆ ಬೇಟೆ, ಗೋರುಬಲೆ ಬೇಟೆ, ಗಾಳ, ಕೊಡಮೆ, ಸರಗಾಳ, ಕೊಳೆ ವಿಧಾನ, ಕಟ್ಟೆ ವಿಧಾನ/ಕಟ್ಟೆ ಉಗ್ಗುವುದು ಮುಂತಾದವುಗಳು.

**ಬಲೆ ಬೇಟೆ** : ಬಲೆ ಬೇಟೆಯಲ್ಲಿ ಬೆಸ್ತರು ಸಿದ್ಧಹಸ್ತರು. ಇತರರಿಗೆ ಈ ನೈಪುಣ್ಯತೆ ಬರಲಾರದು. ಇವರನ್ನು ಗಂಗೆಮತಸ್ಥರೆಂದೂ ಕರೆಯುತ್ತಾರೆ. ನದಿ, ಕೆರೆ, ಕಟ್ಟೆಗಳ ವಿಸ್ತಾರ ಅನುಸರಿಸಿ ಬಲೆಯನ್ನು ಉಪಯೋಗಿಸುತ್ತಾರೆ. ಬಲೆಯನ್ನು ನೂಲಿನಿಂದ ನೇಯುತ್ತಿದ್ದರು. ಆದರೆ ಇತ್ತೀಚೆಗೆ ಅದರ ಸ್ಥಾನದಲ್ಲಿ ಪ್ಲಾಸ್ಟಿಕ್ ಬೇರು ಬಿಡುತ್ತಿದೆ. ಬಲೆಯು ಸುಮಾರು ೧೦-೧೫ ಮೀಟರ್ ಉದ್ದದಿಂದ ೨೫-೩೦ ಮೀಟರ್‌ಗಳಷ್ಟು ಉದ್ದವಿರುತ್ತದೆ. ಅಗಲ ೨-೩ ಮೀಟರ್ ಇರುತ್ತದೆ. ಬಲೆಯ ಒಂದು ಬದಿಗೆ ಸುಟ್ಟ ಮಣ್ಣಿನ ಮಣಿಗಳನ್ನು ಮತ್ತೊಂದು ಬದಿಗೆ ಬೆಂಡನ್ನು ಹಾಕಿರುತ್ತಾರೆ. ಬಲೆಯು ತಳಭಾಗದಲ್ಲಿ ಗಟ್ಟಿಯಾಗಿ ನಿಲ್ಲಲು ಮಣಿ ಸಹಕರಿಸಿದರೆ, ಬಲೆಯ ಮತ್ತೊಂದು ತುದಿ ನೀರಿನ ಮೇಲ್ಭಾಗದಲ್ಲಿ ನಿಲ್ಲಲು ಸಹಕರಿಸುತ್ತದೆ. ನೀರಿನ ಆಳವರಿತು ಬಲೆಯ ಅಗಲವನ್ನು ನಿರ್ಧರಿಸುತ್ತಾರೆ. ಏಕೆಂದರೆ, ಬಲೆಯು ನೀರಿನಲ್ಲಿ ಅರ್ಧ ಚಂದ್ರಾಕಾರದಲ್ಲಿ ಹರಡಿಕೊಂಡಿರುವಂತೆ ಬಲೆ ಒಡ್ಡಬೇಕು/ ಬೀಸಬೇಕು. ಹೀಗೆ ಬೀಸಿದ ಬಲೆಯ ಎದುರು ಭಾಗದಿಂದ ನೀರನ್ನು ಬಡಿಯುತ್ತಾ ಬಲೆಯ ಕಡೆಗೆ ಬರುತ್ತಾರೆ. ಮೀನುಗಳು ಬಲೆಯ ಕಡೆಗೆ ನುಗ್ಗುತ್ತವೆ. ಕೂಡಲೆ ಅರ್ಧಚಂದ್ರಾಕಾರವಾಗಿದ್ದ ಬಲೆಯನ್ನು (ಎರಡೂ ತುದಿಗಳಲ್ಲಿ ಬಲೆ ಹಿಡಿದಿರು ವವರು) ವೃತ್ತಾಕಾರಕ್ಕೆ ಮಡಚುತ್ತಾರೆ.

ನೀರು ಬಡಿಯುತ್ತಿದ್ದವರು ಬಲೆ ಮಡಿಸಲು ಸಹಕರಿಸುತ್ತಾರೆ. ಆದರೊಳಗೆ ಹೋದ ಮೀನುಗಳು ಹೊರಬರಲಾಗದಂತೆ ಬಲೆಯನ್ನು ಎಳೆದು ದಂಡೆಗೆ ಬಲೆಯನ್ನು ತಂದು, ಬಲೆಯನ್ನು ಬಿಡಿಸಿ, ಸಿಕ್ಕಿಬಿದ್ದ ಮೀನುಗಳನ್ನು ಬುಟ್ಟಿಗೆ ಹಾಕಿಕೊಳ್ಳುತ್ತಾರೆ. ಬಲೆ ಬೇಟೆಗೆ ನಾಲ್ಕಾರು ಜನರಾದರೂ ಬೇಕು.

- ಬಲೆ ಬೇಟೆಯಲ್ಲಿ ಮತ್ತೊಂದು ವಿಧಾನವೆಂದರೆ ಬೀಸುಬಲೆ ಬೇಟೆ. ನದಿ ಕೊಡ್ಡ ಕೆರೆಗಳಲ್ಲಾದರೆ ದೋಣಿ, ತೆಪ್ಪಗಳನ್ನು ಬಳಸುತ್ತಾರೆ. ಇಲ್ಲವೇ ಏರಿ, ದಂಡೆಗಳ ಮೇಲೆ ನಿಂತು, ಅಥವಾ ನೀರು ಆಳವಿಲ್ಲದ ಕಡೆ ನೀರಿನಲ್ಲಿ ಇಳಿದು ಬಲೆ ಬೀಸುತ್ತಾರೆ. ಬಲೆಯು ಚಿಕ್ಕದಾಗಿದ್ದು ಒಬ್ಬರು ಅಥವಾ ಇಬ್ಬರು ಬಲೆ ಬೀಸಿ ಎಳೆಯಲು ಅನುಕೂಲವಾಗಿರುವಂತೆ ಇರುತ್ತದೆ. ಈ ವಿಧಾನದಲ್ಲಿ ಒಬ್ಬರೇ ಮೀನು ಹಿಡಿಯುವುದು ಹೆಚ್ಚು. ಬಲೆಯು ಸುಮಾರು ೧೦-೧೫ ಅಡಿ ಉದ್ದ ನಾಲ್ಕೈದು ಅಡಿ ಅಗಲವಿರುತ್ತದೆ. ಬಲೆಯನ್ನು ಮೀನುಗಳಿರುವ ಕಡೆ ಎಸೆದು/ಬೀಸಿ ಬಲೆ ಎಳೆದುಕೊಳ್ಳುತ್ತಾರೆ. ಬಲೆಯು ಹರಡಿಕೊಳ್ಳುವಂತೆ ಬೀಸುತ್ತಾರೆ. ಸುಟ್ಟ ಮಣಿಯಿರುವ ಭಾಗ ಮುಳುಗುತ್ತದೆ. ಬೆಂಡಿರುವ ಭಾಗ ತೇಲುತ್ತಿರುತ್ತದೆ. ಬಲೆಯ ಕೆಳತುದಿಯನ್ನು ಮೊದಲು ಎಳೆದು ನಂತರ ಮೇಲ್ಭಾಗದ ತುದಿಯನ್ನು ಜೊತೆಗೂಡಿಸಿ ಬಲೆ ಎಳೆಯುತ್ತಾರೆ. ಮಧ್ಯದಲ್ಲಿ ಮೀನು ಸಿಕ್ಕಿಬಿದ್ದು ಬೇಟೆಗಾರನಿಗೆ ಶರಣಾಗುತ್ತದೆ.

**ಮಗದೊಂದು ವಿಧಾನವೆಂದರೆ ಗೋರುಬಲೆ ಬೇಟೆ :**

ಚಿತ್ರದಲ್ಲಿ ತೋರಿಸಿರುವಂತೆ ಬಲೆಯನ್ನು ಸಿದ್ಧಪಡಿಸಿರುತ್ತಾರೆ. ಕೆರೆ ಕಟ್ಟೆ ನದಿಗಳಲ್ಲಿ ಈ ವಿಧಾನದಿಂದ ಮೀನು ಹಿಡಿಯುತ್ತಾರೆ. ನೀರಿನಲ್ಲಿ ಬಲೆಯ ಭಾಗ ಮುಳುಗುವಂತೆ, ಬಲೆಯ ಭಾಗ ಸುಮಾರು ಒಂದೂ ಒಂದೂವರೆ ಅಡಿ ಮುಳುಗಿಸಿ, ನೀರಿಗೆ ಲಂಬವಾಗಿ ಬಳೆಯನ್ನು ಹಿಡಿದು ಗೊರುತ್ತಾ ಹೋಗುತ್ತಾರೆ. ಸುಮಾರು ಮೂರ್ನಾಲ್ಕು ನಿಮಿಷ ಗೋರಿದ ನಂತರ, ಬಲೆಯ ಮುಖಾಂತರ ಒಳಪ್ರವೇಶಿಸಿ ಬಲೆಯಲ್ಲಿ ಸಿಕ್ಕಿ ಬಿದ್ದ ಮೀನುಗಳನ್ನು ಹಿಡಿಯುತ್ತಾರೆ. ಕೆಲವೊಮ್ಮೆ ಒಬ್ಬ ಈಚಲು, ಅನ್ನ, ಗೆದ್ದಲು ಯಾವುದನ್ನಾದರು ಎರಚುತ್ತಾನೆ. ಅದಕ್ಕೆ ಮೀನುಗಳು ಮೇಲೆ ಬೀಳುತ್ತವೆ. ಬಲೆ ಹಿಡಿದಿದ್ದವನು ಅವುಗಳನ್ನು ಗೋರು ಹಿಡಿಯುತ್ತಾನೆ. ಗೊರು ಬಲೆಗೆ ಸಾಮಾನ್ಯವಾಗಿ ಸಸರಿ, ಮಳ್ಳೆ ಮೀನು, ಸೀಗಡಿ ಬೀಳುತ್ತವೆ. ಅಪರೂಪಕ್ಕೊಂಬಂತೆ ಕೊರವ ಗಿರಲು ಮೀನುಗಳೂ ಬೀಳುತ್ತವೆ. ಸೀಗಡಿ ಸಿಗುವುದು ಅಪರೂಪ.

ಬಲೆ ಬೇಟೆಗೆ ಕುಚ್ಚ, ಕೊರವ, ಸಸಲು, ಗಿರಲು ಮುಂತಾದ ಮೀನುಗಳು ಬೀಳುತ್ತವೆ. ಸೀಗಡಿ, ಮಳ್ಳೆ ಮೀನು ಬೀಳುವುದು ಕಡಿಮೆ. ಏಕೆಂದರೆ ಬಲೆಯ ಕಂಡಿಗಳು ಸ್ವಲ್ಪ ದೊಡ್ಡದಿರುತ್ತವೆ. ಗೋರುಬಲೆಯ ಕಂಡಿಗಳು ಸಣ್ಣದಿರುತ್ತವೆ. ಆದ್ದರಿಂದಲೇ ಸೀಗಡಿ ಮಳ್ಳೆ ಮೀನುಗಳು ಹಿಡಿಯಲು ಸೂಕ್ತವಾಗಿರುತ್ತದೆ. ಬೀಸು ಬಲೆಯಲ್ಲಿ ಎರಡೂ ತರಹದ ಅಂದರೆ ಬಲೆ ಬೇಟೆ ಮತ್ತು ಗೋರು ಬಲೆಗೆ ಬೀಳುವುವುಗಳೆಲ್ಲವೂ ಬೀಳುತ್ತವೆ.

**ಗಾಳದ ವಿಧಾನ** : ಇದರಲ್ಲಿ ಎರಡು ವಿಧಾನ. ಒಂದು ಒಂಟಿ ಗಾಳ ಮತ್ತೊಂದು ಸರಗಾಳ.

ಕೆರೆ ಕಟ್ಟೆ, ನದಿ, ಬಾವಿಗಳ ತಡಿಯಲ್ಲಿ ಕುಳಿತು ಗಾಳಕ್ಕೆ ಎರೆಹುಳುಗಳನ್ನು ಸಿಕ್ಕಿಸಿ (ಸಾಮಾನ್ಯವಾಗಿ) ನೀರಿನೊಳಕ್ಕೆ ಹಾಕುತ್ತಾರೆ. ದಾರದ ಒಂದು ತುದಿಗೆ ಗಾಳವಿರುತ್ತದೆ, ಮತ್ತೊಂದು ತುದಿಯನ್ನು ಬಿದರಿನ ಕಡ್ಡಿಗೆ ಕಟ್ಟಿರುತ್ತಾರೆ. ಗಾಳವಿರುವ ಕಡೆಯಿಂದ ಸುಮಾರು ಒಂದೂ ಒಂದೂವರೆ ಅಡಿ (ನೀರಿನ ಆಳಕ್ಕೆ ಹೊಂದಿಕೊಳ್ಳುವಂತೆ ಉದ್ದ ವ್ಯತ್ಯಾಸವಿರುತ್ತದೆ) ಅಥವಾ ಎರಡು ಅಡಿ ಮೇಲಕ್ಕೆ ಒಂದು ಬೆಂಡನ್ನು ಕಟ್ಟಿರುತ್ತಾರೆ. ಬೆಂಡು ಸುಮಾರು ೩ ಇಂಚು ಉದ್ದವಿರುತ್ತದೆ. ಹೀಗೆ ಗಾಳವನ್ನು ಸಿದ್ಧಪಡಿಸಿ, ನೀರಿನಲ್ಲಿ ಹಾಕಿದಾಗ, ಗಾಳಕ್ಕೆ ಸಿಕ್ಕಿಸಿರುವ ಎರೆ ಹುಳುವನ್ನು ತಿನ್ನಲು ಮೀನು ಬರುತ್ತದೆ, ತಿನ್ನುವಾಗ ಗಾಳವನ್ನು ಜಗ್ಗುತ್ತದೆ. ಬೆಂಡು ಮುಳುಗೇಳುವುದು ಗಾಳಕ್ಕೆ ಮೀನು ಬಂದಿರುವುದು ಗೊತ್ತಾಗುತ್ತದೆ. ಬೆಂಡು ಪೂರ್ಣವಾಗಿ ಮುಳುಗಿದರೆ, ಇಲ್ಲವೆ ಎಳೆದೊಯ್ದರೆ, ಗಾಳಕ್ಕೆ ಮೀನು ಬಿದ್ದಿರುವುದು ಖಚಿತವಾಗುತ್ತದೆ. ಆಗ ತಡಮಾಡದೆ ಗಾಳವನ್ನು ಹೊರಗೆಳೆದು ಗಾಳಕ್ಕೆ ಬಿದ್ದ ಮೀನನ್ನು ಹಿಡಿಯುತ್ತಾರೆ. ಮತ್ತೆ ಗಾಳಕ್ಕೆ ಎರೆಹುಳುವನ್ನು ಸಿಕ್ಕಿಸಿ ನೀರಿಗೆ ಹಾಕುತ್ತಾರೆ. ಕೆಲವೊಮ್ಮೆ ಮೀನುಗಳು ಎರೆಹುಳುವನ್ನು ಕಚ್ಚಿಕೊಂಡಿರುತ್ತವೆ, ಆದರೆ ನುಂಗಿರುವುದಿಲ್ಲ, ಆಗಲೂ ಬೆಂಡು ಮುಳುಗುತ್ತದೆ. ಅಂತಹ ಸಮಯದಲ್ಲಿ ಗಾಳ ಹೊರಗೆಳೆದರೆ ಗಾಳ ನೀರಿನ ಮಟ್ಟಕ್ಕೆ ಬರುವ ಹೊತ್ತಿಗೆ ಮೀನು ಗಾಳದಿಂದ ತಪ್ಪಿಸಿಕೊಳ್ಳುತ್ತದೆ. ಇಲ್ಲಿ ಬೇಟೆಗಾರನ ನೈಪುಣ್ಯತೆ ಹೊರಗಚ್ಚಲ್ಪಡುತ್ತದೆ. ಯಾವಾಗ ಮೀನು ಬಿದ್ದಿದೆ, ಇಲ್ಲವೆ ಚಿಟಕಿ ಹೊಡೆಸುತ್ತದೆ ಎಂಬುದನ್ನು ಅರಿತು ಗಾಳ ಎಳೆಯಬೇಕು.

ಸಣ್ಣ ಮೀನುಗಳು (ಕರಮೀನು, ಮಳ್ಳೆ ಮೀನು) ಸುಮ್ಮನೆ ಚಿಟಕಿ ಹೊಡೆಸುತ್ತವೆ. ಅಂದರೆ, ಗಾಳವಿರುವ ಎರೆಹುಳುವನ್ನು ಇಡಿಯಾಗಿ ನುಂಗುವುದಿಲ್ಲ, ಬದಲಿಗೆ ಸ್ವಲ್ಪಸ್ವಲ್ಪವೇ ಕಿತ್ತು ತಿನ್ನಲು ತೊಡಗುತ್ತವೆ. ಆಗ ಬೆಂಡು ಸತತವಾಗಿ ಮುಳುಗೇಳುತ್ತಿರುತ್ತದೆ/ಅಲ್ಲಾಡುತ್ತಿರುತ್ತದೆ. ಇಲ್ಲವೆ ಎಳೆದಾಡಿಸಿರುತ್ತದೆ. ಹೀಗೆ ನಿಷ್ಪ್ರಯೋಜಕವಾಗಿ ಬೆಂಡು ಅಲ್ಲಾಡುವುದಕ್ಕೆ/ಮೀನು ಅಲುಗಾಡಿಸುವುದಕ್ಕೆ ಚಿಟಕಿ ಹೊಡೆಸುವುದು ಎನ್ನುತ್ತಾರೆ. ಹೀಗೆ ಚಿಟಕಿ ಹೊಡೆಸಿದಾಗ, ಮೀನು ಆಡಿಸುತ್ತಿದೆ, ಗಾಳಕ್ಕೆ ಬೀಳುವುದಿಲ್ಲವೆಂದು ಬೇಟೆಗಾರನಿಗೆ ಅರಿವಾದೊಡನೆ, ಗಾಳವನ್ನು ಹೊರಗೆಳೆದು, ಎರೆಹುಳು ಗಾಳದಲ್ಲಿ ಪೂರ್ಣವಾಗಿದ್ದರೆ, ಅದರ ಮೇಲೆ ಎಂಜಲು ಉಗಿದು ಮತ್ತೆ ನೀರಿನಲ್ಲಿ ಗಾಳ ಹಾಕುತ್ತಾನೆ. ಅರ್ಧಂಬರ್ಧ ತಿಂದಿದ್ದರೆ, ಮತ್ತೊಂದು ತುಂಡು ಎರೆಹುಳುವನ್ನು ಸೇರಿಸಿ ಎಂಜಲು ಉಗಿದು ಗಾಳ ಹಾಕುತ್ತಾನೆ. ಎಂಜಲಿಗೆ ಮೀನುಗಳು ಆಕರ್ಷಿತವಾಗುವುದರಿಂದ ಹೀಗೆ ಮಾಡುತ್ತಾರೆ. ಸಣ್ಣ ಮೀನುಗಳು ಚಿಟಕಿ ಹೊಡೆಸಿದಂತೆ ದಪ್ಪ ಮೀನುಗಳು ಚಿಟಕಿ ಹೊಡೆಸುವುದಿಲ್ಲ. ದಪ್ಪ ಮೀನುಗಳು ಹಿಂದೆ ಮುಂದೆ ನೋಡದೆ ಎರೆಹುಳುವನ್ನು ನುಂಗಿ, ಅದರೊಳಗಿರುವ ಗಾಳಕ್ಕೆ ಸಿಕ್ಕಿಕೊಳ್ಳುತ್ತದೆ. ಸಣ್ಣ ಮೀನುಗಳು ಅರ್ಧಂಬರ್ಧ ತಿಂದು ಬಿಟ್ಟ ಎರೆಹುಳು ಇದ್ದಾಗ, ಕೆಲವೊಮ್ಮೆ ದಪ್ಪ ಮೀನುಗಳು ಅದನ್ನು ಎಳೆದಾಡಿದಾಗ ಚಿಟಕಿ ಹೊಡೆಸ ಬಹುದಷ್ಟೆ.

ಗಾಳ ಹಾಕಿ ಮೀನು ಹಿಡಿಯುವಾಗ, ಮೀನುಗಳನ್ನು ಗುರುತಿಸಲು ಅಂದರೆ, ಮೀನು ಇರುವ

ಜಾಗವನ್ನು ಗುರುತಿಸಲು ಸ್ವಲ್ಪ ಆಹಾರ ಪದಾರ್ಥಗಳನ್ನು ಎಸೆಯುವುದುಂಟು. "ಸಸಲು ಆಡಿ ಕೊರವನ ತಲೆಗೆ ತಂತು" ಎಂಬ ಗಾದೆಯಿದೆ. ಕೊರವ ಇರುವ ಕಡೆ ಸಸಲು ಮೀನು ಇರುತ್ತವೆ ಎಂಬ ನಂಬಿಕೆ. ನಿಜವೂ ಹೌದು. ಆದರೆ ಸಸಲು ಮೀನುಗಳು ಅಷ್ಟಾಗಿ ಗಾಳಕ್ಕೆ ಬೀಳುವುದಿಲ್ಲ. ಆದರೊಡನಿರುವ ಕೊರವಗಳು ಗಾಳಕ್ಕೆ ತುತ್ತಾಗುತ್ತವೆ. ಗಾಳಕ್ಕೆ ಸಾಮಾನ್ಯವಾಗಿ ಕೊರವ, ಗಿರಲು, ಸಣ್ಣ ಗಾತ್ರದ ಕುಚ್ಚು ಮುಂತಾದವುಗಳು ಬೀಳುತ್ತವೆ.

**ಸರಗಾಳ ವಿಧಾನ** : ಸರಗಾಳವನ್ನು ಕೆರೆಗಳಲ್ಲಿ ಹಾಕುವುದು ಹೆಚ್ಚು. ನದಿಗಳಲ್ಲಾದರೆ, ನೀರಿನ ಹೊಡೆತಕ್ಕೆ ಸಿಕ್ಕಿ, ಕೊಚ್ಚಿ ಹೋಗಬಹುದು. ಕುಂಟೆ, ಬಾವಿಗಳಲ್ಲಿ ವಿಸ್ತಾರ ಸಾಲದು. ಆದ್ದರಿಂದ, ಕೆರೆಯೇ ಸರಗಾಳ ವಿಧಾನಕ್ಕೆ ಸೂಕ್ತವಾದುದು. ನೀರಿನ ಹೊಡೆತವಿಲ್ಲದ ನದಿ ಅಂಚಿನಲ್ಲೂ ಹಾಕಬಹುದು.

ಸುಮಾರು ಒಂದು ಒಂದೂವರೆ ಅಡಿ ಉದ್ದದ ಗಟ್ಟಿಯಾದ ದಾರಕ್ಕೆ ಗಾಳವನ್ನು ಕಟ್ಟಿ, ಇಂತಹ ಗಾಳಗಳನ್ನು (ಸುಮಾರು ೫೦-೬೦) ಒಂದು ದಪ್ಪ ಗಟ್ಟಿಯಾದ ದಾರಕ್ಕೆ/ಹುರಿಗೆ ಕಟ್ಟಿ ಸಿದ್ಧಪಡಿಸುತ್ತಾರೆ. ಒಂದು ಗಾಳಕ್ಕೂ ಮತ್ತೊಂದು ಗಾಳಕ್ಕೂ ಸುಮಾರು ೩ ಅಡಿ ಅಂತರವಿರುತ್ತದೆ. ಈ ಸರಗಾಳವನ್ನು ಹಾಕಲು ಜಾಗದ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ. ಅದರಂತೆ ಗುರುತಿಸಿಕೊಂಡ ಜಾಗಕ್ಕೆ/ಕೆರೆಯ ಅಂಚಿನಲ್ಲಿ, ನೀರು ಸುಮಾರು ೪-೫ ಅಡಿ ಆಳವಿರುವ ಜಾಗಕ್ಕೆ ಗಿಡ, ರೆಂಬೆಗಳನ್ನು ಹಾಕುತ್ತಾರೆ. ಹಾಗೆಯೇ ಗೆದ್ದಲು, ಗುಗ್ಗೆ, ಹುಬ್ಬಲು, ಈಚಲು ಮುಂತಾದ ಆಹಾರವನ್ನು ಎರಚುತ್ತಾರೆ. ಆಹಾರವನ್ನು ತಿನ್ನಲು ಬಂದ ಮೀನುಗಳು, ಆಹಾರದ ಜೊತೆಗೆ ತಂಗಲು ಗಿಡ ರೆಂಬೆಗಳ ಆಶ್ರಯವಿರುವುದರಿಂದ ತಾತ್ಕಾಲಿಕವಾಗಿ ನೆಲೆ ನಿಲ್ಲುತ್ತವೆ. ಹೀಗೆ ಪೂರ್ವಸಿದ್ಧತೆ ಮಾಡಿಕೊಂಡ ನಂತರ, ಅಲ್ಲಲ್ಲಿ (ಸೂಕ್ತವೆನಿಸಿದ ಕಡೆ) ನಾಲ್ಕಾರು ಗೂಟಗಳನ್ನು ನೆಡುತ್ತಾರೆ. ಆ ಗೂಟಕ್ಕೆ ಸರಗಾಳವನ್ನು ಕಟ್ಟಿ, ಗಾಳಕ್ಕೆ ಸಿಕ್ಕಿಸಿರುವ ಎರೆಹುಳು, ಸಣ್ಣ ಮೀನುಗಳು ನೆಲ ತಾಕದಂತೆ ಗಿಡ ರಂಬೆಗಳ ಮೇಲೆ ಹಾಕುತ್ತಾರೆ. ಇದರಿಂದ ಗಾಳಗಳು ನೀರಿನಲ್ಲಿ ನೇತಾಡುತ್ತಿರುತ್ತವೆ. ಆಹಾರಕ್ಕಾಗಿ ತಾತ್ಕಾಲಿಕವಾಗಿ ನೆಲೆ ನಿಂತ ಮೀನುಗಳು, ಸರಗಾಳದ ಆಹಾರಕ್ಕೆ ಶರಣಾಗುತ್ತವೆ. (ಆಹಾರ ಸಿಕ್ಕಿದೊಡನೆ ಮುಗಿಬೀಳುವುದು ಮೀನುಗಳು ಸ್ವಭಾವ) ಸಂಜೆಯ ಹೊತ್ತಿನಲ್ಲಿ ಗಾಳ ಹಾಕಿ ಇಡಿ ರಾತ್ರಿ ಗಾಳವನ್ನು ಹಾಗೆಯೇ ಬಿಟ್ಟಿರುತ್ತಾರೆ. ಏಕೆಂದರೆ, ಎಲ್ಲ ಗಾಳಗಳಿಗೂ ಮೀನು ಬೀಳಲೆಂದು. ಗಾಳಕ್ಕೆ ಬಿದ್ದ ಮೀನುಗಳನ್ನು ಬೆಳಗು ಹರಿಯುವ ಮೊದಲು, ನಸುಕಿನಲ್ಲಿಯೇ ಸಂಗ್ರಹಿಸಿ ಬಿಡುತ್ತಾರೆ. ಇಲ್ಲವಾದಲ್ಲಿ ಬೆಳಗಿನ ಹೊತ್ತಿನಲ್ಲಿ ಕೆರೆ ದಂಡೆಗೆ ಬರುವ ಕೊಕ್ಕರೆ, ಇತರ ಹಕ್ಕಿ ಪಕ್ಷಿಗಳಿಗೆ ಆಹಾರವಾಗಿ ಬಿಡುತ್ತವೆ. ಅಲ್ಲದೆ, ಬಿದ್ದ ಮೀನುಗಳು ಒದರಾಡಿ ತಪ್ಪಿಸಿಕೊಂಡು ಹೋಗುವ ಸಂಭವ ಉಂಟು.

**ಕಟ್ಟೆ ವಿಧಾನ** : ನೀರು ಉಗ್ಗುವುದು, ಕಟ್ಟೆ ಕುಗ್ಗುವುದು ಎಂದು ಕರೆಯುತ್ತಾರೆ. ಬೇಸಿಗೆಯಲ್ಲಿ ಕೆರೆ ಕುಂಟೆಗಳು ಬತ್ತುತ್ತಾ ಹೋಗುತ್ತವೆ. ಹೀಗೆ ಬತ್ತುತ್ತಿರುವ ಜಾಗಗಳಲ್ಲಿ ಮೀನು ಹೆಚ್ಚಿರುವ ಜಾಗಗಳನ್ನು ಗುರುತಿಸಿಕೊಂಡು ಕಟ್ಟೆ ಕಟ್ಟುತ್ತಾರೆ. ಆಳವಿಲ್ಲದ ವಿಸ್ತಾರವಾದ ಕೆರೆಯ ಅಂಚಿನಲ್ಲಿ

ಸುಮಾರು ೬೦-೭೦ ಅಡಿ ವಿಸ್ತಾರದಷ್ಟು ಕಟ್ಟೆ ಕಟ್ಟಿ, ಕೆರೆಯ ಕಡೆ ಸುಮಾರು ೧೫-೨೦ ಅಡಿಗಳಷ್ಟು ಮುಕ್ತವಾಗಿರುತ್ತಾರೆ. ಆ ಜಾಗದಲ್ಲಿ ಮೇಲೆ ತಿಳಿಸಿದಂತೆ, ಗೆದ್ದಲು, ಈಚಲು, ಗುಗ್ಗೆ ಮುಂತಾದ ಆಹಾರ ಪದಾರ್ಥಗಳನ್ನು ಎರಚುತ್ತಾರೆ. ಒಂದೆರಡು ದಿನ ಹೀಗೆ ಬಿಟ್ಟಿದ್ದು, ಪ್ರತಿ ದಿನ ಸಂಜೆ ಆಹಾರ ಪದಾರ್ಥಗಳನ್ನು ಎರಚುತ್ತಾರೆ. ಸಂಜೆಯ ಹೊತ್ತಿನಲ್ಲಿ ಆಹಾರಕ್ಕಾಗಿ ಬಂದ ಮೀನುಗಳು ದಂಡಿಯಾಗಿ ಸಿಕ್ಕ ಆಹಾರವನ್ನು ತಿಂದು ಅಲ್ಲಿಯೇ ಉಳಿಯುತ್ತವೆ. ಬೆಳಗು ಹರಿಯುವ ಮೊದಲು, ಮಬ್ಬಿನಲ್ಲಿಯೇ ಹೋಗಿ, ಮುಕ್ತವಾಗಿ ಬಿಟ್ಟಿದ್ದ ಕೆರೆ ಕಡೆಯ ಕಟ್ಟೆಯ ಭಾಗವನ್ನು ಪೂರ್ಣವಾಗಿ ಕಟ್ಟೆ ಕಟ್ಟುತ್ತಾರೆ. ಇಲ್ಲಿ ನೆಲೆ ನಿಂತ ಮೀನುಗಳು ಕಟ್ಟೆಯಿಂದ ಹೊರಹೋಗಲು ಸಾಧ್ಯವಾಗುವುದಿಲ್ಲ. ಏತದ ಬಾವಿಯಿಂದಲೂ, ಬಕೆಟ್ಟಿನಿಂದಲೂ (ಇದು ನೀರೆತ್ತಲು ಮಾಡಿಕೊಂಡ ಸಲಕರಣೆ) ಕಟ್ಟೆಯ ನೀರನ್ನು ಉಗ್ಗಿ/ಆಚೆಯ ಬದಿಗೆ ಹುಯ್ದು ಬರಿದು ಮಾಡುತ್ತಾರೆ. ಇತ್ತೀಚೆಗೆ ನೀರೆತ್ತುವ ಪಂಪಿನಿಂದಲೂ ನೀರನ್ನು ಬರಿದು ಮಾಡುತ್ತಾರೆ. ನೀರು ಬರಿದಾಗಿ ಬಗ್ಗಡದಲ್ಲಿ ಮೀನು ಒದ್ದಾಡುತ್ತಿರುತ್ತವೆ. ಇವುಗಳನ್ನು ಬೇಟೆಗಾರ ಸಂಗ್ರಹಿಸುತ್ತಾನೆ. ಚೇಳು, ಮೀನುಗಳನ್ನು ಹಿಡಿಯುವಾಗ ಎಚ್ಚರ ವಹಿಸಬೇಕು. ಇಲ್ಲವಾದಲ್ಲಿ, ಅದರ ಮೂತಿಯಲ್ಲಿರುವ ಮುಳ್ಳಿನಿಂದ ಹೊಡೆಯುತ್ತದೆ. ಇದು ಕುಟುಕುವ/ಹೊಡೆಯುವಷ್ಟು ಬುದ್ಧಿವಂತಿಕೆಯಿಲ್ಲ. ಹಿಡಿಯುತ್ತಿದ್ದಂತೆಯೇ ಒದ್ದಾಡುವುದರಿಂದ, ಅಕ್ಕಪಕ್ಕಕ್ಕೆ ಬಹು ಸುಲಭವಾಗಿ ಬಾಗುವುದರಿಂದ ಕೈಯಿಗೆ ತಗಲುತ್ತದೆ, ತಗುಲಿದ ತಕ್ಷಣ ರಕ್ತ ಬರುತ್ತದೆ, ಅಸಾಧ್ಯ ನೋವೂ ಕಾಣಿಸಿಕೊಳ್ಳುತ್ತದೆ. ಆದ್ದರಿಂದ, ಚೇಳು, ಮೀನು ಹಿಡಿಯುವ ಮುನ್ನ ಕುಡಗೋಲಿನಿಂದ ಹೊಡೆದು, ನಿಸ್ತೇಜವಾದ ನಂತರ ಹಿಡಿಯುತ್ತಾರೆ. ಮೀನುಗಳು ತಪ್ಪಿಸಿಕೊಳ್ಳಲು ನೀರು ಇಲ್ಲದ ಕಾರಣ ಯಾವುದೇ ಪ್ರತಿರೋಧವಿಲ್ಲದೆ, ಎಲ್ಲ ಮೀನುಗಳು ಶರಣಾಗುತ್ತವೆ.

**ಕೂಳೆ ವಿಧಾನ :** ಕೂಳೆಯನ್ನು ಬಿದರಿನ ದಬ್ಬೆಯಿಂದ/ಕಡ್ಡಿಯಿಂದ ಮಾಡಿರುತ್ತಾರೆ. ಕೂಳೆಯ ತಳಭಾಗದ ತುದಿ ಚೂಪಾಗಿರುತ್ತದೆ. ಮತ್ತೊಂದು ತುದಿಗೆ ದುಂಡಗೆ ಸೇರಿಸಿ ಕಟ್ಟಿರುತ್ತಾರೆ. ಕೆಳಭಾಗ ಸುಮಾರು ಎರಡೂವರೆ ಮೂರಡಿ ಅಗಲವಿರುತ್ತದೆ. ಮೇಲ್ಭಾಗ ಒಂದು ಅಡಿ ಅಗಲವಿರಬಹುದು. ಈ ತುದಿಯನ್ನು ಕೊಳೆಯ ಬಾಯಿ ಎಂದು ಕರೆಯುತ್ತಾರೆ. ಬೇಸಿಗೆಯಲ್ಲಿ ನೀರು ಬತ್ತುತ್ತಿರುವಾಗ ಇಲ್ಲವೇ, ಕೆರೆಗೆ ಹೊಸ ನೀರು ಬರುವಾಗ ಕೊಳೆಯಲ್ಲಿ ಮೀನು ಹಿಡಿಯುತ್ತಾರೆ. ಕೆರೆ ನದಿಗಳಲ್ಲಿರುವ ಮೀನುಗಳು ಮುಂಗಾರಿನ ಹೊಸ ನೀರಿಗೆ ಮೋಹಗೊಳ್ಳುತ್ತವೆ. ನೀರು ಹರಿದು ಬರುವ ಕಡೆಗೆ ನುಗ್ಗುತ್ತವೆ. ಹೊಸ ನೀರು ಮೀನುಗಳಿಗೆ ಪ್ರಿಯ, ಕೆರೆ ತುಂಬಿ ಹರಿವಾಗ, ಒಂದು ಕೆರೆಯಿಂದ ಮತ್ತೊಂದು ಕೆರೆಗೆ ಹೋಗುತ್ತವೆ. ಈ ಸಮಯದಲ್ಲಿ ಕೂಳೆ ಹಿಡಿದು, ಅಂಚಿಗೆ ಕೆರೆ ದಾಟಲು ಬಂದ ಮೀನುಗಳನ್ನು ಹದ್ದಿನ ಕಣ್ಣಿನಿಂದ ಕಾದಿದ್ದು, ಮೀನುಗಳ ಮೇಲೆ ಹಾಕುತ್ತಾರೆ. ಹಂತವಾಗಿರುವ ತುದಿ ಭೂಮಿಯೊಳಗೆ ಇಳಿಯುತ್ತದೆ. ಇದರೊಳಗೆ ಸಿಕ್ಕಿ ಬಿದ್ದ ಮೀನು ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ, ಹೀಗೆ ಸಿಕ್ಕಿ ಬಿದ್ದ ಮೀನನ್ನು ಕೂಳೆಯೊಳಗೆ ಕೈ ಹಾಕಿ ಹಿಡಿಯುತ್ತಾರೆ. ಕುಚ್ಚ, ಕೊರವ, ಗೆಂಡೆ ಮೀನು, ಹಾವ್ ಮೀನು, ಬಾಳೆ ಮೀನುಗಳು ಕೂಳೆಗೆ ಸಿಕ್ಕಿ ಬೀಳುವ ಮೀನುಗಳು.

ಬೇಸಿಗೆಯಲ್ಲಿ ಕೆರೆ ಬತ್ತುತ್ತಾ ಹೋಗುವುದರಿಂದ, ಕೆರೆಯ ಅಂಚಿನಲ್ಲಿ ಸುಮಾರು ಎರಡು-ಮೂರು ಅಡಿ ನೀರಿರುವ ಜಾಗಗಳಲ್ಲಿ ಕೂಳೆ ಹಾಕಿ ಮೀನು ಹಿಡಿಯುತ್ತಾರೆ. ಕೂಳೆ ಹಾಕುವ ಮೊದಲು (ಸಂಜೆ) ಕೆರೆ ಅಂಚಿನಲ್ಲಿ ನೀರು ಕಡಿಮೆ ಇರುವ ಕಡೆ ಗೆದ್ದಲು ಈಚಲುಗಳನ್ನು ಎರಚಿ, ಬೆಳಿಗ್ಗೆ ಕೂಳೆ ಹಾಕುತ್ತಾರೆ, ಮತ್ತಷ್ಟು ನೀರು ಕಡಿಮೆಯಾದಾಗ ಕೆರೆಯೆಲ್ಲಾ ಓಡಾಡಿಕೊಂಡು ಕೂಳೆ ಹಾಕಿ, ಅದರೊಳಗೆ ಸಿಕ್ಕಿಬಿದ್ದ ಮೀನುಗಳನ್ನು ಹಿಡಿಯುತ್ತಾರೆ.

**ಕೊಡಮೆ ವಿಧಾನ** : ಮಾಗಡಿ ಸುತ್ತಮುತ್ತ ಪ್ರದೇಶದಲ್ಲಿ ಕೊಡಮೆ ಎಂದರೆ ತುಮಕೂರಿನ/ತಿಪಟೂರಿನ ಕಡೆ ಬಡ್‌ಗುಳಿ ಎನ್ನುತ್ತಾರೆ. ಕೆಲವು ಕಡೆ ಇರ್‍ಗುಳಿ/ಇರ್‌ಗುಳಿ ಎಂದೂ ಕರೆಯುತ್ತಾರೆ. ಕೊಡಮೆಯನ್ನು ತೆಂಗಿನ ಕಡ್ಡಿಯಿಂದ ತಯಾರಿಸುವುದರಿಂದ ಬರಲು ಕೊಡಮೆ ಎಂದೂ ಕರೆಯುತ್ತಾರೆ. ಕೆರೆ ಕಟ್ಟೆಗಳು ತುಂಬಿ, ಮುಂಗಾರಿನ ಹೊಸನೀರು ಒಂದು ಕೆರೆ ಕಟ್ಟೆಗಳಿಂದ ಮತ್ತೊಂದಕ್ಕೆ ಹರಿದು ಹೋಗುವುದು ತಿಳಿದಿರುವ ವಿಷಯ. ಹೀಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಿವ ನೀರಿನ ಒತ್ತಡ ಕಡಿಮೆ ಇರುವ ಕಡೆ ಕಟ್ಟೆ ಕಟ್ಟಿ, ನೀರು ಒಂದು ಕಡೆ ಮಾತ್ರ ಹಾದು ಹೋಗುವಂತೆ ಮಾಡುತ್ತಾರೆ. ನೀರು ಹರಿದು ಹೋಗುವಂತೆ ಮಾಡಿದ ಜಾಗದಲ್ಲಿ (ಬಾಯಿಗೆ) ಕೊಡಮೆಯನ್ನು ಗೂಟ ಹೊಡೆದು ಕಟ್ಟಿ ಇಡುತ್ತಾರೆ. ನೀರು ರಭಸವಾಗಿ ಕಟ್ಟೆ ಹೊಡೆದರೂ, ಕೊಡಮೆ ಕೊಚ್ಚಿ ಹೋಗದಿರಲೆಂದು ಗೂಟಕ್ಕೆ ಕಟ್ಟಿರುತ್ತಾರೆ. ಕೊಡಮೆಯ ಮೂಲಕ ನೀರು ಹರಿದು ಹೋಗಲು ಯಾವುದೇ ಅಡ್ಡಿಯಿರುವುದಿಲ್ಲ. ಕೊಡಮೆಯು ಕಂಡಿಗಳಿಂದ ಕೂಡಿರುವುದರಿಂದ ನೀರು ಸರಾಗವಾಗಿ ಹರಿದು ಹೋಗುತ್ತದೆ. ಆದರೆ, ಅದರೊಟ್ಟಿಗೆ ಬಂದ ಮೀನುಗಳು ಕೊಡಮೆಯನ್ನು ಪ್ರವೇಶಿಸಬಹುದೇ ಹೊರತು ಹೊರಬರಲಾಗುವುದಿಲ್ಲ. ಕೊಡಮೆಯ ರಚನೆಯೇ ಹಾಗಿರುತ್ತದೆ. ಕೊಡಮೆಯ ಹಿಂಬದಿಯಲ್ಲಿ ದುಂಡಗೆ, ಕೈಹಿಡಿಸುವಷ್ಟು ಅಗಲ ಬಾಯಿಯಿರುತ್ತದೆ. ಬಿದ್ದ ಮೀನುಗಳನ್ನು ಹೊರತೆಗೆಯಲು ಇದು ಸಹಕಾರಿಯಾಗುತ್ತದೆ. ಕೊಡಮೆಯನ್ನು ಮೀನು ಹಿಡಿಯಲು ಕಟ್ಟಿದ್ದಾಗ ಹಿಂಬದಿಯ ಬಾಯನ್ನು ಬಟ್ಟೆಯಿಂದ ಮುಚ್ಚಿ ಕಟ್ಟಿರುತ್ತಾರೆ. ನೀರಿನೊಂದಿಗೆ ಮೀನುಗಳು ಕೊಡಮೆಯನ್ನು ಪ್ರವೇಶಿಸಿ, ನೀರು ಹೊರ ಹೋಗಿ, ಮೀನುಗಳು ಸಂಗ್ರಹವಾಗುತ್ತವೆ. ಕೊಡಮೆಯನ್ನು ಸಂಜೆ/ರಾತ್ರಿ ೭-೮ ಗಂಟೆಗೆ ಕಟ್ಟಿ ಬೆಳಿಗ್ಗೆ ತೆಗೆಯುವುದು ವಾಡಿಕೆ. ಆದರೂ ರಾತ್ರಿ ಒಂದೆರಡು ಬಾರಿ ಕೊಡಮೆಯನ್ನು ಪರೀಕ್ಷಿಸಲು ಬರುತ್ತಾರೆ. ಏಕೆಂದರೆ, ಕೊಡಮೆಯಲ್ಲಿ ಸಂಗ್ರಹವಾದ ಮೀನುಗಳನ್ನು, ಅದರೊಟ್ಟಿಗೆ ಹಾವೇನಾದರು ಬಂದು ಸಿಕ್ಕಿ ಬಿದ್ದಿದ್ದರೆ, ಕೊಡಮೆಯಲ್ಲಿರುವ ಮೀನುಗಳು ಹಾವಿಗೆ ಆಹಾರವಾಗುತ್ತವೆ. ಇಲ್ಲವೇ ಮೀನುಗಳೇ ಅತ್ತ ಸುಳಿಯುವುದಿಲ್ಲ. ಎರಡನೆಯದಾಗಿ, ಮೀನು ಬೇಗ ಸಂಗ್ರಹವಾಗಿದ್ದರೆ, ಕೊಡಮೆ ತುಂಬಾ ಮೀನು ಬಿದ್ದಿದ್ದರೆ, ಅದನ್ನು ಖಾಲಿ ಮಾಡಿ ಮತ್ತೆ ಕೊಡಮೆ ಇಡಲು ಬರುತ್ತಾರೆ. ಅಲ್ಲದೆ, ನೀರಿನ ಒತ್ತಡವೇನಾದರೂ ಜಾಸ್ತಿಯಾಗಿ ಕೊಡಮೆ ಕಿತ್ತು ಹೋಗುವ ಅವಕಾಶವಿರುವುದರಿಂದ, ಮೀನು ಇಲ್ಲದೆ, ಕೊಡಮೆಯನ್ನು ಕಳೆದುಕೊಳ್ಳುವ ಸಾಧ್ಯತೆಯಿರುವುದರಿಂದ ರಾತ್ರಿಯಲ್ಲಿ ಒಂದೆರಡು ಬಾರಿ ಕೊಡಮೆ ನೋಡಲು ಬರುವುದುಂಟು. ಕೆಲವೊಮ್ಮೆ ಕೊಡಮೆ ಇಟ್ಟ ಜಾಗಕ್ಕೆ ಸರಿಯಾಗಿ ಮೀನು ಬಾರದಿರಬಹುದು, ಆದ್ದರಿಂದ ಕೊಡಮೆಯ ಜಾಗ ಬದಲಾಯಿಸಬೇಕಾಗಬಹುದು.

ಇಷ್ಟಾದರೂ, ಇದರಲ್ಲಿ ಬೀಳುವ ಮೀನುಗಳೆಲ್ಲಾ ಸಣ್ಣ ಮೀನುಗಳೇ, ಸಸಲು, ಮಳ್ಳೆ ಮೀನು, ಸಣ್ಣಗಿರುವ ಕೊರವ ಮುಂತಾದವು ಮಾತ್ರ ಬೀಳುತ್ತವೆ.

**ಹತ್ ಮೀನು ಬೇಟೆ** : ಮುಂಗಾರಿನ ಹೊಸ ನೀರಿನಲ್ಲಿ ಓಡಾಡುವ, ವಲಸೆ ಹೋಗುವಂತೆಯೇ, ಕೆರೆಯ ತಡಿಯಲ್ಲಿ ಅಥವಾ ಹೊಸನೀರು ಹರಿದು ಹೋಗುವ ಅಂಚಿನಲ್ಲಿ, ಎದುರಾಗುವ ದಿಬ್ಬಗಳ ಮೇಲೆ ಮೀನು ಹತ್ತುವುದುಂಟು, ಮಲಗುವುದುಂಟು, ಇದಕ್ಕೆ ಮೀನು ದಡ ಹತ್ತುವುದು ಎನ್ನುತ್ತಾರೆ. ಇವುಗಳ ಬೇಟೆಯೇ ಹತ್‌ಮೀನು ಬೇಟೆ. ಸಾಮಾನ್ಯವಾಗಿ ರಾತ್ರಿಯ ಹೊತ್ತಿನಲ್ಲಿ ದಡ ಹತ್ತುವುದು ಜಾಸ್ತಿ. ಏಕೆಂದರೆ, ದಿನದ ಹೊತ್ತಿನಲ್ಲಿ ಕೊಕ್ಕರೆ, ಹದ್ದು, ಹಕ್ಕಿಗಳಿಗೆ ಆಹಾರವಾಗುವ ಭಯವಿರಬೇಕು. ರಾತ್ರಿಯ ಹೊತ್ತಿನಲ್ಲಿ ನಿರ್ಭಯವಾಗಿ ದಡ ಏರುತ್ತವೆ, ಮಲಗುತ್ತವೆ. ಬೇಟೆಗಾರ ಬ್ಯಾಟರಿ ಹಿಡಿದು, ಹೊರಟು, ಈ ಮೊದಲೆ ಪರಿಚಿತವಿರುವ ಸ್ಥಳಗಳಲ್ಲಿ ಬೇಟೆಗೆ ಮುಂದಾಗುತ್ತಾನೆ. ಹೀಗೆ ದಡವೇರಿದ/ಮಲಗಿದ ಮೀನುಗಳ ಮೇಲೆ ಬ್ಯಾಟರಿ ಹಾಕಿ, ಕೂಡಲೇ, ಅವುಗಳ ಮೇಲೆ ಕೊಡಮೆ ಹಾಕುತ್ತಾನೆ. ಕೊಡಮೆಯೊಳಗೆ ಸಿಕ್ಕಿಬಿದ್ದ ಮೀನು ಬೇಟೆಗಾರನಿಗೆ ಶರಣಾಗುತ್ತದೆ. ಹತ್ ಮೀನು ಬೇಟೆಗೆ ಕೂಳೆ ಸೂಕ್ತವಾದುದು. ಏಕೆಂದರೆ, ಮೀನು ತಪ್ಪಿಸಿಕೊಂಡು ಹೋಗುವ ಮುನ್ನ, ಮೀನ ಮೇಲೆ ಕೂಳೆ ಹಾಕಿ ಸುಲಭವಾಗಿ ಹಿಡಿಯಬಹುದು. ಆದರೆ ಕೂಳೆ ಹಾಕುವ ಕೈ ಮಾತ್ರ ಪಾದರಸದಂತಿರಬೇಕು. ಬ್ಯಾಟರಿ ಬೆಳಕಿನಲ್ಲಿ ಕೊಂಚ ಗಲಿಬಿಲಿಗೊಂಡ ಮೀನನ್ನು ಕೂಳೆಯಲ್ಲಿ ಕೂಡಲೇ ಸೆರೆ ಹಿಡಿಯಬೇಕು. ಇಲ್ಲವಾದಲ್ಲಿ, ಕ್ಷಣಾರ್ಧದಲ್ಲಿ ಗಲಿಬಿಲಿಯಿಂದ ಎಚ್ಚರಗೊಂಡ ಮೀನು ಪರಾರಿಯಾಗಿ ಬಿಡುತ್ತದೆ. ಮತ್ತೆ ಸಿಗುವುದು ಕನಸಿನ ಮಾತು, ಬ್ಯಾಟರಿ ಬೆಳಕಿಗೆ ಗಲಿಬಿಲಿಗೊಂಡ ಮೀನುಗಳನ್ನು ದೊಣ್ಣೆಯಿಂದಲೂ ಹೊಡೆದು ಹಿಡಿಯುತ್ತಾರೆ. ಕುಡಗೋಲಿನಿಂದ ಹೊಡೆದೂ ಹಿಡಿಯುತ್ತಾರೆ. ಇದು ನಿಜವಾಗಿಯೂ ಕೂಳೆ ಇಲ್ಲದವರ ಪಾಡೆಂದೆ ಹೇಳಬೇಕು. ಈ ಬೇಟೆಗೆ ಸಿಕ್ಕುವ ಮೀನುಗಳೆಂದರೆ ಕುಚ್ಚು, ಹಾವ್‌ಮೀನು, ಗೆಂಡೆ ಮೀನು, ಬಾಳೆ ಮೀನುಗಳು.

**ಕೆರೆ ಬೇಟೆ** : ಬೇಸಿಗೆಯಲ್ಲಿ ಬತ್ತುತ್ತಿರುವ ಕೆರೆಯ ಮೀನುಗಳನ್ನು ಬೇಟೆಯಾಡಲು, ಊರಲ್ಲಿ ಡಂಗೂರ ಸಾರಿಸಿ, ಒಂದು ದಿನವನ್ನು ನಿಗದಿಪಡಿಸುತ್ತಾರೆ. ನಿಗದಿಪಡಿಸಿದ ದಿನದಂದು ಮನೆಗೊಬ್ಬರಂತೆ ಸೇರಿ ಮೀನು ಹಿಡಿಯುವ ವಿಧಾನವೇ ಕೆರೆಬೇಟೆ.

ನಿಗದಿತ ದಿನದಂದು ಸೇರಿದ ಊರ ಜನರು ಬಲೆ ಬೀಸಿ ಇಡೀ ಕೆರೆಯನ್ನು ಜಾಲಾಡಿ ಮೀನು ಹಿಡಿಯುತ್ತಾರೆ. ಕೂಳೆಯನ್ನು ಬಳಸಿಯೂ ಮೀನು ಹಿಡಿಯುತ್ತಾರೆ. ಕಟ್ಟೆ ವಿಧಾನದಲ್ಲೂ, ಅಂತೂ ಕೆರೆಯ ಮೀನನೆಲ್ಲಾ ಹಿಡಿಯುತ್ತಾರೆ. ಹೀಗೆ ಸಂಗ್ರಹಿಸಿದ/ಹಿಡಿದ ಮೀನನ್ನು ಎಲ್ಲರೂ ಸಮವಾಗಿ ಹಂಚಿಕೊಳ್ಳುತ್ತಾರೆ.

**ಡೈನಾಮೈಟ್ ವಿಧಾನ** : ಬಾವಿ, ಕೊಳ, ಕುಂಟೆ, ಕಲ್ಯಾಣಿಗಳಲ್ಲಿ ವಿಸ್ತಾರ ಕಡಿಮೆ, ಆಳ ಜಾಸ್ತಿ. ನೀರನ್ನು ಬರಿದುಗೊಳಿಸಿ ಮೀನು ಹಿಡಿಯಲು ಸುಲಭವಲ್ಲ. ಆದುದರಿಂದ ಇಲ್ಲಿರುವ ಮೀನುಗಳನ್ನು ಸುಲಭವಾಗಿ ಹಿಡಿಯಲು ಕಂಡುಕೊಂಡ ವಿಧಾನವೇ ಡೈನಾಮೈಟ್ ವಿಧಾನ.

ಒಂದು ಮಡಿಕೆಯೊಳಗೆ ಮಣ್ಣು ತುಂಬಿ, ಅದರೊಳಗೆ ಡೈನಾಮೈಟ್ ಇಟ್ಟು, ಬತ್ತಿಗೆ ನೀರು ತಾಗದಂತೆ ಮುಚ್ಚಿ, ಬೆಂಕಿ ಹಚ್ಚಿ, ಬಾವಿ ಕೆರೆ, ಕುಂಟೆ, ಕಲ್ಯಾಣಿಯೊಳಗೆ ಹಾಕುತ್ತಾರೆ, ಡೈನಾಮೈಟ್ ಹಾಕಿದ ಕೆಲ ಕ್ಷಣಗಳಲ್ಲಿಯೂ ಸಿಡಿಯುತ್ತದೆ. ಒಣಗಿರುವ ಮೀನು ಶಬ್ದಕ್ಕೆ ಅಥವಾ ವಾಸನೆಗೊ ಅಥವಾ ಪೆಟ್ಟು ಬಿದ್ದೊ, ಅಂತೂ ಡೈನಾಮೈಟ್ ಸಿಡಿದ ಕೂಡಲೆ ಮೀನು ತೇಲುತ್ತವೆ. ಸುಲಭವಾಗಿ, ಶ್ರಮವಿಲ್ಲದೆ ಮೀನು ಬೇಟೆಯೆಂದರೆ, ಡೈನಾಮೈಟ್ ಬೇಟೆಯೊಂದೆ.

ನದಿ ತೀರದಲ್ಲಿಯೂ ಡೈನಾಮೈಟ್ ವಿಧಾನವನ್ನು ಅನುಸರಿಸುತ್ತಾರೆ. ನದಿಯ ಅಂಚಿನಲ್ಲಿ ಆಳವಾದ ಗುಂಡಿ ಹೊಡೆಯುತ್ತಾರೆ. ಇಲ್ಲವೆ ಗುಂಡಿಯಿರುವ ಜಾಗವನ್ನು ಗುರುತಿಸಿಕೊಳ್ಳುತ್ತಾರೆ. ನದಿಯ ದಡದ ಕಡೆ ಅರ್ಧಚಂದ್ರಾಕಾರವಾಗಿ ಕಟ್ಟೆ ಕಟ್ಟುತ್ತಾರೆ. (ಗುಂಡಿಯ ಅರ್ಧಭಾಗ) ಕೆಲವು ಬಾರಿ ಮುಕ್ಕಾಲು ಭಾಗದಷ್ಟು ಕಟ್ಟೆ ಕಟ್ಟುತ್ತಾರೆ. ಅಂಚಿನಲ್ಲಿ ರೆಂಬೆಗಳನ್ನು ನೆಟ್ಟು ನೆರಳು ಬೀಳುವಂತೆ ಮಾಡುತ್ತಾರೆ, ನದಿಯಲ್ಲಿ ಓಡಾಡುವ ಮೀನು ಈ ಗುಂಡಿಗೆ ಬಂದು ಹೋಗುವಂತೆ, (ಮುಕ್ತವಾದ ಭಾಗದ ಮೂಲಕ) ವ್ಯವಸ್ಥೆ ಇರುತ್ತದೆ. ಅಲ್ಲದೆ ಆಹಾರ ಪದಾರ್ಥಗಳನ್ನು ಆ ಜಾಗದಲ್ಲಿ ಎರಚುತ್ತಾರೆ. ಆಹಾರಕ್ಕಾಗಿ ಬಂದ ಮೀನುಗಳು ಅಲ್ಲಿಯೇ ನಿಲ್ಲುತ್ತವೆ. ಹೀಗೆ ಎರಡು ಮೂರು ದಿನ ಆಹಾರ ಪದಾರ್ಥಗಳನ್ನು ಹಾಕುತ್ತಾ ಮೀನು ಬಂದು ಸೇರುವಂತೆ ಮಾಡುತ್ತಾರೆ. ನದಿಯ ಕಡೆ ಮುಕ್ತವಾದ ಕಟ್ಟೆಯಿಲ್ಲದ ಜಾಗದಿಂದ ಮೀನು ಹೊರಹೋಗದಂತೆ ಮುಚ್ಚುತ್ತಾರೆ. ಇಲ್ಲವೆ ತಡೆಯುತ್ತಾರೆ. ಡೈನಾಮೈಟನ್ನು ಹಾಕಿ, ಸಿಡಿಸಿ, ಮೀನುಗಳು ತೇಲುವಂತೆ ಮಾಡುತ್ತಾರೆ. ತೇಲಿದ ಮೀನುಗಳನ್ನು ಕೊಚ್ಚಿ ಹೋಗದಂತೆ ತಡೆದು, ಗೋರಿಕೊಂಡು ಬರುತ್ತಾರೆ.

ಮತ್ತು ಬರಿಸುವ ಸೊಪ್ಪನ್ನು ಅರೆದು ನೀರಿನಲ್ಲಿ ಹಾಕಿದಾಗ ಮೀನುಗಳು ತಲೆ ಸುತ್ತಿ ತೇಲುತ್ತವೆ ಕಾಡುಮೆಣಸಿನಬಳ್ಳಿ ಅಥವಾ ಬೀಗದ ಮರದ ಎಲೆ ಅಥವಾ ಅವಳಿಕಾಯಿಯನ್ನು ಜಜ್ಜಿ ಬಾವಿ, ಕೆರೆ, ಕಟ್ಟೆ ಕಲ್ಯಾಣಿಗಳಿಗೆ ಹಾಕುತ್ತಾರೆ. ಹಾಗೆಯೇ ನೀರಿನಲ್ಲಿ ಸೇರುವಂತೆ ಕದಡುತ್ತಾರೆ. ಕಾಡುಮೆಣಸಿನ ಬಳ್ಳಿ ಅಥವಾ ಬೀಗದ ಮರದ ಎಲೆ ರಸ ಬೇಗ ನೀರಿನಲ್ಲಿ ಬೆರೆಯುತ್ತದೆ. ಅವಳಿಕಾಯಿ ನೊರೆ ಬರುತ್ತದೆ. ಯಾವುದೇ ಇರಲಿ ಕೆಲಸವೊಂದೆ, ಮೀನಿಗೆ ಮತ್ತು ಬರಿಸಿ ತೇಲುವಂತೆ ಮಾಡುವುದು. ಕೆಲವೊಮ್ಮೆ ಮೀನುಗಳು ಅಸುನೀಗಿಯೇ ತೇಲುತ್ತವೆ. ಪ್ರಮಾಣ ಕಡಿಮೆಯಾದರೆ ತಲೆಸುತ್ತಿ ಒದ್ದಾಡುತ್ತಾ ತೇಲುತ್ತವೆ. ಹೇಗೆ ತೇಲಿದರೂ ಬೇಟೆಗಾರನಿಗೆ ಒಂದೆ, ತೇಲಿದ ಮೀನುಗಳನ್ನು ಹಿಡಿದು ಬುಟ್ಟಿಗೆ ಸೇರಿಸುವುದು.

ಸೋಲಿಗರಲ್ಲಿ ಮೀನು ಬೇಟೆ ಕಡಿಮೆ. ಮತ್ತು ಬರಿಸುವ ಸೊಪ್ಪು ಹಾಕಿ ಹಿಡಿಯುವ[illegible] ಹೆಚ್ಚು. ಹೊಳೆಗೆ ಮತ್ತು ಬರಿಸುವ ಸೊಪ್ಪಿನ ರಸ ಸೇರಿಸಿ ಇಲ್ಲವೇ ಅವಳಿಕಾಯಿ [illegible] ಜಜ್ಜಿ, ಸೇರಿಸಿ, ಮೀನುಗಳಿಗೆ ತಲೆ ಸುತ್ತುವಂತೆ ಮಾಡಿ ಹಿಡಿಯುತ್ತಾ[illegible] [illegible]ವಳಿಕಾಯಿ) ಬೇಟೆಯನ್ನು ಮಾಡುತ್ತಾರೆ. ಇವರು ಕೊಡಮೆಯನ್ನು [illegible] ಅಪರೂಪಕ್ಕೆ ಕೂಡಮೆ ಕಟ್ಟೆ ಕಟ್ಟಿ ನೀರು ಎರಚಿಯೂ ಮೀನು [illegible] ಎನ್ನುತ್ತಾರೆ. ನೀರು ಉಗ್ಗಿ, ಅಂದರೆ [illegible]ಯುತ್ತಾರೆ.

ಬಯಲು ಪ್ರದೇಶ[illegible] ಮುಂಗಾರಿನ ಮಳೆಯಲ್ಲಿ ಮೀನು ಹಿಡಿಯುವುದು ಹೆಚ್ಚು. ಮತ್ತೆ

ಬೇಸಿಗೆಯಲ್ಲಿ ಎಲ್ಲೆಡೆ ಕೆರೆ ಕುಂಟೆಗಳು ಒಣಗಿರುತ್ತವೆ. ಮೀನು ಬೇಟೆಗೆ ಅನುಕೂಲಕರ ವಾತಾವರಣ. ಹಾಗೆಯೇ ಬಿಡುವಿನ ವೇಳೆ ಬೇರೆ. ಯುಗಾದಿಯ ನಂತರ ಹೊಸತೊಡಕು ದಿವಸ ಮೀನಿನ ಬೇಟೆಯಾಡುತ್ತಾರೆ. ಹೊಸ ತೊಡಕಿನ ದಿವಸ ಮಾಂಸಾಹಾರಿಗಳು ಅಂದು ಮಾಂಸಾಹಾರವನ್ನು ಮಾಡುತ್ತಾರೆ. ಅದರಲ್ಲೂ ರೈತಾಪಿ ಜನರು ಅತಿ ಹೆಚ್ಚು ಖರ್ಚಿಲ್ಲದ, ಮಾಂಸ ದೊರಕುವ ಬೇಟೆ, ಆದ್ದರಿಂದ ಬೇರಾವುದೇ ಮಾಂಸದ ಏರ್ಪಾಡು ಇಲ್ಲದಿದ್ದಲ್ಲಿ ಮೀನು ಬೇಟೆಯಾಡುತ್ತಾರೆ.

ಇತ್ತೀಚೆಗೆ ಹಲವಾರು ಹೊಸ ತಳಿಗಳು ಕಾಣಿಸಿಕೊಂಡಿವೆ. ನಗರ ಪ್ರದೇಶಗಳಲ್ಲಿ ಮಾರಾಟವಾಗುವ ಬಹಳಷ್ಟು ಮೀನುಗಳು ಹೊಸ ತಳಿಗಳೆ, ಉದಾಹರಣೆಗೆ ಕನ್ನಂಬಾಡಿಯಲ್ಲಿ ಅಭಿವೃದ್ಧಿ ಪಡಿಸಿರುವ ಕಾವೇರಿ ಮೀನುಗಳು.

**ಏಡಿ ಬೇಟೆ** : ಏಡಿಯನ್ನು ನಳ್ಳಿ ಎಂದೂ ಕರೆಯುತ್ತಾರೆ. ಏಡಿಗಳಲ್ಲಿ ಎರಡು ವಿಧ. ಉಲ್‌ಏಡಿ ಅಥವಾ ಹುಲ್‌ಏಡಿ ಮತ್ತು ಕಲ್ಲೇಡಿ. ಉಲ್ಲೇಡಿ ಸಾಮಾನ್ಯವಾಗಿ ಜುಲೈ, ಆಗಸ್ಟ್‌ನಿಂದ ಡಿಸೆಂಬರ್ ಜನವರಿಯವರೆಗೆ ಮಾತ್ರ ಗದ್ದೆ ಬಯಲು ಜೌಗು ಪ್ರದೇಶದಲ್ಲಿ, ಕೆರೆ ಏರಿಯ ಸಂದು ಗೊಂದುಗಳಲ್ಲಿ, ಅಂಚಿನಲ್ಲಿ ವಾಸಿಸುತ್ತವೆ. ಕಲ್ಲೇಡಿ ಕೆರೆ ನದಿಗಳಲ್ಲಿ ಹೆಚ್ಚು. ಕಲ್ಲೇಡಿಗಳು ಕೆರೆ ಏರಿಯ ಸಂದುಗೊಂದುಗಳಲ್ಲಿ, ಕಲ್ಲಿನ ಇರುಕಿನಲ್ಲಿ ನದಿಗಳ ದಂಡೆಯಲ್ಲಿ ಸರ್ವ ಋತುಗಳಲ್ಲಿಯೂ ಇರುತ್ತವೆ. ನೀರು ಬತ್ತಿದಾಗ ಮಾತ್ರ ಇವುಗಳು ಇಲ್ಲವಾಗುತ್ತವೆ. ಉಲ್ಲೇಡಿಯು ಗದ್ದೆಯ ಬಯಲಿನಲ್ಲಿರುವ ಬದುಗಳ ಬಿಲದಲ್ಲಿಯೂ ವಾಸಿಸುತ್ತವೆ. ಇವುಗಳನ್ನು ಹಿಡಿಯಲು ವಿಶೇಷ ಸಿದ್ಧತೆಯೇನೂ ಬೇಕಾಗಿಲ್ಲ. ಬರಿಕೈಯಲ್ಲಿಯೇ ಬಯಲಿನಲ್ಲಿ ಓಡಾಡುವಾಗ ಹಿಡಿಯುತ್ತಾರೆ. ಸ್ವಲ್ಪ ದಪ್ಪಗಿರುವ ಏಡಿಗಳು, ಸ್ವಲ್ಪ ಗಟ್ಟಿಯಾಗಿ ಕೊಂಡಿಯಲ್ಲಿ ಹಿಡಿದುಕೊಳ್ಳಬಹುದಷ್ಟೆ. ಆದ್ದರಿಂದ ಏಡಿಯ ಮಧ್ಯಭಾಗಕ್ಕೆ ಕೈಹಾಕಿ ಹಿಡಿಯುತ್ತಾರೆ. ಹೀಗೆ ಹಿಡಿದಾಗ ಕೊಂಡಿಯ ಬುಡಕ್ಕೆ ಕೈ ಹಿಡಿತ ಬಿಗಿಯಾಗಿರುವುದರಿಂದ ಕೊಂಡಿ ಆಡಿಸಿ ಹಿಡಿಯಲು ಸಾಧ್ಯವಾಗುವುದಿಲ್ಲ, ಅಲ್ಪಸ್ವಲ್ಪ ಸಾಧ್ಯವಾದರೂ ಕೊಂಡಿಯ ಹಿಡಿತ ಬಿಗಿ ಮಾಡಲಾರದು. ಏಡಿಯು ಸಾಮಾನ್ಯವಾಗಿ ಕೊಂಡಿಯನ್ನು ಮೇಲೆತ್ತಿಕೊಂಡೆ ಓಡಾಡುತ್ತದೆ. ಆಗ ಎರಡೂ ಕೈಗಳಿಂದ ನೇರವಾಗಿ ಎರಡು ಕೊಂಡಿಗಳನ್ನು ಹಿಡಿಯುತ್ತಾರೆ. ತಪ್ಪಿಸಿಕೊಂಡು ಓಡಿ ಬಿಲ ಸೇರಿದರೂ, ಬಿಲದೊಳಕ್ಕೆ ಕಡ್ಡಿಯನ್ನಿಟ್ಟು ಅಳ್ಳಾಡಿಸಿದರೆ ಏಡಿ ಹೊರ ಬರುತ್ತದೆ. ಬಿಲ ಉದ್ದವಿದ್ದಲ್ಲಿ, ಕೈಗುದ್ದಲಿಯಿಂದ ಬಿಲವನ್ನು ಅಗೆದು ಹಿಡಿಯುತ್ತಾರೆ. ಬಿಲ ಗದ್ದೆ ಬಯಲಿನಲ್ಲಿ, ಅಷ್ಟೇನು ಉದ್ದವಿರುವುದಿಲ್ಲ. ಕೆರೆಗಳಲ್ಲಾದರೆ ಭಿಲ ಉದ್ದವಿರುತ್ತದೆ. ಬಿಲ ಎಂದ ಕ್ಷಣ ನೆನಪಿಗೆ ಒಂದು ಗಾದೆ ಬರುತ್ತದೆ. "ಏಡಿ ಹೆಚ್ಚಿದ ಕೆರೆ ಹಾಳು ಹೆಣ್ಣೆಚ್ಚಿದ ಮನೆಹಾಳು" ಎಂಬ ಗಾದೆ ಹಳ್ಳಿಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಏಡಿಗಳು ಏರಿಯನ್ನು ಕೊರೆದು ಹಾಳು ಮಾಡುತ್ತವೆ, ಇವು ಕೊರೆದ ಬಿಲಗಳಿಂದ ನೀರು ಜಿನುಗಿ ಏರಿಗೆ ಹಾನಿಯುಂಟಾಗುತ್ತದೆ ಎಂಬ ನಂಬಿಕೆ. ಏನೇ ಆದರೂ ರುಚಿಕರವಾದ ಏಡಿಯ ಬೇಟೆ ಸಾಗಿದೆ.

ಕಲ್ಲೇಡಿಯನ್ನು ಉಲ್ಲೇಡಿ ಹಿಡಿದಷ್ಟು ಸುಲಭವಾಗಿ ಹಿಡಿಯಲು ಸಾಧ್ಯವಿಲ್ಲ. ಹಾಗೆಂದ ಕೂಡಲೆ ಇವುಗಳನ್ನು ಹಿಡಿಯಲು ವಿಶೇಷ ಸಾಧನಗಳಾಗಲಿ, ಆಯುಧಗಳಾಗಲಿ ಬೇಕಿಲ್ಲ. ಕಡ್ಡಿಗಳ

ತುದಿಗೆ (ಮೂರು ನಾಲ್ಕು ಅಡಿ ಉದ್ದ) ನಾಲ್ಕಾರು ಸುತ್ತು ಬಟ್ಟೆಯನ್ನು ಸುತ್ತಿ, ಬಟ್ಟೆ ಬಿಚ್ಚಿಕೊಳ್ಳದಂತೆ ಕಟ್ಟಿದರೆ ಸಾಕು. ಇವು ವಾಸಿಸುವ ಕೆರೆ ಏರಿಯ ಸಂದುಗೊಂದುಗಳಲ್ಲಿ, ಕಲ್ಲರಕಿನಲ್ಲಿ ಅಥವಾ ನದಿ ದಡದಲ್ಲಿರುವ ಕಲ್ಲಿರಕು, ಬಿಲಗಳಲ್ಲಿ ಕಡ್ಡಿಯನ್ನಿಟ್ಟು ಮೆಲ್ಲಗೆ ಅಳ್ಳಾಡಿಸುತ್ತಿರುತ್ತಾರೆ. ಎಲ್ಲಾ ಕಲ್ಲಿರಕು ಬಿಲಗಳಲ್ಲಿ ಏಡಿ ಇರುವುದಿಲ್ಲ, ಹೀಗೆ ಕಡ್ಡಿಗಳನ್ನಿಟ್ಟು ಅಲುಗಾಡಿಸುತ್ತಿದ್ದರೆ, ಶತ್ರುಗಳು ಬಂದರೆಂದು ಭಾವಿಸಿ, ಕಡ್ಡಿಯ ತುದಿಯನ್ನು ಬಲವಾಗಿ ಕೊಂಡಿಯಿಂದ ಹಿಡಿಯುತ್ತದೆ. ಆಗ ಕಡ್ಡಿಯನ್ನು ನಿಧಾನವಾಗಿ ಹೊರಗೆಳೆಯುತ್ತಾರೆ. ಏಡಿಯು ಶತ್ರು ತಪ್ಪಿಸಿಕೊಳ್ಳುತ್ತಿದ್ದಾನೆಂದು ಭಾವಿಸಿ, ತನ್ನ ಹಿಡಿತವನ್ನು ಸಡಿಲಿಸುವುದಿಲ್ಲ. ಬದಲಾಗಿ ಮತ್ತಷ್ಟು ಹಿಡಿತವನ್ನು ಬಿಗಿಯಾಗಿಸುತ್ತದೆ. ಶತ್ರುವಿಗೆ/ಬೇಟೆಗಾರನಿಗೆ ಶರಣಾಗುತ್ತಿರುವ ಅರಿವಾಗದೆ ತನ್ನ ತಾಣದಿಂದ ಹೊರಗೆಳೆಯಲ್ಪಟ್ಟು ಸಿಕ್ಕಿ ಬೀಳುತ್ತದೆ. ಬರಿಕೈಯಿಂದ ಇದನ್ನು ಹಿಡಿಯಲಾಗದು. ಏಕೆಂದರೆ, ಇದರ ಕೊಂಡಿಯ ಹಿಡಿತಕ್ಕೆ ಬೆರಳು ಸಿಕ್ಕಿದರೆ ತುಂಡಾಗುವಷ್ಟು, ಇಲ್ಲವೇ ರಂಪದಿಂದ ಕೊಯ್ದ ಹಾಗೆ ಆಳ ಗಾಯವಾಗುತ್ತದೆ. ಆದ್ದರಿಂದ ಏಡಿಯ ಮೇಲೆ ಬಟ್ಟೆಯನ್ನು ಹಾಕಿ ಅಥವಾ ಚೀಲದೊಳಗೆ ಕೈಹಾಕಿಕೊಂಡು (ದಪ್ಪ ಬಟ್ಟೆಯ ಚೀಲ) ಹಿಡಿಯುತ್ತಾರೆ. ಕಲ್ಲೇಡಿಯು ಬಹಳ ರುಚಿಕರ, ಸ್ವಾದಿಷ್ಟವಾದುದು. ಆದುದರಿಂದಲೇ ಇದರ ರುಚಿ ಕಂಡ ಮಾಂಸಾಹಾರಿಗಳು ಬಿಡುವಿನ ವೇಳೆಯಲ್ಲಿ ಇದರ ಬೇಟೆಗೆ ತೊಡಗುತ್ತಾರೆ. ಇದರ ಬೇಟೆಗೆ ಬಹಳ ಸಂಯಮ ಬೇಕು. ಗಾಳಕ್ಕೆ ಮೀನು ಬಿದ್ದಷ್ಟು ಸುಲಭವಾಗಿ ಏಡಿಗಳು ಸಿಗುವುದಿಲ್ಲ. ಅವುಗಳಿರುವ ಜಾಗವನ್ನು ಊಹಿಸಬಹುದಷ್ಟೆ. ನಿಖರವಾಗಿ ಹೇಳಲಾಗದು. ಎಷ್ಟು ಹೊತ್ತಾದರೂ ಒಂದು ಏಡಿಯೂ ಸಿಗದೆ ಇರುವ ಸಾಧ್ಯತೆಯಿದೆ.

ಮನುಷ್ಯನ ಸ್ವಭಾವಕ್ಕೆ ಏಡಿಗಳನ್ನು ಹೋಲಿಸಿ ಹೇಳುವ ಒಂದು ಆಧುನಿಕ ಕಥೆಯಿದೆ. ಏಡಿಗಳನ್ನು ರಫ್ತು ಮಾಡಲು ತೆರೆದ ಮುಚ್ಚಳವಿಲ್ಲದ ಪೆಟ್ಟಿಗೆಗಳನ್ನು ಬಳಸುತ್ತಿದ್ದರಂತೆ. ಎಲ್ಲ ದೇಶಗಳ ಏಡಿಗಳನ್ನು ಮುಚ್ಚಿದ ಪೆಟ್ಟಿಗೆ (ಬಾಕ್ಸ್)ಗಳಲ್ಲಿ ಕಳುಹಿಸಿದರೆ, ನಮ್ಮ ದೇಶದ ಏಡಿಗಳನ್ನು ಏಕೆ ಹಾಗೇ ಕಳುಹಿಸುತ್ತಿದ್ದಾರೆ ಎಂದು ಓರ್ವ ಪ್ರಶ್ನಿಸಿದಾಗ, ಅವರು ಹೇಳಿದರಂತೆ, ಇವು ಒಂದನ್ನೂ ಮೇಲೇರಲು ಬಿಡುವುದಿಲ್ಲ. ಒಂದು ಮೇಲೇರಿದರೆ, ಮತ್ತೊಂದು ಅದರ ಕಾಲು ಹಿಡಿದು ಎಳೆಯುತ್ತದೆ. ಆದ್ದರಿಂದ ಯಾವುದೂ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಇನ್ನು ಪೆಟ್ಟಿಗೆ ಮುಚ್ಚುವ ಪ್ರಮೇಯವೇ ಬರುವುದಿಲ್ಲ ಎಂದು.

**ಆಮೆ ಬೇಟೆ** : ಸಾಮಾನ್ಯವಾಗಿ ಮ್ಯಾದರು, ಅಲೆಮಾರಿಗಳು ಮುಂತಾದ ಜನಾಂಗದವರು ಆಮೆಯನ್ನು ಹಿಡಿಯುತ್ತಾರೆ/ಬೇಟೆಯಾಡುತ್ತಾರೆ. ಇವರಿಗೆ ಆಮೆ ಪ್ರಿಯವಾದ ಆಹಾರ. ರೈತಾಪಿ ಜನರು ಆಮೆಯನ್ನು ಹಿಡಿದು ಬಾವಿ, ಕುಂಟೆ, ಕಲ್ಯಾಣಿಗಳಲ್ಲಿ ಬಿಡುತ್ತಾರೆ. ಏಕೆಂದರೆ, ಪಾಚಿ ಇತ್ಯಾದಿಯನ್ನು ತಿಂದು ನೀರನ್ನು ಶುಚಿಯಾಗಿಡುತ್ತದೆ ಎಂದು. ಇದು ನೀರು, ತೇವಾಂಶವಿರುವ ಕಡೆ, ಜೌಗು ಪ್ರದೇಶಗಳಲ್ಲಿ ವಾಸಿಸುತ್ತದೆ. ಗದ್ದೆ, ಹೊಲಗಳಲ್ಲಿಯೂ ಇರುತ್ತದೆ. ಆದರೆ ಹೀಗಿರುವುದು ಅಪರೂಪ.

ಕೆರೆ ಕಟ್ಟೆಗಳು ಬತ್ತಿದಾಗ ಮಾತ್ರ ವಲಸೆ ಹೋಗುತ್ತವೆ. ತೇವ, ನೀರು ಸಿಕ್ಕ ಜಾಗಗಳಲ್ಲಿ

ಆಶ್ರಯ ಪಡೆದು, ಮುಂಗಾರಿನ ಮಳೆ ಪ್ರಾರಂಭವಾದೊಡನೆ ಮರಳಿ ತಮ್ಮ ಜಾಗಗಳಿಗೆ ಹಿಂತಿರುಗುತ್ತವೆ. ನದಿಗಳಲ್ಲಾದರೆ ನೀರು ಬತ್ತುವುದು ಕಡಿಮೆ. ನೀರು ಹರಿವು ಕಡಿಮೆಯಾಗಬಹುದು, ಇಲ್ಲಿ ಕೆರೆ ಕುಂಟೆಗಳಿಗಿಂತ ರಕ್ಷಣೆ ಹೆಚ್ಚು. ಆಮೆಗಳಲ್ಲಿ ಎರಡು ವಿಧವಾದ ಆಮೆಗಳನ್ನು ಕಾಣಬಹುದು. ನುಣುಪಾದ ಚಿಪ್ಪುಳ್ಳ ಆಮೆ, ಮತ್ತೊಂದು ಒರಟಾದ, ಉಬ್ಬಿರುವ ಚಿಪ್ಪುಳ್ಳ ಆಮೆ.

ಹೀಗೆ ತಮ್ಮ ಜಾಗವನ್ನು ಬದಲಾಯಿಸುವಾಗ ಜೌಗು, ಹೊಲ ಗದ್ದೆಗಳಲ್ಲಿ ಉಳಿದುಕೊಂಡ ಆಮೆ, ಉಳುವಾಗ ನೇಗಿಲ ಬಾಯಿಗೆ ಸಿಕ್ಕುತ್ತದೆ. ನೇಗಿಲ ಬಾಯಿಗೆ ಆಮೆ ಸಿಕ್ಕಿದ ಕೂಡಲೆ ಉಳುವುದನ್ನು ನಿಲ್ಲಿಸುತ್ತಾರೆ. ಇಂತಹ ಜಾಗವನ್ನು (ಹೊಲ, ಗದ್ದೆ) ೩ ವರ್ಷಗಳ ಕಾಲ ಪಾಳು ಬಿಡುತ್ತಾರೆ. ಇಲ್ಲವೆ, ಅಲ್ಲಿ ಬೆಳೆದ ಬೆಳೆಯ ಫಸಲನ್ನು ದೇವರಿಗೆ ಅರ್ಪಿಸಿ ನೇಗಿಲ ಬಾಯಿಗೆ ಸಿಕ್ಕಿ, ಬಂದ ದೋಷವನ್ನು ಬಗೆ ಹರಿಸಿಕೊಳ್ಳುತ್ತಾರೆ. ಕೆಡಕು ಮುಂದೆ ಬರುವುದಿದ್ದರೆ ಮಾತ್ರ, ಹೀಗೆ ನೇಗಿಲ ಬಾಯಿಗೆ ಸಿಕ್ಕುತ್ತದೆ ಎಂಬ ನಂಬಿಕೆ ಇದೆ. ಇದಾವುದನ್ನೂ ಲೆಕ್ಕಿಸದೆ ಪುಷ್ಕಳ ಮಾಂಸಾಹಾರ ಎಂದು ಬೇಟೆಯಾಡುತ್ತಾರೆ.

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಬಾಬಗೆರೆ, ಗೌಡಗೆರೆ, ಮುಳ್ಳೂರು, ಹಿರಿಕ್ಯಾತನಹಳ್ಳಿ ಹಾಗೂ ಸುತ್ತಮುತ್ತ ಕೆರೆ ಬೇಟೆ ಪ್ರಚಲಿತದಲ್ಲಿದೆ. ಬೆಂಗಳೂರು ಸುತ್ತಮುತ್ತಲಿನ ಕೆರೆ ಬೇಟೆಗೂ ಇಲ್ಲಿಯ ಕೆರೆ ಬೇಟೆಗೂ ವ್ಯತ್ಯಾಸವಿದೆ. ಸಾಮ್ಯವೂ ಇದೆ, ಅಂದರೆ, ಕೆರೆ ಬೇಟೆಗೆ ತಮಟೆ ಬಡಿದು, ಕೆರೆ ಬೇಟೆಯ ವಿಷಯವನ್ನು ಎಲ್ಲರಿಗೂ ತಿಳಿಸುತ್ತಾರೆ. ನಿಗದಿತ ದಿನಾಂಕದಂದು ಮಾತ್ರ ಬೇಟೆಯಾಡಬೇಕು. ಇಲ್ಲವಾದಲ್ಲಿ ದಂಡ ತೆರಬೇಕಾದೀತು. ಇಲ್ಲಿಯವರೆಗೂ ಸಾಮ್ಯವಿದೆ. ಮನೆಗೊಬ್ಬರಂತೆ ಬೆಂಗಳೂರು-ತುಮಕೂರಿನ ಸುತ್ತಮುತ್ತಲಿನವರು ಸೇರಿದರೆ, ಇಲ್ಲಿ ಎಷ್ಟು ಜನರಾದರೂ ಸೇರಬಹುದು, ಎಷ್ಟು ಮೀನುಗಳನ್ನು ಬೇಕಾದರೂ ಹಿಡಿಯಬಹುದು. ಯಾರು ಎಷ್ಟು ಹಿಡಿದರೆ ಅಷ್ಟೂ ಹಿಡಿದವರಿಗೆ ಪಾಲು ಹಾಕುವ ಪಾಡಿಲ್ಲ. ಕೆಲವರು ಕೂಳೆ ಹಿಡಿದು ಒಂಟಿಯಾಗಿಯೇ ಮೀನು ಹಿಡಿದರೆ ಕೆಲವರು ಒಟ್ಟಾಗಿ (ನಾಲ್ಕಾರು ಜನ) ಬಲೆ ಬೀಸಿ, ಕೆಲವರು ಕಟ್ಟೆ ಉಗ್ಗಿ ಮೀನು ಹಿಡಿಯುತ್ತಾರೆ.

ಕೂಳೆ ಹಾಕಿ ಮೀನು ಹಿಡಿವಾಗ ಒಂದು ಎಚ್ಚರಿಕೆ ವಹಿಸಬೇಕು. ಕೂಳೆಗೆ ಬಿದ್ದ ಕುಚ್ಚು, ಕೊಳವಗಳು, ಕೂಳೆಯಿಂದ ನೆಗೆದು ತಪ್ಪಿಸಿಕೊಳ್ಳಬಹುದು. ಆದ್ದರಿಂದ ಒಂದು ಕೈಯಿಂದ ಕೂಳೆ ಬಾಯಿ ಮುಚ್ಚಿ, ಮತ್ತೊಂದು ಕೈಯಿಂದ ಕೈ ಹಾಕಿ ಮೀನು ಹಿಡಿಯುತ್ತಾರೆ. ಕೂಳೆ ಹಾಕಿದ ಕೂಡಲೆ ಬಾಯಿ ಮುಚ್ಚಿ (ಕೂಳೆ), ನಂತರ ಮೀನು ಹಿಡಿಯಲು ಮುಂದಾಗುತ್ತಾರೆ. ಕೂಳೆಯಲ್ಲಿ ಬಿದ್ದ ಕೂಡಲೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆಗ ಕೂಳೆಗೆ ಅದು ತಗುಲುವುದರಿಂದ ಮೀನು ಕೂಳೆಯಲ್ಲಿ ಬಿದ್ದಿದೆ ಎಂದು ಗೊತ್ತಾಗುತ್ತದೆ.

ಕೆಲವರು ಮೀನು ಹತ್ತುವವರೆಗೆ ಕಾಯುತ್ತಾರೆ. ಅಂದರೆ, ಬೇಸಿಗೆಯ ಕೆರೆಯಲ್ಲಿ ನೀರು ಕಡಿಮೆ ಇರುವುದರಿಂದ, ಸಣ್ಣ ಹುಡುಗರು ಸಹ ದೊಡ್ಡವರ ಜೊತೆಗೆ ಮೀನು ಹಿಡಿಯಲು/

ಸಹಾಯಕ್ಕೆ ಕೆರೆಗಿಳಿಯುತ್ತಾರೆ. ಇವರ ಓಡಾಟ ಅಡ್ಡಾದಿಡ್ಡ ಓಡಾಟಕ್ಕೆ, ಕೆಲವರು ಬೇಗನೆ, ಹೆಚ್ಚು ಮೀನು ಹಿಡಿಯುವ ಸಲುವಾಗಿ ಕೆರೆ ತುಂಬ ಓಡಾಡುತ್ತಾರೆ. ಹೀಗೆ ಓಡಾಡುವುದರಿಂದ, ಕೆರೆಯ ನೀರು ಬಗ್ಗಡವಾಗುತ್ತದೆ. ಬಗ್ಗಡದ ನೀರಿನಲ್ಲಿ ಮೀನು ಉಸಿರಾಡಲು ತೊಂದರೆಯಾಗಿ ಬಗ್ಗಡ ಕಡಿಮೆ ಇರುವ ಕಡೆಗೆ ಹೋಗುತ್ತವೆ, ಇಲ್ಲವೆ ತಲೆ ಮೇಲೆತ್ತುತ್ತವೆ. ಇದಕ್ಕೆ ಮೀನು ಹತ್ತುವುದು ಎನ್ನುತ್ತಾರೆ. ಈ ರೀತಿ ಬಗ್ಗಡದಲ್ಲಿ ತಲೆ ಎತ್ತುವುದನ್ನು/ಮೀನು ಹತ್ತುವುದನ್ನು ಕಾಯುತ್ತಿದ್ದ ಕೆಲವರು ಮೀನು ಹಿಡಿಯಲು ತೊಡಗುತ್ತಾರೆ. ಬಗ್ಗಡದಲ್ಲಿ ಸಣ್ಣ ಮೀನುಗಳು ತಪ್ಪಿಸಿಕೊಳ್ಳುತ್ತವೆ, ಇಲ್ಲವೇ ಸಾಯುತ್ತವೆ. ಈ ಮೀನುಗಳನ್ನು ಹಿಡಿಯಬೇಕೆಂದರೆ, ನೀರು ಬಗ್ಗಡವಾಗುವ ಮುನ್ನ ಗೋರು ಬಲೆ ವಿಧಾನದಿಂದ ಗೋರಿ ಹಿಡಿಯಬೇಕು. ಬಗ್ಗಡವಾದ ನಂತರ, ಸಿಕ್ಕಿ ಬೀಳುವ ಮೀನುಗಳೆಂದರೆ, ಕುಚ್ಚು, ಕೊರವ, ಗೆಂಡೆ ಮೀನು, ಗಿರಲು ಮುಂತಾದವುಗಳು.

ಪುರಾಣ ಕಾಲದಿಂದಲೂ ಕಣ್ಣಿನ ಸೌಂದರ್ಯವನ್ನು ವರ್ಣಿಸುವುದಕ್ಕೆ ಮೀನಿನ ಹೋಲಿಕೆ ಮಾಡುತ್ತಾ ಬಂದಿದ್ದಾರೆ, ಸುಂದೋಪ ಸುಂದರ ಸಂಹಾರಕ್ಕಾಗಿ ಶ್ರೀಹರಿ ಮೋಹಿನಿ ಅವತಾರವೆತ್ತಿ ಸೋದರರ ಮುಂದೆ ಪ್ರತ್ಯಕ್ಷವಾದಾಗ, ಅಗ್ರಜ ಅನುಜನನ್ನು ಕುರಿತು ಅವಳ ಕಣ್ಣಿನ ಸೌಂದರ್ಯವನ್ನು "ಮೀನ ಕಣ್ಣವಳು" ಎಂದು ಹೇಳುತ್ತಾನೆ. ಅಂತೆಯೇ ಹಿಂದಿನ, ಇಂದಿನ ಕವಿವರ್ಯರೆಲ್ಲಾ ಮೀನಕಣ್ಣಿನ ಬಗ್ಗೆ, ಸೌಂದರ್ಯದ ಬಗ್ಗೆ ವರ್ಣಿಸುತ್ತಲೇ ಬಂದಿದ್ದಾರೆ. ಹಾಗೆಯೇ, ಮೀನಿನ ಹೆಜ್ಜೆಯನ್ನಾದರೂ ಕಂಡು ಹಿಡಿಯಬಹುದು, ಹೆಣ್ಣ ಮನಸ್ಸನ್ನು ಕಂಡುಹಿಡಿಯಲಾಗದು ಎಂದು ಹೆಣ್ಣಿನ ಸ್ವಭಾವಕ್ಕೆ ಹೋಲಿಸುವುದುಂಟು.

ಸಂದರ್ಭಕ್ಕನುಗುಣವಾಗಿ ಬದಲಾಗದಿದ್ದರೆ, ಭವಿಷ್ಯ ಶೂನ್ಯವಾಗುತ್ತದೆ, ಹಾಳಾಗುತ್ತದೆ ಎಂದು ಎಚ್ಚರಿಸುವ ಕಥೆಯೂ ಇದೆ. ಒಂದು ಕಟ್ಟೆಯಲ್ಲಿ ಮೂರು ಮೀನುಗಳು ವಾಸವಾಗಿದ್ದವು. ಬೇಸಿಗೆಯ ಬಿಸಿಲಿಗೆ ಕಟ್ಟೆಯ ನೀರು ಕಡಿಮೆಯಾಗುತ್ತಿತ್ತು. ಆಗ ಒಂದು ಮೀನು ಉಳಿದೆರಡು ಮೀನುಗಳನ್ನು ಕುರಿತು, ಕಟ್ಟೆ ನೀರು ಬತ್ತುತ್ತಿದೆ, ಇನ್ನು ಇಲ್ಲಿರುವುದು ಕ್ಷೇಮವಲ್ಲ, ಇಷ್ಟು ದಿನ ನಾವು ಮೂವರು ಕ್ಷೇಮದಿಂದ, ಸಹಬಾಳ್ವೆ ನಡೆಸಿದೆವು. ಕಟ್ಟೆ ಬತ್ತುತ್ತಿರುವುದನ್ನು ಬೆಸ್ತನೇನಾದರು ಕಂಡರೆ ನಮ್ಮ ಕಥೆ ಮುಗಿದಂತೆ. ಆದ್ದರಿಂದ, ನಾವು ಕಟ್ಟೆಯ ಪಕ್ಕದಲ್ಲಿ ಹರಿಯುತ್ತಿರುವ ನದಿಗೆ ಹಾರಿ ಮುಂದಿನ ದಿನಗಳನ್ನು ಕಳೆಯೋಣ ಎಂದು ಹೇಳಿತು. ಅದಕ್ಕೆ ಎರಡನೆಯ ಮೀನು ಇನ್ನೂ ಸಾಕಷ್ಟು ನೀರು ಇದೆ. ಕೆಲವು ದಿನ ಏನೂ ತೊಂದರೆಯಿಲ್ಲ, ಮಳೆಯೇನಾದರು ಬಂದರೆ ಕಟ್ಟೆಗೆ ನೀರು ಬರುತ್ತದೆ, ಮಳೆ ನೀರು ಏನಾದರು ಬಾರದಿದ್ದರೆ, ನದಿಗೆ ಜಿಗಿಯುವುದು ಇದ್ದೇ ಇದೆ ಎಂದು ಹೇಳಿತು. ಮೂರನೆಯ ಮೀನು ವೃಥಾ ನೀವು ಹೆದರುತ್ತೀರಿ, ಏನೂ ಆಗುವುದಿಲ್ಲ. ನಾನಂತೂ ಇಲ್ಲಿಯೇ ಇರುತ್ತೇನೆ ಎಂದು ಹೇಳಿತಂತೆ. ಅದಕ್ಕೆ ಮೊದಲನೇ ಮೀನು, ನಿಮ್ಮ ಇಷ್ಟ, ನೀವು ಬರುವುದಾದರೆ ನನ್ನೊಂದಿಗೆ ಬನ್ನಿ, ಇಲ್ಲವಾದರೆ ನಾನಂತೂ ನದಿಗೆ ಜಿಗಿಯುತ್ತೇನೆ ಎಂದು ಹೇಳಿ ನದಿಗೆ ಹಾರಿತು, ಇವರಿಂದ ಬೇರ್ಪಟ್ಟಿತು. ಒಂದು ದಿನ ಕಟ್ಟೆ ಒಣಗುತ್ತಿರುವುದನ್ನು

ಕಂಡು, ಬೆಸ್ತನು ಬೇರೆ ಯಾರಾದರೂ ಇಲ್ಲಿರುವ ಮೀನು ಹಿಡಿಯುವ ಮೊದಲು ನಾನೇ ಹಿಡಿಯಬೇಕೆಂದು ತೀರ್ಮಾನಿಸಿ, ಬಲೆ ತಂದು, ಬೀಸಿ ಈ ಎರಡೂ ಮೀನುಗಳನ್ನು ಬಲೆಯಲ್ಲಿ ಸೆಳೆದ. ಆಗ ಎರಡನೆ ಮೀನು ಸತ್ತಂತೆ ಬಿದ್ದುಕೊಂಡಿತು. ಬೆಸ್ತ ಸತ್ತ ಮೀನು ನಂತರ ಹಿಡಿದರಾಯಿತು ಎಂದು ಒದರಾಡುತ್ತಿದ್ದ ಮೂರನೆಯ ಮೀನನ್ನು ಹಿಡಿದ, ಈ ಸಂದರ್ಭವನ್ನು ವ್ಯರ್ಥಮಾಡಿಕೊಳ್ಳದ ಎರಡನೆ ಮೀನು ನದಿಗೆ ಜಿಗಿದು ತಪ್ಪಿಸಿಕೊಂಡಿತು. ಮೂರನೆಯ ಮೀನು ಮಾತ್ರ ಬೆಸ್ತನಿಗೆ ಶರಣಾಯಿತು. ಮುಂದಾಲೋಚನೆಯಿಂದ ಮೊದಲನೇ ಮೀನು ತೊಂದರೆ ಬರುವ ಮುನ್ನವೇ ಪಾರಾದರೆ, ಎರಡನೇ ಮೀನು, ಸಂದರ್ಭೋಚಿತವಾಗಿ ವರ್ತಿಸಿ ಪ್ರಾಣಾಪಾಯದಿಂದ ಪಾರಾಯಿತು. ಆಲೋಚಿಸದ ಮೀನು ಬೆಸ್ತನ ಬಲೆಗೆ ಸಿಲುಕಿ ಅಸು ನೀಗಿತು. ಆದ್ದರಿಂದ, ಮುಂದಾಲೋಚನೆ, ಸಂದರ್ಭಕ್ಕನುಗುಣವಾಗಿ ನಡೆದುಕೊಳ್ಳಬೇಕು ಎಂಬ ಮೀನಿನ ಕಥೆ ಪ್ರಚಲಿತದಲ್ಲಿದೆ.

●

## ಲೇಖಕರ ವಿಳಾಸ


1. **ಎಂ. ಎಸ್. ಪ್ರಕಾಶ್**
   ಭಾಷಾಂತರಕಾರರು, ಕನ್ನಡ ಭಾಗ
   ಎನ್.ಜಿ.ಇ.ಎಫ್. ಲಿ.
   ಬೈಯಪ್ಪನಹಳ್ಳಿ, ಬೆಂಗಳೂರು - 38

2. **ಯು. ಎಸ್. ರಾಮಣ್ಣ**
   ಕ್ಯುರೇಟರ್, ಜಾನಪದ ವಸ್ತು ಸಂಗ್ರಹಾಲಯ
   ಮಾನಸಗಂಗೋತ್ರಿ, ಮೈಸೂರು

3. **ಐನಂಡ ಎಂ. ಧನು**
   ಬಿಳುಗುಂದ ಗ್ರಾಮ ಅಂಚೆ, ಅಮ್ಮತ್ತಿ ಮಾರ್ಗ
   ದಕ್ಷಿಣ ಕೊಡಗು - 571 121

4. **ನರೇಂದ್ರ ರೈ ದೇರ್ಲ**
   ಕನ್ನಡ ಉಪನ್ಯಾಸಕರು
   ಸರ್ಕಾರಿ ಪ್ರಥಮ ದರ್ಜೆ ಕಾಲೇಜು
   ಜಾವಗಲ್, ಅರಸೀಕೆರೆ ತಾ.
   ಹಾಸನ ಜಿಲ್ಲೆ - 573 125

5. **ಪಿ. ಬಿ. ನಾಯಕ್**
   ಉಪನ್ಯಾಸಕರು
   ಪದವಿಪೂರ್ವ ಮಹಾ ವಿದ್ಯಾಲಯ, ಸಿದ್ಧರ
   ಕಾರವಾರ ಜಿಲ್ಲೆ

6. **ಕೆ. ಎಸ್. ಶೋಭ**
   ಓರಿಯೆಂಟಲ್ ಇನ್‌ಶೂರೆನ್ಸ್ ಕಂ ಲಿ.,
   ಪುತ್ತೂರು ಜಿಲ್ಲೆ - 574 201 (ದ. ಕ.)

ಕನ್ನಡ ಪುಸ್ತಕ ಪ್ರಾಧಿಕಾರವು ಶೀಘ್ರಗತಿಯಲ್ಲಿ ಕ್ಷೀಣಿಸುತ್ತಿರುವ ಗ್ರಾಮೀಣ ಸಂಸ್ಕೃತಿಯ ವಿವಿಧ ಮಗ್ಗುಲುಗಳನ್ನು ಕ್ಷೇತ್ರಾಧಾರಿತವಾದ ಅಧ್ಯಯನ ಮತ್ತು ಸಂಶೋಧನೆಗಳ ಮೂಲಕ ಮತ್ತೊಮ್ಮೆ ಯುವ ಜನಾಂಗದ ಮುಂದಿಡಲು 'ಗ್ರಾಮ ಸಂಸ್ಕೃತಿಮಾಲೆ' ಯನ್ನು ಆರಂಭಿಸಿದೆ. ಈ ಮಾಲೆಯಲ್ಲಿ ಪ್ರಕಟವಾಗುವ ಪುಸ್ತಕಗಳು ಜನ ಸಾಮಾನ್ಯರಿಗೆ, ನಾಗರಿಕತೆಯ ಆಕ್ಟೋಪಸ್ ಹಿಡಿತದಲ್ಲಿ ಜೀವನಶಾಂತಿಯನ್ನು ಕಳೆದುಕೊಳ್ಳುತ್ತಿರುವ ನಾಗರಿಕರಿಗೆ, ತಮ್ಮ ಇತಿಹಾಸವನ್ನು ಮರೆತು ಮರಳಿನ ಮೇಲೆ ಮನೆ ಕಟ್ಟಲು ಹವಣಿಸುತ್ತಿರುವ ಯುವ ಜನಾಂಗಕ್ಕೆ ದೇಸೀಯವಾದ ಹೊಸ ತಿಳುವಳಿಕೆಗಳ ವಿಶಿಷ್ಟ ಲೋಕವನ್ನು ಪರಿಚಯಿಸಿಕೊಡುತ್ತದೆ.

ಇಂತಹ ಬೇಟೆಯ ಸಂಪ್ರದಾಯವನ್ನು ಕುರಿತ 'ಗ್ರಾಮೀಣ ಬೇಟೆಗಳು' ಎಂಬ ಈ ಕೃತಿ ತುಂಬಾ ಕುತೂಹಲಕರವಾಗಿಯೂ, ಮತ್ತು ಚಿಂತನಶೀಲವಾಗಿಯೂ ಇದೆ. ಮುಖ್ಯವಾಗಿ ಕ್ಷೇತ್ರ ಕಾರ್ಯವನ್ನು ಆಧರಿಸಿದ ಮತ್ತು ಸೂಕ್ಷ್ಮರಾದ ಅವಲೋಕನ ಮತ್ತು ಚಿಂತನೆಗಳಿಂದ ರೂಪುಗೊಂಡ ಇಲ್ಲಿಯ ಲೇಖನಗಳು ಭರದಿಂದ ಮರೆಯಾಗುತ್ತಿರುವ ನಮ್ಮ ಗ್ರಾಮೀಣ ಸಂಸ್ಕೃತಿಯ ಒಂದು ರೋಚಕ ಅಧ್ಯಾಯವನ್ನು ನಮ್ಮ ಮುಂದೆ ತರೆದಿಡುತ್ತವೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು



ISBN 81-7713-042-0